ಸಂಪುಟ : ೧೯
ಸಂಚಿಕೆ : ೩

ಕರ್ನಾಟಕ ಭಾರತಿ

ಸಂಕ್ರಮಣ ಸಂಚಿಕೆ

ಜನವರಿ, ೧೯೮೭

ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ

ಲೇಖಕರಿಗೆ ಸೂಚನೆಗಳು

"ಕರ್ನಾಟಕ ಭಾರತಿ"ಯು ಸೃಜನ, ವಿಮರ್ಶನ, ಸಂಶೋಧನ ಸಾಹಿತ್ಯ, ವಿಜ್ಞಾನ, ಮತ್ತು ಮಾನವಿಕ ವಿಷಯಗಳ ಅಭಿವೃದ್ಧಿಗಾಗಿ ಮೀಸಲಾಗಿದ್ದು ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೇ ಟೈಪು ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ ಅಸಂಪೂರ್ಣವಾಗಿಯಾಗಲೀ ಇರಬಾರದು.

ಲೇಖನ ಸ್ವೀಕೃತವಾದಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುತ್ತದೆ. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು. ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು "ಕರ್ನಾಟಕ-ಭಾರತಿ" ಕನ್ನಡ ಅಧ್ಯಯನ ಪೀಠ,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩ ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು. ಇನ್ನಿತರ ಯಾವದೇ ವಿಷಯಕ್ಕೆ **ನಿರ್ದೇಶಕರು, ಪ್ರಸಾರಾಂಗ,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ ೨. ರಾಜ್ಯೋತ್ಸವ ಸಂಚಿಕೆ

೩. ಸಂಕ್ರಮಣ ಸಂಚಿಕೆ ೪. ಅಕ್ಷಯ ತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮-೦೦ (ಅಂಚೆವೆಚ್ಚ ಸಹಿತ)

ಬಿಡಿಸಂಚಿಕೆಯ ಬೆಲೆ: ರೂ. ೨-೫೦

(ಅಂಚೆ ವೆಚ್ಚ ರೂ. ೧-೨೫ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ : ರೂ. ೪-೦೦ ಮಾತ್ರ. ಹಣವನ್ನು ಡಿಮಾಂಡ ಡ್ರಾಫ್ಟ್ ಇಲ್ಲವೇ ಪೋಸ್ಟಲ್ ಆರ್ಡರ್ ಮೂಲಕ **ಫಾಯನಾನ್ಸ ಆಫೀಸರ**, ಕರ್ನಾಟಕ-ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಸಂಪುಟ : ೧೯ ಸಂಚಿಕೆ : ೩

ಪ್ರಧಾನ ಸಂಪಾದಕರು :

ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ

ಸಂಪಾದಕರು :

ಡಾ. ವಿಲ್ಯಂ ಮಾಡ್ತ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೧೯ ಸಂಚಿಕೆ : ೩

ಸಂಕ್ರಮಣ ಸಂಚಿಕೆ

ಜನವರಿ, ೧೯೮೭

ಎಲ್ಲ ಹಕ್ಕುಗಳನ್ನು ಕಾಯ್ದಿಡಲಾಗಿದೆ.

ಸಂಪಾದಕ ಮಂಡಲ :

ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ (ಪ್ರಧಾನ ಸಂಪಾದಕರು)

ಡಾ. ವಿಲ್ಯಂ ಮಾಡ್ತ (ಸಂಪಾದಕರು)

ಡಾ. ಎಸ್. ಎಚ್. ರಿತ್ತಿ

ಡಾ. ಎ. ಎಂ. ರಾಜಶೇಖರಯ್ಯ

ಡಾ. ಎಂ. ಮಾದಯ್ಯ

ಶ್ರೀ ಎ. ಎಸ್. ಬಾಲಸುಬ್ರಮಣ್ಯ

ಶ್ರೀ ಎಸ್. ಬಿ. ನಾಯಕ (ಸದಸ್ಯ-ಕಾರ್ಯದರ್ಶಿ)

ಪ್ರಕಾಶಕರು :

ಎಸ್. ಬಿ. ನಾಯಕ

ನಿರ್ದೇಶಕರು, ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೨. ೮. ೮೭

ಮುದ್ರಕರು :

ರಾಜಶ್ರೀ ಪ್ರಿಂಟಿಂಗ್ ಪ್ರೆಸ್

ತಡಕೋಡ ಓಣಿ

ಧಾರವಾಡ

ಪರಿವಿಡಿ

ಇತ್ತೀಚಿನ ಕನ್ನಡ ವಾಙ್ಮಯದಲ್ಲಿ ವಿಚಾರ ಸಾಹಿತ್ಯ

● ಎಸ್. ಎಂ. ವೃಷಭೇಂದ್ರಸ್ವಾಮಿ

ವಾಙ್ಮಯದಲ್ಲಿ ಪ್ರಮುಖವಾಗಿ ಎರಡು ಭಾಗಗಳನ್ನು ಗುರುತಿಸಬಹುದು. ಪ್ರತಿಭೆಯಿಂದ ಹೊಮ್ಮಿ, ಭಾವದಲ್ಲಿ ಬೆಳೆದುನಿಂತ ರಸ-ಭಾವಪ್ರೇರಿತ ಸಾಹಿತ್ಯ ಒಂದುಭಾಗ. ಮತ್ತೊಂದು ಬೌದ್ಧಿಕಶಕ್ತಿ ಪ್ರೇರಿತವಾದ ವಿಚಾರ ಅಥವಾ ಶಾಸ್ತ್ರ ಸಾಹಿತ್ಯ. ಮೊದಲನೆಯದು ರಂಜನೀಯ. ಬಹುಜನಮಾನ್ಯ: ಎರಡನೆಯದು ವಿಚಾರ ಪ್ರಧಾನವಾದ, ಬುದ್ಧಿಪ್ರಧಾನವಾದ. ಕೆಲವೇ ಜನಮಾನ್ಯವಾದ ರಚನೆ. ಅದು ರಸಾನುಭವ ನೀಡಿದರೆ, ಇದು ಜ್ಞಾನದಾನಮಾಡುತ್ತದೆ, ಬೌದ್ಧಿಕ ತೃಪ್ತಿ ನೀಡುತ್ತದೆ. ಬಹುಜನ ಮಾನ್ಯವಾದ, ರಸಭಾವಪ್ರೇರಿತವಾದ ರಸಸಾಹಿತ್ಯ ಭಾಗವನ್ನು ಬಿಟ್ಟು, ಬುದ್ಧಿಯ ಕೆಲಸವಾದ, ಜ್ಞಾನದಾಯಿಯಾದ ವಿಚಾರ ಸಾಹಿತ್ಯ-ಅಂದರೆ, ವಿಮರ್ಶೆ, ಸಂಪಾದನೆ, ತತ್ವ ಸಿದ್ಧಾಂತ ವಿಚಾರ ಮುಂತಾದ ಸಾಹಿತ್ಯಶಾಖೆಯ ಸ್ಥೂಲ ಸಮೀಕ್ಷೆಯನ್ನು ಇಲ್ಲಿ ಗಮನಿಸಲಾಗಿದೆ. ಶಾಸ್ತ್ರ ಸಾಹಿತ್ಯವೆಂದು ಪ್ರಸಿದ್ಧವಾಗಿರುವ ವಿಜ್ಞಾನವನ್ನು ಕುರಿತ ವಿಚಾರ ಸಾಹಿತ್ಯವಿವೇಚನೆಯೇ ಒಂದು ಪ್ರತ್ಯೇಕ ವಿವೇಚನೆಗೆ ವಸ್ತುವಾಗಿರುವುದರಿಂದ ಆ ಬಗೆಗೆ ಇಲ್ಲಿ ಪ್ರಸ್ತಾಪಿಸಿಲ್ಲ. ಅಲ್ಲದೆ ವಿಚಾರಸಾಹಿತ್ಯದ ಸಮಗ್ರ ಅವಲೋಕನವೂ ಇಲ್ಲಿಲ್ಲ, ಇತೀಚೆಗೆ ಪ್ರಕಟವಾಗಿ, ಜನಮನವನ್ನು ಸೆಳೆದಿರುವ ಕೆಲವು ಕೃತಿಗಳ ಪರಿಚಯ ಮಾತ್ರ ಇದು: ಕನ್ನಡ ವಾಙ್ಮಯದ ಈ ವಿಭಾಗದ ಸಾಧನೆಗಳನ್ನು ಬಹುಜನ ಸಮಾಜಕ್ಕೆ ಪರಿಚಯಿಸುವುದೇ ಇಲ್ಲಿನ ಗುರಿ. ವಿಚಾರ ಸಾಹಿತ್ಯ ಪ್ರಕಟನೆಗೆ ಮೀಸಲಾಗಿದ್ದ ಮಿಂಚಿನ ಬಳ್ಳಿ ಪ್ರಕಾಶನದ ಸಾಧನೆಗಳನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಹೀಗೆ ವಿಸ್ತಾರವಾದ ಇಂಥ ಬೌದ್ಧಿಕ-ಜ್ಞಾನ ಸಾಹಿತ್ಯಕ್ಕೆ ಇಂಥ ಪರಿಮಿತಿ ಹಾಕಿಕೊಳ್ಳುವುದು ಅನಿವಾರ್ಯ.

ತತ್ವ-ದರ್ಶನ ವಿಚಾರ ಸಾಹಿತ್ಯ

ಕನ್ನಡದಲ್ಲಿ ವಿಚಾರ ಸಾಹಿತ್ಯ ಕಡಿಮೆ, ಭಾವ ಸಾಹಿತ್ಯವೇ ವಿಪುಲ. ಇದು ಎಲ್ಲ ಭಾಷೆಯ-ಸಾಹಿತ್ಯದ ಪಾಡೂ ಆಗಿದೆ. ಇದಕ್ಕೆ ಕಾರಣವೂ ಇಲ್ಲದಿಲ್ಲ. ಭಾವ-ಭಾವನೆ, ಕಲ್ಪನೆ-ವಿಲಾಸಗಳು ಜನಮಾನ್ಯ-ಜನಪ್ರಿಯವಾಗುವಷ್ಟು, ಜ್ಞಾನ ಪ್ರಚೋದಿತ ಸಾಹಿತ್ಯ ಶ್ರೀಸಾಮಾನ್ಯಮಾನ್ಯವಾಗುವುದಿಲ್ಲ, ಅಷ್ಟೇಅಲ್ಲ, ರಸಸಾಹಿತ್ಯ

ಸೃಷ್ಟಿಯೂ ವಿಪುಲವಾದಂತೆ. ಜ್ಞಾನಸಾಹಿತ್ಯಸೃಷ್ಟಿ ಬಹುಜನಮಾನ್ಯ ಆಗಲು ಸಾಧ್ಯವಿಲ್ಲ. ಅವರಲ್ಲೂ, ತತ್ವಜ್ಞಾನಗಳ ತವರೂರೆಂದು ಪ್ರಸಿದ್ಧವಾಗಿರುವ, ಭಾರತ, ಭಕ್ತಿ–ಧರ್ಮದಕೇಂದ್ರವಾದ ಕರ್ನಾಟಕವಲ್ಲೂ ಈ ಮಾತೇಸತ್ಯ. ಇದು ಅನಿವಾರ್ಯ.

ಭಾರತೀಯ ತತ್ವ–ದರ್ಶನದ ಗಂಗೋತ್ರಿ ವೇದ, ಆಗಮ, ಉಪನಿಷತ್ತು–ಅವುಗಳಿಂದ ಪ್ರೇರಿತವಾದ ಷಡ್‌ದರ್ಶನಗಳ ಪರಿಚಯ ಕನ್ನಡದಲ್ಲಿ ವಿಶೇಷವಾಗಿ ಯಲ್ಲದಿದ್ದರೂ–ಸಾರ್ಥಕವಾಗಿ ಬೆಳೆದುಬಂದಿರುವುದು ಗಮನಾರ್ಹ. ಧರ್ಮ–ದರ್ಶನಗಳ ತೌಲನಿಕ ಅಧ್ಯಯನಕ್ಕೇ ಮೂಲಕೃತಿಯಾದ, ವಿಜಯನಗರ ಸಾಮ್ರಾಜ್ಯಕಾಲದ ವಿಶೇಷ ಸೃಷ್ಟಿಯಾದ 'ಸರ್ವದರ್ಶನ ಸಂಗ್ರಹ' ಕನ್ನಡದಲ್ಲಿ ಮೂಲ–ಅನುವಾದ–ವ್ಯಾಖ್ಯಾನ ರೂಪದಲ್ಲಿ ಪ್ರಕಟವಾಗಿರುವುದು ಹೆಮ್ಮೆಯ ವಿಷಯ. ಮೈಸೂರಿನ ದರ್ಶನ ವಾಙ್ಮಯ ಪರಿಣತರಾದ ಇಮ್ಮಡಿಶಿವಬಸವಸ್ವಾಮಿಗಳ ಈ ಸಾಧನೆ ಮೆಚ್ಚುವಂಥದು. ಚಾರ್ವಾಕ, ಜೈನ, ಬೌದ್ಧ, ನ್ಯಾಯ, ವೈಶೇಷಿಕ, ಸಾಂಖ್ಯ ಪೂರ್ವಮೀಮಾಂಸಾ, ವೇದಾಂತ ಮುಂತಾದ ದರ್ಶನಗಳ ಸಮಗ್ರ ವಿವೇಚನೆ—ಆ ದರ್ಶನಗಳ ವಿಶಿಷ್ಟಾಂಶಗಳ ಪರಿಶೀಲನೆ ಇಲ್ಲಿ ನಡೆದಿದೆ ಪಾಂಡಿತ್ಯ ಪೂರ್ಣವೂ, ಆಧುನಿಕ ವಿಚಾರ ಪ್ರೇರಿತವೂ, ವಸ್ತುದೃಷ್ಟಿ ಪ್ರಚೋದಿತವೂ ಆಗಿರುವ ಈ 'ಸರ್ವ ದರ್ಶನ ಸಂಗ್ರಹ' ಕನ್ನಡ ವಿಚಾರ ಸಾಹಿತ್ಯಕ್ಕೆ ಅತ್ಯಂತ ಗಮನಾರ್ಹ ಕಾಣಿಕೆ.

ಈ ಮಾಲಿಕೆಯಲ್ಲಿ ಗಮನಿಸಬಹುದಾದ, ಪುಟ್ಟದಾದರೂ, ದಿಟ್ಟ ಸಾಧನೆಯಾದ. ಇತ್ತೀಚೆಗೆ ಪ್ರಕಟವಾದ ಪಂ. ನಾಗಭೂಷಣ ಶಾಸ್ತ್ರಿಗಳ 'ಭಾರತೀಯ ದರ್ಶನ ಸಮೀಕ್ಷೆ ಭಾಗ–೧ ಉಲ್ಲೇಖನಾರ್ಹ ಕೃತಿ. ಅತ್ಯಂತ ಸರಳವೂ, ನಿರ್ದಿಷ್ಟವೂ ಆದ ತತ್ವ ವಿವೇಚನೆ ಶ್ರೀ ಶಾಸ್ತ್ರಿಗಳ ಸಾಧನೆ. 'ವೇದಗಳಲ್ಲಿ ಬೀಜರೂಪವಾಗಿದ್ದ ವಿಭಿನ್ನ ಸಿದ್ಧಾಂತಗಳೇ ಮುಂದೆ ದಾರ್ಶನಿಕರ ಪ್ರಯತ್ನದಿಂದ ವಿವಿಧ ದರ್ಶನಗಳಾಗಿ ಮೂಡಿ ಬಂದಿರುವುದನ್ನು ಇಲ್ಲಿ ಸಮೀಕ್ಷಿಸಲಾಗಿದೆ. ಪ್ರೊ. ನಾರಾಯಣಾಚಾರ್ಯರ ನಿಷ್ಠೆ, ನಂಬಿಕೆ, ಅಧ್ಯಯನದ ಫಲವಾದ ವೇದವಿದ್ಯಾ ಪ್ರಕಾಶನದ 'ವೇದ ಸಂಸ್ಕೃತಿಯ ಪರಿಚಯದ ಸಂಪುಟಗಳು, ದರ್ಶನ ಸಾಹಿತ್ಯವನ್ನು ಆಧುನಿಕ ಯುಗ ಮನಸ್ಸಿಗೆ ಹಿಡಿಯುಂತೆ, ವ್ಯಾಖ್ಯಾನಿಸಿ, ವಿವೇಚಿಸಿ, ನಿದರ್ಶನ ಪೂರ್ವಕವಾಗಿ ವರ್ಣಿಸಿರುವುದು ಈ ಸಂಪುಟಗಳ ಜನಪ್ರಿಯತೆಗೆ ಸಾಕ್ಷಿ. ಈ ಸಾಲಿನಲ್ಲಿ ಅದ್ವೈತ, ದ್ವೈತ, ವಿಶಿಷ್ಟಾ-ದ್ವೈತ, ಶಕ್ತಿ ವಿಶಿಷ್ಟಾದ್ವೈತ ದರ್ಶನಗಳಿಗೆ ಸಂಬಂಧಿಸಿದ ಇತರ ಗ್ರಂಥಗಳನ್ನೂ ಸ್ಮರಿಸಿಕೊಳ್ಳಬಹುದು.

'ಸಮಕಾಲೀನ ಭಾರತೀಯ ತತ್ವಶಾಸ್ತ್ರ'ವೆಂಬ ಡಾ. ವಿ. ಎನ್. ಶೇಷಗಿರಿ-ರಾವ್ ಅವರ ಕೃತಿ ಉಲ್ಲೇಖನಾರ್ಹ ವಿಶೇಷ ಗ್ರಂಥ. ಭಾರತೀಯರ ತತ್ವಚಿಂತನೆ ಎಂದೋ ನಿಂತು ಹೋಯಿತೆಂದೂ ಅದು ಗತ ವೈಭವ ಮಾತ್ರ ಎನ್ನುವವರಿಗೆ

ಸಮರ್ಪಕ ಉತ್ತರ ನೀಡಿದೆ ಈ ಕೃತಿ. ಶ್ರೀ ರಾಮಕೃಷ್ಣ ಪರಮಹಂಸ, ವಿವೇಕಾನಂದ, ರವೀಂದ್ರನಾಥ, ಗಾಂಧೀಜಿ, ಅರವಿಂದ, ರಾಧಾಕೃಷ್ಣನ್, ರಮಣಮಹರ್ಷಿ, ಇಕ್ಬಾಲ್-ಮುಂತಾದ ಆಧುನಿಕ ಭಾರತದ ಅನುಭಾವಿ-ತತ್ವವೇತ್ತರುಗಳು. ಜಗತ್ತಿನ ದರ್ಶನ ಸಾಹಿತ್ಯಕ್ಕೆ ನೀಡಿದ ಕೊಡುಗೆಗಳನ್ನು ವ್ಯಾಪಕವಾಗಿ ವಿವೇಚಿಸಲಾಗಿದೆ. ವಿಶ್ವ ದಾರ್ಶನಿಕರೆಂದು ಪ್ರಸಿದ್ಧರಾಗಿ, ಇತ್ತೀಚೆಗೆ ನಮ್ಮನ್ನಗಲಿದ ಜೆ. ಕೃಷ್ಣಮೂರ್ತಿಯವರ ಜೀವನ ಹಾಗೂ ದರ್ಶನಗಳ ಪರಿಚಯಾತ್ಮಕ ಕೃತಿಗಳು ಕನ್ನಡದಲ್ಲಿ ಮೂಡಿಬಂದಿರುವುದು ಗಮನಾರ್ಹ. ಈ ನಿಟ್ಟಿನಲ್ಲಿ ಉಲ್ಲೇಖನಾರ್ಹ ಕೃತಿ 'ಶಿವಶರಣರ ಕಾಯಕ ಸಿದ್ಧಾಂತ'. ಡಾ. ಬಿ. ಬಿ. ಹೆಂಡಿ. ಡಾ ಶಿವರುದ್ರಪ್ಪ. ಡಾ. ಸಿದ್ದಯ್ಯ ಪುರಾಣಿಕ. ಡಾ. ವಿಲ್ಯಂ ಮಾಡ್ತ ಮುಂತಾದ ಎಂಟು ಜನರು, ಶಿವಶರಣರು ಪ್ರತಿಪಾದಿಸುವ 'ಕಾಯಕ-ದಾಸೋಹ' ಮುಂತಾದವುಗಳ ತಾತ್ವಿಕ ವಿವೇಚನೆಯನ್ನು—ಗೀತೆಯ ನಿಷ್ಕಾಮಕರ್ಮ, ಬೈಬಲ್ಲಿನ 'ಸತ್ಕರ್ಮ', ಕಮ್ಯೂನಿಸಂನ 'ದುಡಿಮೆ' ಮುಂತಾದ ವಿಚಾರಗಳ ತೌಲನಿಕ ದೃಷ್ಟಿಯಿಂದ ಮಾಡಿರುವರು. ಶಿವಶರಣರ 'ಕಾಯಕ'ದ ಅತ್ಯಾಧುನಿಕ ಹಾಗೂ ಅತ್ಯಂತ ಪ್ರಗಲ್ಭ ವಿವೇಚನೆ ಇದಾಗಿದೆ. ಡಾ. ಹೆಂಡಿಯವರ 'ಕಾಯಕ ಸಿದ್ಧಾಂತ'ವೆಂಬ ಭಾಗ. ಸರ್ವಂಕಷ ದೃಷ್ಟಿಯ, ಮುಕ್ತ ಮನಸ್ಸಿನ. ವಸ್ತುನಿಷ್ಠ ವಿವೇಚನೆಯದಾಗಿರುವುದು ಹೆಮ್ಮೆಯ ವಿಷಯ. ಇದು ಕನ್ನಡ ಜ್ಞಾನ-ದರ್ಶನ ಸಾಹಿತ್ಯದ ಸ್ಥೂಲ ನೋಟ ಮಾತ್ರ.

ಸಂಶೋಧನೆ-ಸಂಪಾದನೆಯ ವಿಚಾರಸಾಹಿತ್ಯ

ಕನ್ನಡದಲ್ಲಿ ಸಂಶೋಧನೆ ಸಂಪಾದನೆಯ ಕಾರ್ಯ. ಹಿಂದಿನಿಂದಲೂ ನಡೆದು ಬಂದಿದೆ. ಆದರೆ ಇತ್ತೀಚೆಗೆ ಅದು ಹೆಚ್ಚು ಜನರ ಗಮನವನ್ನು ಸೆಳೆದು, ದುಡಿಮೆಯನ್ನು ಆಹ್ವಾನಿಸಿ. ಉನ್ನತವಿದ್ಯಾಭ್ಯಾಸದ ಅಧ್ಯಯನದ ಅಂಗವಾಗಿ ಬೆಳೆದು ಬಂದಿರುವುದು ಇಲ್ಲಿ ಉಲ್ಲೇಖನಾರ್ಹ. ಗೋವಿಂದ ಪೈ. ಬಿ. ಎಂ. ಶ್ರೀ, ಡಾ ಜ. ಚ.ನಿ. ಶ್ರೀ ತೋಂಟದಾರ್ಯ ಸಂಶೋಧನ ಅಧ್ಯಯನ ಸಂಸ್ಥೆಗಳು ಈ ಕ್ಷೇತ್ರಕ್ಕೆ ತಮ್ಮನ್ನು ಅರ್ಪಿಸಿಕೊಂಡಿರುವುದು ಇಂಥ ವಿಚಾರಸಾಹಿತ್ಯ ವ್ಯಾಪಕವಾಗಲು ಕಾರಣವಾಗಿದೆ. ವಿಶ್ವವಿದ್ಯಾಲಯಗಳು, ಕನ್ನಡ ಸಾಹಿತ್ಯ ಪರಿಷತ್ತು ಮುಂತಾದ ಪ್ರಸಿದ್ಧ ಸಂಸ್ಥೆಗಳೂ ಈ ಸಂಪಾದನೆ ಸಂಶೋಧನೆಗಳಿಗೆ ಹಿಂದಿಗಿಂತಲೂ ಹೆಚ್ಚಾಗಿ ಪ್ರಾಮುಖ್ಯತೆ ನೀಡುತ್ತಿರುವುದು ಉಲ್ಲೇಖನಾರ್ಹ ಬೆಳವಣಿಗೆ.

ಡಾ. ಕೆ. ಕೃಷ್ಣಮೂರ್ತಿಯವರ 'ಕವಿರಾಜಮಾರ್ಗಂ', ಡಾ. ಎಂ.ಎಂ. ಕಲಬುರ್ಗಿಯವರ 'ಸಿರುಮಣ ನಾಯಕನ ಸಾಂಗತ್ಯ ಹಾಗೂ 'ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯ', ಪ್ರೊ. ರಾ.ಯ. ಧಾರವಾಡಕರ ಅವರ 'ಶಾಂತಕವಿಯ ಮೂರುಕೀರ್ತನೆಗಳು' ಶಾಂತರಸರ 'ಕೂಡಲೂರು ಬಸವಲಿಂಗ ಶರಣರ ವಚನಗಳು, 'ಕಾವ್ಯಪ್ರೇಮಿ

ಸಂಪಾದಿಸಿದ 'ವಾದಿರಾಜರಹಾಡುಗಳು' ಶ್ರೀಲಕ್ಷ್ಮೀನಾರಾಯಣ ಭಟ್ಟರು ಸಂಪಾದಿಸಿರುವ 'ತಿಮ್ಮಪ್ಪ ದಾಸ ವಿರಚಿತ ಧ್ರುವಚರಿತೆ, 'ಮಹಾನುಭಾವಿ ಶ್ರೀ ಚೆನ್ನಮಲ್ಲಿಕಾರ್ಜುನರು' (ಸಂ. ಎಚ್. ದೇವೀರಪ್ಪ ಮತ್ತು ಚನ್ನಪ್ಪ ಎರಿಸೀಮೆ) ಮುಂತಾದ ಕೃತಿಗಳೊಡನೆ ಚಾರಿತ್ರಿಕ ಸಂಗತಿಗಳ ಪ್ರಮುಖ ದಾಖಲೆಗಳಾದ ಕೈಫಿಯತ್ತುಗಳ ಪ್ರಕಟನೆಯನ್ನೂ ಸ್ಮರಿಸಬಹುದು. ಇವುಗಳೆಲ್ಲ ನಮ್ಮ ತಿಳುವಳಿಕೆಗೆ ಬೆಳಕು ನೀಡುವ ಬೌದ್ಧಿಕ ಸಾಹಿತ್ಯ.

ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆ ಮಾಡುವ ಹಿರಿ-ಕಿರಿಯ ಸಂಶೋಧಕರು ಕನ್ನಡದ ಬೌದ್ಧಿಕ ದಿಗಂತವನ್ನು ವಿಸ್ತರಿಸಿರುವರು. ಒಂದೊಂದು ಕೃತಿಯೂ, ಒಂದೊಂದು ಶಾಖೆಯ ಮಹತ್ವವನ್ನು ಎತ್ತಿತೋರಿಸುತ್ತಿವೆ. ಪರಂಪರೆಯ ಕನ್ನಡ ಕವಿ-ಕೃತಿ-ಯುಗಮಾನಗಳ ವಿವೇಚನೆಯ ಜೊತೆಗೆ, ನಮ್ಮ ಸಾಂಸ್ಕೃತಿಕರಂಗದ, ಇತಿಹಾಸ, ಶಿಲ್ಪ, ಶಾಸನ, ಸಮಾಜಗಳ ಅಧ್ಯಯನವೂ ಸಂಶೋಧಕರ ಗಮನ ಸೆಳೆದಿರುವುದು ಉಲ್ಲೇಖನಾರ್ಹ. ಶೂನ್ಯಸಂಪಾದನೆಯ ಅರ್ಥ-ಮೌಲ್ಯ ವಿವೇಚಿಸುವ 'ಅಮೃತಬೆಳಸು' (ಸಂ. ಡಾ. ಎಸ್.ಎಂ. ವೃಷಭೇಂದ್ರಸ್ವಾಮಿ ಮತ್ತು ಡಾ.ಬಿ.ಸಿ. ಜವಳಿ) ಹಾಗೂ ವಿವಿಧ ಸಾಹಿತ್ಯ ಪ್ರಕಾರಗಳನ್ನು ಗುರುತಿಸಿರುವ 'ಗೌರವ' (ಸಂ. ಡಾ. ಬಿ. ವಿ. ಶಿರೂರ) ಎಂಬ ಪ್ರೊ. ಭೂಸನೂರಮಠ ಅವರ ಗೌರವಗ್ರಂಥ ಮುಂತಾದವುಗಳು ಸಂಪಾದನೆ ಕಾರ್ಯದ ಗಮನಾರ್ಹ ಕೃತಿಗಳು. ಪ್ರಾಚೀನಕಾಲದಿಂದ ಹಿಡಿದು, ವಿಜಯನಗರ ಪತನದವರೆಗೆ ವ್ಯಾಪಿಸಿರುವ ಕಾಲಮಾನದಲ್ಲಿ ಕರ್ನಾಟಕದ ವ್ಯಾಪಾರ-ಉದ್ದಿಮೆ-ಸಾರಿಗೆ ಮುಂತಾದವುಗಳ ವಿಶೇಷ ಸಂಶೋಧನೆ ಡಾ. ಬಿ. ಆರ್. ಹಿರೇಮಠರ 'ಶಾಸನಗಳಲ್ಲಿ ಕರ್ನಾಟಕದ ವರ್ತಕರು' ಎಂಬ ಪಿಎಚ್.ಡಿ. ಸಂಪ್ರಬಂಧ. ಇತ್ತೀಚೆಗೆ ಪುಸ್ತಕರೂಪದಲ್ಲಿ ಪ್ರಕಟವಾಗಿದೆ. 'ವೃತ್ತ ಪತ್ರಿಕೆ: ವರದಿಲೇಖನ' ಎಂಬ ಡಾ. ದೇವೇಂದ್ರಕುಮಾರ ಹಕಾರಿಯವರ ಪ್ರಯತ್ನ. ಜಾನಪದ ವೈದ್ಯವಿದ್ಯೆಯನ್ನು ಸಂಗ್ರಹಿಸಿ, ಸಂಪಾದಿಸಿರುವ ಡಾ. ಎಲ್. ಆರ್. ಹೆಗಡೆಯವರ ಕೃತಿಗಳ ಸಾಹಸ, ಪುಟ್ಟದಾದರೂ ಎಸ್. ಎಫ್. ಪೂಜಾರ ಅವರ 'ಜಾನಪದ ಮತ್ತು ಸಮಾಜ ಕಾರ್ಯ'ದ ವಿವೇಚನೆ, ವಿವಿಧ ಲೇಖಕರ ಸಂಶೋಧನೆಯ ಸಂಗ್ರಹವಾದ ಕರ್ನಾಟಕ ವಿಶ್ವವಿದ್ಯಾಲಯದ 'ಜಾನಪದ ಸಾಹಿತ್ಯದರ್ಶನ'ದ ಎಂಟು ಸಂಪುಟಗಳ ತಿಳುವಳಿಕೆ ಕನ್ನಡದ ಸಂಶೋಧನ ಸಾಹಿತ್ಯದ ಕೆಲವು ದಾಖಲೆಗಳು. ವಿಸ್ತಾರಭಯದಿಂದ ಈ ವಿಭಾಗದ ಹೆಚ್ಚಿನ ಕೃತಿಗಳ ಪ್ರಸ್ತಾಪ ಮೊಟಕುಗೊಳಿಸಲಾಗಿದೆ.

ನಿಘಂಟು-ಪದಕೋಶ ವಿಶ್ವಕೋಶಗಳು

ಯಾವುದೇ ಭಾಷೆಯ ಸೃಜನ ಸಾಹಿತ್ಯದ ಬೆನ್ನೆಲುಬು ನಿಘಂಟು ಮತ್ತು ವಿಶ್ವಕೋಶಗಳು. ಬೌದ್ಧಿಕ ಶ್ರಮ, ನಿರಂತರ ದುಡಿಮೆ, ಸಾಮೂಹಿಕ ಕ್ರಿಯೆಗಳ

ಸಂಗಮ ಈ ಬಗೆಯ ಕೋಶ ಸಾಹಿತ್ಯ. ರೆವರೆಂಡ್ ಕಿಟೆಲ್ಲರ ಕೋಶದ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯಪರಿಷತ್ತಿನ ಕನ್ನಡ–ಕನ್ನಡ ನಿಘಂಟುವಿನ ಸಂಪುಟಗಳು ಪ್ರಕಟವಾಗಿವೆ. ಇನ್ನೂ ಪ್ರಕಟವಾಗಲಿವೆ. ಈಚೆಗೆ ಉಡುಪಿಯ ಗೋವಿಂದ ಪೈ ಸಂಶೋಧನ ಸಂಸ್ಥೆ 'ತುಳು–ನಿಘಂಟಿನ' ವ್ಯಾಪಕಯೋಜನೆ ಕೈಗೊಂಡು, ಭರದಿಂದ ಕಾರ್ಯ ಪ್ರವೃತ್ತವಾಗಿದೆ. ಶ್ರೀ ಎಂ. ಮರಿಯಪ್ಪಭಟ್ಟರ 'ಹವ್ಯಕ ಇಂಗ್ಲಿಷ್ ನಿಘಂಟು' ಎಚ್. ಎಸ್. ಕೆ ಯವರ 'ಬ್ಯಾಂಕಿಂಗ್ ನಿಘಂಟು' ಐ. ಮಾ. ಮುತ್ತಣ್ಣನವರ 'ಕೊಡವ–ಕನ್ನಡ ನಿಘಂಟು' ಮುಂತಾದ ಪ್ರಯತ್ನಗಳನ್ನು ಇಲ್ಲಿ ಹೆಸರಿಸಬಹುದು. ಈಚೆಗೆ, ಆಡಳಿತ ಭಾಷಾಕೋಶ, ವಿವಿಧ ವಿಷಯಗಳಿಗೆ ಸಂಬಂಧಿಸಿದ ತಾಂತ್ರಿಕ ಪದ ಕೋಶಗಳ ರಚನೆ ವ್ಯಾಪಕವಾಗಿ ನಡೆದಿದೆ. ಈ ಎಲ್ಲ ಪ್ರಯತ್ನಗಳು, ಕನ್ನಡ ಭಾಷೆಯ ಪದ ಸಂಪತ್ತಿ, ಪ್ರಯೋಗ ವೈವಿಧ್ಯಕ್ಕೆ ನೆರವಾಗಿವೆ.

ಈಚೆಗೆ, 'ಪದ ಪ್ರಯೋಗ ಕೋಶ'ಗಳ ರಚನೆ ಜನಪ್ರಿಯವಾಗುತ್ತಿದೆ. ಶ್ರೀ ಎಸ್. ಆರ್. ಗುಂಜಾಳರ ಬಸವ, ತೋಂಟದ ಸಿದ್ಧಲಿಂಗ ಮುಂತಾದವರ ವಚನಗಳ ಪದಪ್ರಯೋಗಕೋಶಗಳೊಡನೆ ದಾಖಲಾಗಬೇಕಾದ ರಚನೆ ಹ. ನಂ. ವಿಜಯ ಕುಮಾರ ಅವರ 'ಅಲ್ಲಮನ ವಚನಗಳ ಪಪ್ರೋಶ' (ಪದಪ್ರಯೋಗಕೋಶದ ಸಂಕ್ಷಿಪ್ತ ರೂಪ)ದ ಪ್ರಕಟನೆ. 'ಗೋವಿಂದ ಪೈಗಳ ಪದಪ್ರಯೋಗಕೋಶ' ವೊಂದನ್ನು ಶ್ರೀ ಎಂ. ವಿ. ನಾವಡ ಮತ್ತು ಎಸ್. ವಿ. ಉಪೇಂದ್ರ ಸೋಮಯಾಜಿ ಅವರು ಸಿದ್ಧಗೊಳಿಸಿರುವರು. ಟಿ. ವಿ. ವೆಂಕಟರಮಣಯ್ಯನವರ ವಿವಿಧ ಸೂಚಿಗಳನ್ನೂ, ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಕನ್ನಡ ಸಾಹಿತ್ಯಪರಿಷತ್ತಿನ ಕಲಾವಿದರ ಸೂಚಿ, ಲೇಖಕರ ಸೂಚಿ, ಲೇಖನಗಳ ಸೂಚಿಗಳನ್ನೂ ಇಲ್ಲಿ ಹೆಸರಿಸಬಹುದು. ಹಸ್ತಪ್ರತಿಗಳ ಸೂಚಿಗಳೂ ಈ ಸಾಲಿನಲ್ಲಿ ಸೇರುವ ಕೃತಿಗಳು.

ಹದಿನಾಲ್ಕು ಸಂಪುಟಗಳ ವಿಸ್ತಾರವನ್ನೊಳಗೊಂಡ 'ಕನ್ನಡ ವಿಶ್ವಕೋಶ' ಕನ್ನಡಿಗರ ಹೆಮ್ಮೆಯ ಸಾಧನೆ. ಈಚೆಗೆ ಅದೇ ಮೈಸೂರು ವಿಶ್ವವಿದ್ಯಾನಿಲಯ 'ವಿಷಯ ವಿಶ್ವಕೋಶ'ಗಳ ಸಿದ್ಧತೆಯಲ್ಲೂ ಮುನ್ನಡೆದಿದೆ. ಜಾನಪದ ವಿಶ್ವಕೋಶದ ಎರಡು ಸಂಪುಟಗಳನ್ನು ಸಾಹಿತ್ಯ ಪರಿಷತ್ತು ಪ್ರಕಟಿಸಿದೆ. ನಿರಂಜನರ ಮಹಾಸಾಹಸ, 'ಮಕ್ಕಳ ವಿಶ್ವಕೋಶ'. ಈಚೆಗೆ, ಗದಗಿನ ತೋಂಟದಾರ್ಯಮಠವು ವೀರಶೈವ ವಿಶ್ವಕೋಶದ ಹನ್ನೆರಡು ಸಂಪುಟಗಳ ಯೋಜನೆ ಹಮ್ಮಿಕೊಂಡಿದೆ. ಹೀಗೆ, ಕನ್ನಡ ವಾಙ್ಮಯ ಕ್ಷೇತ್ರದ ಈ ನಿಘಂಟು, ಸೂಚಿ, ಪದಕೋಶ, ವಿಶ್ವಕೋಶಗಳು ಕನ್ನಡಿಗರ ವಿಚಾರ ಸಾಹಿತ್ಯದ ದಿಗಂತವನ್ನೇ ವಿಸ್ತರಿಸಿವೆ. ಭಾಷಾಶಾಸ್ತ್ರಕ್ಕೆ ಸಂಬಂಧಿಸಿದ ಅಧ್ಯಯನ–ಸಂಶೋಧನೆಗಳೂ ಇದಕ್ಕೆ ಸಹಕಾರಿಯಾಗಿ ನಿಂತಿವೆ. ಶಾಸನಶಾಸ್ತ್ರ, ಹಸ್ತಪ್ರತಿಶಾಸ್ತ್ರ

ಗ್ರಂಥಗಳೂ ಕನ್ನಡದಲ್ಲಿ ಬರುತ್ತಿರುವುದು ಕನ್ನಡ ವಿಚಾರ ಸಾಹಿತ್ಯದ ಗಡಿಗೆರೆಗಳ ವಿಸ್ತರಣೆಯನ್ನು ಸೂಚಿಸುತ್ತವೆ.

ವಿಮರ್ಶೆ-ಚರಿತ್ರೆ-ಸಮೀಕ್ಷೆ

ಕನ್ನಡದ ವಿಚಾರ ಸಾಹಿತ್ಯದಲ್ಲಿ ಗಣನೆಯಾಗಬೇಕಾದ ವಿಷಯ 'ಸಾಹಿತ್ಯ ವಿಮರ್ಶೆ'. ಅದು ಭಾವಕ್ಕಿಂತಲೂ, ಬುದ್ಧಿ ಪ್ರಧಾನ ಸಾಹಿತ್ಯ. ವಿಚಾರ ವಿಶ್ಲೇಷಣೆ-ತೌಲನಿಕಾಧ್ಯಯನ ಅದರ ದಾರಿ. ಕನ್ನಡದಲ್ಲಿ ವಿಮರ್ಶೆ ಬೆಳೆದಿಲ್ಲವೆಂಬುದು ಹಳೆಯ ರಾಗ. ಇಂದು ಬರುತ್ತಿರುವ ಮೌಲಿಕ ಕೃತಿಗಳು, ವಿಮರ್ಶಾಲೇಖನಗಳು, ಪತ್ರಿಕೆಗಳ ಸಾಹಿತ್ಯ ಸಮೀಕ್ಷೆಗಳು, ವಿಚಾರ ಸಂಕಿರಣಗಳ ಲೇಖನ-ಭಾಷಣಗಳು. ಈ ದಿಸೆಯ ಪ್ರಯತ್ನಗಳ ವ್ಯಾಪಕತೆಯನ್ನು ಸೂಚಿಸುತ್ತವೆ. ೧೯೬೩ರಲ್ಲಿ ಪ್ರಕಟವಾದ ಶ್ರೀ ಓ. ಎಲ್. ನಾಗಭೂಷಣಸ್ವಾಮಿಯವರ 'ವಿಮರ್ಶೆಯ ಪರಿಭಾಷೆ'. ಕನ್ನಡ ವಿಚಾರ-ವಿಮರ್ಶೆ ಸಾಹಿತ್ಯಕ್ಕೆ ವ್ಯಾಪಕವಾದ ತಳಹದಿ ಹಾಕಿದೆ. ವಿಮರ್ಶೆಯ ತಾಂತ್ರಿಕ ಶಬ್ದಗಳ ಖಚಿತಾರ್ಥ, ಅವುಗಳ ಅರ್ಥವ್ಯಾಪ್ತಿಯ ನಿರ್ದಿಷ್ಟತೆಯ ಸಾಧನೆಗೆ ಈ ಕೃತಿ ಒಂದು ಮೈಲಿಗಲ್ಲು. ಮುನ್ನುಡಿಕಾರರಾದ ಯು. ಆರ್. ಅನಂತಮೂರ್ತಿಯವರೆನ್ನುವಂತೆ 'ಸಾರಸ್ವತ ಪ್ರಪಂಚದ ಕೃತಜ್ಞತೆಗೆ ಅರ್ಹವಾದ ಕೃತಿ.

ಸಾಹಿತ್ಯ ವಿಮರ್ಶಾರಂಗಕ್ಕೆ ಎರಡು ಹೆಮ್ಮೆಯ ಕೋಡುಗಳೆಂಬಂತಿರುವ ಎರಡು ಕೃತಿಗಳ ಪ್ರಸ್ತಾಪ ಇಲ್ಲಿ ಆವಶ್ಯಕ. ಡಾ. ಜಿ. ಎಸ್. ಶಿವರುದ್ರಪ್ಪನವರ 'ಕಾವ್ಯಾರ್ಥ ಚಿಂತನ' ಹಾಗೂ ಡಾ. ತಿಪ್ಪೇರುದ್ರಸ್ವಾಮಿಯವರ 'ತೌಲನಿಕ ಸಾಹಿತ್ಯ ವಿಮರ್ಶೆ'. ಪ್ರಾಚ್ಯ ಮತ್ತು ಪಾಶ್ಚಾತ್ಯ ವಿಮರ್ಶಾ ಪ್ರಮೇಯಗಳ ಸಮತೂಕದ ತೌಲನಿಕ ಅಧ್ಯಯನ ಇಲ್ಲಿದೆ. ಸೃಜನ ಸಾಹಿತಿಗಳಿಬ್ಬರೂ, ವಿಮರ್ಶನ ಸಾಹಿತ್ಯದ ರಚನೆಗೆ ಕೈಹಾಕಿ, ಕನ್ನಡ ವಿಚಾರ ಸಾಹಿತ್ಯಕ್ಕೆ ಮಾರ್ಗದರ್ಶನ ನೀಡಿರುವರು. ಶ್ರೀ ವಿ. ಎಂ. ಇನಾಂದಾರರ ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯನ್ನು ಕುರಿತ ಗ್ರಂಥಗಳೂ ಇಲ್ಲಿ ಉಲ್ಲೇಖನಾರ್ಹ. ಡಾ. ಯರವಿನತಲಿಮಠ ಅವರ 'ಸಾಹಿತ್ಯವಾದಗಳು' ಗಣನೀಯ ಕೃತಿ. ಶ್ರೀ ಗೋಪಾಲಕೃಷ್ಣ ಅಡಿಗರ 'ಲೇಖನಗಳು ಮತ್ತು ಮುನ್ನುಡಿಗಳು' ಎಂಬ ಇತ್ತೀಚಿನ ಪ್ರಕಟನೆ ಆಧುನಿಕ ಸಾಹಿತ್ಯ ವಿಮರ್ಶೆಯ ತಿಳುವಳಿಕೆಗೆ ನೆರವಾಗುತ್ತದೆ. ಬೆಂಗಳೂರು ವಿಶ್ವವಿದ್ಯಾಲಯದ 'ಸಾಹಿತ್ಯ ವಾರ್ಷಿಕ' ಸಂಪುಟಗಳು, ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಾಪಕರ ವಾರ್ಷಿಕ ಸಾಹಿತ್ಯ ಸಮೀಕ್ಷಾ ಪ್ರಬಂಧಗಳು ಮತ್ತು ವೈಯಕ್ತಿಕ ವಿಮರ್ಶಾ ಲೇಖನ-ಗ್ರಂಥಗಳು-ಮುಖ್ಯವಾಗಿ ಮಾರ್ಕ್ಸ್‌ವಾದದ ವಿಚಾರಗಳನ್ನು ಬಿಂಬಿಸುವ ಶ್ರೀ ಸಿ. ವೀರಣ್ಣನವರ ಪುಸ್ತಕ ಲೇಖನಗಳು-

ಕನ್ನಡ ವಿಮರ್ಶೆಗೆ ಹೊಸ ಆಯಾಮಗಳನ್ನು ನಿರ್ಮಿಸಿವೆ. ಹೀಗೆ, ಕನ್ನಡ ವಿಮರ್ಶೆ-ವಿಚಾರ ಸಾಹಿತ್ಯದ ಉನ್ನತಮಟ್ಟಕ್ಕೆ ದಾರಿ ಮಾಡಿದೆ.

ಒಟ್ಟಿನಲ್ಲಿ, ಕನ್ನಡದ ವಿಚಾರ ಸಾಹಿತ್ಯ, ಹತ್ತು-ಹಲವು ದಿಕ್ಕುಗಳಿಗೆ ಪ್ರವೇಶಿಸಿ ಸಮೃದ್ಧ ಸಾಹಿತ್ಯ ಸೃಷ್ಟಿಗೆ, ಬೆಂಬಲವಾಗಿದೆ. ಭಾವ ಲಹರಿಯಂತೆ, ಬುದ್ಧಿ ವಿನ್ಯಾಸವೂ ನ್ಯಾಸಗೊಂಡಿದೆ. ಕುವೆಂಪು ಎನ್ನುವಂತೆ 'ಒಳ್ಳೆಯ ಸಾಹಿತ್ಯ ಬುದ್ಧಿ-ಭಾವಗಳ ವಿದ್ಯುದಾಲಿಂಗನ' ಎಂಬ ಮಾತಿನ ಸತ್ಯ ಈಗ ಕನ್ನಡದಲ್ಲಿ ಸಾಬೀತಾಗುತ್ತಿದೆ, ಸಾರ್ಥಕವಾಗುತ್ತಿದೆ.

ಜ್ಞಾನಪೀಠ ಪ್ರಶಸ್ತಿ ವಿಜೇತ ಕೃತಿ

ಮಾಸ್ತಿಯವರ 'ಚಿಕವೀರರಾಜೇಂದ್ರ'

● ಜಯಪ್ರಕಾಶ ಮಾವಿನಕುಳಿ

ಭಾರತವು ಧರ್ಮ, ನೀತಿ, ಸಂಸ್ಕೃತಿ ಮುಂತಾದ ಕಾರಣಗಳಿಂದ ಒಂದಾಗಿತ್ತು. ಇದರಲ್ಲಿನ ಒಂದು ಪ್ರಾಂತವಾದ ಕೊಡಗಿನ ಕೊನೆಯ ರಾಜನೊಬ್ಬನ ದುರಂತಕತೆ 'ಚಿಕ್ಕವೀರರಾಜೇಂದ್ರ'. ಮೇಲುನೋಟಕ್ಕೆ ಇದು ಕೊಡಗಿನ ಅರಸುವಿನ ಕಥೆಯಂತೆ ಕಂಡರೂ ಹೇಗೆ ಪ್ರಾಯ, ಶ್ರೀಮಂತಿಕೆ, ಅಧಿಕಾರ ಬಂದವರು ಹಾಳಾಗಿ, ನಾಶವಾಗಿ, ಮನೆತನ ನಾಶಮಾಡಿ ಅನ್ಯರ ಕಂಕುಳಲ್ಲಿ ಕರಗಿಬಿಡುತ್ತಾರೆ ಎಂಬುದೇ ಈ ಕಾದಂಬರಿಯ ಮೂಲ ಆಶಯ,

ಚಿಕ್ಕವೀರರಾಜ ಹುಟ್ಟಿನಿಂದಲೇ ದುಷ್ಟನೇನೂ ಅಲ್ಲ. ಆದರೆ ಅವನು ಬಾಳ್ವೆ ನಡೆಸಿದ ಸುಮಾರು ೩೩ ವರುಷಗಳಲ್ಲಿ ಅವನು ಬಹುಜನರಲ್ಲಿ ತನ್ನಂಥ ದುಷ್ಟ ಇನ್ನೊಬ್ಬನಿರಲಾರ ಎಂಬ ಅಭಿಪ್ರಾಯಕ್ಕೆ ಎಡೆಮಾಡಿಕೊಟ್ಟಿದ್ದನು; ತನ್ನ ವ್ಯಕ್ತಿತ್ವವನ್ನು ಪೂರ್ಣ ಕೆಡಿಸಿಕೊಂಡಿದ್ದನು. ಮಾನವನ ವರ್ತನೆಯ ವೈವಿಧ್ಯವನ್ನು ಅವಲೋಕಿಸಿ, ಅರಿತು, ವಿವರಿಸುವಲ್ಲಿ ಮನೋವಿಜ್ಞಾನಿಗಳು 'ವ್ಯಕ್ತಿತ್ವ' ಎಂಬ ಮಾತನ್ನು ಬಹಳವಾಗಿ ಉಪಯೋಗಿಸುತ್ತಾರೆ. ಯೂಂಗ್ ಇದನ್ನು ಸೈಕ್ (Psyche) ಎಂದು ಕರೆದ. ಪ್ರತಿಯೊಬ್ಬ ಮನುಷ್ಯನಲ್ಲೂ ಅವನದೇ ಆದ ಪ್ರೇರಣೆ ಪ್ರವೃತ್ತಿಗಳೂ, ಆಸಕ್ತಿ ಅಭಿವ್ಯಕ್ತಿಗಳೂ, ಬುದ್ಧಿ ಸಾಮರ್ಥ್ಯಗಳೂ, ಭಾವನೆ ಚಿಂತನೆಗಳೂ ಇದ್ದರೂ ಇವೆಲ್ಲವೂ ಹೇಗೆ ಪರಿಸರದಿಂದ ಮಲಿನವಾಗಬಹುದು ಎಂಬುದಕ್ಕೆ ಚಿಕ್ಕದೇವರಾಯನೇ ಸಾಕ್ಷಿ

ಮನುಷ್ಯ ಕೆಟ್ಟವನಾಗಲು ಅಥವಾ ಒಳ್ಳೆಯವನಾಗಲು ಆತನ ಬಾಲ್ಯದಲ್ಲಾದ ಪರಿಣಾಮ ಮತ್ತು ದೊರೆತ ಸಹವಾಸ ಬಹಳ ಮುಖ್ಯ ಪಾತ್ರವನ್ನು ವಹಿಸುತ್ತದೆ. ಚಿಕ್ಕವೀರ ಬಾಲ್ಯದಲ್ಲಿ ಬೆಳೆದದ್ದು ನೋಡಿ–ಆತನ ತಂದೆ ಲಿಂಗರಾಜನ ಅಣ್ಣ ವೀರರಾಜನಿಗೆ ಗಂಡುಮಕ್ಕಳು ಇಲ್ಲವ್ದರಿಂದ ತನ್ನ ಮಗನನ್ನು ದತ್ತು ತೆಗೆದುಕೊಂಡಾನೋ ಇಲ್ಲ ಇನ್ನೊಬ್ಬ ಅಣ್ಣನ ಮಗನನ್ನು ದತ್ತು ತೆಗೆದುಕೊಂಡಾನೋ ಎಂಬ ಆಸೆಬುರುಕತನದ ಮಾತುಗಳು ಚಿಕವೀರನ ಮೇಲೆ ಪರಿಣಾಮ ಬೀರಿದವು. "ಹೀಗಾಗಿ ಐದಾರು ವರುಷದ ಈ ಹುಡುಗನ ಕಿವಿಗೆ ಬಿದ್ದ ಮಾತೆಲ್ಲ ದೊಡ್ಡಪ್ಪನನ್ನು

ಕುರಿತು ಲಿಂಗರಾಜ ಆಡಿಕೊಳ್ಳುತ್ತಿದ್ದ ಪರಸ್ಪರ ಸ್ಪರ್ಧೆಯು. ಅಸ್ನೇಹದ ಮಾತು ಗಳು ಇದರಿಂದ ರಾಜಕುಮಾರನ ಮನಸ್ಸು ಕುರುಚಾಗಿ ಬೆಳೆಯುವ ಸ್ಥಿತಿಗೆ ಒದಗಿತು."

ನಾವು ತಾಳಿಕೊಳ್ಳಲಾಗದ ಅನೇಕ ವಿಷಯಗಳನ್ನು ಬಾಲ್ಯದಲ್ಲಿ ವೈಯಕ್ತಿಕ ಸುಪ್ತಚೇತನಕ್ಕೆ (Personal unconscicusness) ತಳ್ಳಿ ಬಿಡುತ್ತೇವೆ. ಇದನ್ನೇ ಯೂಂಗ್ ದಮನಕ್ರಿಯೆ (Repression) ಎನ್ನೋದು. ಆತ ಹೇಳುತ್ತಾನೆ "ಸಾಕಷ್ಟು ತೀವ್ರವಾಗಿಲ್ಲದ ದುರ್ಬಲ ಸಂವೇದನೆಗಳು ಚೇತನಕ್ಕೆ ಬರಲಾರದಾಗಲೂ ಸುಪ್ತ ಚೇತನಕ್ಕೆ ತಳ್ಳಲ್ಪಡುತ್ತವೆ." ಬಾಲ್ಯಾವಸ್ಥೆಯಲ್ಲಿ ಜರುಗಿದ ಹಲವಾರು ಅನುಭವಗಳು ಅಲ್ಲಿ ಸಂಗ್ರಹವಾಗಿರುತ್ತವೆ. ಅಂದರೆ ನಾವು ಮರೆತ, ದಮನ ಮಾಡಿದ ಭಾವನೆಗಳ, ಚಿಂತನೆಗಳ, ಅನುಭವಗಳ ಆಗರ ವೈಯಕ್ತಿಕ ಸುಪ್ತಚೇತನ. ವೈಯಕ್ತಿಕ ಸುಪ್ತಚೇತನ ದಲ್ಲಿದ್ದುಕೊಂಡು ನಮ್ಮ ವರ್ತನೆಯನ್ನು ನಿಯಂತ್ರಿಸುವ ಭಾವನಾತ್ಮಕ ವಿವರಗಳನ್ನೇ ಯೂಂಗ್ 'ಸಂಕೀರ್ಣ'ಗಳೆಂದು ಕರೆದ. ಇಂಥ ಭಾವನೆಗಳಲ್ಲಿ ಲೈಂಗಿಕ ಪ್ರವೃತ್ತಿಯೂ ಒಂದು. ಇದು ಬಾಲ್ಯದಲ್ಲೇ ದಮನಗೊಳ್ಳುತ್ತದೆಂದೂ (Infantile Sexuality) ಅದರಿಂದ ಈಡಿಪಸ್ ಕಾಂಪ್ಲೆಕ್ಸ್ ಏರ್ಪಡುತ್ತದೆಂದೂ, ಅದು ಸುಪ್ತ ಮನಸ್ಸಿನಲ್ಲಿ ಉಳಿದು ಮನೋರೋಗವನ್ನುಂಟು ಮಾಡುತ್ತದೆಂದೂ ಫ್ರಾಯ್ಡ್ ಹೇಳುತ್ತಾನೆ.

ಜೀವನದಲ್ಲಿ ಹೊಸ ಹೊಸದನ್ನು ಕಾಣುವ ಅತೀವ ಆಸಕ್ತಿಯ ವಯಸ್ಸು ಈ ಬಾಲ್ಯ. ಯಾರ ಮುಂಗಚೇಷ್ಟೆಯನ್ನಾದರೂ ಕ್ಷಣಮಾತ್ರದಲ್ಲಿ ಹೀರಬಲ್ಲ ಈ ಬಾಲ್ಯ ಅಷ್ಟೇ ಸ್ಫುಟವಾದದ್ದು; ಪರಿಶುದ್ಧವಾದದ್ದು; ಹಸಿಮಣ್ಣು ಇದ್ದ ಹಾಗೆ. ಅದಕ್ಕೇ Wordsworth ಹೇಳಿದ್ದು—

> ''My heart leaps up when I behold
> A rain bow in the sky;
> So was it when my life began,
> So is it now I am a Man,
> So be it when I shall grow old
> or let me die.''

ಆದರೆ ಚಿಕ್ಕವೀರನ ಜೀವನ ಆರಂಭವಾದದ್ದು ಹೇಗೆ ? ಆತ ಹೇಗೆ ಕಾಮನಬಿಲ್ಲನ್ನು ಕಂಡು ಆನಂದ ಪರವಶನಾದಾನು ? ಮತ್ತೆ ಬೆಳೆದ ಪರಿಸರವೋ—"ಚಿಕ್ಕವೀರರಾಜನ ತಾಯಿ ಆರೋಗ್ಯವಂತೆ ಅಲ್ಲ; ಅವನು ದಾದಿಯರ ಕೈಯಲ್ಲಿ ಬೆಳೆಯಬೇಕಾಯ್ತು. ಅವನ ತಂದೆ ಲಿಂಗರಾಜ ವ್ಯವಹಾರದಲ್ಲಿ ಮುಳುಗಿದ್ದನು. ಅವನು ವೀರರಾಜನನ್ನು ಬಹಳವಾಗಿ ನೋಡಿಕೊಳ್ಳಬಹುದಾಗಿತ್ತೆಂದಲ್ಲ; ಆದರೆ ವ್ಯವಹಾರ ಗೊಂದಲದಲ್ಲಿ

ತಂದೆ ಮಗನ ವಿಷಯ ಎಷ್ಟೂ ಗಮನಕೊಡುವುದಾಗಲಿಲ್ಲ. ಬಸವ ಎಳೆತನದಲ್ಲಿ ದನಗಳ ಜೊತೆಯಲ್ಲಿ, ನಾಯಿಗಳ ಜೊತೆಯಲ್ಲಿ ಬೆಳೆದಿದ್ದವನು. ಇಂಥ ಜೀವ ಆ ಪ್ರಾಣಿಗಳ ಕೊಟ್ಟಿಗೆಯ ಬಾಳನ್ನು ನೋಡುತ್ತಾ ನೋಡುತ್ತಾ ಕೆಲವು ರುಚಿಗಳನ್ನು ಬೆಳೆಸಿಕೊಳ್ಳುತ್ತದೆ; ನಾಚಿಕೆಯನ್ನು ಕಳೆದುಕೊಳ್ಳುತ್ತದೆ. ಇವುಗಳ ಜೊತೆಯಲ್ಲಿ ನಡೆದಾಡಿ ಎಳೆಯ ವೀರರಾಜನಿಗೆ ದನಗಳ, ನಾಯಿಗಳ ಸಂಸಾರದ ಅವಲೋಕನ ಒಂದು ವಿನೋದವಾಯ್ತು. ಅಷ್ಟರಲ್ಲಿ ದೊಡ್ಡ ವೀರರಾಜ ತೀರಿಕೊಂಡು ದೇವಮ್ಮಾಜಿ ರಾಣಿಯಾಗಿ, ದೇವಮ್ಮಾಜಿ ಪಟ್ಟದಿಂದ ಚ್ಯುತಳಾಗಿ ಲಿಂಗರಾಜ ಅರಸನಾಗಿ, ವೀರರಾಜ ಯುವ ರಾಜನಾದನು; ಅರಮನೆಯ ವೈಭವದ ಹೊಸ ಬಾಳುವೆಯಲ್ಲಿ ಹಿರಿತನದ ಸೌಕರ್ಯಗಳೊಂದಿಗೆ ಅದರ ಅಪಾಯಗಳಿಗೆ ವಿಷಯ ವಾದನು."

ಗೊತ್ತಿದ್ದೋ ಗೊತ್ತಿಲ್ಲದೆಯೋ ನಾವು ಬದುಕುವಾಗ ನಮ್ಮ ಜೊತೆಗಿದ್ದ ಜಾತಿ ಜನರಿಂದಲೋ, ಕಂದಾಚಾರದವರಿಂದಲೋ, ವಿಶ್ವಾಸ ಇದ್ದವರಿಂದಲೋ, ರಾಜಕಾರಣಿಗಳಿಂದಲೋ ಹಳ್ಳಿಗಾಡುಗಳಿಂದಲೋ, ಕುರಿಮಂದೆಯಿಂದಲೋ— ಹೀಗೆ ಇನ್ನಿತರ ಪರಿಸರದ ಪ್ರಭಾವಕ್ಕೆ ಒಳಗಾಗಿ ಬಿಡುತ್ತೇವೆ. ಹಳ್ಳಿಯ ಸೊಗಸಾದ ಹಸಿರಿನೊಂದಿಗೆ ಇದ್ದವರನ್ನು ನಗರದ ಕಾಂಕ್ರಿಟ್ ಮನೆಗಳಲ್ಲಿ ತಂದು ಕೂರಿಸಿ ನೋಡಿ, ಎಂಟುದಿನ ಮೋಜಿನಿಂದ ಇದ್ದಾರು. ಕೊನೆಗೆ ತಮ್ಮ ಹಸಿರು ಕಾಡೇ ಇರಲಿ ಎಂದು ಓಡಿಹೋಗುತ್ತಾರೆ.

ಶ್ರೇಷ್ಠ ಮನಃಶಾಸ್ತ್ರಜ್ಞ ಫ್ರಾಯ್ಡ್ ಮನುಷ್ಯನ ಮೇಲೆ ಪರಿಸರ ಹೇಗೆ ಪರಿಣಾಮ ಬೀರುತ್ತದೆ ಎಂಬ ಬಗ್ಗೆ ಹೇಳುತ್ತಾನೆ. "The complexity of family life must have afforded a powerful incentive to his budding intelligence, to his curiosity and interest...the problem was of great importance to him emotionally." ಚಿಕ್ಕ ವೀರರಾಯನ ತಂದೆಗೆ ಮೃದು ಸ್ವಭಾವ, ಹುಡುಗಿಯರ ಬಗ್ಗೆ ವಿಶೇಷ ಆಸಕ್ತಿ, ವಿಷಯಲಂಪಟತನ ಇತ್ತು. "ಹುಡುಗಿ ಹದಿನಾರು ವರ್ಷಕ್ಕೆ ಬೆಳೆದಳು; ತುಂಬ ಚೆಲುವೆಯಾದಳು. ತಂದೆಯಲ್ಲಿ ಸಂಸ್ಕೃತ ಕಲಿತಳು; ತಂದೆಯಿಂದ ತಾಯಿಯಿಂದ ಗಾಯನ ಕಲಿತಳು. ಅರಮನೆಯ ಪರಿವಾರದ ಒಂದು ಹುಡುಗಿಯಾದಳು. ಲಿಂಗರಾಜ ಆಗ ತರುಣ; ಇವಳನ್ನು ಕಂಡನು: ಮೋಹಗೊಂಡನು. ಅವನಿಗೆ ಅರಸಿ ಉಂಟು, ಮಕ್ಕಳಿರಲಿಲ್ಲ. ಒಂದು ಮಗು ಹುಟ್ಟಿ ತೀರಿಕೊಂಡಿತ್ತು. ಆ ದಿನಗಳಲ್ಲಿ ಅವನು ಈ ಎಳೆಯ ಹುಡುಗಿಗೆ ತುಂಬ ಪ್ರೀತಿ ತೋರಿ ತುಂಬ ಆಶೆ ಹುಟ್ಟಿಸಿ ಅವಳನ್ನು ತನ್ನದಾಗಿ ಮಾಡಿಕೊಂಡನು" ಎಷ್ಟು ಚೆನ್ನಾಗಿ ಮಾಸ್ತಿ ಹೇಳಿದ್ದಾರೆ. "ಅಥ ಕೇನ ಪ್ರಯುಕ್ತೋಽಯಂ ಪಾಪಂ ಚರತಿ ಪೂರುಷಃ । ಅನಿಚ್ಛನ್ನಪಿ

ವಾರ್ಷ್ಣೇಯ ಬಲಾದಿವ ನಿಯೋಜಿತಃ" ಎಂಬ ಅರ್ಜುನನ ಮಾತನ್ನು. ತಂದೆಯದೇ ಕರ್ಮ ಮಗನಿಗೂ ಹಿಡಿಯಿತು. ಇದಲ್ಲದೆ ತನ್ನ ತಪ್ಪಿನ ಜೊತೆಗೆ ಅಳಿಯನಾದ ಚೆನ್ನಬಸವನನ್ನು ತಂದೆ ಹೊಗಳುವುದು ಈರ್ಷ್ಯೆಗೆ ಕಾರಣವಾಯಿತು. "ನೋಡು ಅರಮನೇಲಿ ಹುಟ್ಟಿದವರಲ್ಲಿ ಅಳಿಯಂದಿರು ಎಷ್ಟು ಗಂಭೀರವಾಗಿ ನಡಕೋತಾರೆ. ಅವರ ಕಾಲಕೆಳಗೆ ತೂರು. ಸ್ವಲ್ಪ ಬುದ್ಧಿ ಬಂದಿತೇನೋ ನೋಡು." ಅಧಿಕಾರ ಸಿಕ್ಕ ಚಿಕ್ಕವೀರ ನಿಜಕ್ಕೂ ವಿಷಯಗಳಿಗೆ ಅಧೀನನಾಗಿ ತನ್ನ ಮೂವತ್ತು ವರ್ಷ ಪ್ರಾಯದ ಮೈ ಬೆಂಡು ಮಾಡಿಕೊಂಡ; ಡೊಗರು ಮಾಡಿಕೊಂಡ. ವೀರರಾಜ ಹುಟ್ಟಿನಿಂದಲೇ ದುಷ್ಟನೇನೂ ಅಲ್ಲ. ಆದರೆ ಅವನು ಬಾಳಿದ್ದ ಸುಮಾರು ಮೂವತ್ತಮೂರು ವರ್ಷದಲ್ಲಿ ತನ್ನಂಥ ದುಷ್ಟ ಇನ್ನೊಬ್ಬನಿರಲಾರ ಎಂಬ ಅಭಿಪ್ರಾಯಕ್ಕೆ ಎಡೆ ಮಾಡಿಕೊಟ್ಟ.

ಚಿಕ್ಕಣ್ಣಶೆಟ್ಟಿ ಅರಸನೊಂದಿಗೆ ಹೇಳೋ ಮಾತು "ನನ್ನ ಮೈಗೆ ಹತ್ತದೆ ನನಗೇ ಕಾವು ತಿಳಿಯೋದಿಲ್ಲ"—ಇದರಿಂದಲೇ ಹುಟ್ಟಿಕೊಂಡಿತೆಂಬಂತಿದ್ದ 'ಕಾವೇರಿ ಮಕ್ಕಳು' ಅನ್ಯಾಯವನ್ನು ಪ್ರತಿಭಟಿಸಿ ನಿಲ್ಲೋ ತಾಕತ್ತು ತೋರಿಸುತ್ತಾರೆ. ಅನ್ಯಾಯ ಎಲ್ಲೆಲ್ಲಿ ನಡೀತದೋ ಅಲ್ಲಲ್ಲಿ ಕಾವೇರಿ ಮಕ್ಕಳು ಹುಟ್ಟಬೇಕು. ನಮ್ಮ ಪ್ರಜಾಪ್ರಭುತ್ವ ರೋಗದಿಂದ ಪಾರಾಗಬೇಕಾದರೆ Eternal Vigilance ಹೇಗೆ ಬೇಕೋ ಹಾಗೆ.

ಇಲ್ಲಿ ಬರುವ ಚಿಕ್ಕವೀರರಾಜನ ರಾಣಿ ಗೌರಮ್ಮನ ಪಾತ್ರ ಅತ್ಯಂತ ಸಾಧ್ವಿಯ ಪಾತ್ರವಾಗಿ ಬಂದಿದೆ. ಎಲ್ಲಿಯೂ ಎಷ್ಟೇ ಸಂಕಟ ಸ್ಥಿತಿಯಲ್ಲೂ ಆಕೆ ದಾರಿ ತಪ್ಪುವುದಿಲ್ಲ. ನಮ್ಮ ಅನೇಕ ನಾರಿಯರ ಯಥಾವತ್ ಚಿತ್ರಣ ಇದು. ಪತಿಯೇ ಪರಮದೈವ ಎಂದು ನಂಬಿದವಳು. ಮಂತ್ರಿ ಬೋಪಣ್ಣ ಮಾವನೊಂದಿಗೆ ಮಾತಾಡುವಾಗ ಅರಸು ಬಂದು "ಇರು ನಿನ್ನ ಹೊಲೇರಿಗೆ ಹಾಕಿಸತೇನೆ ಬೋಪಣ್ಣ ಮಾವ! ಗೌರಮ್ಮ ಸೊಸೆ! ಅಹ! ಏನು ಸದರ! ಏನು ಸಲಿಗೆ! ಸೊಸೆಯೊಂದಿಗೆ ನಗೆಸಾರ ಮಾಡೋಕೆ ಬಂದೆಯೇನೋ ನೀನಿಲ್ಲಿ. ಬೋಪಣ್ಣ ಮಾವ ಯಾಕೋ ಬಂದೆ ಇಲ್ಲಿ ನೀನು ?" ಎಂದಾಗಲೂ ತುಟಿಬಿಚ್ಚದೇ ನಡೆದುಕೊಳ್ಳುತ್ತಾಳೆ. ಹೀಗೆಯೇ ಉತ್ತಯ್ಯ ತಕ್ಕರಿಗೆ ವೀರರಾಜನ ಕಾಲದಿಂದ ಅರಮನೆಯಿಂದ ಪಡಿ ಕೊಡುತ್ತಿದ್ದುದನ್ನು ನಿಲ್ಲಿಸಿದಾಗ ಉತ್ತಯ್ಯ ತಕ್ಕ ಅರಮನೆಗೆ ಬಂದು ಅರಸರ ಹತ್ತಿರ ಜಗಳ ಆಡಿ ಹೊರಟಾಗ ರಾಣಿ ತಕ್ಕರನ್ನು ಮರ್ಯಾದೆ ಮಾಡುವ ರೀತಿಯಲ್ಲಿ, ಅರಮನೆಯಲ್ಲಿ ದುಂದು ವೆಚ್ಚವಾದಾಗ ಸಾಲಗಾರ ಚಿಕ್ಕಣ್ಣಶೆಟ್ಟಿಗೆ ತನ್ನ ಆಭರಣವನ್ನು ಕೊಡುವಾಗ, ದೇವಮ್ಮಾಜಿಯನ್ನು ಬಿಡುಗಡೆಗೊಳಿಸಿ ಅವಳ ಗಂಡನ ಮನೆಗೆ ಕಳುಹಿಸುವಾಗ—ಹೀಗೆ ಜೀವನದ ಕೊನೆಗಳಿಗೆಯವರೆಗೂ ಒಂದು ಮೌಲ್ಯದ ಪ್ರತಿನಿಧಿಯಾಗಿ ಆಕೆ ನಿಲ್ಲುತ್ತಾಳೆ; ಓದುಗರಲ್ಲಿ

ಪೂಜ್ಯಭಾವನ್ನುಂಟು ಮಾಡುತ್ತಾಳೆ. ಇದೇ ರೀತಿ ಮೌಲ್ಯದ ಪ್ರತಿನಿಧಿಗಳಾಗಿ ದೀಕ್ಷಿತರು, ಅಯ್ಯನವರು, ಬೋಪಣ್ಣ, ಉತ್ತಯ್ಯ ತಕ್ಕ ಎಲ್ಲರೂ ಬರುತ್ತಾರೆ.

ಮಾಸ್ತಿಯವರು ಚಿತ್ರಿಸಿದ ಭಗವತಿ ಪಾತ್ರದಲ್ಲಿ ಒಂದು ಬಿರುಕಿದೆ. ಭಗವತಿಯು ಮಗ ಮಂತ್ರಿ ಬಸವಯ್ಯ ಎನ್ನುವುದನ್ನು ಕೊನೆಯವರೆಗೂ ರಹಸ್ಯವಾಗಿಡುತ್ತಾರೆ. ಅದು ಸರಿಯಾಗಿದೆ. ಆದರೆ ಭಗವತಿಗೆ ಗೊತ್ತು–ಬರೇ ಚಿಕ್ಕವೀರ ರಾಜೇಂದ್ರ ಹೋದರೆ ಮಾತ್ರ ಸಾಲದು, ಆಸ್ಥಾನದಲ್ಲಿ ಮಗ ಬಸವಯ್ಯನನ್ನು ಕೂರಿಸಬೇಕು– ಎಂದು. ಆದರೆ ಆಕೆ ಬಸವನನ್ನು ತರಬೇತಿ ಮಾಡುವುದಿಲ್ಲ. ಜನರಿಗೆ ಅರಸನಿಗಿಂತ ಒಂದು ಪಾಲು ಹೆಚ್ಚು ಕ್ರೋಧ ಬಸವನ ಮೇಲೆ ಇದೆ ಎಂಬುದು ಗೊತ್ತಿದ್ದೂ ಸುಮ್ಮನಾಗಿ ಬಿಡುತ್ತಾಳೆ. ಇದು ಒಂದು ಕೊರತೆ. ಇದರಿಂದಲೇ ಜನರಲ್ಲಿ ಅಭಿಪ್ರಾಯ ಕೇಳಿದಾಗ ಬಸವನಾಗಲು ಸಾಧ್ಯವೇ ಇಲ್ಲ ಎಂಬ ಮಾತು ಒಮ್ಮತದಿಂದ ಬರುತ್ತದೆ. ಇಲ್ಲಿ ಭಗವತಿಯ ಪಾತ್ರ ಸೋತಿದೆ.

ಕಾದಂಬರಿ ಒಂದು ಐತಿಹಾಸಿಕ ವಸ್ತುವಿನೊಂದಿಗೆ ಬಿಚ್ಚಿಕೊಳ್ಳುತ್ತಿರುವುದರಿಂದ ಇಲ್ಲಿ ಆಂಗ್ಲರು ತೋರುವ ರಾಜಕೀಯ ಧೂರ್ತತೆಯನ್ನು ಬಹು ಚೆನ್ನಾಗಿ ಗಮನಿಸಬಹುದು. ಇವರು ಜನರೇ ತಮ್ಮನ್ನು ಕರೆಸಿಕೊಳ್ಳುವಂತಹ, ಬಂದು ಆಳಿ ಎಂದು ಬೇಡಿಕೊಳ್ಳುವಂತಹ ಪರಿಸ್ಥಿತಿಯನ್ನು ಉಂಟು ಮಾಡುವುದರಲ್ಲಿ ಜಾಣರು. ಹೆಬ್ಬಾವಿನ ಮನೋಧರ್ಮದ ಆಂಗ್ಲ ಅಧಿಕಾರಿಗಳು ತಾವು ಬಯಸಿದ ಪಾಕಕ್ಕೆ ಇತಿಹಾಸ ಬರುವವರೆಗೆ ಕಾದರು. ಇಲ್ಲದಿದ್ದರೆ ಅವರಿಗೆ ಗೊತ್ತು–ಹೊಟ್ಟೆ ತುಂಬಿರುವ ಹಳೇ ಭೂತವನ್ನು ಸಹಿಸಿಯಾರು. ಆದರೆ ಹಸಿದಿರುವ ಹೊಸ ಭೂತ ಬರುವುದಕ್ಕೆ ಕೊಡಗಿನ ಜನ ಬಿಡುವುದಿಲ್ಲ ಎಂದು.

ದುರಂತ ಎಂದರೇನು ಎಂಬುದಕ್ಕೆ ಚಿಕ್ಕವೀರ ರಾಜೇಂದ್ರ ಉತ್ತಮ ಉದಾಹರಣೆ. ಷೇಕ್ಸ್‌ಪಿಯರ್‌ನ ಒಥೆಲೋ ಹೇಗೆ ಸನ್ನಿವೇಶಕ್ಕೆ ಒಳಗಾಗಿ ಇಯಾಗೋನ ಕುತಂತ್ರಕ್ಕೆ ಬಲಿ ಆಗ್ತಾನೋ ಹಾಗೆ ಚಿಕ್ಕವೀರ ರಾಜೇಂದ್ರ ತನಗೆ ಗೊತ್ತಿಲ್ಲದೆಯೋ ಒಂದು ಕೆಟ್ಟ ಸುಳಿಗೆ ಸಿಕ್ಕು ಹೊರಬರಲಾರದೆ ಅಲ್ಲೇ ತಿರುಗುತ್ತಿರುತ್ತಾನೆ. ಭೌತ ವಿಜ್ಞಾನದಲ್ಲಿ ವಿದ್ಯುತ್‌ಶಕ್ತಿಯ ಪ್ರವಾಹವನ್ನು ವಿವರಿಸುವಾಗ ಅದು ಯಾವಾಗಲೂ ಪರಸ್ಪರ ವಿರೋಧವಾಗಿರುವ ಎರಡು ಧ್ರುವಗಳ ನಡುವೆ ಹರಿಯುತ್ತದೆ ಎಂದು ಹೇಳುತ್ತಾರೆ. ಹಾಗೆಯೇ ಮನಸ್ಸಿನ ಶಕ್ತಿಯೂ ಕೂಡ ಪರಸ್ಪರ ವಿರೋಧವಾಗಿರುವ ಎರಡು ಧ್ರುವಗಳ ನಡುವೆ ಹರಿಯುತ್ತದೆ; ವ್ಯಕ್ತಿತ್ವದ ವಿವಿಧ ಭಾಗಗಳು ಪರಸ್ಪರ ವಿರುದ್ಧವಾಗಿರುತ್ತವೆ. ಯೂಂಗ್‌ನ ಪ್ರಕಾರ ವ್ಯಕ್ತಿತ್ವವು ಪರಸ್ಪರ ವಿರೋಧ ಘಟಕಗಳ ಸಂಯೋಗ. ಹಾಗೆ ನೋಡಿದರೆ ಜೀವನ ಎಂಬುದು ಪರಸ್ಪರ ವಿರೋಧ ವಿಷಯಗಳ ಸಮಾರೋಹ. ಸೃಷ್ಟಿ–ಲಯ, ಜನನ–ಮರಣ. ಬೆಳಕು–

ಕತ್ತಲೆ, ಎಚ್ಚರ-ನಿದ್ರೆ ಇವುಗಳು ವಿಶ್ವದಲ್ಲಿ ಜರುಗುವ ಸ್ವಾಭಾವಿಕ ಕ್ರಿಯೆಗಳೇ ಆದರೂ ವಿಶ್ವದ ಮೂಲಸೂತ್ರ ಪರಸ್ಪರ ವಿರೋಧವೆಂಬುದು ಪುರಾತನ ದಾರ್ಶನಿಕ ಹೆರಾಕ್ಲೈಟಸ್‌ನ ನಂಬಿಕೆಯಾಗಿತ್ತು. ಹೆಗೆಲ್ ಕೂಡ ಇಂಥದೇ ಅಭಿಪ್ರಾಯವನ್ನು ಪ್ರತಿಪಾದಿಸಿದ್ದಾನೆ. ಈ ಪರಸ್ಪರ ವಿರೋಧ ನಿಯಮ ಮನೋವಿಶ್ವಕ್ಕೂ ಅನ್ವಯವಾಗುತ್ತದೆಂಬುದು ಯೂಂಗ್‌ನ ವಾದ. ವ್ಯಕ್ತಿತ್ವ ರಚನೆಯಲ್ಲಿ, ಕಾರ್ಯವಿಧಾನದಲ್ಲಿ ವಿರೋಧ, ದ್ವಂದ್ವ, ಧ್ರುವತೆ (Polarity) ಸರ್ವ ಸಾಮಾನ್ಯ. ಚೇತನ–ಸುಪ್ತ ಚೇತನ, ಅಹಂ-ಛಾಯೆ, ಪರ್ಸೋನ–ಅನಿಮಾ ಅಥವಾ ಅನಿಮಸ್, ಅಂತರ್ಮುಖತೆ-ಬಹಿರ್ಮುಖತೆ, ಭಾವನೆ-ಚಿಂತನೆ, ಪ್ರಗತಿ–ಪ್ರತಿಗತಿ ಇವು ಸದಾ ಒಂದನ್ನೊಂದು ವಿರೋಧಿಸಿರುತ್ತವೆ. ಧ್ರುವತೆ ಶಕ್ತಿಯ ಅಭಿವ್ಯಕ್ತಿಗೆ ಅವಶ್ಯಕ. ಎರಡು ಘಟಕಗಳ ನಡುವೆ ವಿರೋಧ ಹೆಚ್ಚಿದಷ್ಟೂ ಶಕ್ತಿಯ ಬಿಡುಗಡೆ ಹೆಚ್ಚಾಗುತ್ತದೆ. ಈ ಧ್ರುವತೆಯೇ ಶಕ್ತಿಯ ಪ್ರಮಾಣವನ್ನು ನಿಯಂತ್ರಿಸುತ್ತದೆ. ಲಿಬಿಡೊ ಒಂದು ಧ್ರುವವನ್ನು ಮುಟ್ಟಿದಾಗ ಅದು ಇನ್ನೊಂದು ಧ್ರುವಕ್ಕೆ ವರ್ಗಾಯಿಸಲ್ಪಡುತ್ತದೆ. ಒಂದು ವರ್ತನೆ ಎಲ್ಲೆ ಮೀರಿದಾಗ ಅದಕ್ಕೆ ವಿರುದ್ಧ ವರ್ತನೆ ಆರಂಭವಾಗುತ್ತದೆ. ಉದಾಹರಣೆಗೆ ಕೋಪ ಮಿತಿ ಮೀರಿದಾಗ ಶಾಂತಿ ಉದ್ಭವಿಸುತ್ತದೆ. ದ್ವೇಷ ಮಿತಿಮೀರಿದಾಗ ಪ್ರೀತಿಯಾಗಿ ಪರಿಣಮಿಸುತ್ತದೆ. ಹಾಗೆ ನೋಡಿದರೆ ಪ್ರತಿಯೊಬ್ಬ ಕಲಾವಿದನೂ ಮನೋರೋಗಿಯಾಗಿರುತ್ತಾನೆ. ಗೌರವ, ಅಧಿಕಾರ, ಐಶ್ವರ್ಯ, ಕೀರ್ತಿ, ಹೆಣ್ಣಿನ ಪ್ರೇಮಗಳನ್ನು ಗಳಿಸಬೇಕೆಂಬ ಸಹಜಾಕಾಂಕ್ಷೆಗಳ ಒತ್ತಡಕ್ಕೆ ಗುರಿಯಾಗುತ್ತಾನೆ ಕಲಾವಿದ. ಆದರೆ ಅವುಗಳನ್ನು ಪಡೆಯಲು ಆತನ 'ಛಾಯೆ' ಅಪ್ರಜ್ಞಾತ್ಮಕವಾಗಿ ಕೆಲಸ ಮಾಡುವುದರಿಂದ ಅದನ್ನು ಪಳಗಿಸುವುದು ಕಷ್ಟ. ಅವರ ವಿವರಗಳು ಬಾಲ್ಯದಿಂದಲೂ ಹಾಗೆಯೇ ಇರುತ್ತವೆ. ಅಷ್ಟೇಕೆ, ಮಾನವನ ಆದಿದೆಶೆಯಿಂದಲೂ ಹಾಗೆಯೇ ಉಳಿದು ಬಂದಿದೆ ಎನ್ನಬಹುದು. ಆದುದರಿಂದಲೇ ಯೂಂಗ್ ಅದನ್ನು ಒಂದು 'ಮೂಲಪ್ರತಿಮೆ'ಯೆಂದು ಪರಿಗಣಿಸಿರುವುದು.

ಆದರೆ ಬಸವನು ದುರಂತ ಎಂದು ಕಾಣಿಸುವುದಿಲ್ಲ. ಅವನು ಬೇಕೆಂದೇ ಕೆಡುಕನಾಗಿ ಕೆಟ್ಟ ಸಂಸ್ಕೃತಿಯ ಪ್ರತಿನಿಧಿಯಾಗಿ ಬಿಡುತ್ತಾನೆ. ಸ್ವಲ್ಪ ಕುಡಿದಿದ್ದರೂ ವೀರಮ್ಮಾಜಿಯನ್ನು ತೊಡೆಯ ಮೇಲೆ ಕೂರಿಸಿಕೊಂಡ. ಅವಳ ಎದೆಯನ್ನು ಮುಟ್ಟುತ್ತಾನೆ. ಆದರೆ ಚಿಕ್ಕವೀರರಾಜೇಂದ್ರನಲ್ಲಿ ತಾನು ಒಳ್ಳೆಯವನಾಗಬೇಕು ಎಂಬ ಅಂತಃಸತ್ವದ ಧ್ವನಿ ಇನ್ನೂ ಸತ್ತಿಲ್ಲ. ತಂಗಿಯ ಜೊತೆಗೆ ಭಾವ ಇರಲು ಸಹಾಯ ಮಾಡಿದ ಉತ್ತಯ್ಯನನ್ನು ವಿಚಾರಿಸಿ ಶಿಕ್ಷಿಸಬೇಕೆನ್ನುವಾಗ ರಾಜಕುಮಾರಿ ಅಡ್ಡ ಬರುತ್ತಾಳೆ. ಆಗ ಅರಸ ಕೇಳುತ್ತಾನೆ—"ಏನಿವನ ಮುಖ ನೋಡಿ ಮರುಳಾದೆಯೇನೆ ಮಗಳೇ ? ನಾಳೆ ಇವನ ಮಡದಿಯೋ ಆದೀಯೇನು ?" ಆಗ ರಾಜಕುಮಾರಿ "ಆಗತಾರೇನು ಕೇಳಿ

ಅಪ್ಪಾಜಿ" ಎಂದಳು. ಅರಸನ ಸುಪ್ತಧ್ವನಿ ಎಚ್ಚರಗೊಂಡಿತು. ಅವನು "ಹೌದು ಕಂದವ್ವ. ನಾನು ನಿನಗೆ ಸರಿಯಾದ ಒಬ್ಬ ಹೈದನನ್ನು ತರಬೇಕಾಗಿತ್ತು. ಒಳ್ಳೆ ಅಪ್ಪಾಜಿ ಆಗಿದ್ದರೆ ತರತಾ ಇದ್ದೆ. ಇವನೇನು ಮಹಾ ಚೆಲುವ ಅಂದೆ ?" ಹೀಗೆ ವೀರರಾಜ ತನಗೇ ಗೊತ್ತಿಲ್ಲದೆ ತನ್ನ ಛಾಯೆ (Shadow)ಯೊಳಗೆ ಸಿಕ್ಕಿ ಹಾಕಿ-ಕೊಂಡು ನರಳುತ್ತಾನೆ. ಯೂಂಗ್‌ನ ಪ್ರಕಾರ "ನಮಗಾಗುವ ಪ್ರತಿ ಅನುಭವಕ್ಕೂ ಎರಡು ಕಾರಣಗಳಿರುತ್ತವೆ. ಒಂದು ಬಾಹ್ಯ ಪ್ರಪಂಚದಲ್ಲಿದ್ದು ನಮ್ಮನ್ನು ಪ್ರಚೋ-ದಿಸಬಲ್ಲ ಶಕ್ತಿ; ಎರಡನೇದು ಹೀಗೆ ಪ್ರಚೋದಿಸುವ ಶಕ್ತಿಯನ್ನು ನಿರ್ದಿಷ್ಟ ರೀತಿಯಲ್ಲಿ ಅರಿಯುವಂತೆ ಮಾಡುವ ಅಂತರ್ನಿಹಿತ ಶಕ್ತಿ. ನಮ್ಮೆಲ್ಲರ ಅನುಭವಗಳು ಉದ್ಭವವಾಗುವುದು ಈ ಎರಡು ಶಕ್ತಿಗಳ ಸಂಯೋಗದಿಂದ." ಮಾನವನ ವರ್ತನೆಯಲ್ಲಿ ಪ್ರಾಣಿ ಸಂಬಂಧವಾದ ಅಂಶಗಳಿವೆಯೆಂದು ವಿಕಾಸವಾದಿಗಳ ಅಭಿಪ್ರಾಯ. ಮನುಷ್ಯನ ಈ ಪಾಶವೀ ಪ್ರವೃತ್ತಿಗಳ ಸಮೂಹವೇ ಛಾಯೆ.

ಶ್ರೇಷ್ಠ ಕಾದಂಬರಿಕಾರನ ಮನಸ್ಸು ಜಾಗೃತ ಜೀವನವನ್ನು ರೂಪಿಸುವಂಥ ಎಲ್ಲರೊಡನೆ ಮತ್ತು ಆತನ ವೈಯಕ್ತಿಕ ಸಂವೇದನ ಶೀಲ ಬದುಕಿನೊಡನೆ ವಿಶಿಷ್ಟವಾಗಿ ವ್ಯವಹರಿಸುತ್ತದೆ. ಈ ಸಾಮಗ್ರಿ ಅವನಲ್ಲಿ ಮಾನಸಿಕವಾಗಿ ಜೀರ್ಣತವಾಗುತ್ತದೆ. ಸಾಧಾರಣತ್ವದಿಂದ ಕಾವ್ಯಾನುಭವದ ಮಟ್ಟಕ್ಕೇರಿಸಲ್ಪಡುತ್ತದೆ; ವಾಚಕ ಸಾಮಾನ್ಯವಾಗಿ ಯಾವುದನ್ನು ನಿವಾರಿಸಿ ಅಲಕ್ಷಿಸುತ್ತಾನೋ ಅಥವಾ ಮಂದವಾದ ಅಸುಖ ಭಾವನೆಯಿಂದ ಕೇವಲ ಗುರುತಿಸುತ್ತಾನೋ ಅದನ್ನು ಅವನ ಪ್ರಜ್ಞೆಗೆ ಪೂರ್ಣವಾಗಿ ತಂದುಕೊಡುವುದರ ಮೂಲಕ ಅವನನ್ನು ಮಾನವೀಯ ಅಂತರ್ದೃಷ್ಟಿಯ ಮಹತ್ತರ ಸ್ಪಷ್ಟತೆಗೆ ಮತ್ತು ಗಾಂಭೀರ್ಯಕ್ಕೆ ನೂಕುವಂಥ ಅಭಿವ್ಯಕ್ತಿಯೊಂದನ್ನು ಪಡೆದುಕೊಳ್ಳುತ್ತದೆ. ಪ್ರಜ್ಞೆಯ ಪದಾರ್ಥಗಳನ್ನು ಮತ್ತು ಮಾನವನ ಜೀವನದ ಅನಿವಾರ್ಯ ಅನುಭವಗಳನ್ನು ಅದರ ಚಿರಪುನರಾವರ್ತಕ ಸುಖದುಃಖಗಳೊಡನೆ ವ್ಯಾಖ್ಯಾನಿಸುವ ಕಾದಂಬರಿಕಾರನ ಕೆಲಸವನ್ನು ಮಾಸ್ತಿಯವರು ಚೆನ್ನಾಗಿಯೇ ಮಾಡಿದ್ದಾರೆ.

●

ಶ್ರವಣಬೆಳ್ಗೊಳದ ಹಸ್ತಪ್ರತಿಲಿಪಿಕಾರರು

● ಬಿ. ವ್ಹಿ. ಶಿರೂರ

ಒಬ್ಬ ಕವಿ ಒಂದು ಕೃತಿ ಬರೆದು ಅದರ ಹುಟ್ಟಿಗೆ ಕಾರಣನಾದರೆ, ಒಬ್ಬ ಹಸ್ತಪ್ರತಿಕಾರ ಅದರ ಪ್ರತಿ ಮಾಡಿ ಅದರ ಬದುಕಿಗೆ ಸಹಾಯವಾಗುತ್ತಾನೆ. ಮುದ್ರಣ ಸೌಕರ್ಯವಿಲ್ಲದಿದ್ದ ಹಿಂದಿನ ಕಾಲದಲ್ಲಿ ಈ ಹಸ್ತಪ್ರತಿಕಾರನ ಪಾತ್ರ ಬಹಳ ಮಹತ್ವದ್ದಾಗಿದ್ದಿತು. ಅವನು ತನ್ನ ಪೂರ್ವದ ಹಲವುಹತ್ತು ಕೃತಿಗಳನ್ನು ತನಗಾಗಿಯೋ ಅನ್ಯರಿಗಾಗಿಯೋ ಪ್ರತಿಮಾಡುತ್ತಿದ್ದನು. ಹಾಗೆ ಪ್ರತಿಮಾಡುವಾಗ ಆ ಪ್ರತಿಯ ಆದಿ ಮತ್ತು ಅಂತ್ಯದಲ್ಲಿ ತನ್ನ ವೈಯಕ್ತಿಕ ವಿಷಯವನ್ನು ಹೇಳುವ ಪರಿಪಾಠವಿಟ್ಟುಕೊಂಡಿದ್ದನು. ಇವನ್ನು 'ಹಸ್ತಪ್ರತಿಕಾರರ ಪ್ರಶಸ್ತಿ'ಗಳೆಂದು ಕರೆಯಬಹುದು. ಇವುಗಳಿಂದ ಆ ಪ್ರತಿಕಾರನ ಊರು, ಇಷ್ಟದೈವ, ಗುರು, ತಂದೆ-ತಾಯಿ, ಪ್ರತಿ ಬರೆಯಿಸಿದ ವ್ಯಕ್ತಿ, ಆತನ ಊರು, ವಂಶಾವಳಿ, ಸ್ಥಾನಮಾನ ಮೊದಲಾದವುಗಳ ಪರಿಚಯವಾಗುತ್ತದೆ. ಮೇಲ್ನೋಟಕ್ಕೆ ಇವು ವೈಯಕ್ತಿಕ ವಿಷಯಗಳೆನ್ನಿಸಬಹುದಾದರೂ ಒಳಹೊಕ್ಕು ನೋಡಿದಾಗ ಅವು ಅಂದಿನ ಸಾಮಾಜಿಕ, ಧಾರ್ಮಿಕ, ರಾಜಕೀಯ ಜೀವನಕ್ಕೆ ಹಿಡಿದ ಕನ್ನಡಿಯಂತೆ ತೋರುವವು. ಅಲ್ಲದೆ ಹಸ್ತಪ್ರತಿಗಳ ಪ್ರಾಚೀನತೆ, ಶುದ್ಧತೆಗಳ ಆಧಾರದಿಂದ ಮೂಲಪಾಠವನ್ನು ನಿಷ್ಕರ್ಶಿಸಲು ಸಹಾಯವಾಗುವುದು. ಒಮ್ಮೊಮ್ಮೆ ಹಸ್ತಪ್ರತಿಗಳಲ್ಲಿಯ ಈ ಪ್ರಶಸ್ತಿಗಳು ಮೂಲಕೃತಿಯ ಕವಿ, ಕಾಲ, ದೇಶ ಮೊದಲಾದವುಗಳನ್ನೂ ನಿರ್ಣಯಿಸಲು ಆಧಾರವೊದಗಿಸುವವು. ಇವುಗಳಿಂದ ಅಂದಿನ ಜನಾಂಗದ ಮನೋಧರ್ಮ ವೇದ್ಯವಾಗುವುದರೊಂದಿಗೆ ಆ ಆ ಜನಾಂಗದ ವಾಸಸ್ಥಳ ಮತ್ತು ಆ ಆ ಜನಾಂಗದ ಧಾರ್ಮಿಕಕೇಂದ್ರಗಳು ಮೊದಲಾದವುಗಳ ವಿವರ ತಿಳಿದು ಬರುವುದು. ಹೀಗೆ ಒಂದು ಜನಾಂಗದ ಅಧ್ಯಯನದಲ್ಲಿ ಪ್ರಮುಖ ಆಧಾರವಾಗಬಲ್ಲ ಈ ಪ್ರಶಸ್ತಿಗಳ ಅಧ್ಯಯನಕ್ಕೆ ಪಂಡಿತರು ವಿಶೇಷ ಲಕ್ಷ್ಯವನ್ನೇ ಕೊಟ್ಟಿಲ್ಲ. ಕನ್ನಡದ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀಯನ್ನು ಬೃಹತ್ಪ್ರಮಾಣದಲ್ಲಿ ಸಿದ್ಧಗೊಳಿಸಿದ ಮೈಸೂರು ವಿಶ್ವವಿದ್ಯಾನಿಲಯದವರು ಈ ಪ್ರಶಸ್ತಿಗಳಲ್ಲಿಯ ಕೆಲವು ಭಾಗಗಳನ್ನು ಬಿಟ್ಟಿರುವುದು ಇವಕ್ಕೆಸಾಕ್ಷಿ. ಇದರಿಂದ ಸಾಹಿತ್ಯ ಚರಿತ್ರ ಮತ್ತು ಸಮಾಜಚರಿತ್ರೆಯ ಅಭ್ಯಾಸದಲ್ಲಿ ಒಂದು ದೊಡ್ಡ ಕೊರತೆಯುಂಟಾಗುವುದು ಸಹಜ.

ಈ ಹಸ್ತಪ್ರತಿಗಳಿಗೆ ಜನಸಾಮಾನ್ಯರ ಮನೆಯ ದೇವರ ಜಗುಲಿಗಳು, ಮಠ ಮಾನ್ಯಗಳು, ರಾಜ್ಯಭಂಡಾರಗಳು ಆಶ್ರಯ ಸ್ಥಾನ. ಅವುಗಳಲ್ಲಿ ಪ್ರಾಚೀನ ಕಾಲ-ದಿಂದ ಕರ್ನಾಟಕದ ಧಾರ್ಮಿಕಕ್ಷೇತ್ರದಲ್ಲಿ ಮಹತ್ವದ ಪಾತ್ರವಾಡುತ್ತ ಬಂದಿರುವ ಶ್ರವಣಬೆಳ್ಗೊಳದ ಸ್ಥಾನ ವಿಶೇಷವಾದುದು. ಅದು ಹಲವಾರು ಕವಿಗಳಿಗೆ ಕಾವ್ಯ ಪ್ರೇರಕಶಕ್ತಿಯಾಗಿರುವಂತೆ, ೧೭-೧೮ನೆಯ ಶತಮಾನದಿಂದ ಗ್ರಂಥಭಂಡಾರ ವೊಂದನ್ನು ಒಳಗೊಂಡು, ಹಲವಾರು ಗ್ರಂಥಗಳ, ಗ್ರಂಥಪ್ರತಿಕಾರರ ಆಶ್ರಯ ದಾಣವೂ ಆಗಿದೆ. ಈಗ ದೊರೆತಿರುವ ಆಧಾರದ ಮೇರೆಗೆ ಸಧ್ಯ ಸುಮಾರು ೨೦ಜನ ಪ್ರತಿಕಾರರು ಈ ಸ್ಥಳದವರೋ ಅಥವಾ ಈ ಸ್ಥಳಕ್ಕೆ ಸಂಬಂಧಿಸಿದವರೋ ಆಗಿ ಹೋಗಿದ್ದಾರೆ. ಅವರಲ್ಲಿ ಶ್ರವಣಬೆಳ್ಗೊಳದ ಬೇರೆಬೇರೆ ಜಿನಾಲಯಗಳಿಗೆ ಸಂಬಂಧಿಸಿದ ಇಂದ್ರವರ್ಗ ಈ ಕ್ಷೇತ್ರದಲ್ಲಿ ಮಹತ್ವದ ಪಾತ್ರ ವಹಿಸಿದೆ. ಅವರಲ್ಲಿ ದ್ವಾದಶಾನುಪ್ರೇಕ್ಷೆ ಮತ್ತು ನಾಗಕುಮಾರಚರಿತೆಗಳನ್ನು ಪ್ರತಿಮಾಡಿದ ಇಂದ್ರವರ್ಗದ ಸ್ಥಾನಿಕ ದೊಡ್ಡ-ಯ್ಯನವರ ಮಗ ಜವನಪ್ಪ, ದ್ವಾದಶಾನುಪ್ರೇಕ್ಷೆಯನ್ನು ಪ್ರತಿಮಾಡಿದ ಬೆಳಗುಳದ ಇಂದ್ರವರ್ಗದ ವಿಜಯಣ್ಣೋಪಾಧ್ಯಾಯ, ಷೋಡಶಕ್ರಿಯಾಮಂಜರಿಯನ್ನು ಪ್ರತಿ ಮಾಡಿದ ಬೆಳಗುಳದ ಇಂದ್ರವರ್ಗದ ಶಿವದೇವಮ್ಮನವರ ಮಗ ಅನಂತರಾಜ, ನೇಮಿಜಿನೇಶಸಂಗತಿ ಮತ್ತು ನಾಗಕುಮಾರಚರಿತೆಗಳನ್ನು ಪ್ರತಿಮಾಡಿದ ಬೆಳಗುಳದ ಇಂದ್ರವರ್ಗದ ಆದಿರಾಜಯ್ಯ, ನಾಗಕುಮಾರಚರಿತೆಯನ್ನು ಪ್ರತಿಮಾಡಿದ ಇಂದ್ರ ವರ್ಗದ ಬ್ರಹ್ಮಯ್ಯ, ಅದೇ ಕೃತಿಯನ್ನು ಪ್ರತಿಮಾಡಿದ ಇನ್ನೊಬ್ಬ ಇಂದ್ರವರ್ಗದ ಪದುಮಯ್ಯ ಮೊದಲಾದವರು ಪ್ರಮುಖರು. ಇವರು ಬಹುಶಃ ಜಿನಾರ್ಚನೆ ಯೊಂದಿಗೆ ಹಸ್ತಪ್ರತಿಗಳನ್ನು ಪ್ರತಿಮಾಡುವ ವೃತ್ತಿಯನ್ನೂ ಹೊಂದಿರಬೇಕು. ಹಲ ವರು ಇವರಿಂದ 'ಬರೆಯಿಸಿದ' ಮತ್ತು ಹಲವರಿಗೆ ಇವರು 'ಬರೆದುಕೊಟ್ಟ' ಉಲ್ಲೇಖಗಳು ಮೇಲಿನ ಮಾತಿಗೆ ಸಾಕ್ಷಿಯೊದಗಿಸುತ್ತವೆ.

ಇವರಲ್ಲಿ ಜವನಪ್ಪ ಕ್ರಿ. ಶ. ೧೭೧೨ರಲ್ಲಿ ಕೊಲ್ಹಾಪುರದ ಲಕ್ಷ್ಮೀಸೇನ ಭಟಾರ-ಕರ ಶಿಷ್ಯ ಜಿನಸೇನದೇವನಿಗೆ ನಾಗಕುಮಾರಚರಿತೆಯನ್ನು ಪ್ರತಿಮಾಡಿಕೊಟ್ಟುದು-ದರ ಉಲ್ಲೇಖ ಈ ರೀತಿ ಇದೆ "ಶಕವರುಷ ೧೬೩೪ನೆಯ ನಂದನನಾಮ ಸಂವತ್ಸರದ ಚೈತ್ರಶುದ್ಧ ೧೨ ಬಹುಳ......ವಿದ್ವಚ್ಚಕ್ರವರ್ತಿಗಳುಂ ಮಃಖಡಿಕಡಿಯಾಣಪರ ಗ್ರಹಾಮಾದಿತ್ಯರುಂ ಮಧ್ಯಾಪ್ನ ಕಲ್ಪವೃಕ್ಷರುಂ ದಶಗಧಿಕಮಾರ್ಗಣ್ಯದಹನದಕ್ಷರುಂ ಶ್ರೀಮಜ್ಜ್ವಾಲಾಮಾಲಿನೀ ವರಪ್ರಸಾದೋಪರುಂ ಡಿಳ್ಳಿ ಕೊಲ್ಹಾಪುರ ಜಿನಕಂಚಿ ಪೆನು ಗೊಂಡೆ ಸಿದ್ಧಸಿಂಹಾಸನವಾದೀಶ್ವರ ಶ್ರೀಮದಭಿನವ ಲಕ್ಷ್ಮೀಸೇನದೇವರು ಕಲಿ-ವಿದ್ಯಸಾಗರ ಜೀಯನವರ ಪ್ರಿಯಾಗ್ರಶಿಷ್ಯರಾದ ಯಮನಿಯಮ...... ಶೀಲ ಗುಣರುಮಪ್ಪ ಶ್ರೀ ಜಿನಸೇನದೇವರಿಗೆ ಬೆಳಗುಳದ ಶ್ರೀ ಗೊಮ್ಮಟೇಶ್ವರಸ್ವಾಮಿ ಯರ ಇಂದ್ರವರ್ಗದ ಸ್ಥಾನಿಕ ಶಾಂತಕವಿ ದೊಡ್ಡಯ್ಯನ ಮಗ ಜವನಪ್ಪ ಬರೆದು

ಕೊಟ್ಟ ನಾಗಕುಮಾರ ಚರಿತ್ರ"[1] ಇದರಿಂದ—ಅಂದಿನ ಕಾಲದಲ್ಲಿ ಕೊಲ್ಲಾಪುರದ ಲಕ್ಷ್ಮೀಸೇನ ಭಟ್ಟಾರಕರಿಗೆ ಇದ್ದ ಬಿರುದಾವಳಿಗಳು ಸ್ಪಷ್ಟವಾಗುವುದರೊಂದಿಗೆ ಈ ಪ್ರತಿಕಾರ ಬೆಳ್ಗೊಳದಲ್ಲಿದ್ದು ಕೊಲ್ಲಾಪುರದ ಸ್ವಾಮಿಗಳಿಗೆ ಈ ಪ್ರತಿಮಾಡಿಕೊಟ್ಟಿರುವುದರಿಂದ ಕೊಲ್ಲಾಪುರ ಮತ್ತು ಶ್ರವಣಬೆಳ್ಗೊಳ ಈ ತೀರ್ಥಕ್ಷೇತ್ರಗಳ ನಡುವೆ ಸೇತುವೆಯಂತೆ ತೋರಿದ್ದಾನೆ. ಪ್ರತಿಕಾರ ತನ್ನ ವಂಶಾವಳಿಯನ್ನು 'ಬೆಳಗುಳದ ಶ್ರೀ ಗೊಮ್ಮಟೇಶ್ವರ ಸ್ವಾಮಿಯವರ ಇಂದ್ರವರ್ಗದ ಸ್ಥಾನಿಕ ಶಾಂತಕವಿ ದೊಡ್ಡಯ್ಯನ ಮಗ' ಎಂದು ಹೇಳಿಕೊಂಡಿದ್ದಾನೆ. ಇದರಿಂದ ಕ್ರಿ. ಶ. ೧೭೧೩ರಲ್ಲಿ ಬೆಳಗೊಳದ ಇಂದ್ರವರ್ಗದ ಒಬ್ಬ ವ್ಯಕ್ತಿಯ ಪರಿಚಯವಾಗುತ್ತಿದೆ ಮತ್ತು ಅವನು ಕವಿಯಾಗಿದ್ದಂತೆಯೂ ತಿಳಿದು ಬರುತ್ತದೆ. ಆದರೆ ಈತನ ಕೃತಿಗಳಾವೂ ದೊರೆತಿಲ್ಲ.

ಜವನಪ್ಪ ದ್ವಾದಶಾನುಪ್ರೇಕ್ಷೆಯನ್ನೂ ಪ್ರತಿಮಾಡಿದ್ದಾನೆ.[2] ಪ್ರತಿಮಾಡಿದ ಕಾಲವನ್ನು 'ಗಿರಿಸಿಂಧುಸರದಿಂದ್ರ ಶಕಕಾಲವಿಂದವರ ವ್ಯಯನಾಮ ಸಂವತ್ಸರದಾ ಕರಸುಚಿ ಮಾಸದ ಬಹುಳ ಪಂಚಮಿಯೊಳು ಗುರುವಾರ ಶುಭಚರಣ' ಎಂದು ಸೂಚಿಸಿದ್ದಾನೆ. ಇಲ್ಲಿ ಪ್ರತಿ ಮಾಡಿದ ಕಾರಣ ಹೇಳಿಲ್ಲ. ಆದರೆ ಪ್ರತಿಮಾಡಿದ ಸ್ಥಳವನ್ನು 'ಸುತ ವಟಗ್ರಾಮ ನಿವಾಸಿ ಮಾಣಿಕ ಜಿನಪತಿಯ ಚೈತ್ಯವಾಸದಲಿ ರತಿಪತಿ ಜಿತವಾಸುಪೂಜ್ಯಮುನಿಯ ಪಾದಶ್ರೀಪತ್ರಜಯ ಸನ್ನಿಧಿ' ಎಂದಿದ್ದಾನೆ. ಇದರಿಂದ ೧೮ನೆಯ ಶತಮಾನದಲ್ಲಿ ವಟಗ್ರಾಮದ ಮಾಣಿಕ ಜಿನಾಲಯವೊಂದು ಜಾಗ್ರತಸ್ಥಳವಾಗಿದ್ದಿತು ಎಂಬುದು ಸ್ಪಷ್ಟವಾಗುತ್ತದೆ. ಈ ಎರಡೂ ಪ್ರತಿಗಳ ಆದಿಯಲ್ಲಿ ಪ್ರತಿಕಾರ 'ವಿದ್ಯಾಗುರು ಬೊಮ್ಮಣ್ಣಕವಿಗಳವರ ಪಾದವೇ ಶರಣು' ಎಂದಿದ್ದಾನೆ. ಇದರಿಂದ ಇವನು ಬೊಮ್ಮಣ್ಣಕವಿಯ ಶಿಷ್ಯನೆಂಬುದು ಸ್ಪಷ್ಟವಾಗುತ್ತದೆ. ಈ ಬೊಮ್ಮಣ್ಣಕವಿ ಕವಿಚರಿತೆ ಸಂಪುಟ IIIರಲ್ಲಿ ಉಲ್ಲೇಖಗೊಂಡ ಧರ್ಮಾಮೃತದ ಪ್ರತಿಕಾರನೇ ಇರಬೇಕು. ಇವನಕಾಲ ೧೭೧೯. ಅಲ್ಲಿ ಇವನು ತನ್ನನ್ನು ಕುರಿತು 'ಇಂದ್ರಾನ್ವಯೋದ್ಭವಂ ನಾಗೇಂದ್ರನ ತನುಜಾತನಾದ ಬೊಮ್ಮಣಕವಿದೇವೇಂದ್ರ ಸುಬೃಂದಾರ್ಚಿತ ಜಿನ। ಚಂದ್ರನ ಚೈತ್ಯಾಲಯದೊಳೆ ಬರೆದಂ ಮುದದಿಂ' ಎಂದು ಹೇಳಿಕೊಂಡಿದ್ದಾನೆ.

ಆದಿರಾಜಯ್ಯ ಪ್ರತಿಮಾಡಿರುವ ನೇಮಿಜಿನೇಶ ಸಂಗತಿ[3]ಯಲ್ಲಿ ಶಕೆ ತ್ರುಟಿತವಾಗಿದೆ. ಅಲ್ಲಿ ಪ್ರತಿಕಾರ ತನ್ನ ವಿಷಯವಾಗಿ 'ಬೆಳ್ಗುಳ .. ಮ ಸ್ವರಸ್ವಾಮಿಯವರ ಪಾದಾರ್ಚಕನಾದ ವಿಜಯಣ್ಣಯ್ಯನ ಕುಮಾರ ಆದಿರಾಜಯ್ಯ' ಎಂದು

---

೧. ಶ್ರೀಲಕ್ಷ್ಮೀಸೇನ ಭಟ್ಟಾರಕ ಶ್ರೀಮಠ. ಕೊಲ್ಲಾಪುರ ಸೂಚೀ ನಂ. ೭೪೨
೨. ,, ,, ,, ನಂ. ೭೫
೩. ಮೈಸೂರು ವಿ. ವಿ. ಸೂಚಿ ನಂ. ೬. ಪು. ೩೬೭

ಹೇಳಿಕೊಂಡಿದ್ದಾನೆ. ಇಲ್ಲಿ ಇವನು ನೇಮಿಜಿನೇಶ ಸಂಗತಿಯನ್ನು 'ತೀರ್ಥೇಶ್ವರ ಸ್ವಾಮಿಯವರ ಚರಿತ್ರಪುಸ್ತಕ' ಎಂದಿದ್ದಾನೆ. ಅವನೇ ಪ್ರತಿಮಾಡಿದ, ಕಾಲ ಉಲ್ಲೇಖ ವಿಲ್ಲದ 'ನಾಗಕುಮಾರ ಚರಿತೆ'ಯಲ್ಲಿ[೧] 'ಬೆಳಗುಳದ ಇಂದ್ರವರ್ಗದ ವಿಜಯಣ್ಣನ ಮಗ ಆದಿರಾಜಯ್ಯಗಳ ಬರಹ' ಎಂದಿದೆ. ವೃತ್ತವಿಳಾಸನ ಧರ್ಮಪರೀಕ್ಷೆಯನ್ನೂ[೨] ಇವನೇ ಪ್ರತಿ ಮಾಡಿರುವಂತೆ ಇದೆ. ಅದರ ಉಲ್ಲೇಖ ಹೀಗಿದೆ: 'ಸ್ವಸ್ತಿಶ್ರೀಮ ದ್ರಾಯ ರಾಜಗುರು ಭೂಮಂಡಲಾಚಾರ್ಯವರ್ಯ ಮಹಾವಾದವಾದೀಶ್ವರರಾದ ಶ್ರೀಮದಭಿನವಚಾರುಕೀರ್ತಿ ಪಂಡಿತಾಚಾರ್ಯವರ್ಯಸ್ವಾಮಿಯವರ ತತ್ಶಿಷ್ಯರಾದ ಹಾಸನದ ಅಳ್ಳಿತಾಯಪ್ಪನವರ ಮಗ ಪದುಮಯ್ಯನವರಿಗೆ ಆದಿರಾಜಯ್ಯನು ಬರಕೊಟ್ಟ ಧರ್ಮಪರೀಕ್ಷೆ' ಎಂದಿದೆ ಇದರಿಂದ ಚಾರುಕೀರ್ತಿಗಳ ಶಿಷ್ಯ ಹಾಸನದ ಅಳ್ಳಿತಾಯಪ್ಪ ಮತ್ತು ಆತನ ಮಗ ಪದುಮಯ್ಯರ ಪರಿಚಯವಾಗುತ್ತದೆ.

ಕ್ರಿ.ಶ. ೧೭೮೦ರಲ್ಲಿ ನಾಗಕುಮಾರಚರಿತೆಯನ್ನು[೩] ಪ್ರತಿಮಾಡಿದ ಪದುಮಯ್ಯ ತನ್ನನ್ನು 'ಶ್ರೀಮದ್ಬೆಳ್ಗುಳ ಸಿಂಧಸಿಂಹಾಸನಾಧೀಶ್ವರರುಮಪ್ಪ ಶ್ರೀಮದಭಿನವ ಚಾರುಕೀರ್ತಿಪಂಡಿತಾಚಾರ್ಯವರ್ಯಸ್ವಾಮಿಯವರ ತತ್ಶಿಷ್ಯ' ಎಂದು ಕರೆದುಕೊಂಡಿ ದ್ದಾನೆ. ಮುಂದುವರಿದು ತನ್ನನ್ನು 'ಭಂಡಾರಿಬಸದಿಯ ಇಂದ್ರವರ್ಗದ ಪದು ಮಯ್ಯ' ಎಂದು ಹೇಳಿಕೊಂಡಿದ್ದಾನೆ. ಈ ಪದುಮಯ್ಯನಿಗೂ ಮೇಲಿನ ಅಳ್ಳಿತಾಯ ಪ್ಪನ ಮಗ ಪದುಮಯ್ಯನಿಗೂ ಏನು ಸಂಬಂಧವೋ ತಿಳಿಯದು. ಅಂದು ಒಂದೊಂದು ಜಿನಾಲಯಕ್ಕೆ ಒಂದೊಂದು ಇಂದ್ರವರ್ಗದ ಮನೆತನಗಳಿದ್ದವು ಎಂಬುದು ಮಾತ್ರ ಇದರಿಂದ ಸ್ಪಷ್ಟವಾಗುತ್ತದೆ.

ದ್ವಾದಶಾನುಪ್ರೇಕ್ಷೆಯನ್ನು[೪] ಕ್ರಿ. ಶ. ೧೮೪೫ರಲ್ಲಿ ಪ್ರತಿಮಾಡಿದ ವಿಜಯ ಣ್ಣೋಪಾಧ್ಯಾಯ ತನ್ನನ್ನು 'ಶ್ರೀಬೆಳ್ಗುಳದ ಇಂದ್ರವರ್ಗದ ವಶಿಷ್ಟಗೋತ್ರಜ್ಞ ನಾದ ವಿಜಯಣ್ಣೋಪಾಧ್ಯಾಯ ಎಂದು ಕರೆದುಕೊಂಡಿದ್ದಾನೆ. ಈ ಪ್ರತಿಯನ್ನು 'ಬೆಳ್ಗೊಳದ ಶ್ರೀ ಚಾರುಕೀರ್ತಿಪಂಡಿತಾಚಾರ್ಯವರ್ಯಸ್ವಾಮಿಯವರ ಪಾದಪದ್ಮ ಗಳಿಗೆ ಭೃಂಗೋಪವಾಸಿಗಳಾದ ಶ್ರೀ ಅರಮನೆ ಬಸಮ್ಮನವರು ಜ್ಞಾನೋಪ ಕರಣಾಭ್ಯುದಯ ನಿಮಿತ್ತ್ಯವಾಗಿಯೂ ಸದಾ ಅಧ್ಯಯನ ನಿಮಿತ್ತ್ಯವಾಗಿಯೂ ಬರೆಸಿದ ಳಂತೆ. ಇಲ್ಲಿ ಒಂದು ಅರಸುಮನೆತನದ ಸ್ತ್ರೀ ಉತ್ತಳಾಗಿರುವಳಾದರೊಂದಿಗೆ (ಆದರೆ ಆಕೆಯ ಮನೆತನ ಸ್ಪಷ್ಟವಾಗದು) ಒಂದು ಕೃತಿಯನ್ನು ಪ್ರತಿಮಾಡಿಸಿದುದರ ಹಿನ್ನೆ ಲೆಯೂ ಸ್ಪಷ್ಟವಾಗುತ್ತದೆ.

---

೧. ಮ ಸೂಚೀ ಸಂ ೩, ಪು. ೫೯೮ ೨. ಪ್ರ. ಸೂ. ಸಂ. ೬, ಪು. ೨೬೯
೩. ಮ. ಸೂ. ೩. ಪು. ೫೯೦ ೪. ಕೊ. ಸೂ. ನಂ. ೩೨೨, ೧-೧೫೦

ಅದೇರೀತಿ ಕ್ರಿ.ಶ. ೧೮೫೭ರಲ್ಲಿ ನಾಗಕುಮಾರಚರಿತೆ[1]ಯನ್ನು ಪ್ರತಿಮಾಡಿದ ಇಂದ್ರವರ್ಗದ ಬ್ರಹ್ಮಯ್ಯ ತನ್ನನ್ನು 'ಶ್ರೀ ಬೆಳಗುಳದ ಭಂಡಾರಬಸದಿ ಚತುರ್ವಿಂಶತಿ ತೀರ್ಥಂಕರ ಪಾದಾರ್ಚಕ' ಎಂದು ಕರೆದುಕೊಂಡಿದ್ದಾನೆ. ಅದೇರೀತಿ ಕ್ರಿ.ಶ. ೧೮೬೯ರಲ್ಲಿ ಷೋಡಶಕ್ರಿಯಾಮಂಜರಿಯನ್ನು ಪ್ರತಿಮಾಡಿದ ಅನಂತರಾಜಯ್ಯ 'ಬೆಳಗುಳದ ಇಂದ್ರವರ್ಗದ ಶಿವದೇವಮ್ಮನವರ ಮಗ' ಎಂದು ಹೇಳಿಕೊಂಡಿದ್ದಾನೆ. ಇಂದ್ರವರ್ಗಕ್ಕೆ ಸ್ತ್ರೀಯೂ ಸೇರಿರುವುದು ಗಮನಾರ್ಹವಾದುದಾಗಿದೆ.

ಇಂದ್ರವರ್ಗದವರಲ್ಲದೆ. ಕೃತಿಗಳನ್ನು ಪ್ರತಿಮಾಡುವುದನ್ನೇ ವೃತ್ತಿಯನ್ನಾಗಿ ಮಾಡಿಕೊಂಡ ಇತರ ಹಲವರೂ ಇಲ್ಲಿದ್ದಾರೆ. ಅವರಲ್ಲಿ ಶಾಕಟಾಯನ ಪ್ರಕ್ರಿಯಾ ಸಂಗ್ರಹ[2] ಮತ್ತು ಸನತ್ಕುಮಾರ ಚರಿತೆ[3]ಗಳನ್ನು ಪ್ರತಿಮಾಡಿದ ಮರಿಯಣ್ಣ ಪ್ರಮುಖ. ಮೊದಲನೆಯ ಕೃತಿಯಲ್ಲಿ ಪ್ರತಿಕಾರ ತಾನು ಪ್ರತಿ ಮಾಡಿದ ಕಾರಣವನ್ನು 'ಶ್ರೀ ಮುಕ್ತಿವಧೂಪರಮಾನಂದಕರ ದೋರ್ಬಲಿಜಿನಾಧೀಶನ ಸನ್ನಿಧಿಯಲ್ಲಿ ಶ್ರೀ ಪಂಡಿತವರ್ಣಿಯವರಿಗೆ ಅರುವನಹಳ್ಳಿಯ ಚೆನ್ನವೀರಶೆಟ್ಟರ ಕುಮಾರ ಬೆಳಗುಳದ ಪಾರು ಪತ್ಯಗಾರ ಪರಿಯಪ್ಪ.. ನ ಬಿಟ್ಟಿತ್ರಿನಿಮಿತ್ತವಾಗಿ ಶಾಸ್ತ್ರದಾನಾರ್ಥವಾಗಿ' ಪ್ರತಿಮಾಡಿದುದಾಗಿ ಹೇಳಿದ್ದಾನೆ. ಇಲ್ಲಿ ಜೈನರ ಚತುರ್ವಿಧ ದಾನದಲ್ಲಿ ಒಂದಾದ ಶಾಸ್ತ್ರದಾನದ ಉಲ್ಲೇಖವಿದೆ. ಮರಿಯಣ್ಣ ಪ್ರತಿಮಾಡಿದ ಇನ್ನೊಂದು ಕೃತಿ ಸನತ್ಕುಮಾರ ಚರಿತೆ. ಇದನ್ನು 'ಶ್ರೀಮದಭಿನವ ಚಾರುಕೀರ್ತಿಭಂಡಾರಕ್ಕೆ' ಬರೆದುಕೊಟ್ಟುದಾಗಿ ಹೇಳಿದ್ದಾನೆ. ೧೮ನೆಯ ಶತಮಾನದ ಸುಮಾರಿಗೇ ಶ್ರವಣಬೆಳ್ಗೊಳದಲ್ಲೊಂದು ಸುವ್ಯವಸ್ಥಿತ ಗ್ರಂಥಭಂಡಾರ ಇದ್ದುದು ಇದರಿಂದ ವೇದ್ಯವಾಗುತ್ತದೆ. ಇವೆರಡೂ ಪ್ರತಿಗಳಲ್ಲಿ ಪ್ರತಿಕಾರ ತನ್ನನ್ನು 'ಬೆಳಗುಳದ ಪಾಯಶೆಟ್ಟಿಯರ ಮಗ' ಎಂದು ಕರೆದುಕೊಂಡಿದ್ದಾನೆ.

ಉಪಾಧ್ಯಾಯ ವೃತ್ತಿಯಲ್ಲಿದ್ದ ಹಲವು ಪ್ರತಿಗಳನ್ನು ಪ್ರತಿಮಾಡಿದ ಪ್ರತಿಕಾರರೂ ಇಲ್ಲಿದ್ದಾರೆ. ಅವರಲ್ಲಿ ನ್ಯಾಯವಿನಿಶ್ಚಯ ವೃತ್ತಿ[4] ಮತ್ತು ಪರಮಾತ್ಮ ಪ್ರಕಾಶ[5]ಗಳನ್ನು ಪ್ರತಿಮಾಡಿದ ಚಂದ್ರಯ್ಯ ಪ್ರಮುಖ. ನ್ಯಾಯವಿನಿಶ್ಚಯವೃತ್ತಿ ಸಂಸ್ಕೃತದಲ್ಲಿದೆ. ಅದನ್ನು ಪ್ರತಿಮಾಡಲು ಒದಗಿಬಂದ ಪ್ರಸಂಗವನ್ನು ಈ ರೀತಿ ಹೇಳಿದ್ದಾನೆ—

"ಚಾರುಕೀರ್ತಿಮುನೀಂದ್ರೇಣ ನ್ಯಾಯನಿಶ್ಚಯಸಂಗ್ರಹಃ ।
ತರ್ಕಗ್ರಂಥಂ ಸಮೀಕ್ಷ್ಯಾಶು ಬಹುಜೀರ್ಣಂ ಸುಪುಸ್ತಕಂ ॥

---

೧. ಕೊ. ಸೂ. ನಂ. ೧೪೧ ೨. ಕೊ. ಸೂ. ನಂ. ೩೨೯ ೩. ಶ್ರ. ಜೈ. ಸೂ. ಪು. ೩೧
೪. ಶ್ರ. ಜೈ. ಸೂ. ಪು. ೬೬ ೫. ಶ್ರ. ಜೈ. ಸೂ. ಪು. ೨೨ ೬. ಅದೇ ಪು. ೧೦

ದೃಷ್ಟ್ವಾ ಚಾಹೂಯ ಶೀಘ್ರೇಣ ಲೇಖನೀಯಂ ಸುವಿಸ್ತರಂ ।
ಕಾಲಕ್ಷೇಪಂ ನಕರ್ತವ್ಯಃ ಶೀಘ್ರಂ ಭವತು ಜಾಗ್ರತಃ ॥

ಇದರಿಂದ ಜೀರ್ಣವಾಗಿ ಕಾಲನಗರ್ಭದಲ್ಲಿ ಕೂಡಿ ಹೋಗಬಹುದಾಗಿದ್ದ ಒಂದು ಕೃತಿಯನ್ನು ಉಳಿಸಿದ ಶ್ರೇಯಸ್ಸು ಈತನದು ಎಂದು ಹೇಳಬಹುದು. ಇಲ್ಲಿ ಈತ ತನ್ನನ್ನು ಚಾರುಕೀರ್ತಿಮುನೀದ್ರಾಣಂ ಶಿಷ್ಯಶ್ಚಂದ್ರುಮಸಂಜ್ಞಯಾ।ಚಂದಯ್ಯಾಧ್ಯಾಪಕೇನೇದಂ ಲಿಖಿತಂ ಸ್ಥೂಲಬುದ್ಧಿನಾ' ಎಂದು ಹೇಳಿಕೊಂಡಿದ್ದಾನೆ. ಇವನು ಪ್ರತಿಮಾಡಿದ ಎರಡನೆಯ ಕೃತಿ 'ಪರಮಾತ್ಮ ಪ್ರಕಾಶ' ಇದನ್ನು ಪ್ರತಿಮಾಡಲು ಉಂಟಾದ ಕಾರಣವನ್ನು ಈ ರೀತಿ ಹೇಳಿಕೊಂಡಿದ್ದಾನೆ: 'ನೇಮಿನಾಥಸ್ವಾಮಿ ಚೈತ್ಯಾಲ್ಯಯದಲ್ಲಿ ಅಣ್ಣ-ಗಳ ಜೀಯನವರು ನೇಮಿಸಾಗರ ವರ್ಣಿಜೀಯವರು ಚಾತುರ್ಮಾಸ ಮಾಡುವಾಗ ಚಂದಯ್ಯ ಬರೆದ ಪರಮಾತ್ಮ ಪ್ರಕಾಶಿಕೆ'. ಮುಂದುವರಿದು ಆ ಗ್ರಂಥದ ಮಹತಿ-ಯನ್ನು ಈ ರೀತಿ ಸಾರಿದ್ದಾನೆ—'ಇದು ಭವ್ಯರಿಗೆ ಅಮೃತವಾಗಿ ತೋರುವದು. ಅಭವ್ಯರಿಗೆ ಕಾಳಕೂಟವಿಷವಾಗಿ ಕಾಣ್ಬುದು'. ಇದರಿಂದ ಕೃತಿಕಾರರು ಕೃತಿಪರೀಕ್ಷ-ಕರೂ ಆಗಿದ್ದರು ಎಂಬುದು ಸ್ಪಷ್ಟವಾಗುವದು.

ಇತರ ಲಿಪಿಕಾರರಲ್ಲಿ ಪಾರ್ಶ್ವ ಮತ್ತು ಚಂದ್ರಸಾಗರವರ್ಣಿ ಪ್ರಮುಖರು. ಪಾರ್ಶ್ವ ವರ್ಧಮಾನಚರಿತೆ[1] ಮತ್ತು ಪಂಚಪ್ರಕರಣ[2]ಗಳನ್ನು ಪ್ರತಿಮಾಡಿದ್ದಾನೆ. ವರ್ಧಮಾನಚರಿತೆಯಲ್ಲಿ 'ನಳಸಂವತ್ಸರೇ ಮಾರ್ಗಸಿರಮಾಸ ಸಿತಪಕ್ಷೇ ಪೌರ್ಣ-ಮಾಸ್ಯಾಂ ತಿಥೌ ಚಂದ್ರವಾರೇ' ಎಂದೂ, ಪಂಚಪ್ರಕರಣದಲ್ಲಿ 'ರಾಮಮಾವೇಃ ಸೀತೇ ಪಕ್ಷೇಪಂಚಮ್ಯಾಂ ಶ್ರವಣೇತಿಥೌ, ಪರೀಕ್ಷಾಂ ಸತ್ತ್ರಮಾಣಸ್ಯ ಸುಪಾರ್ಶ್ವಾರ್ಪ್ಯೆ ಲಿಖಿ ಮುದಾ॥ ಸಾಧಾರಣ ಸಂವತ್ಸರದಲ್ಲಿ ಗೋಮಟೇಶ್ವರ ಸ್ವಾಮಿನಾಂ ಸನ್ನಿಧೌ ಪಾರ್ಶ್ವನಾಥಸ್ವಾಮಿಯ ಸನ್ನಿಧಾನದಲ್ಲಿ ಬರೆದು ಸಂಪೂರ್ಣ' ಎಂದು ಸಂವತ್ಸರವನ್ನು ಮಾತ್ರ ಹೇಳಲಾಗಿದೆ. ಶಕೆ ಇಲ್ಲ. ಹೀಗಾಗಿ ಸ್ಪಷ್ಟಕಾಲವನ್ನು ನಿರ್ಧರಿಸುವುದು ಅಶಕ್ಯ. ವರ್ಧಮಾನಚರಿತೆಯಲ್ಲಿ ಪ್ರತಿಕಾರ ತನ್ನ ವಂಶಾವಳಿಯನ್ನು 'ಶ್ರೀ ಮದ್ಬೆಳ್ಗುಳ ವಿದ್ಯಾಂದ್ರಿಶಿಖರ ವಿರಾಜಮಾನ ಶ್ರೀ ದೋರ್ಬಲಿಜಿನ ಪಾದಾರವಿಂದ ಮತ್ತಮಧುಕರಾಯಮಾನ ಶ್ರೀಮದಭಿನವ ಚಾರುಕೀರ್ತಿಪಂಡಿತಾಚಾರ್ಯವರ್ಯನಾಮಂತ್ರೇ-ವಾಸಿನಾ ಪಾಯಣಶೆಟ್ಟಿಪುತ್ರೇಣ ಪಾರ್ಶ್ವಾಖ್ಯೇನ' ಎಂದು ಹೇಳಿಕೊಂಡಿದ್ದಾನೆ. ಕೊನೆಗೆ ಗ್ರಂಥ ಬರೆಯಲು 'ಮಯಾನಿರ್ಜಿತಾ ಶೇಷಕಲ್ಮಷಾಯ ಶ್ರೀಮದಾದಿಮುನೀಂದ್ರಾಯ ಲಿಖಿತ್ವದತ್ತಮಿದಂ' ಎಂದಿದ್ದಾನೆ. ಪಂಚಪ್ರಕರಣವನ್ನು ಗೊಮ್ಮಟಸ್ವಾಮಿನಾಂ ಸನ್ನಿಧೌ ಪಾರ್ಶ್ವನಾಥಸ್ವಾಮಿಯ ಸನ್ನಿಧಿಯಲ್ಲಿ ಬರೆದು ಸಂಪೂರ್ಣ' ಎಂದಿದ್ದಾನೆ.

---

೧. ಪ್ರ. ಚಿ. ಸೂಚೀ ಪ್ರ. ೬೫ ೨. ಅದೇ ಪ್ರ. ೬

೧೯ನೆಯ ಶತಮಾನದ ಆದಿಭಾಗದಲ್ಲಿ ಬದುಕಿದ ಚಂದ್ರಸಾಗರವರ್ಣಿ ಶ್ರವಣಬೆಳ್ಗೊಳದೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಕವಿ. ಇತರ ೧೫–೨೦ ಕೃತಿಗಳೊಂದಿಗೆ ಶ್ರವಣಬೆಳ್ಗೊಳಕ್ಕೆ ಸಂಬಂಧಿಸಿದ ೮–೧೦ ಲಘುಕೃತಿಗಳನ್ನೂ ರಚಿಸಿದ್ದಾನೆ ಮತ್ತು ಎರಡು ಕೃತಿಗಳನ್ನು ಪ್ರತಿಮಾಡಿ ಶ್ರವಣಬೆಳ್ಗೊಳದ ಗ್ರಂಥ ಭಂಡಾರಕ್ಕೆ ಅರ್ಪಿಸಿದ್ದಾನೆ. ಒಂದು: ಚಂಪೂಭಾರತ[1], ಇನ್ನೊಂದು ವಿಂಶತಿಪ್ರರೂಪಣಾಮಾಲೆ[2]. ಚಂಪೂಭಾರತದಲ್ಲಿ 'ಬುಧವಾರ ಸ್ವಾಮಿಯವರ ಅಪ್ಪಣೆಯಿಂದ ಚಂದ್ರಸಾಗರವರ್ಣಿ ಬೆಳಗುಳ ಮಠಕ್ಕೆ ಬರೆದು ಒಪ್ಪಿಸಿದ ಚಂಪೂಭಾರತ' ಎಂದೂ, ವಿಶಂತಿಪ್ರರೂಪಣಾಮಾಲದಲ್ಲಿ 'ಬೆಳ್ಗುಳ ಮಠದ ಬಸ್ತಿ ಚಂದ್ರಸ್ವಾಮಿ ಸನ್ನಿಧಿಯಲ್ಲಿ ಚಂದ್ರಸಾಗರವರ್ಣಿಯವರು ಪ್ರರೂಪಣೆ ಬರೆದು ಸಂಪೂರ್ಣವಾಯ್ತು (ಶಕೆ ೧೭೦೨) ಎಂದೂ ಹೇಳಲಾಗಿದೆ.

ಜ್ಯೋತಿಷಸಂಗ್ರಹ[3]ವನ್ನು ಪ್ರತಿಮಾಡಿದ ಬ್ರಹ್ಮಸೂರಿಪಂಡಿತ ತನ್ನ ವಂಶಾವಳಿಯನ್ನು 'ಬೆಳ್ಗುಳ ಕವಿಯಣ್ಣಯ್ಯನ ತೃತೀಯ ಪುತ್ರನಾದಂಥಾ ಬ್ರಹ್ಮಸೂರಿ ಪಂಡಿತ' ಎಂದು ಹೇಳಿಕೊಂಡಿದ್ದಾನೆ. ಇವನೂ ಇವನ್ನು ಕೊಲ್ಲಾಪುರದ ಲಕ್ಷ್ಮೀಸೇನಸ್ವಾಮಿಯವರ ಪಾದಪದ್ಮಗಳಿಗೆ ಬರೆದುಕೊಟ್ಟುದಾಗಿ ಹೇಳಿಕೊಂಡಿದ್ದಾನೆ. ಅಲ್ಲದೆ ಇವನು 'ಶಾಂತಿ ಹೋಮ'[4] ಎಂಬ ಪುಸ್ತಕವನ್ನು ತನ್ನ ಮಗ ಭುಜಬಲಯ್ಯನಿಗೆ ಬರೆದುಕೊಟ್ಟುದಾಗಿ ಹೇಳಿದ್ದಾನೆ. ಅಲ್ಲಿಯ ವಿವರ ಹೀಗಿದೆ: ಮಂಗಾಯಿ ಮಾಡಿಸಿದ ತ್ರಿಭುವನಚೂಡಾಮಣಿಯೆಂಬ ಬಸದಿಯ ಶ್ರೀ ಅನಂತಸ್ವಾಮಿಯ ಸನ್ನಿಧಿಯಲ್ಲಿ ಈ ಬಸ್ತಿ ದೇವಾರ್ಚನೆ ಮಾಡುವ ಕವಿಯಣ್ಣಯ್ಯನವರ ತತ್ಪುತ್ರ ಬ್ರಹ್ಮಯ್ಯ ತನ್ನ ಪುತ್ರ ಭುಜಬಲಯ್ಯನಿಗೆ ಬರಕೊಟ್ಟ ಶಾಂತಿಹೋಮ ಪುಸ್ತಕ'. ಇಲ್ಲಿ ಕವಿ ಯಣ್ಣಯ್ಯ ಮಂಗಾಯಿಬಸ್ತಿಯ ದೇವಾರ್ಚಕ ಎಂಬ ಹೆಚ್ಚಿನ ವಿಷಯ ಇದೆ. ಆದರೆ ಜ್ಯೋತಿಷಸಂಗ್ರಹದಲ್ಲಿ ಹೇಳಿದ–ಬ್ರಹ್ಮಸೂರಿಪಂಡಿತ ಕವಿಯಣ್ಣಯ್ಯನ ಮೂರನೆಯ ಮಗ ಎಂಬ ಮಾತು 'ಶಾಂತಿಹೋಮ'ದಲ್ಲಿ ಇಲ್ಲ. ಈವರೆಗೆ ಕವಿಯಣ್ಣಯ್ಯನ ಕೃತಿಗಳಾವುವೂ ದೊರೆತಿಲ್ಲ.

ಪ್ರಶ್ನೋತ್ತರೋಪಾಸಕಾಚಾರ[5]ವನ್ನು ಪ್ರತಿಮಾಡಿದ ಅನಂತರಾಜಯ್ಯ ಚಾಮುಂಡರಾಯನ ವಂಶಸ್ಥ. ಚೂಡಾಮಣಿಚೈತ್ಯಾಲಯದ ಅನಂತತೀರ್ಥೇಶನ ಅರ್ಚಕನಾದ ಬ್ರಹ್ಮಸೂರಿಯ ಮಗ. ಇದನ್ನು ಪ್ರತಿಕಾರ ಈ ರೀತಿ ಉಲ್ಲೇಖಿಸಿದ್ದಾನೆ. 'ಶೂನ್ಯಾಷ್ಟಾಷ್ಟ ದ್ವಯಾಂತಾಬ್ದಸಂಖ್ಯಯಾಮುನಿವೋದಿತಃ ಅಂಥತ್ವೇ

---

೧. ಶ್ರ. ಜಿ. ಸೂಚೀ ಪು. ೪೦ ೨. ಕೆ.ಎ. ಸೂ. ಸಂ. ೬/೧ ೩. ಕೆ.ಎ. ಸೂ. ಸಂ. ೨೫೮
೪. ,, ಪು. ೭೩ ೫. ಅದೇ ಪು. ೬೩

ಧರೆಗತಿಶಯ ಚೂಡಾಮಣಿ ಚೈತ್ಯಾಪಾವನೌ ಗ್ರಂಥೌ ಯಾವತ್ಕಾಲಂವೋವಹಿ ಲಯಸ್ಯಾನಂತತೀರ್ಥೇಶ್ವರಾರ್ಚಕಾನಾಂ ಕಾಶ್ಯಪಾನ್ವಯನಾಂ ಕವಿಜೇಷ್ಠಾನಾಂ ಬ್ರಹ್ಮಸೂರಿಣಾಂ ತನುಜೇನ ಅನಂತರಾಜಾಖ್ಯೇನ ಚಾಮುಂಡರಾಜವಂಶಸ್ಥಾನಾಂ ಪ್ರಚಂಡದೋರ್ದಂಡ ಚಂಡಿಮಾಡಂಬರ ಗುಣಕುತೂಹಲಾ ಖಂಡಿತಾಖಂಡಲ ಕುಂಡಲೀಶಮಂಡಳಿಕ ಸಾರ್ವಭೌಮಾದ್ಯನೇಕ ಬಿರುದಾವಳಿ ವಿರಾಜಮಾನಾನಾಂ ಶ್ರೀಮದ್ದೇವರಾಜೇಂದ್ರಪ್ರಭೂಣಾಂ ಗರ್ಭಸಂಭವನಾಂ ಸಕಲಕಲಾಕೌಶಲಾನಾಂ ಶ್ರೀಮದ್ದೇವರಾಜೇಂದ್ರಮಹೀಭೃತಾಂ ಮಹಾಸಂಪೂರ್ಣತಯಾ ಲಿಖಿತ್ವಾ ಸಮರ್ಪಿತಂ'. ಇಲ್ಲಿಯ ಅನಂತರಾಜಯ್ಯ ಶ್ರವಣಬೆಳ್ಗೊಳದ ೩೦೪ನೆಯ ಶಾಸನದಲ್ಲಿ (ಕ್ರಿ. ಶ. ೧೮೨೭) ಉಲ್ಲೇಖಿತನಾದ ಬಿಳಿಕೆರೆ ಅನಂತರಾಜೈಅರಸನೇ. ಇವನು ಈ ಕೃತಿಯನ್ನು ದೇವರಾಜೇಂದ್ರಮಹೀಭೃತನಿಗೆ ಪ್ರತಿಮಾಡಿಕೊಟ್ಟುದಾಗಿ ಹೇಳಿದೆ. ಮೇಲಿನ ಶಾಂತಿಹೋಮ ಪುಸ್ತಕವನ್ನು ಪ್ರತಿಮಾಡಿದ ಬ್ರಹ್ಮಯ್ಯ ಅನಂತರಾಜೈನ ತಂದೆಯಾಗಿರಬೇಕು. ವಂಶಪಾರಂಪರ್ಯವಾಗಿ ಕೃತಿಗಳನ್ನು ಪ್ರತಿಮಾಡುವ ಕಾಯಕವನ್ನು ಇವರು ಕೈಗೊಂಡು ಬಂದುದು ಇದರಿಂದ ಸ್ಪಷ್ಟವಾಗುತ್ತದೆ. ಅಲ್ಲದೆ ಕ್ರಿ. ಶ. ೧೬೩೪ರಲ್ಲಿ ಇದೇ ವಂಶದ ಬಿಳಿಕೆರೆ ದೇವರಾಜಯ್ಯಅರಸನವರು 'ಭಾವನಾಸಾರ'[1] ವನ್ನು ಶ್ರೀಮದಭಿನವ ಚಾರುಕೀರ್ತಿಪಂಡಿತಾಚಾರ್ಯವರ್ಯಸ್ವಾಮಿಯವರಿಗೆ ಬರೆಸಿಕೊಟ್ಟುದಾಗಿ ತಿಳಿದು ಬರುತ್ತದೆ. ಆದರೆ ಇಲ್ಲಿ ಪ್ರತಿಕಾರನ ಉಲ್ಲೇಖವಿಲ್ಲ. ಒಟ್ಟಾರೆ ಶ್ರವಣಬೆಳ್ಗೊಳಕ್ಕೆ ಸಂಬಂಧಿಸಿದ ಹಸ್ತಪ್ರತಿಗಳಲ್ಲಿ ಬಿಳುಕೆರೆಯ ಅರಸು ಮನೆತನ ವಿಶೇಷ ಪಾತ್ರವಾಡಿರುವಂತಿದೆ. ಗದ್ಯಚಿಂತಾಮಣಿ[2]ಯನ್ನು ಪ್ರತಿಮಾಡಿದ ಪ್ರತಿಕಾರ ತನ್ನನ್ನು ಬೆಳಗುಳಾಖ್ಯಪುರೇ ತತ್ರವಿದ್ಯತೇ ವಿದುಷಾಂಗ್ರಹ ನಿತ್ಯಾನುಷ್ಠಾನ ಸ್ತೋತ್ರಾದೌ ತತ್ಪುರೋ ಜಿನಪೂಜಕೇ' ಎಂದು ಹೇಳಿಕೊಂಡಿದ್ದಾನೆ. ಇಲ್ಲಿಯೂ ಪ್ರತಿಕಾರನ ಹೆಸರಿಲ್ಲ. ಆದರೆ ಕಾಲಮಾತ್ರ 'ಪರಿಧಾವಿಸಂವತ್ಸರೇ ಮಾಘಮಾಸೇ ಪ್ರಥಮಪಕ್ಷೇ ಕೇ ಪ್ರಥಮ್ಯಾಂ ರವಿವಾರಾಯಾಂ ಶೋಭಮಾನೇ ಪ್ರಶಸ್ತಕೇ' ಎಂದಿದೆ.

ನೇಮಿಜಿನೇಶಸಂಗತಿ[3]ಯನ್ನು ಪ್ರತಿಮಾಡಿದ ಪ್ರತಿಕಾರನ ಹೆಸರು ತ್ರುಟಿತವಾಗಿದೆ. ಆದರೆ ಪ್ರತಿಕಾರನ ಇತರ ವಿಷಯಗಳು ಈ ರೀತಿ ಉಲ್ಲೇಖವಾಗಿವೆ: 'ಯೆನಕ್ಕೆಲ್ಲಾ ಶ್ರೀಮದನಂತಸ್ವಾಮಿಯವರ ಚೈತ್ಯಾಲಯದಲ್ಲಿ ಬೆಳಗುಳದ ಸಿದ್ಧಸಿಂಹಾಸನಾಧೀಶ್ವರ ಚಾರುಕೀರ್ತಿಪಂಡಿತದೇವರ ಪ್ರಿಯಾಗ್ರಶಿಷ್ಯರಾದಂತ ಅಂಜನಗಿರಿಸಿಂಹಾಸನಕ್ಕೆ × × ×ದ್ಯರಲ್ಲಿ ಬರೆದು ಮುಗಿದ ಹರಿವಂಶಪುರಾಣ.' ಪ್ರತಿಮಾಡಿದ ಕಾಲ 'ಕ್ರೋಧಿಸಂವತ್ಸರದ ಮಾರ್ಗಶಿರ ಬಹುಳ ೧೪ ಗುರುವಾರ. ಅಂಜನಗಿರಿ ಸಿಂಹಾಸನದ ಒಡೆಯನೊಬ್ಬ ಬೆಳ್ಗುಳದ ಶಿಷ್ಯ ಸಂಪ್ರದಾಯದಲ್ಲಿದ್ದುದು ಈ ಪ್ರತಿಯಿಂದ ಸ್ಪಷ್ಟವಾಗುತ್ತದೆ.

೧. ಶ್ರ. ಬೆ. ಸೂಚೀ, ಪು. ೧೫ ೨. ಅದೇ ಪು. ೩೯ ಮೈ. ಸೂ. ಸಂ. ೬, ಪು. ೩೯೯

ಅಮರಕೋಶವ್ಯಾಖ್ಯಾನ[೧]ವೊಂದರ ಕೊನೆಯಲ್ಲಿ 'ಕೀಲಕ ಸಂವತ್ಸರಸ್ಯ ಉತ್ತರಾಯಣ ಪುಷ್ಪಸಮಯ ಋತೋಃ ಮಾಧವಮಾಸಸ್ಯ ಶುಕ್ಲಪಕ್ಷಸ್ಯ ಸಪ್ತಮೀತಿಥೌ ದ್ವೈತ ಗುರುವಾರ ಯುಕ್ತಸ್ಯ ಘುಸ್ರಿಕೊಂಡಿ ಉಜ್ಜಶೆಟ್ಟಿ ಮಗ ಬಿಮ್ಮ ತನಗೆ ನೇಮಿಶ್ವರಸ್ವಾಮಿಯ ಸನ್ನಿಧಿಯಲ್ಲಿ ಬರಕೊಂಡ ಅಮರಸಿಂಹನ ಮೂಲಪದ್ಯ ನಾಚಿರಾಜೀಯಸಹ ಸಮಸ್ತಮಂಗಲ ಮಹ' ಎಂದಿದೆ. ಇಲ್ಲಿ ಪ್ರತಿಕಾರ ಇದನ್ನು ತನಗಾಗಿ ಪ್ರತಿ ಮಾಡಿಕೊಂಡಂತೆ ಹೇಳಿಕೊಂಡಿದ್ದಾನೆ. ಇಲ್ಲಿಯ ನೇಮೀಶ್ವರಸ್ವಾಮಿ ಶ್ರವಣಬೆಳ್ಗೊಳಕ್ಕೆ ಸಂಬಂಧಿಸಿ ಇರಬೇಕು.

ಕ್ರಿ.ಶ. ೧೭೩೫ರಲ್ಲಿ ಬರೆದ ದಾನಶಾಸನ[೨]ದ ಕೊನೆಯಲ್ಲಿ 'ಶ್ರೀಮದ್ಬೆಳ್ಗುಳವಿಂಧ್ಯಶೈಲಮಹಿತಃ ಶ್ರೀಗೋಮಟೇಶಾರ್ಹಂತಃ। ಶ್ರೀಪಾದಾಂಬುಜ ಸನ್ನಿಧಾನುಚರಃ ಶ್ರೀ ಚಾರುಕೀರ್ತಿಗುರೋಃ। ಪಾತ್ಯಾಖ್ಯಾ ಲಿಖಿತಾವಿವರ್ಣಮುನಯೋಃ ಗ್ರಂಥಮುದೇಮಂಜಡಃ। ಸಂತಸ೧ ತುಕರಾಪರಾಧ ಶಮನೇ ಕಾರುಣ್ಯಜಾತೋದ್ಯಮಾಃ। ಸ್ವಸ್ತಿಶ್ರೀವಿಜಯಾಭ್ಯುದಯ ಶಾಲಿವಾಹನ ಶಕವರ್ಷ ೧೬೫೭ನೆಯ ಶ್ರೀಮದ್ರಾಕ್ಷಸನಾಮಸಂವತ್ಸರದ ಮಾಘ ಶುದ್ಧ ಪಂಚಮಿ ಬುಧವಾರ ಬರೆದು ಸಂಪೂರ್ಣಸಿದ ದಾನಶಾಸನಗ್ರಂಥ' ಎಂದಿದೆ. ಇಲ್ಲಿಯೂ ಪ್ರತಿಕಾರನ ಉಲ್ಲೇಖವಿಲ್ಲ.

ಕ್ರಿ.ಶ. ೧೮೧೧ರಲ್ಲಿ ಪ್ರತಿಮಾಡಿದ 'ಉಪದೇಶರತ್ನಮಾಲಾ'ದ[೩] ಕೊನೆಯಲ್ಲಿ 'ಶಾಲಿವಾಹನಶಕವರ್ಷ ೧೭೩೩ನೇ ಅಂಗೀರಸನಾಮ ಸಂವತ್ಸರೇ ಪುಷ್ಯಮಾಸೇ ಕೃಷ್ಣಪಕ್ಷೇ ದ್ವಿತಿಯಾಂ ತಿಥೌ ಇಂದುವಾಸರೇ ಬೆಳ್ಗುಳಪುರೇ ಉಪದೇಶರತ್ನಮಾಲಾ ಸಂಪೂರ್ಣಂ' ಎಂದಿದೆ. ಇಲ್ಲಿಯೂ ಪ್ರತಿಕಾರನ ವಿವರವಿಲ್ಲ.

ನೇಮಿಜಿನೇಶಸಂಗತಿ[೪]ಯ ಆರಂಭದಲ್ಲಿ 'ಶ್ರೀ ವೀತರಾಗ। ಶ್ರೀಪಂಚಪರಮೇಷ್ಠಿಗಳ ಪಾದಾರವಿಂದವೆ ಗತಿ। ಶ್ರೀ ವೀರಬ್ರಹ್ಮಾಯ ನಮಃ। ಶ್ರೀಚವ್ವೀಸ-ತೀರ್ಥಂಕರ ಯಕ್ಷಾಯ ಕ್ಷಿಮರ ಪಾದಾರವಿಂದವೇಗತಿ। ಅಗಳಿ ಆದಿನಾಥಾಯೇ ನಮಃ। ಬೆಳ್ಗುಳದ ಗೊಮ್ಮಟಸ್ವಾಮಿ ಪಾದಾರವಿಂದವೆ ಗತಿ। ಶ್ರೀ ಗ್ರಾಮನಾ-ಥಾಯೆ ನಮಃ। ಶ್ರೀಅಂಬಾ ಪ್ರಸನ್ನಾ। ಹರಿವಂಶಪುಸ್ತಕ ಬರೆವುದಕ್ಕೆ ಪ್ರಾರಂಭ ಮಾಡಿದ್ದು ವಿಳಂಬಿಸಂವತ್ಸರದ ವೈಶಾಖಸುದ್ಧ ೧ ದಲ್ಲು ಭ್ರಾಮಂಡನಹಳ್ಳಿ ಪಾಯಣ್ಣ ಬರೆದ ಪುಸ್ತಕಕ್ಕೆ ಶುಭಮಸ್ತು। ಅವಿಘ್ನಮಸ್ತು। ಶ್ರೀರಸ್ತು। ಗಂಭೀರಮಸ್ತು' ಎಂದಿದೆ. ಕೊನೆಯಲ್ಲಿ 'ವಿಕಾರಿಸಂವತ್ಸರದ ಕಾರ್ತೀಕ ಶು ೫ ಸೋಮವಾರದ ಮರಿಮರ್ರಿವಂಶಜ ಭ್ರಾಮಂಡನಹಳ್ಳಿ ಪಾಯಣ್ಣ ವಡಿಗೆರೆ ಪುಪಾದ್ರಪ್ಪಳಣ್ಣನ

೧. ಪ್ರ. ಜೆ. ಸೂ. ಜೀ. ಪು. ೩೩ ೨. ಅದೇ ಪು. ೯೦ ೩. ಅದೇ ಪು. ೯೧
೪. ಮೆ. ಸೂ. ಪು. ೧೨೨

ಕುಮಾರ ಹರಿಯಪ್ಪಗೆ ಬರೆದುಕೊಟ್ಟ ಪುಸ್ತಕಕ್ಕೆ ಶುಭಮಸ್ತು ! ಶ್ರೀ ನೇಮಿನಾಥಾ-ಯನಮಃ...... ಶ್ರೀಲಕ್ಷ್ಮೀಸೇನಾಚಾರ್ಯರ್ಯೇ ನಮಃ' ಎಂದಿದೆ. ಇದರಿಂದ ಈ ಪ್ರತಿಕಾರನಿಗೂ ಶ್ರವಣಬೆಳ್ಗೊಳಕ್ಕೂ ಇರುವ ಸಂಬಂಧ ಸ್ಪಷ್ಟವಾಗುವುದಿಲ್ಲ, ನಿಜ. ಶ್ರವಣಬೆಳ್ಗೊಳದ ಗೊಮ್ಮಟನಲ್ಲಿ ಅಚಲಭಕ್ತಿಯುಳ್ಳವ ಈ ಪ್ರತಿಕಾರ ಎಂಬುದು ಇದರಿಂದ ಗೋಚರವಾಗುತ್ತದೆ.

ಇನ್ನು ಕೆಲವು ಪ್ರತಿಗಳಲ್ಲಿ ಗೊಮ್ಮಟನ. ಚಾರುಕೀರ್ತಿಮುನಿಗಳ ಸ್ತುತಿ ಮಾತ್ರ ಇದೆ. 'ರಾಮುಜನನ'[1] ಎಂಬ ಯಕ್ಷಗಾನದ ಕೊನೆಯಲ್ಲಿ 'ಪದ್ಮಾವತಿ ಅಮ್ಮನವರ ಪಾದವೇಗತಿ । ಬ್ರಹ್ಮದೇವರ ಪಾದವೇಗತಿ ।......ಗುಮ್ಮಟೇಶ್ವರಸ್ವಾಮಿ ಪಾದವೆ ಗತಿ......' ಎಂದಿದೆ. ಅದೇರೀತಿ 'ನೋಂಪಿಕಥೆಗಳು'[2] ಕೃತಿಯ ಆದಿಯಲ್ಲಿ 'ಶ್ರೀಮತ್ಪಂಚಗುರುಭ್ಯೋನಮಃ । ಶ್ರೀಚಂದ್ರನಾಥಾಯ ನಮಃ । ಶ್ರೀ ಬಾಹುಬಲಿಜಿನಾಯನಮಃ । ಶ್ರೀಚಾರುಕೀರ್ತಿಮುನಯೇ ನಮಃ । ನಿರ್ವಿಘ್ನಮಸ್ತು । ಶ್ರೀ ನೋಂಪಿಕಥೆ ಬರೆವುದಕ್ಕೆ ಶುಭಮಸ್ತು' ಎಂದಿದೆ. ಇವಿಷ್ಟರಿಂದ ಇವರು ಶ್ರವಣಬೆಳ್ಗೊಳಕ್ಕೆ ಸಂಬಂಧಿಸಿದವರು ಎಂದು ಹೇಳುವುದು ಸಾಧ್ಯವಾಗದು. ಆದರೂ ಇವರು ಗೊಮ್ಮಟನ, ಚಾರುಕೀರ್ತಿಮುನಿಯ ಭಕ್ತಸಮುದಾಯದವರು ಎಂದು ಗುರುತಿಸಬಹುದು.

'ವಿವೇಕವಿಲಾಸ'[3] ಎಂಬ ಪ್ರತಿಯ ಕೊನೆಯಲ್ಲಿ 'ಸ್ವಸ್ತಿಶ್ರೀಮದ್ರಾಯರಾಜ ಗುರು ವಸುಂಧರಾಚಾರ್ಯವರ್ಯ ಮಹಾವಾದವಾದೀಶ್ವರರಾಯ ವಾದಿಪಿತಾಮಹ ಸಕಲ ವಿದ್ವಜ್ಜನ ಸಾರ್ವಭೌಮಾದ್ಯನೇಕನ್ವರ್ಥ ಬಿರುದಾವಳೀ ವಿರಾಜಮಾನ ಶ್ರೀ ಮನ್ನಿರ್ವಾಣದೇವೇಂದ್ರಕೀರ್ತಿದೇವರ ಪ್ರಿಯಶಿಷ್ಯವಹ ಚಿಕ್ಕದೇವಣ್ಣಗಳು ತನಗೆ ಅಧ್ಯಯನ ನಿಮಿತ್ಯವಾಗಿ ಧಾತುಸಂತ್ಸರವ ವೈಶಾಖ ಬಹುಳ ಚತುರ್ದಶಿಯ ಚಂದ್ರವಾರ ಮಧ್ಯಾಹ್ನದಲ್ಲಿ ಬರೆದ ವಿವೇಕ ವಿಲಾಸಗ್ರಂಥ' ಎಂದಿದೆ. ಇಲ್ಲಿಯ ನಿರ್ವಾಣ ದೇವೇಂದ್ರಕೀರ್ತಿಗಳು ಯಾರು ಎಂಬುದು ಸ್ಪಷ್ಟವಾಗುವುದಿಲ್ಲ.

ಕ್ರಿ. ಶ. ೧೪೪೮ ರಲ್ಲಿ ಪ್ರತಿ ಮಾಡಿದ 'ಜೀವಸಂಬೋಧನೆ'[4] ಸಧ್ಯ ದೊರೆತ ಶ್ರವಣಬೆಳ್ಗೊಳಕ್ಕೆ ಸಂಬಂಧಿಸಿದ ಪ್ರತಿಗಳಲ್ಲಿ ಪ್ರಾಚೀನವಾದುದು. ಅದರ ಕೊನೆಯಲ್ಲಿ 'ಶಕವರುಷ ೧೩೭೦ನೆಯ ವಿಭವಸಂವತ್ಸರದ ವೈಶಾಖಶುಕ್ಲ ದಶಮಿ ವಾರದಲ್ಲು ಹೊನ್ನಪ್ಪಗಳಿಗೆ ಬರೆದ ಜೀವಸಂಬೋಧನೆ ಪುಸ್ತಕ' ಎಂದಿದೆ. ಆದರೆ ಪ್ರತಿಕಾರನ ಸ್ಥಳದ ಉಲ್ಲೇಖವಿಲ್ಲ. ಅದೇ ರೀತಿ 'ಭವ್ಯಾಮೃತ'ದ ಕೊನೆಯಲ್ಲೂ

---

೧. ಬೆಂ. ಸೂ. ಪು. ೩೦೩ ೨. ವ್ಯೆ. ಸೂ. ೬ ಪು. ೪೨೭ ೩. ಶ್ರ. ಬೆ. ಸೂ. ಜೀ. ಪು. ೫೪
೪. ಅದೇ ಪು. ೯

'ಶಾರ್ವರಿ ಸಂವತ್ಸರದ ಆಶ್ವಯುಜ ಶುದ್ಧ ಕುಂಭೋದಯ ದೇವಶೆಟ್ಟಿಮಗ ಬೊಮ್ಮಣ್ಣನು ಬರೆದ ಸಕಲಾಗಮಸಾರದ ಪುಸ್ತಕ' ಎಂದಿದೆ. ಇಲ್ಲಿಯೂ ಪ್ರತಿಕಾರನ ಸ್ಥಳದ ಉಲ್ಲೇಖವಿಲ್ಲ. ಸಧ್ಯ ಇವು ಶ್ರವಣಬೆಳ್ಗೊಳದ ಭಂಡಾರದಲ್ಲಿರುವ ಅಂಶವೊಂದನ್ನು ಬಿಟ್ಟು, ಇವು ಶ್ರವಣಬೆಳ್ಗೊಳದೊಂದಿಗೆ ಹೊಂದಿವ ಉಳಿದ ಸಂಬಂಧವನ್ನು ಗುರುತಿಸುವುದು ಅಸಾಧ್ಯ.

ಈ ಪ್ರತಿಕಾರರು ಒಮ್ಮೊಮ್ಮೆ ತಮ್ಮ ಪ್ರತಿಭೆ ಪಾಂಡಿತ್ಯಗಳಿಗನುಗುಣವಾಗಿ ಹಲವು ಹೊಸಭಾಗಗಳನ್ನು ಮೂಲಕ್ಕೆ ಸೇರಿಸುತ್ತಿದ್ದ ಅಂಶಗಳೂ ಇಲ್ಲಿಯ ಪ್ರತಿಗಳಿಂದ ತಿಳಿದುಬರುತ್ತಿವೆ. ಸೂಕ್ತಿಸುಧಾರ್ಣವದ ಒಂದು ಪ್ರತಿಯ ಕೊನೆಯಲ್ಲಿ 'ಬೆಳಗುಳದ ಪದುಮಣ್ಣೆಯನವರು ಮಾಡಿದ ಕೆಲವು ಪದ್ಯಗಳೂ' ದೊರೆತಿರುವುದು ಇದಕ್ಕೆ ಸಾಕ್ಷಿ.[೧]

ಒಂದು ಪ್ರತಿಯನ್ನು ಮಾಡಿಕೊಂಡ ಮೇಲೆ ಮೂಲಪ್ರತಿಯನ್ನು ಅದಕ್ಕೆ ಸಂಬಂಧಿಸಿದವರಿಗೆ ತಲುಪಿಸಬೇಕಿತ್ತು. ಆ ಪ್ರತಿಯ ಬೇರೆ ಬೇರೆ ಪ್ರತಿಗಳನ್ನು ಇಂಥಿಂಥವರಿಗೆ ಮುಟ್ಟಿಸಬೇಕು ಎಂಬ ಒಪ್ಪಂದವೂ ಉಂಟಾದ ಉಲ್ಲೇಖ ಒಂದು ಪ್ರತಿಯಲ್ಲಿದೆ. ಬೆಳಗುಳದ ಗೊಮ್ಮಟೇಶಮಸ್ತಕಾಭಿಷೇಕ ಚರಿತದ[೨] ಕೊನೆಗೆ 'ಇದರ ನಕಲು ಸ್ವಸ್ತಿಶ್ರೀ ಪಾರಿಶ್ವದೇವರಿಗೆ ॥೧॥ ಉಮ್ಮತ್ತೂರ ಸೂರಪ್ಪನವರಿಗೆ ॥೧॥ ರಾಜೇಶ್ರೀ ಅಮ್ಮಣ್ಣಯವರ ಸನ್ನಿಧಾನಕ್ಕೆ ॥೧॥ ಇಷ್ಟು ಪ್ರತಿಗಳನ್ನು ಬ್ರಹ್ಮಶೆಟ್ಟರು ಮುಟ್ಟಿಸಬೇಕು. ಈ ಪ್ರತಿಯನ್ನು ತಿರುಗಿ ಮೂಡ ಬಿದುರೆಗೆ ಮುಟ್ಟಿಸಬೇಕು ಎಂದು ಬರೆದಿದೆ. ಮೊದಲಿನ ಗರಿಯ ಪೃಷ್ಠಭಾಗದ ಮೇಲೆ "ಶ್ರೀ ಬೆಳಂಗುಳದ ಮಠಕ್ಕೆ ಶ್ರೀ ಮಸ್ತಕಾಭಿಷೇಕದ ಚರಿತೆ ಬಿದುರೆಯಿಂದ" ಎಂದು ಬರೆಯಲಾಗಿದೆ.

ಒಟ್ಟಾರೆ ಶ್ರವಣಬೆಳ್ಗೊಳದ ಮತ್ತು ಅದಕ್ಕೆ ಸಂಬಂಧಿಸಿದ ಹಲವಾರು ಲಿಪಿಕಾರರಿಂದ ಪ್ರತಿಮಾಡಲ್ಪಟ್ಟ ಈ ಹಲವು ಕೃತಿಗಳಿಂದ ಚಾರುಕೀರ್ತಿಮುನಿ, ಇತರ ಮುನಿಗಳು, ಅವರ ಬಿರುದಾವಳಿಗಳು, ಮಠ-ಮಠಗಳಲ್ಲಿದ್ದ ಸಂಬಂಧ, ಪಾರುಪತ್ಯಗಾರ ಚಾಮುಂಡರಾಯವಂಶಸ್ಥ ಶ್ರೀ ಮುದ್ದೇವರಾಜೇಂದ್ರ, ಬಿಳುಕೆರೆಯ ದೇವರಾಜೈಯರಸಿನವರು, ಶ್ರೀ ಅರಮನೆ ಬಸಮ್ಮನವರು, ಬೆಳ್ಗೊಳದ ಇಂದ್ರವರ್ಗದವರು, ಶ್ರೀಮದಭಿನವ ಚಾರುಕೀರ್ತಿಭಂಡಾರ, ಬೇರೆ ಬೇರೆ ನಾಡುಗಳಲ್ಲಿ ಹಬ್ಬಿದ್ದ ಗೊಮ್ಮಟನ ಅಪಾರ ಭಕ್ತಸಮೂಹ ಮೊದಲಾದವುಗಳ ಮೇಲೆ ಬೀಳುವ ವಿಶೇಷ ಬೆಳಕನ್ನು ಕಾಣಬಹುದಾಗಿದೆ.

---

೧. ಮೈ. ಸೂ. ಸಂ. ೪. ಪು. ೪೩ ೨ ಕೊ. ಸೂ. ಸಂ. ೨೯೨

ಅಡಿಟಿಪ್ಪಣಿಯಲ್ಲಿಯ ಸಂಕೇತಗಳ ವಿವರ :

೧) ಶ್ರ. ಬೆ. ಸೂಚೀ—ಶ್ರವಣಬೆಳಗೊಳ ಶ್ರೀ ಜೈನಮಠದ ತಾಡಪತ್ರೀಯ ಗ್ರಂಥಗಳ ವಿವರ.

೨) ಕೊ. ಸೂಚೀ— ಶ್ರೀಲಕ್ಷ್ಮೀಸೇನಭಟ್ಟಾರಕ ಶ್ರೀಮಠ ಕೊಲ್ಲಾಪುರ ಸೂಚೀ (ಅಪ್ರಕಟಿತ)

೩) ಮೈ. ಸೂಚೀ— ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ, ಮೈಸೂರು ವಿಶ್ವವಿದ್ಯಾನಿಲಯ ಸಂ. ೧-೯.

೪) ಮ. ಸೂಚೀ— ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ಕೆನರೀಜ ಮ್ಯಾನು-ಸ್ಕ್ರಿಪ್ಟ್ಸ್ ಇನ್ ದಿ ಗವರ್ನಮೆಂಟ ಓರಿಯಂಟಲ್ ಲಾಯಬ್ರರಿ, ಮಾದ್ರಾಸ್.

೫) ಬೆಂ. ಸೂಚೀ— ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚೀ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

ಜಡಭರತರ ನಾಟಕಗಳು

● ಬಸವರಾಜ ಸಬರದ

ಸ್ವಾತಂತ್ರ್ಯೋತ್ತರ ಕಾಲದ ಕನ್ನಡನಾಟಕಗಳಿಗೆ ತನ್ನದೇ ಆದ ವೈಶಿಷ್ಟ್ಯತೆ ಇದೆ. ಆ ಕಡೆ ಕೈಲಾಸಂ ಈ ಕಡೆ ಶ್ರೀರಂಗ ಇವರಿಬ್ಬರೂ ನಾಟಕ ಕ್ಷೇತ್ರದಲ್ಲಿ ಹೆಮ್ಮರವಾಗಿ ಬೆಳೆದರು. ಪಶ್ಚಿಮದಿಂದ ಹೊಸ ಸಂವೇದನೆಯನ್ನು ಪಡೆದ ಈ ನಾಟಕಕಾರರು ತಮ್ಮ ದೃಷ್ಟಿಯನ್ನು ಸಾಮಾಜಿಕ ಸಮಸ್ಯೆಗಳ ಕಡೆ ಬೀರುತ್ತ ಹೊಸ ಮೌಲ್ಯಗಳಿಗಾಗಿ ಹಾತೊರೆದರು. ಕೈಲಾಸಂ ಮತ್ತು ಶ್ರೀರಂಗ ಅವರ ಮುಂದಿದ್ದ ಮಾದರಿಗಳೆಂದರೆ- ಇಬ್ಸೆನ್ ಬರ್ನಾಡಷಾ ಗಾಲ್ಸ್‌ವರ್ದಿಗಳಾಗಿದ್ದರು. ಹೀಗಾಗಿ ವ್ಯಕ್ತಿಸ್ವಾತಂತ್ರ್ಯ- ವ್ಯಕ್ತಿಗಳ ಪ್ರಾಮುಖ್ಯತೆ ಇವರ ನಾಟಕಗಳಲ್ಲಿ ಅನಿವಾರ್ಯವಾಯಿತು.

ಶ್ರೀರಂಗರ ಮೂಲಕ ಹೊಸ ಆಯಾಮ ಪಡೆದ ಕನ್ನಡ ರಂಗಭೂಮಿಗೆ ಹಳೆಯ ಪೀಳಿಗೆಯವರಾದ ಜಡಭರತರು ಅಪೂರ್ವಕಾಣಿಕೆಗಳನ್ನು ಕೊಟ್ಟಿದ್ದಾರೆ. ಶ್ರೀರಂಗರಂತೆ ಇವರೂ ಕೂಡ ಪಾಶ್ಚಾತ್ಯನಾಟಕಗಳ ಪ್ರಭಾವಕ್ಕೊಳಗಾಗಿದ್ದರೂ, ಅದನ್ನು ಅರಗಿಸಿಕೊಂಡ ರೀತಿ ವಿಶಿಷ್ಟವಾಗಿದೆ.

'ಜಡಭರತ' ಅಂಕಿತದಲ್ಲಿ ಬರೆಯುವ ಜಿ.ಬಿ. ಜೋಶಿಯವರು ಇದುವರೆಗೆ ನಾಲ್ಕುನಾಟಕಗಳನ್ನು ಪ್ರಕಟಿಸಿದ್ದಾರೆ. ೧೯೫೮ ರಲ್ಲಿ ಪ್ರಕಟವಾದ 'ಮೂಕಬಲಿ' ಎಂಬ ಅವರ ಮೊದಲನಾಟಕ ಮತ್ತಷ್ಟು ಬೆಳವಣಿಗೆಯಾಗಿ, ಹೊಸಸಂಸ್ಕಾರಹೊಂದಿ ೧೯೭೩ರಲ್ಲಿ 'ಆ ಊರು ಈ ಊರು' ಎಂಬ ಹೆಸರಿನಲ್ಲಿ ಪ್ರಕಟವಾಗಿದೆ. ೧೯೬೩ ರಲ್ಲಿ "ಕದಡಿದನೀರು" ಎಂಬ ನಾಟಕ 'ಅನಾಮಧೇಯ ಎಂಬ ಅಂಕಿತದಲ್ಲಿ ಪ್ರಕಟವಾಗಿದೆ. ೧೯೭೪ರಲ್ಲಿ "ಸತ್ತವರ ನೆರಳು" ಮತ್ತು ೧೯೭೮ರಲ್ಲಿ "ನಾನೇಬಿಜ್ಜಳ" ಪ್ರಕಟವಾಗಿವೆ. ಮೊದಲಿನ ಎರಡು ನಾಟಕಗಳು ಗ್ರಾಮೀಣಬದುಕಿನ ನೈಜಚಿತ್ರಣವನ್ನು ಒಳಗೊಂಡಿದ್ದರೆ ನಂತರದ ಎರಡು ನಾಟಕಗಳು ಬೇರೆನೆಲೆಯಲ್ಲಿ ಹುಟ್ಟಿದವುಗಳಾಗಿವೆ. 'ಸತ್ತವರ ನೆರಳು' ನಾಟಕ ಜಡಭರತರನ್ನು ನಾಟಕಕಾರರ ಸಾಲಿಗೆ ಸೇರಿಸುತ್ತದೆ. ನಾನೇ ಬಿಜ್ಜಳ ನಾಟಕದ ವಸ್ತು ವಿವಾದಾಸ್ಪದವಾಗಿದ್ದರೆ, ಮೊದಲಿನ ಎರಡು ನಾಟಕಗಳಲ್ಲಿ ಹೇಳಿಕೊಳ್ಳವಂತಹದ್ದೇನೂ ಇಲ್ಲ.

ಶ್ರೀರಂಗರಂತೆ-ಜಡಭರತರೂ ತಮ್ಮ ನಾಟಕಗಳಲ್ಲಿ ನಿರ್ದೇಶಕರಿಗೆ ರಂಗ ಸಜ್ಜಿಕೆಯ ಬಗೆಗೆ ದೀರ್ಘವಾದ ವಿವರಣೆ ನೀಡುತ್ತಾರೆ. ಆದರೆ ಶ್ರೀರಂಗರ ಅನುಭವ ಅಪೂರ್ವವಾದುದು. ಜಡಭರತಲ್ಲಿ ಹೊಸತನಕ್ಕಿಂತ ಪ್ರಾಮಾಣಿಕತೆಯೇ ಹೆಚ್ಚು. ತಮ್ಮ ನಾಟಕಗಳಿಗೆ ಪ್ರೇರಣೆಯಾದವರನ್ನು ತಪ್ಪದೇ ಸ್ಮರಿಸುತ್ತಾರೆ. ಇದು ಅವರ ದೊಡ್ಡಗುಣವನ್ನು ತೋರಿಸುತ್ತದೆ.

ಜಡಭರಿತರು ತಮ್ಮ ನಾಟಕಗಳಲ್ಲಿ ಗಾದೆಮಾತು ಆಡುನುಡಿ–ಪಡೆನುಡಿಗಳನ್ನು ಅತ್ಯಂತ ಅರ್ಥಪೂರ್ಣವಾಗಿ ಬಳಸಿದ್ದಾರೆ. ಉತ್ತರ ಕರ್ನಾಟಕ ಭಾಷೆಯನ್ನು ಬೇಂದ್ರೆ ಕಾವ್ಯದಲ್ಲಿ ಸಮರ್ಥವಾಗಿ ದುಡಿಸಿಕೊಂಡರೆ, ಜಡಭರತರು ಆ ಕೆಲಸವನ್ನು ತಮ್ಮ ನಾಟಕಗಳಲ್ಲಿ ಮಾಡಿದ್ದಾರೆ. ಅವರ ನಾಟಕಗಳ ವಸ್ತು–ತಂತ್ರ-ಪಾತ್ರಗಳು ಸಂಭಾಷಣೆ ಇವುಗಳ ಸ್ಥೂಲ ಪರಿಚಯುವನ್ನಿಲ್ಲಿ ನೋಡಬಹುದಾಗಿದೆ.

ಆ ಊರು ಈ ಊರು : 'ಮೂಕಬಲಿ' ಸಂಸ್ಕಾರಗೊಂಡು ಹದಿನೈದು ವರ್ಷಗಳ ನಂತರ 'ಆ ಊರು ಈ ಊರು' ಆಗಿ ಮಾರ್ಪಾಡಾಗಿದೆ. ಇಲ್ಲಿಯ ಕಥಾವಸ್ತು ಎರಡು ಹಳ್ಳಿಗಳ ನಡುವೆ ಹಾಸುಹೊಕ್ಕಾಗಿರುವ ದಟ್ಟವಾದ ಬದುಕು. ಈ ನಾಟಕದಲ್ಲಿ ಪರಂಪರಾಗತ ಮೌಲ್ಯಗಳ ಸಂಘರ್ಷವಿದೆ. ನಾಟಕದ ಪ್ರಾರಂಭದಲ್ಲಿ ಜಡಭರತರೇ ಹೇಳುವಂತೆ ೧೯೩೦ ರಲ್ಲಿ ಒಂದು ಊರಲ್ಲಿ ಕಣ್ಣೆದುರಿಗೆ ನಡೆದ ಘಟನೆಗಳೇ ಈ ಕೃತಿಗೆ ವಸ್ತುವನ್ನೊದಗಿಸಿವೆ.

ಇಲ್ಲಿಯ ಕಥಾವಸ್ತು ನಾಟಕಕ್ಕಿಂತ ಕಾದಂಬರಿಗೆ ಹೆಚ್ಚು ಸೂಕ್ತವಾಗಿದೆ. ಏಳು ದೃಶ್ಯಗಳಲ್ಲಿ ಬಿಚ್ಚಿಕೊಳ್ಳುವ ಈ ನಾಟಕದಲ್ಲಿ ಹಳ್ಳಿಗಳಲ್ಲಿ ನಡೆವ ಘಟನೆಗಳು ಅತ್ಯಂತ ಸ್ವಜವಾಗಿ ಪ್ರಕಟವಾಗಿವೆ. ಇಲ್ಲಿಯ ಭಾಷೆ-ಶೈಲಿ-ಪಾತ್ರಗಳು ಶುದ್ಧ ಮನೆಯಂಗಳದ ಮಣ್ಣಿನವು. ಅಂತೆಯೇ ನಾಟಕ ಸ್ವಲ್ಪವೂ ಕೃತಕವೆನಿಸದೆ ಉಸಿರಾಟದಷ್ಟೇ ಸಹಜವಾದ ನೆಲದ ಮಾತಿನಲ್ಲಿ ಧಿಮಿಗುಡುತ್ತಾ ಸಂಭ್ರಮಿಸುತ್ತದೆ.

'ನಾಗರಕೋಟಿ' ಆ ಊರಾದರೆ 'ಹಾಲಳ್ಳಿ' ಈ ಊರು. ಹರಿಯುತ್ತಿರುವ ನದಿಯೊಂದು ಇವೆರಡೂ ಹಳ್ಳಿಗಳನ್ನು ಅಕ್ಕ-ಪಕ್ಕದಲ್ಲಿರಿಸಿಕೊಂಡು ಮುಂದೆ ಸಾಗಿದೆ. ನಿರಂತರವಾಗಿ ಹರಿಯುವ ನದಿಯಂತೆ ಇವೆರಡೂ ಹಳ್ಳಿಗಳ ದಟ್ಟವಾದ ಬದುಕು ನಾಟಕದ ತುಂಬಾ ವ್ಯಾಪಿಸಿದೆ.

ನಾಗರಕೋಟಿಯ ಗೋಪಾಳ ನಾಯಕರು ಹಾಲಳ್ಳಿಯ ರಾಮಣ್ಣನ ಮಗಳಾದ ಸುಶೀಲಿಯನ್ನು ಸೊಸೆಯನ್ನಾಗಿ ತಂದುಕೊಂಡವರು. ಗೋಪಾಳ ನಾಯಕರ ಮೊದಲನೇ ಮಗ ವಾಸು ಮುಗ್ಧ, ಎರಡನೆಯ ಮಗ ಬಂಡಿ ಅರೆಹುಚ್ಚ.

ನಾಯಕರ ಹೆಂಡತಿ ಗಂಗಾಬಾಯಿ, ಗಂಗಾಬಾಯಿ ಗೆಳತಿ ಯಮುನಕ್ಕ, ಬಾಯಿಯವರ ಸಾಕುಮಗ ಶ್ಯಾಮ, ನಾಯಕರ ಸ್ನೇಹಿತ ನಾನಾ—ಈ ಮುಂತಾದ ಪಾತ್ರಗಳು ನಾಗರಕೋಟಿಗೆ ಸಂಬಂಧಿಸಿದವುಗಳು. ರಾಮಣ್ಣ ಆತನ ಹೆಂಡತಿ ಸೀತಕ್ಕ, ಆಕೆಯ ಗೆಳತಿ ಸುಬ್ಬಕ್ಕ, ರಾಮಣ್ಣನ ಸ್ನೇಹಿತ ಶೀನಪ್ಪ, ರಾಮಣ್ಣನ ರೈತ-ರುದ್ರಪ್ಪ, ಭರಮಪ್ಪ-ನಿಂಗವ್ವ–ಮಲ್ಲ ಮುಂತಾದ ಪಾತ್ರಗಳು ಹಾಲಳ್ಳಿಗೆ ಸಂಬಂಧಿಸಿದವು. ಸುಶೀಲಿ ಹಾಲಳ್ಳಿಯ ರಾಮಣ್ಣನ ಮಗಳಾಗಿ, ನಾಗರಕೋಟಿ ಗೋಪಾಳ ನಾಯಕರ ಸೊಸೆಯಾಗಿ ಎರಡೂ ಹಳ್ಳಿಗಳ ಬದುಕಿಗೆ ಸ್ಪಂದಿಸಿದವಳು.

ಗೋಪಾಳ ನಾಯಕರು ಹಾಗೂ ರಾಮಣ್ಣ ಇವರಿಬ್ಬರ ಮನೆತನದ ಕಥೆಯೇ ಪ್ರಮುಖವಾದರೂ ಎರಡೂ ಹಳ್ಳಿಗಳು ಇಲ್ಲಿ ನಡೆವ ಹಲವಾರು ಘಟನೆಗಳಲ್ಲಿ ಮಾತನಾಡುತ್ತವೆ. ಹೀಗಾಗಿ ಎರಡುಮನೆತನಗಳ ಬದುಕು ಎರಡು ಹಳ್ಳಿಗಳನ್ನು ಸುತ್ತಿಕೊಂಡು ಇಡೀದೇಶವನ್ನೇ ವ್ಯಾಪಿಸುವದರಿಂದ ನಾಟಕದ ವಸ್ತು ವೈವಿಧ್ಯಪೂ-ಸಂಕೀರ್ಣವೂ ಆಗುವದರೊಂದಿಗೆ ಅನೇಕ ಸಾರ್ವಕಾಲಿಕ ಸತ್ಯಗಳನ್ನು ಪ್ರಕಟಿಸುತ್ತದೆ. ಜಡಭರತರು ಹಳ್ಳಿಗರ ಜೀವನವನ್ನು ಈ ನಾಟಕದಲ್ಲಿ ಜೀವಂತವಾಗಿ ಹಿಡಿದಿಟ್ಟಿದ್ದಾರೆ.

ಗೋಪಾಳನಾಯಕ ಸಂಭಾವಿತ–ಸಜ್ಜನಮನುಷ್ಯ, ಆದರೆ ಹೆಂಡತಿ ಗಂಗಾಬಾಯಿಗೆ ಊರ ಉಸಾಬರಿಯೆಲ್ಲಾ ಬೇಕು. ನಾಟಕದ ಭಾಷೆಯಲ್ಲಿ ಹೇಳುವದಾದರೆ ಅತ್ಯಂತ ಖಡಕ್ಕಾದ ಅತ್ತೆ ಈಕೆ. ಈಕೆ ಆಡಿಸಿದಂತೆ ಈ ಮನೆತನದ ಪಾತ್ರಗಳು ಆಡಬೇಕು. ದಾಸು ಹರೆಯದ ಮಗನಾಗಿ ಬೆಳೆದು ಸುಶೀಲೆಯನ್ನು ಮದುವೆಯಾಗಿದ್ದರೂ ತಾಯಿಗೆ ಅಂಜಿನಡೆಯುವ ಮುಗ್ಧ. ಗಂಗಾಬಾಯಿಯ ಮನಸ್ಸಿಗೆ ತಕ್ಕಂತೆ ನಡೆಯುವ ಸಾಕುಮಗ ಶ್ಯಾಮ ಮಾತ್ರ ಆಕೆಗೆ ಅಚ್ಚು-ಮೆಚ್ಚು. ಈಕೆಗೆ ಸಂಪತ್ತು ಆಭರಣಗಳೆಂದರೆ ಪ್ರಾಣ. ಅಷ್ಟು ಆಸೆಗಾಗಿಯೇ ಹಾಲಳ್ಳಿಯ ರಾಮಣ್ಣನ ಮಗಳನ್ನು ಸೊಸೆಯಾಗಿ ತಂದದ್ದು. ಆದರೆರಾಮಣ್ಣನಿಗೆ ಸುಶೀಲೆಹುಟ್ಟಿದ ಹದಿನಾರು ವರುಷಕ್ಕೆ ಬಂದು ಗಂಡು ಮಗು ಹುಟ್ಟಿದಾಗ ಗಂಗಾಬಾಯಿಯ ಗೋಳು ಹೇಳತೀರದು. ನಿತ್ಯವೂ ಸೊಸೆಗೆ ಅತ್ತೆಕಾಟ ತಪ್ಪಿದ್ದಲ್ಲ. ಇದೆಲ್ಲಾ ತಿಳಿದಿದ್ದರೂ ರಂಪಾಟವನ್ನು ಬಯಸದ ನಾಯಕರು ತಾಂಬೂಲ ತಿನ್ನುವದರಲ್ಲೇ ತಲ್ಲೀನ.

ಎರಡೂ ಹಳ್ಳಿಗಳ ವೈಮನಸ್ಸಿನಿಂದ ಜಗಳಗಳಾಗುತ್ತವೆ. ಹೆಣಗಳು ಬೀಳುತ್ತವೆ. ರಾಮಣ್ಣನ ಗಂಡು ಕೂಸು ಸತ್ತು ಮತ್ತೆಮೂರುವರ್ಷಕ್ಕೆ ಮತ್ತೊಂದು ಗಂಡು ಹುಟ್ಟುತ್ತದೆ. ರಾಮಣ್ಣನ ಹೆಂಡತಿ ಸೀತಕ್ಕ ಸಾಯುತ್ತಾಳೆ. ಇವೆಲ್ಲಾ ಹಾಲಳ್ಳಿಯಲ್ಲಾಗುವ ತೀವ್ರವಾದ ಬದಲಾವಣೆಗಳು. ತಮ್ಮ ಹುಟ್ಟಿದ ಸುದ್ದಿ ಕೇಳಿ ತವರಿಗೆ

ಹೋದಸುಶೀಲಿಯನ್ನು ಗಂಗಾಬಾಯಿಹೊರತಳ್ಳಿ ವಾಸುವಿಗೆ ಮತ್ತೊಂದು ಹೆಣ್ಣು ನೋಡಿಮದುವೆಮಾಡುವ ಆತುರದಲ್ಲಿರುತ್ತಾಳೆ. ವ್ಯವಹಾರಬುದ್ಧಿಯ ಶೀನಪ್ಪ ರಾಮಣ್ಣನ ಎಲ್ಲಾಆಭರಣಗಳೊಂದಿಗೆ ಸುಶೀಲಿಯನ್ನು ತಂದೆಗಂಡನ ಮನೆಗೆ ಒಪ್ಪಿಸುತ್ತಾನೆ. ರಾಮಣ್ಣನ ಹಣ–ಆಭರಣ ಗಂಗಾಬಾಯಿಯಲ್ಲಿ ಆಸೆ ಹುಟ್ಟಿಸಿದರೂ ಸುಶೀಲಿಯನ್ನು ಮನೆಗೆಕರೆದುಕೊಳ್ಳಲು ಆಕೆಯಮನಸ್ಸು ಒಪ್ಪುವದಿಲ್ಲ. ಆದರೆ ವಾಸುಗೆ ಇದೆಲ್ಲವನ್ನು ನೋಡಿ ಸಹನೆಮೀರುತ್ತದೆ ಅಂಜುಬುರಕನಾಗಿದ್ದ ಆತ ಗಟ್ಟಿಯಾಗುತ್ತಾನೆ. ತಾಯಿಹಾಕಿದ ಗೆರೆದಾಟುತ್ತಾನೆ. ಆಕೆಕಟ್ಟಿರುವ ಸಾಂಪ್ರದಾಯಿಕ ಕೋಟೆಯನ್ನು ಕಿತ್ತೊಗೆದು ಹೆಂಡತಿಗಾದ ಅನ್ಯಾಯಕ್ಕೆ ಪ್ರತಿಭಟಿಸುತ್ತಾನೆ. ಕೊನೆಗೆ ಗಂಗಾಬಾಯಿ ಮೌನವಾಗುತ್ತಾಳೆ.

ಈ ನಾಟಕದ ವಸ್ತುವಿನಲ್ಲಿ ಹೇಳಿಕೊಳ್ಳುವಂತಹ ವಿಶೇಷ ಸಂಗತಿ ಇರದಿದ್ದರೂ ಬದುಕನ್ನು ಸ್ವಾಗತಿಸುವ, ಅದನ್ನು ಜೀರ್ಣಿಸಿಕೊಂಡು ಬೆಳೆಯುವ ಅನೇಕ ಅಂಶ-ಗಳನ್ನು ನಾಟಕ ಹೇಳುತ್ತದೆ. ಹಳೆ ಹೊಸ ಮೌಲ್ಯಗಳ ಸಂಘರ್ಷ ನಡೆದು, ಹೊಸ ಮೌಲ್ಯಗಳ ಹುಟ್ಟಿಗೆ ನಾಂದಿಯಾಗುತ್ತದೆ. ಇಷ್ಟೆಲ್ಲಾ ರಂಬಾಟದ ನಡುವೆಯೂ ನಗುನಗುತ್ತಲೇ ಮೌನವಾಗಿರುವ ನಾಯಕರು, ಬದುಕಿನಲ್ಲಿ ತನ್ನವರನ್ನು ಕಳೆದುಕೊಂಡು ಇಡೀ ಊರಿಗೆ ಉಪಕಾರ ಮಾಡಿ ಶೀನಪ್ಪ, ಎಲ್ಲ ಕಷ್ಟಗಳನ್ನು ನೀರುಕುಡಿ–ದಂತೆ ನುಂಗಿ ಬದುಕುವ ರಾಮಣ್ಣ ಬದುಕನ್ನು ತನ್ನ ತಾತ್ವಿಕ ಹಾಡುಗಳ ಮುಖಾಂತರ ಹೊರಹಾಕುವ ರೈತ ರುದ್ರಪ್ಪ ಗಮನ ಸೆಳೆಯುತ್ತಾರೆ. ನೋವು-ಅವಮಾನಗಳನ್ನು ಸಹಿಸಿ–ಸಹಿಸಿ ಕೊನೆಗೆ ಪ್ರತಿಭಟಿಸಿ ಸಿಡಿದೇಳುವ ವಾಸು ತೀರಾ ಮುಖ್ಯವಾಗುತ್ತಾನೆ.

ಐವತ್ತಾರು ವರ್ಷಗಳ ಹಿಂದೆ ನಡೆದ ಇಂತಹ ಘಟನೆಗಳಲ್ಲಡಗಿದ ಅನ್ಯಾಯಂದ ವಿರುದ್ಧ ನಡೆವ ಪ್ರತಿಭಟನೆಯ ಕಿಚ್ಚು ಇಂದಿಗೂ ಧಿಮಿಗುಡುತ್ತದೆ. ಆದ್ದರಿಂದ ಜಡಭರತರು ನಮಗಿಂದಿಗೂ ಪ್ರಸ್ತುತರಾಗುತ್ತಾರೆ. ನಾಟಕದಲ್ಲಿ ಪ್ರಾರಂಭದಿಂದ ಕೊನೆಯವರೆಗೂ ಕೆಟ್ಟು ನಿಂತಿರುವ ನಾಯಕರ ಮನೆಯ ಗಡಿಯಾರ ವಾಸುವಿನ ಪಾತ್ರದ ಬೆಳವಣಿಗೆಯೊಂದಿಗೆ ಚಲನಶೀಲತೆಯನ್ನು ಪಡೆಯುತ್ತದೆ. ಜಡತ್ವವನ್ನು ಕಳೆದು–ಕೊಂಡು ಕ್ರಿಯಾತ್ಮಕವಾಗಿ ಬೆಳೆವ ಪಾತ್ರಗಳು ಸಾಂಪ್ರದಾಯಿಕ ಶಕ್ತಿಯದುರಂತವನ್ನು ಸಾರುತ್ತವೆ. ಅನೇಕ ಗಾದೆ ಮಾತುಗಳನ್ನು ನಾಟಕಕಾರರು ಅರ್ಥಪೂರ್ಣವಾಗಿ ಬಳಸಿಕೊಂಡಿದ್ದಾರೆ.

"ಅಟ್ಟಮ್ಯಾಲ ಒಲಿ ಉರೀತು ಕೊಟ್ಟಮ್ಯಾಲ ಅಳಿಯಉರದ"
"ಮನಕಂಜದಿದ್ದರೂ ಜನಕಾರೆ ಅಂಜಿ ನಡಿಬೇಕು"

"ಹಣ್ಣೆಲಿಕಂಡು ಹಸಿರೆಲಿ ನಗುತಿದ್ದವಂತ"
"ಕಟ್ಟಿದ ಬುತ್ತಿ ಕಲಿಸಿದ ಮಾತು ಎಷ್ಟು ದಿವಸ ಉಳದಾವು"

ಈ ಮುಂತಾದ ಗಾದೆಗಳು ನಾಟಕದ ಸತ್ವವನ್ನು ಹೆಚ್ಚಿಸಿವೆ. "ಗಿಡಾ ಏರೋದು ಸುಲಭ. ಇಳಿಯೋದು ಕಷ್ಟ. ಹತ್ತೋಮುಂದ ಕಾಣೋದಾರಿ ಇಳಿಯೋ ಮುಂದ ಕಾಣೂದಿಲ್ಲ. ಅಂತಃ ಜಾರೋದು ಹೆಚ್ಚು" ಶೀನಪ್ಪನ ಈ ಮಾತುಗಳು ಬದುಕಿನ ಗಾಢ ಅನುಭವದ ಪಕ್ವತೆಯನ್ನು ಸೂಚಿಸುತ್ತವೆ.

ಪ್ರಯೋಗದ ದೃಷ್ಟಿಯಿಂದ ನಾಟಕ ತುಂಬಾ ದೊಡ್ಡದು. ಇದರ ಪ್ರದರ್ಶನಕ್ಕೆ ಕನಿಷ್ಠ ಐದು ತಾಸುಗಳ ಅವಧಿಬೇಕು. ಅನೇಕ ಕಡೆ ಘಟನೆಗಳು ಅನವಶ್ಯಕವಾಗಿ ಬೆಳೆದುಕೊಂಡಿವೆ. ಇಲ್ಲಿ ಹೆಸರಿಸದ ಇನ್ನೂ ಕೆಲ ಪಾತ್ರಗಳು ನಾಟಕದ ಕ್ರಿಯೆಗೆ ಸ್ಪಂದಿಸುವದೇ ಇಲ್ಲ. ಮಾತುಗಳೇ ಹೆಚ್ಚಾಗಿ ಕ್ರಿಯೆ ಕಡಿಮೆಯಾಗುತ್ತದೆ ನಾಟಕ ಓದುತ್ತಾ ಹೋದಂತೆ ಕಾದಂಬರಿ ಓದಿದಂತಾಗುತ್ತದೆ. ಪ್ರಯೋಗದ ದೃಷ್ಟಿಯಿಂದ ಜಡಭರತರ ಇತಿಮಿತಿಗಳೇನೇ ಇದ್ದರೂ ಇದೊಂದು ಗಮನಾರ್ಹವಾದ ಕೊಡುಗೆ. ಹಳ್ಳಿಗರ ಬದುಕಿನ ವಾಸ್ತವ ಚಿತ್ರಣ ದಟ್ಟವಾಗಿ ಮೂಡಿಬಂದಿದೆ.

ಕದಡಿದ ನೀರು : 'ಕದಡಿದ ನೀರು' ಅನಾಮಧೇಯ ಎಂಬ ಅಂಕಿತದಲ್ಲಿ ಪ್ರಕಟವಾದ ಜಡಭರತರ ಎರಡನೇ ನಾಟಕ. ೧೯೬೩ರಲ್ಲಿ ಪ್ರಕಟವಾದ ಈ ನಾಟಕ ದಲ್ಲಿ 'ಆ ಊರು ಈ ಊರು' ನಾಟಕದಂತೆ ಗ್ರಾಮೀಣ ಜೀವನದ ಬದುಕು ಇದೆ. ಕರುಣರಸವೇ ಪ್ರಧಾನವಾದ ಈ ನಾಟಕದಲ್ಲಿ ಉತ್ತರ ಕರ್ನಾಟಕದ ಹಳ್ಳಿಗಾಡಿನ ಒಂದು ಸಾಮಾನ್ಯ ಕುಟುಂಬದ ದುರಂತ ಚಿತ್ರಣವಿದೆ. ಇಲ್ಲಿ ನಾಟಕ ಕ್ರಿಯೆಗಿಂತ ಪ್ರತಿ ಪಾತ್ರದಲ್ಲೂ ಹರಿದಾಡುವ ಜೀವನೋತ್ಸಾಹ ತುಂಬ ಮುಖ್ಯವಾಗುತ್ತದೆ.

ಈ ನಾಟಕದ ಪ್ರಮುಖಪಾತ್ರವಾದ ಶಿವಪ್ಪ ಒಬ್ಬ ಸಾಮಾನ್ಯ ರೈತ. ಈತ ಗಾಂಧೀಭಕ್ತ: ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿ ಕಾಲು ಕಳೆದುಕೊಂಡು ಬಂದು ಮನೆ ಸೇರಿದ ರಾಷ್ಟ್ರಪ್ರೇಮಿ. ಅತ್ಯಂತ ಪ್ರಾಮಾಣಿಕನಾದ ಈತನ ಕುಟುಂಬದ ಸುತ್ತ ಕತೆಹೆಣೆಯಲ್ಪಟ್ಟಿದೆ. ಮನಸಿಚ್ಚೆಯ ಶರಣನಾದ ಗವಿಸಿದ್ಧಪ್ಪನ ಪಾತ್ರಕ್ಕೆ ಸಂಭಾಷಣೆ ಗಳಿಲ್ಲವಾದರೂ ಪ್ರಾರಂಭದಲ್ಲೇ ಬಂದು ಮಾಯವಾಗುವ ಈ ಪಾತ್ರದ ಧ್ವನಿ ನಾಟಕದ ತುಂಬಾ ವ್ಯಾಪಿಸಿದೆ. ಈತ ಶಿವಪ್ಪನ ಚಪ್ಪರದ ಕಂಬವೊಂದಕ್ಕೆ ಬೀಸಿ ಹೊಡೆದು ಹೋಗುವದು, ಇದರಿಂದ ತನ್ನ ಮನೆತನಕ್ಕೆ ಕೇಡುಬರುವದೆಂದು ಶಿವಪ್ಪ ನಂಬುವದು, ಈ ನಂಬುಗೆ ಕೊನೆಗೆ ಸತ್ಯವಾಗುವದು—ಇದು ಈ ನಾಟಕದ ವಸ್ತು. ಶಿವಪ್ಪನ ಮಗಳು ಮಲ್ಲಿ ಒಲ್ಲದಮನಸ್ಸಿನಿಂದ ಉತ್ತರಭೂಪನಂತಿದ್ದ ಬಂಗಾರ ಶೆಟ್ಟಿ

ಯನ್ನು ಒಪ್ಪುವದು; ಊರನ್ನೇ ಹಾಳುಮಾಡಿದ ಪುಢಾರಿಯಾದ ಗೂಳಪ್ಪನನ್ನು ಶಿವಪ್ಪನ ಮಗ ಶಂಕರ ಗುಂಡಿಟ್ಟುಕೊಲ್ಲುವದದು ಇಲ್ಲಿನ ಪ್ರಮುಖ ಘಟನೆಗಳು. ಕೊಲೆಯ ಆರೋಪ ಮೊದಲು ಶೆಟ್ಟಿಯ ಮೇಲೆ ಬಂದಾಗ ನಾಟಕ ಒಂದು ರೀತಿಯ ಫತ್ತೇದಾರಿ ಫೋಜುಕೊಟ್ಟು ಕೊನೆಗೆ ಸೋಲುತ್ತದೆ. ರಾಚ್ಯಾನಪಾತ್ರ ಗವಿಸಿದ್ಧಪ್ಪ ಶರಣನ ಪ್ರತಿರೂಪವಾಗಿ ಬೆಳವಣಿಗೆಯಾಗುತ್ತದೆ. ಶಿವಪ್ಪನ ಹೆಂಡತಿಯಾದ ಪಾರ್ವತೆವ್ವನ ಪಾತ್ರಕ್ಕೆ ಯಾವ ಅಸ್ತಿತ್ವವೂ ಇಲ್ಲ.

ಶರಣ–ಸಂತರು ಹೇಳಿಹೋದ ಮಾತುಗಳನ್ನು ಹಳ್ಳಿಯ ಜನ ಹೇಗೆ ನಂಬಿಕೊಂಡಿರುತ್ತಾರೆ ಎಂಬುದನ್ನು ಚಿತ್ರಿಸುತ್ತ ನಾಟಕ ಕೊನೆಗೆ ಸಂಪ್ರದಾಯದ ಜಾಡು ಹಿಡಿಯುತ್ತದೆ. ಈ ನಾಟಕದಲ್ಲಿ ವಿಶೇಷ ಸಂಗತಿಗಳೇನೂ ಇಲ್ಲ. ಕೇವಲ ಶಿವಪ್ಪನ ಮನೆತನದ ದೈನಂದಿನ ಘಟನೆಗಳನ್ನು ವಿವರಿಸುತ್ತಾ ನಾಟಕ ಅನವಶ್ಯಕವಾಗಿ ಬೆಳೆದು ಬಿಟ್ಟಿದೆ. ನಾಟಕದ ವಸ್ತುವಿನಲ್ಲಿ ತಾಕತ್ತಿಲ್ಲ. ಪುಢಾರಿ ಗೂಳಪ್ಪನ ಕೊಲೆಯನ್ನು ತಾನೇ ಮಾಡಿರುವದಾಗಿ ಶಂಕರ ಒಪ್ಪಿಕೊಂಡಾಗ ನಾಟಕ ಮುಕ್ತಾಯವಾಗುತ್ತಿದೆ. ದೃಶ್ಯಗಳ ನಡು-ನಡುವೆ ನಾಟಕಕಾರರು ಸೂಚಿಸಿರುವ "ತಾಸಿನ ನಂತರ". "ಹದಿನೈದು ದಿನಗಳ ನಂತರ" ಎಂಬಂತಹ ಸಲಹೆಗಳಿಗೆ ಯಾವ ಅರ್ಥವೂ ಇಲ್ಲ. ವಸ್ತು–ತಂತ್ರ–ಅಭಿವ್ಯಕ್ತಿಗಳಲ್ಲಿ ಯಾವ ಹೊಸತನವೂ ಇಲ್ಲದ್ದರಿಂದ ಒಂದು ರೀತಿಯ ಕಂಪನಿ ನಾಟಕಗಳ ಜಾಡುಹಿಡಿದಂತೆನಿಸುತ್ತದೆ. ಆದರೆ ನಾಟಕದುದ್ದಕ್ಕೂ ತುಂಬಿರುವ ಉತ್ತರ ಕರ್ನಾಟಕದ ಆಡುಮಾತು–ಪಡೆನುಡಿಗಳು ತುಂಬಾ ಗಮನ ಸೆಳೆಯುತ್ತವೆ.

ಸತ್ತವರ ನೆರಳು : 'ಸತ್ತವರನೆರಳು' ಜಡಭರತರ ಅತ್ಯಂತಮಹತ್ವದ ನಾಟಕ. ಅವರೊಬ್ಬ ಸಮರ್ಥ ನಾಟಕಕಾರರೆನ್ನಲಿಕ್ಕೆ ಈ ನಾಟಕವೊಂದೇಸಾಕು. ವಸ್ತು ತಂತ್ರ–ಭಾಷೆಯ ದೃಷ್ಟಿಯಿಂದಂತೂ ಇದು ಗಮನಾರ್ಹಕೃತಿ ಮಾತು. ಕ್ರಿಯೆಯಾಗಿ ದೃಶ್ಯಗಳತುಂಬಾ ವಿಜೃಂಭಿಸುತ್ತದೆ. ಗುಂಪುಗಳಮೂಲಕ ನಾಟಕದ ವಸ್ತು ಬಿಚ್ಚಿಕೊಳ್ಳುತ್ತಾ ಹೋಗುವದು ನಾಟಕಕಾರರ ತಂತ್ರಕೌಶಲಕ್ಕೆ ಸಾಕ್ಷಿಯಾಗಿದೆ.

ಇಲ್ಲಿಯವಸ್ತು ನಮ್ಮ ದೇಶಕ್ಕೆ ಮಾತ್ರ ವಿಶಿಷ್ಟವಾದುದು. ಇಲ್ಲಿ ಪಾಶ್ಚಾತ್ಯರ ಪ್ರಭಾವ ಇಲ್ಲ. ಮನುಷ್ಯನವೈಯಕ್ತಿಕ ಜೀವನಕ್ಕೂ–ಧರ್ಮಕ್ಕೂ ಇರುವ ಸಂಬಂಧವನ್ನು ಕಟ್ಟಿಕೊಂಡು ಅರಳುವ ಈ ನಾಟಕ ಮನುಷ್ಯನ ಮೂಲಭೂತ ಸಮಸ್ಯೆಯತ್ತ ದೃಷ್ಟಿಹಾಯಿಸಿದೆ.

ಈ ನಾಟಕದ ಮುಖ್ಯಕೇಂದ್ರಬಿಂದು ಮಠ. ಮಠ ಇಲ್ಲಿಪ್ರತೀಕವಾಗಿ–ಸಂಕೇತವಾಗಿ-ಸಂಕೇತವಾಗಿ ಬೆಳೆದು ಕೊನೆಗೆ ಬದುಕನ್ನು ಧ್ವನಿಸುವ ಪ್ರಮುಖ ಅಂಗವಾಗುತ್ತದೆ. ಇಹ–ಪರಗಳ ನಡುವೆ ಕೊಂಡಿಯಾಗಿರುವ ಈ ಮಠ ಧರ್ಮ-ಕರ್ಮ, ಪಾಪ

ಪುಣ್ಯ, ಸತ್ಯ–ಸುಳ್ಳು, ದೇವರು, ಮನುಷ್ಯ ಈ ಮುಂತಾದ ದ್ವಂದ್ವಾತ್ಮಕವಾದ ವಿಷಯಗಳತ್ತ ಗಮನಹರಿಸುತ್ತದೆ. ಮಠ ಈ ವ್ಯವಸ್ಥೆಯ ಭಾಗವಾಗಿ, ಒಂದರ್ಥದಲ್ಲಿ ಮಠವೇ ವ್ಯವಸ್ಥೆಯ ಪ್ರತೀಕವಾಗಿ; ಇಹ–ಪರಗಳೆರಡರಲ್ಲಿ ಸೋರಿಹೋದ ಬದುಕನ್ನು ಧ್ವನಿಸುವುದರಿಂದ ನಾಟಕ ತೀರಾ ಮಹತ್ವದ್ದಾಗುತ್ತದೆ.

ಈ ಮಠದ ಜಗತ್ತಿನಲ್ಲಿ ಅಡಗಿರುವ ಆಸೆ–ಆಮಿಷ, ಸ್ವಾರ್ಥ-ಹೊಟ್ಟೆಕಿಚ್ಚು, ಅಧಿಕಾರ-ಅಂತಸ್ತು ಭೂತಾಕಾರವಾಗಿ ಬೆಳೆಯುತ್ತಾ ಜನಹಿತಕ್ಕಾಗಿ ಹುಟ್ಟಿಕೊಂಡು ಮಠ ಹುತ್ತವಾಗುತ್ತದೆ ಇರುವೆ ಕಟ್ಟಿದ ಹಾವು ಹುತ್ತದಲ್ಲಿ ಹೊಕ್ಕು ಬುಸುಗುಡುವಂತೆ ಸಾತ್ವಿಕ ಸ್ವಾಮಿಯೊಬ್ಬ ಕಟ್ಟಿದ ಮಠದಲ್ಲಿ ಮಠದ ದಿವಾಣ ಹಾಗೂ ಪ್ರತಿಷ್ಠಿತ ಶಿಷ್ಯರು ಹಾವಾಗಿ ಹರಿದಾಡುತ್ತಾರೆ.

ವಿದ್ಯಾನಿಧಿ ತೀರ್ಥರು ಈ ಮಠದ ಹಿರಿಯಸ್ವಾಮಿಗಳು ಒಳ್ಳೆಯ ರೀತಿಯಲ್ಲಿ ಮಠವನ್ನು ಕಟ್ಟಿ ಬೆಳೆಸಿದ ಸಾತ್ವಿಕ ಜೀವಿಗಳು. ತಮ್ಮ ಸಹಪಾಠಿಗಳು-ಸದಾಚಾರಿಗಳೂ ಆದ ಹಿರೇಆಚಾರ್ಯರನ್ನು ಸಂಸ್ಥಾನದ ಪೀಠಸ್ಥರನ್ನಾಗಿ ಮಾಡಿ ಕೊನೆಯುಸಿರೆಳೆಯಬೇಕೆಂಬುದು ಅವರ ಆಸೆ. ಆದರೆ ಈ ಮಠದ ದಿವಾಣ ಕೃಷ್ಣಾಚಾರ್ಯರು ಇದನ್ನು ವಿರೋಧಿಸಿ ಮಠವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಹಿರಿಯ ಸ್ವಾಮಿಗಳನ್ನು ನೋಯಿಸಿ ನಾರಾಯಣನಂತಹ ಬಲಿಪಶುವನ್ನು ಮಠದ ಪೀಠಾಧೀಶನನ್ನಾಗಿ ಮಾಡಿ ಸ್ವಾರ್ಥಸಾಧಿಸಿಕೊಳ್ಳುತ್ತಾರೆ. ಸಾತ್ವಿಕವಾಗಿ ಅರಳಬೇಕಾಗಿದ್ದ ಮಠ ಕೃಷ್ಣನಂತವರ ದರ್ಪ, ಅಹಂಕಾರಗಳೆದುರು ತತ್ತರಿಸಿ ಹೋಗಿ ತಾಮಸದ ಕೂಡವಾಗುತ್ತದೆ. ಕೃಷ್ಣಾಚಾರ್ಯರ ಸಹಪಾಠಿಯಾಗಿದ್ದು ನಂತರ ಭ್ರಮಿಷ್ಟನಾದ ಅಳಪುಡಿ ಶೀನನ ಸಂಭಾಷಣೆಗಳಲ್ಲಿ ನಾಟಕಕಾರರು ವಿಡಂಬನೆ ತುಂಬಿದ್ದಾರೆ. ಈತ ಆಡುವ ಪ್ರತಿಯೊಂದು ಮಾತೂ ಈ ವ್ಯವಸ್ಥೆಯ ಕೃಷ್ಣನಂತವರಿಗೆ ಚಾಟಿಯ ಏಟಿನಂತಿವೆ. ನಂತರ ಪೀಠವೇರಿದ ನಾರಾಯಣ–ಶ್ರೀಪಾದರು ಕೊನೆಯ ಸನ್ನಿವೇಶದಲ್ಲಿ ಜರ್ಮನ್ ತರುಣಿಯೊಂದಿಗೆ ನಡೆಸಿದ ವಾದ–ವಿವಾದ-ಸಂವಾದಗಳು ಅರ್ಥಪೂರ್ಣವಾಗಿವೆ.

ವ್ಯವಸ್ಥೆಯ ಪ್ರತೀಕವಾದ ಮಠದ ತೊಡಕನ್ನು ಚಿತ್ರಿಸುವ ಈ ನಾಟಕ ಬೆಳೆದಂತೆಲ್ಲಾ ಸಂಕೀರ್ಣವಾಗುತ್ತಾ ಹೋಗುತ್ತದೆ. ಇಲ್ಲಿ ಬಳಸಿದ ಮಠ, ವೃಂದಾವನ, ಧ್ವನಿವರ್ಧಕ, ಗುಂಪುಗಳು, ಅಡವಿ ದಾರಿ ಮುಂತಾದ ಸಮಸ್ಯೆ ಅರ್ಥಪೂರ್ಣವಾಗಿ ಧ್ವನಿಸುತ್ತವೆ. ಕೃಷ್ಣಾಚಾರ್ಯರು ಹಿಡಿದು ತಂದ ನಾರಾಯಣ ಹೆಚ್ಚು ಮಾತುಗಳನ್ನಾಡದಿದ್ದರೂ ಈ ನಾಟಕದ ಸಂಘರ್ಷಕ್ಕೆ ಕಾರಣನಾಗುತ್ತಾನೆ. ಉಳಿದೆಲ್ಲಾ ಪಾತ್ರಗಳು ಸಂಘರ್ಷದ ಬೆಳವಣಿಗೆಯಾಗುತ್ತಾರೆ. ಒಂದರ್ಥದಲ್ಲಿ ಶೀನ ಇದಕ್ಕೆ ಹೊರತಾಗಿದ್ದರೂ, ಮತ್ತೊಂದರ್ಥದಲ್ಲಿ ಅವನ ಮಾತುಗಳೇ ಈ ಸಂಘರ್ಷವನ್ನು ಪ್ರಕಟಿಸುವ ಕ್ರಿಯೆಯಾಗುತ್ತವೆ.

ಈ ನಾಟಕ ತಂತ್ರದ ದೃಷ್ಟಿಯಿಂದ ತೀವ್ರವಾದ ಗಮನ ಸೆಳೆಯುತ್ತದೆ. ಒಂದು ಕಡೆಗೆ ಧ್ವನಿವರ್ಧಕ ಮಠದ ಆಗುಹೋಗುಗಳನ್ನು ತಿಳಿಸುತ್ತದೆ. ಇನ್ನೊಂದು ಕಡೆಗೆ ಜನಸಾಮಾನ್ಯರು ಎರಡು ಗುಂಪುಗಳಾಗಿ ತಮಗೆ ಕಂಡಂತೆ ಮಠದ ಸಂಗತಿಗಳನ್ನು ವ್ಯಾಖ್ಯಾನಿಸುತ್ತಾರೆ. ಇವೆರಡರ ನಡುವೆ ನಾಟಕದ ಪಾತ್ರಗಳು ತಮ್ಮ ಆಟವನ್ನು ಆಡುತ್ತಾ ಮೂಲಭೂತ ಸಮಸ್ಯೆಯು ಎಲ್ಲ ಮಜಲುಗಳೊಂದಿಗೆ ಸಂಭ್ರಮಿಸುತ್ತವೆ. ಇವೆರಡರ ನಡುವೆ ಬತ್ತಿಹೋದ ಸತ್ಯಶೋಧನೆಯನ್ನು ಮಾಡುವ ಕೆಲಸ ಪ್ರೇಕ್ಷಕನ ಮೇಲೆ ಬೀಳುತ್ತವೆ. ಹೀಗಾಗಿ ನಾಟಕ ಸಂಕೀರ್ಣ ಸಮಸ್ಯೆಯನ್ನು ವಸ್ತುವಾಗಿಟ್ಟುಕೊಂಡರೂ ಕೂಡ ಕಲಾತ್ಮಕವಾಗಿ ಅರಳುತ್ತದೆ.

ಈ ನಾಟಕದಲ್ಲಿ ಬರುವ ಹೇರಳವಾದ ಸಂಸ್ಕೃತ ಸಂಭಾಷಣೆಗಳು ನಾಟಕದ ಪ್ರಯೋಗಕ್ಕೆ ಆತಂಕಕಾರಿಯಾಗುತ್ತವೆ. ಸಂಸ್ಕೃತ ಇಲ್ಲಿ ವ್ಯಕ್ತಿ-ವ್ಯಕ್ತಿಗಳನ್ನು ಬೇರ್ಪಡಿಸುವ, ಪ್ರತ್ಯೇಕವಾಗಿಸುವ ಕೆಲಸ ಮಾಡುತ್ತಲೇ ಪೂಜೆಗೊಳ್ಳುತ್ತದೆ. ಸಾಂದರ್ಭಿಕವಾಗಿ ಸಂಸ್ಕೃತ ಸಂಭಾಷಣೆ, ಅನಿವಾರ್ಯವಾದರೂ ಕೂಡ ಕೆಲವು ಕಡೆ ವಿಪರೀತವೆನಿಸುತ್ತವೆ. ಅಂತೆಯೇ ಬಿ. ವ್ಹಿ. ಕಾರಂತರು ಈ ನಾಟಕವನ್ನು ಪ್ರಯೋಗಿಸಿದಾಗ ಸಂಸ್ಕೃತ ಶ್ಲೋಕದ ಬದಲು ದಾಸರ ಹಾಡುಗಳನ್ನು ಉಪಯೋಗಿಸಿಕೊಂಡಿದ್ದರು. ಪ್ರಯೋಗದ ದೃಷ್ಟಿಯಿಂದ ನಾಟಕ ಚಾಲೇಂಜ್ ಆಗಿದೆ.

ಸಾಧನೆಯ ಫಲವಾಗಿ ಬರಬೇಕಾದ ಸನ್ಯಾಸ ಹಿರೇಆಚಾರ್ಯರಿಗೆ ಬರದೆ, ಸಂಸಾರಸ್ಥನಾಗಿ ಬದುಕಲು ಆಸೆಹೊಂದಿದ ನಾರಾಯಣನ ಕೊರಳಿಗೆ ಜೋತು ಬೀಳುತ್ತದೆ. ಕೃಷ್ಣಾಚಾರ್ಯರಂತಹ ಸ್ವಾರ್ಥಿಗಳಿಂದ ಮಠ ರೋಗಗ್ರಸ್ಥವಾಗುತ್ತದೆ. ಇದಕ್ಕೆ ಪರಿಹಾರ ಸೂಚಿಸುವ ಧರ್ಮ-ದೇವರುಗಳು ಕೃಷ್ಣನ ಕೈಯಲ್ಲಿ ಸಿಕ್ಕು ತತ್ತರಿಸಿ ಹೋಗುತ್ತವೆ. ಕರ್ಮ-ಧರ್ಮದ ಬಂಧನಗಳು ದಿಕ್ಕುತಪ್ಪುತ್ತವೆ. "ಸಂಸ್ಕಾರ"ದಲ್ಲಿ ಗಿರೀಶ ಕಾರ್ನಾಡರು ವೈದಿಕರ ಗೊಡ್ಡುತನವನ್ನು ಬಯಲಿಗೆಳೆದರೆ, ಈ ನಾಟಕದಲ್ಲಿ ಜಡಭರತರು ಮಠ-ಪೀಠಗಳಿಗಾಗಿ ಬಡಿದಾಡುವ ಕೃಷ್ಣನಂತಹ ಕೆಲವೈದಿಕರ ಸ್ವಾರ್ಥತನವನ್ನು, ಧರ್ಮದ ಹೆಸರಿನಲ್ಲಿ ನಡೆಯುವ ಅವರ ಸೋಗನ್ನು ಮಾರ್ಮಿಕವಾಗಿ ವಿಡಂಬಿಸಿದ್ದಾರೆ.

ಈ ನಾಟಕದಲ್ಲಿ ಬರುವ ಶೀನನ ಸಂಭಾಷಣೆ ಗಮನ ಸೆಳೆಯುತ್ತವೆ. ಆತ ಕೃಷ್ಣನೊಂದಿಗೆ ಮಾತನಾಡುವಾಗ "ಏನ್ ನಿನ್ನ ಧರ್ಮ! ಎಲ್ಲೀ ತನಕ ಧರ್ಮ ಗೊತ್ತದೇನು ? ನಮ್ಮನ್ನ ಅದು ಎತ್ತಿ ಹಿಡಿಯೋತನಕ ಅದs ನಮಗ ಬಂಧನ ಆಗಿ ಕೂತರ ಆಗ ಏನ್ಮಾಡೂದು ? ಕಿತ್ತಿ ಒಗೆಯೋದು ಎಂಥಾ ಸಾಮಾನ್ಯ ಆವೆಲ್ಲೋ ಕೃಷ್ಣಾ ಇಷ್ಟೆಲ್ಲಾ ಓದಿ ?......... ಶಬ್ದದ ಜೋಡಿ ವ್ಯಭಿಚಾರಮಾಡಿ, ಧರ್ಮದ ದಾಂಪತ್ಯ ಕೆಡಿಸಿದ ನಾವು ಮಹಾಪಂಡಿತರಲ್ಲs ?" ಎನ್ನುವ ನುಡಿಗಳಲ್ಲಿ ತೀವ್ರ

ವಿಡಂಬನೆಯಿದ್ದರೆ; "ಪಡಕೊಂಡಜ್ಞಾನ ನಿನಗ ಕಲ್ಲು. ಇಟ್ಟಂಗಿ. ಮಣ್ಣ ಆತಲ್ಲೊ?" ಎನ್ನುವಲ್ಲಿ ಕನಿಕರ ಭಾವವಿದೆ.

"ನಮಗ ತಿಳಿಯೂದು ಒಂದೆ: ವೃಂದಾವನದ ಸುತ್ತ ಪ್ರದಕ್ಷಿಣೆ ಹಾಕಬೇಕು. ಪಾದಕಲ್ಲು ಸವೆದು ಹೋಗುವಂತೆ ಕಾಲು ದಣಿಯುವಷ್ಟು ನಡಿಯಬೇಕು ಕಲ್ಲು ನುಣುಪಾಗಬೇಕು. ಕಾಲು ಜಾರಿದರೆ ವ್ರತ. ಕೃಪೆಯಾದರೆ ಮೋಕ್ಷ" ಎನ್ನುವ ಗುಂಪುಗಳ ಸಂಭಾಷಣೆಯಲ್ಲಿ ಅರಿವಿಲ್ಲದ ಆಚರಣೆಯ ಬಗೆಗೆ ಪ್ರಸ್ತಾಪವಿದ್ದರೆ; ಮತ್ತೊಂದು ಕಡೆ "ಶ್ರೀಗಳವರ ಕೈಯಲ್ಲಿದ್ದ ಕಾಯಿ. ಅವರ ಹೆಗಲ ಮೇಲಿದ್ದ ಕೃಷ್ಣಾಜಿನದ ದೇವರ ಪೆಟ್ಟಿಗೆ ಎರಡೂ ಥರ–ಥರ ನಡುಗತಿದ್ದವು. ಪೆಟ್ಟಿಗೆಯೊಳಗಿನ ದೇವರು ಸರ್ವತಂತ್ರ–ಸ್ವತಂತ್ರನಾದರೂ ಅಸಹಾಯ ಮಠದ ಆಡಳಿತ ವ್ಯವಸ್ಥೆಯು ಕ್ರಮ ಅವನ ತಂತ್ರವ ಆಚೆಗಿನದು" ಎನ್ನುವಲ್ಲಿ ದಟ್ಟ ಸತ್ವಪಡಗಿದೆ. ವಿಮರ್ಶೆ–ಸ್ವವಿಮರ್ಶೆ ಇವೆರಡನ್ನೂ ಜತೆ–ಜತೆಯಾಗಿಯೇ ಮಾಡುವ ಈ ನಾಟಕದ ಅಳವ್ರಡಿಶೀನ ನಾಟಕಕಾರರ ಉತ್ತಮ ಬೆಳವಣಿಗೆಯಾಗುತ್ತಾನೆ ಸಂಕೀರ್ಣ ವಸ್ತುವನ್ನೊಳಗೊಂಡ "ಸತ್ತವರ ನೆರಳು" ಅನೇಕ ಕಾರಣಗಳಿಂದ ಗಮನಸೆಳೆಯುತ್ತದೆ.

ನಾನೇ ಬಿಜ್ಜಳ : 'ನಾನೇಬಿಜ್ಜಳ'–ಜಡಭರತರ ಇತ್ತೀಚಿನ ನಾಟಕ ಪಿರಾಂಡೆಲೋನ "ಹೆನ್ರಿ ದಿ ಫಿಫ್ತ್" ನಾಟಕದ ದಟ್ಟಪ್ರಭಾವ 'ನಾನೇಬಿಜ್ಜಳ'ದ ಮೇಲಾಗಿದೆ. ಈ ವಿಷಯವನ್ನು ನಾಟಕಕಾರರು ನಾಟಕದ ಪ್ರಾರಂಭದಲ್ಲಿಯೇ ಪ್ರಾಮಾಣಿಕವಾಗಿ ಹೇಳಿದ್ದಾರೆ. ಜಡಭರಿತರು ತಮ್ಮ ಇಪ್ಪತ್ತೆಂಟರ ಹರೆಯದಲ್ಲಿ ಹುಬ್ಬಳ್ಳಿಯಲ್ಲಿ ಕಂಡ, ಬಸವೇಶ್ವರನ ವೇಷಧರಿಸಿದ ಹುಡುಗನನ್ನು: ಬಿಜಾಪುರದ ಬಸ್ಸಿನಲ್ಲಿ ಕಂಡ ಶರಣಮ್ಮನನ್ನು ಉದಾಹರಿಸಿ ಈನಾಟಕಕ್ಕೆ ಇವರೆಲ್ಲಾ ಪ್ರೇರಣೆಯೆಂದಿದ್ದಾರೆ. ಪಿರಾಂಡೆಲೋನ ನಾಟಕ ನೆರಳು ಬೆನ್ನುಹತ್ತಿದಂತೆ ತಮ್ಮನ್ನು ಬೆನ್ನು ಹತ್ತಿತು ಎಂದು ಹೇಳಿದ್ದಾರೆ. ಇದೆಲ್ಲದರ ಫಲವಾಗಿ 'ನಾನೇ ಬಿಜ್ಜಳ'ದಲ್ಲಿ ಪರಮಾವಧಿ ಹುಚ್ಚನ ಪಾತ್ರ ನಿರ್ಮಾಣವಾಗಿದೆ.

'ನಾನೇಬಿಜ್ಜಳ' ರಂಗಸಜ್ಜಿಕೆಯ ದೀರ್ಘವಿವರದೊಂದಿಗೆ ಪ್ರಾರಂಭವಾಗುತ್ತದೆ. ಸತ್ತೂರ ದೇಸಗತಿಯ ಧಣಿ ಶ್ರೀಮಂತ ಸರ್‌ದೇಸಾಯಿ. ಆತನ ಪತ್ನಿ ಪದ್ಮಾರಾಣಿ. ಆಕೆಯ ಮಗಳು ಗಿರಿಜಾ ಕೃಷ್ಣ ಪಾಟೀಲ ಶ್ರೀಮಂತರ ಭಂಡಾರಿಯಾದರೆ; ಸುರೇಶ ದೇಸಾಯಿ ಶ್ರೀಮಂತರ ತಂಗಿಯಮಗ ಚಂದ್ರಪ್ಪ, ಗೋವಿಂದ, ವಿಠ್ಠಲ, ಯಕ್ಕುಂಡಿ ಇವರೆಲ್ಲಾ ಸುರೇಶನ ಗೆಳೆಯರು. ಡಾಕ್ಟರ್ 'ಕುಲಕರ್ಣಿ ಮಾನಸಶಾಸ್ತ್ರಜ್ಞ' ಮುದಿಮಲ್ಲ ಶ್ರೀಮಂತರಆಳು. ಇವೆಲ್ಲಾ ಈ ನಾಟಕದ ಪಾತ್ರಗಳು. ಆದರೆ ನಾಟಕದಲ್ಲಿ ಶ್ರೀಮಂತ ಸರದೇಸಾಯಿಯು ಪಾತ್ರರಂಗದ ಮೇಲೆ ಬರುವದಿಲ್ಲ.

ಸುರೇಶ ದೇಸಾಯಿ ಶ್ರೀಮಂತ ಸರದೇಸಾಯಿಯರ ತಂಗಿಯುವಾಗ. "ರಾಯಸ ಮುದ್ದಣ್ಣರ ಬಿಜ್ಜಳದೇವ" ನಾಟಕದಲ್ಲಿ ಬಿಜ್ಜಳನ ಪಾತ್ರಮಾಡಿ, ಬಿಜ್ಜಳನ ರಾಣಿ ಪಾತ್ರ ಮಾಡಿದವಳ ಸಲುವಾಗಿ ಭ್ರಮಿಷ್ಟನಾದವ. ಆವರೆ ಕೃಷ್ಣಪಾಟೀಲ ಈ ರಾಣಿಯನ್ನು ಮೊದಲೇ ಪ್ರೀತಿಸಿದವ ಸುರೇಶ ದೇಸಾಯಿ. ನಿಜ ಜೀವನಲ್ಲೂ ತಾನೇ ಬಿಜ್ಜಳನೆಂದು ಭ್ರಮಿಸುತ್ತಾನೆ. ಇವನ ಭ್ರಮೆ ನಿವಾರಣೆಗಾಗಿ ಇವನ ಗೆಳೆಯರೆಲ್ಲಾ ಹನ್ನೆರಡನೇ ಶತಮಾನದ ಶರಣರ ಸೋಗುಹಾಕುತ್ತಾರೆ. ವಿಠ್ಠಲ-ಬಂಡಿನಾಯಕ ನಾಗಿ, ಚಂದ್ರಪ್ಪ-ಬೊಮ್ಮಾಧಿಪನಾಗಿ, ಪೂಜಾರಿ-ಕಾರ್ವನ್ಮನಾಗಿ, ಯಕ್ಕುಂಡಿ-ಪೆಡ್ಡನಾಯಕನಾಗಿ, ಕೃಷ್ಣಪಾಟೀಲ-ಬಸವಣ್ಣ ಮತ್ತು ಕಾಸಪಯ್ಯನಾಗಿ, ಡಾಕ್ಟರ್-ರಾಜಗುರು ನಾರಾಯಣನಾಗಿ, ಗಿರಿಜಾ ಪದ್ಮಾರಾಣಿಯಾಗಿ ವೇಷಧರಿಸುತ್ತಾರೆ. ಸುರೇಶ ದೇಸಾಯಿ ಬಿಜ್ಜಳನಾಗಿ ನಾಟಕದತುಂಬಾ ವಿಜೃಂಭಿಸುತ್ತಾನೆ. ನಾಟಕಬೆಳೆ ದಂತೆಲ್ಲಾ ಪಾತ್ರಧಾರಿಗಳೇ ಪಾತ್ರಗಳಾಗುತ್ತಾರೆ. ಈ ತಂತ್ರವನ್ನು ಶ್ರೀರಂಗರು ತಮ್ಮ ಮೊದಲಿನನಾಟಕಗಳಲ್ಲೇ ತೋರಿಸಿದ್ದಾರೆ. ಇಲ್ಲಿ ಶ್ರೀರಂಗರ ಪ್ರಭಾವವೂ ಆಗಿದೆ.

ನಾಟಕದ ಮಧ್ಯಭಾಗದೀದ ಬಿಜ್ಜಳ-ಬಸವಣ್ಣನವರ ಸಂದರ್ಭದ ಪರಿಸರ ಬಿಚ್ಚಿಕೊಂಡಾಗ ಅಲ್ಲಿ ಸತ್ಯ-ಸುಳ್ಳುಗಳ ಶೋಧ ನಡೆಯುತ್ತದೆ. ಈ ಶೋಧನೆಯನ್ನು ಮುಖ್ಯವಾಗಿಟ್ಟು ಕೊಂಡಿದ್ದರೆ ನಾಟಕಕ್ಕೆ ಹೊಸ ಆಯಾಮ ಬರುತಿತ್ತು. ಈ ಶೋಧನೆ ಕ್ಷಣಮಾತ್ರದ್ದಾಗಿ ಮತ್ತೆ ಬಿಜ್ಜಳನಾದ-ದೇಸಾಯಿಯ ಸೇಡು-ಸಿಟ್ಟು-ಭ್ರಮೆಗಳೇ ಪ್ರಧಾನವಾಗಿ ಬಿಡುತ್ತವೆ. ಹೀಗಾಗಿ ಹೊಸದನ್ನೇನೂ ಹೇಳದೆ ನಾಟಕ ಸೋಲುತ್ತದೆ. ಕೃಷ್ಣ ಪಾಟೀಲ ಮತ್ತು ಸುರೇಶ ದೇಸಾಯಿ ಇವರಿಬ್ಬರನ್ನೂ ಅನು ಭವಿಸಿದ ರಾಣಿಯ ಘಟನೆಗಳೇ ಪುನರಾವರ್ತನೆಯಾಗಿ, ನಾಟಕ ಹೇಳಿದ್ದನ್ನೇ ಹೇಳಿ ಗಿರಕಿ ಹೊಡೆಯುತ್ತದೆ. ಅತ್ಯಂತ ಮಹತ್ವದ ನಾಟಕವಾಗುವ ಅಂಶಗಳನ್ನೊಳ ಗೊಂಡಿದ್ದ ಇದು ಪಿರಾಂಡೆಲೋನನ ಪ್ರಭಾವದ ಸುಳಿಗೆ ಸಿಕ್ಕು ಹೆಚ್ಚಿನ ಪವರು-ಗಳನ್ನು ಬಿಚ್ಚಿತೋರಿಸುವ ಕಥೆಯಷ್ಟೇ ಆಗಿಬಿಟ್ಟಿದೆ. ನಾಟಕದ ಕೊನೆಯಲ್ಲಿ ಸುರೇಶ ದೇಸಾಯಿ-ಬಿಜ್ಜಳನಾಗಿ, ಬಸವಣ್ಣನ ಪಾತ್ರಧಾರಿ ಗೆಳೆಯ ಕೃಷ್ಣ ಪಾಟೀಲನನ್ನು ಕತ್ತಿಯಿಂದ ಇರಿದು ಕೊಲ್ಲುತ್ತಾನೆ. ಅಲ್ಲಿಗೆ ನಾಟಕ ಕೊನೆಗೊಳ್ಳುತ್ತದೆ. ಇದು 'ನಾನೇ ಬಿಜ್ಜಳ' ನಾಟಕದ ವಸ್ತು.

ಇತಿಹಾಸಕ್ಕೆ ಸೇರಿದ ಬಿಜ್ಜಳ-ಬಸವಣ್ಣನವರ ಕಥೆಯನ್ನು ಹಿನ್ನಲೆಯಾಗಿ ಚಿತ್ರಿಸುವ ಜಡಭರತರು ಸಾಮ್ಯದ ಕಡೆ ಲಕ್ಷವಹಿಸಿಲ್ಲ. ಬಿಜ್ಜಳ-ಬಸವಣ್ಣನ ಸಮಸ್ಯೆಯೇ ಬೇರೆ; ಸುರೇಶ ದೇಸಾಯಿ-ಕೃಷ್ಣ ಪಾಟೀಲರ ಸಮಸ್ಯೆಯೇ ಬೇರೆ ಶರಣರದು ಒಂದು ಪ್ರಮುಖ ಚಳುವಳಿ. ಅಲ್ಲಿ ಧಾರ್ಮಿಕ-ಸಾಮಾಜಿಕ ಅತಿ ಮುಖ್ಯ.

ವಾಗುತ್ತವೆ. ಆದರೆ ನಾಟಕಕಾರರು ಸೃಷ್ಟಿಸಿರುವ ಪಾತ್ರಗಳು ಇದಾವುದಕ್ಕೂ ಸಂಬಂಧವಿರದೆ ಕೇವಲ ಒಂದು ಹೆಣ್ಣಿನ ಭ್ರಮೆಯಲ್ಲಿ ಮುಳುಗಿ ಹೋದವುಗಳು. ಹೀಗಾಗಿ ನಾಟಕದ ವಸ್ತು ಇತಿಹಾಸದ ಪಾತ್ರಗಳೊಂದಿಗೆ ಗುರುತಿಸಿಕೊಳ್ಳುವಾಗ, ಔಚಿತ್ಯತೆಯನ್ನು ಕಾಪಾಡಿಕೊಳ್ಳದೆ ಕೇವಲ ಗೊಂದಲವನ್ನುಂಟು ಮಾಡುತ್ತವೆ. ಐದು ಪುಟಗಳಷ್ಟು ಬೆಳೆದ ದೇಸಾಯಿ–ಬಿಜ್ಜಳನ ಸಂಭಾಷಣೆ ಪ್ರೇಕ್ಷಕರಿಗೆ ಬೇಜಾರಾಗುತ್ತದೆ. ಈ ಪಾತ್ರದ ಸಂಭಾಷಣೆ ಒಮ್ಮೊಮ್ಮೆ ಗ್ರಾಂಥಿಕವಾಗಿ ಮತ್ತೊಮ್ಮೆ ಆಡುನುಡಿಯಾಗಿ ಆಭಾಸವನ್ನುಂಟು ಮಾಡುತ್ತದೆ. ಕಾರ್ನಾಡರ ತುಘಲಕದ ಪ್ರಭಾವವೂ ಇವರ ಮೇಲಾಗಿದೆ. ಆದರೆ ಬಿಜ್ಜಳನಿಗೂ–ತುಘಲಕನಿಗೂ ತುಂಬಾ ಅಂತರವಿದೆ. ಮೇಲಾಗಿ ಬಿಜ್ಜಳ ಹುಚ್ಚನಂತೂ ಅಲ್ಲ. ಈ ಎಲ್ಲ ಗೊಂದಲಗಳಲ್ಲಿ ನಾಟಕ ಮುಗಿಯುತ್ತದೆ. ಇಲ್ಲಿ ಜಡಭರತರ ಇತಿ–ಮಿತಿಗಳಿವೆ. ಆದರೆ ಅರಳು ಹುರಿದಂತೆ ಮಾತನಾಡುವ ಇಲ್ಲಿಯ ಪಾತ್ರಗಳು ಗಮನ ಸೆಳೆಯುತ್ತವೆ. "ಇತಿಹಾಸ ಸತ್–ಅಸತ್ ಇವರ ನಡುವೆ ಇರತದ" ಎನ್ನುವ ಸಂಭಾಷಣೆಯಲ್ಲಿನ ಕಟುಸತ್ಯ ಕಣ್ಣಿಗೆ ಹೊಡೆಯುತ್ತದೆ.

ಕನ್ನಡ ನಾಟಕ ಕ್ಷೇತ್ರಕ್ಕೆ ಜಡಭರತರ ಕೊಡುಗೆ ಗಮನಿಸುವಂತಹದು. ಇವರು ನಾಟಕ ಕಾರರಷ್ಟೇ ಅಲ್ಲ ಅನೇಕ ಲೇಖಕರನ್ನು ಬೆಳಕಿಗೆ ತಂದ ಉತ್ತಮ ಪ್ರಕಾಶಕರೂ ಆಗಿದ್ದಾರೆ. ವಿರಳ ಕೃತಿಗಳನ್ನು ನೀಡಿದ್ದರೂ ರಂಗಭೂಮಿಯ ನೆನಪಿನಾಳದಲ್ಲಿ ಹಸಿರಾಗಿ ಉಳಿಯುತ್ತಾರೆ, ಜಡಭರತರು.

ಕ್ಷೇತ್ರಭಾಷಾವಿಜ್ಞಾನಿ ಮತ್ತು ಭಾಷಾಕ್ಷೇತ್ರ

● ವಿಲ್ಯಂ ಮಾಡ್ತ

ಕ್ಷೇತ್ರಭಾಷಾ ವಿಜ್ಞಾನದಲ್ಲಿ. ಕ್ಷೇತ್ರ ಭಾಷಾವಿಜ್ಞಾನಿ (Field-linguist) ಹಾಗೂ ಭಾಷಾಕ್ಷೇತ್ರ (Linguistic-field) ಎರಡು ಪ್ರಮುಖ ಘಟಕಗಳು. ಕ್ಷೇತ್ರ ಭಾಷಾವಿಜ್ಞಾನದ ಕಾರ್ಯದ ಯಶಸ್ವಿಯಲ್ಲಿ ಕ್ಷೇತ್ರಭಾಷಾ ವಿಜ್ಞಾನಿಗೆ ತನ್ನ ಅರಿವು ಅತ್ಯಗತ್ಯ ಅಂತೆಯೇ ಭಾಷಾಕ್ಷೇತ್ರದ ಪರಿಜ್ಞಾನವೂ ಅವಶ್ಯಕ ಇವೆರಡರ ಕೊರತೆ ಕ್ಷೇತ್ರ ಭಾಷಾವಿಜ್ಞಾನಕ್ಕೆ ಮಾರಕ.

ಕ್ಷೇತ್ರಭಾಷಾವಿಜ್ಞಾನಿ :

ಭಾಷಾವಿಜ್ಞಾನದಲ್ಲಿ ಆಸಕ್ತಿಯುಳ್ಳವರೆಲ್ಲರೂ ಕ್ಷೇತ್ರಭಾಷಾವಿಜ್ಞಾನಿಯಾಗಲಾರರು. ಇದರಿಂದಾಗಿ ಕ್ಷೇತ್ರಭಾಷಾವಿಜ್ಞಾನದಲ್ಲಿ ಕ್ಷೇತ್ರಭಾಷಾವಿಜ್ಞಾನಿಗಳು ಅತ್ಯಗತ್ಯ ವ್ಯಕ್ತಿಗಳಾದರೂ ಅವರು ಸುಲಭವಾಗಿ ಸಿಗುವಂತಿಲ್ಲ. ಕ್ಷೇತ್ರಭಾಷಾವಿಜ್ಞಾನಿಯಲ್ಲಿ ಕೆಲವೊಂದು ವಿಶಿಷ್ಟ ಗುಣಲಕ್ಷಣಗಳು ಇರಬೇಕಾಗುತ್ತವೆ. ಪ್ರಸ್ತುತದಲ್ಲಿ ಅವುಗಳನ್ನು ಗುರುತಿಸಿ ಸ್ವಲ್ಪದರಲ್ಲಿ ವಿವರಿಸುವ ಪ್ರಯತ್ನ ಮಾಡಲಾಗಿದೆ. ಕ್ಷೇತ್ರ ಭಾಷಾವಿಜ್ಞಾನಿಯನ್ನು ಅನ್ವೇಷಕ (Investigator) ಅಥವಾ ಸಂಗ್ರಹಗಾರ (Collector) ಎಂದೂ ಕರೆಯುವುದುಂಟು.

ಅನ್ವೇಷಕನು ಯಾವ ಭಾಷೆಯ ಅನ್ವೇಷಣೆಯನ್ನು ಮಾಡುತ್ತಾನೆಯೊ ಆ ಭಾಷಾಸಮಾಜ (Language Community) ದ ಸಂಸ್ಕೃತಿಯನ್ನು ಒಳಹೊಕ್ಕು ಅದನ್ನು ತನ್ನದನ್ನಾಗಿ ಮಾಡಿಕೊಳ್ಳಬೇಕು. ಅಲ್ಲಿಯ ಜನರ ಸೂಕ್ಷ್ಮ ಸಂವೇದನೆಗಳನ್ನು (Fine Sensibilities ಚೆನ್ನಾಗಿ ಅರಿತುಕೊಂಡು ಅವರ ಕ್ರಿಯೆ ಪ್ರತಿಕ್ರಿಯೆಗಳನ್ನು ಅರ್ಥೈಸಿಕೊಳ್ಳುವ ಸಾಮರ್ಥ್ಯ ಯಶಸ್ವೀ ಅನ್ವೇಷಕನಲ್ಲಿರಬೇಕು. ಆ ಸಮಾಜದ ಸದಸ್ಯರ ಮನಸ್ಸನ್ನು ತಾನು ತಿಳಿದುಕೊಳ್ಳುವಂತೆ ತನ್ನ ಮನಸ್ಸನ್ನು ಅವರಿಗೆ ಬಿಚ್ಚಿ ತಿಳಿಸುವ ಅನ್ಯೋನ್ಯತೆ Intimacy) ಆತನಲ್ಲಿರಬೇಕು. ಜನರ ಆಚಾರ ವಿಚಾರಗಳನ್ನು ಚೆನ್ನಾಗಿ ತಿಳಿದುಕೊಂಡು ಅವರ ಸಂಸ್ಕೃತಿಯಲ್ಲಿಯ ಒಪ್ಪಿತ ಹಾಗೂ ನಿಷಿದ್ಧ ಆಚಾರೋಪಚಾರಗಳಾವುವು ಎಂಬುದನ್ನು ಸಾಕಷ್ಟು ನಿಖರವಾಗಿ ತಿಳಿದು

ಕೊಳ್ಳಬೇಕಲ್ಲದೆ ವಿಭಿನ್ನಲಿಂಗಿಗಳೊಡನೆ, ಸಮವಯಸ್ಕರೊಡನೆ, ಗುರುಹಿರಿಯ
ರೊಡನೆ, ಪ್ರತಿಷ್ಠಿತ ವ್ಯಕ್ತಿ ಹಾಗೂ ಧರ್ಮಾಧಿಕಾರಿಗಳೊಡನೆ ಯಾವ ರೀತಿಯಲ್ಲಿ
ವರ್ತಿಸಬೇಕೆಂಬುದನ್ನು ಖಚಿತವಾಗಿ ತಿಳಿದುಕೊಳ್ಳಬೇಕು, (Paul 430-451).
ಈ ಸಂಸ್ಕೃತಿ ಭಾಷೆಯ ಮೂಲಕ ಹೇಗೆ ಅಭಿವ್ಯಕ್ತಗೊಳ್ಳುತ್ತದೆ ಎಂಬ ಅರಿವು
ಸ್ಥೂಲವಾಗಿಯಾದರೂ ಆತನಲ್ಲಿರಬೇಕು.

ಸಂಗ್ರಹಗಾರನು ತಾನು ಆರಿಸಿಕೊಂಡ ಭಾಷಾ ಸಮಾಜದಲ್ಲಿ ಸಾಮಾಜಿಕವಾಗಿ,
ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಸಕ್ರಿಯಾತ್ಮಕ ಪಾಲುದಾರ (Active Partici-
pant) ನಾಗಬೇಕು (Paul, 441). ಸ್ಥಳೀಯ ರಾಜಕೀಯದಿಂದ ಆದಷ್ಟು ದೂರ
ವಿದ್ದು ಜನರ ಸಮಸ್ಯೆಗಳನ್ನು ನಿವಾರಿಸುವಲ್ಲಿ ಸಹಾಯಕನಾಗಿ ಬಾಳಬೇಕು.

ಆ ಸಮಾಜದ ಸಂಘ-ಸಂಸ್ಥೆಗಳಲ್ಲಿ, ಸಾಮಾಜಿಕ ಧಾರ್ಮಿಕ ಸಭೆಗಳಲ್ಲಿ ಪಾತ್ರ
ವಹಿಸಿ, ತಾನು ಪ್ರತ್ಯೇಕನಾಗಿ (alien) ಉಳಿದುಕೊಳ್ಳದೆ ಆ ಗುಂಪಿನ ಸದಸ್ಯನಾಗಿರು
ವಂತೆ ಬಾಳಬೇಕು. ಸಮವಯಸ್ಕರೊಡನೆ, ಸಮಲಿಂಗಿಗಳೊಡನೆ ಆದಷ್ಟು ಬೆರೆತು
ಕೊಂಡು ಒಂದಾಗಿ ಜೀವಿಸಬೇಕು. ಜನರ ನಡವಳಿಕೆಯನ್ನು ಗಮನಿಸಿ ತನಗೆ ಅನು
ಕೂಲವಾದ ಸಾಮೂಹಿಕ ಕೆಲಸಗಳಲ್ಲಿ (ಗಿಡ ನೆಡುವುದು, ಕಳೆ ಕೀಳುವುದು, ನೀರು
ಸೇದುವುದು ..) ಸಹಭಾಗಿಯಾಗಬೇಕು.

ಆರೋಗ್ಯಕ್ಕೆ ಸಂಬಂಧಿಸಿ ಸಾಮಾನ್ಯ ಔಷಧೋಪಚಾರಗಳನ್ನು ಮಾಡುವುದು,
ಕಾಗದ ಪತ್ರಗಳನ್ನು ಓದಿ ಹೇಳುವುದು, ಅಥವಾ/ಮತ್ತು ಕೇಳಿ ಬರೆಯುವುದು,
ಸರಕಾರಿ ಅಥವಾ ಅರೆಸರಕಾರಿ ಸಂಸ್ಥೆಗಳಿಂದ ದೊರಕಬಹುದಾದ ಸೌಲಭ್ಯಗಳನ್ನು-
ವಿಶ್ರಾಂತಿ ವೇತನ, ಹೊಲಮನೆಗಳ ಹಕ್ಕು, ನಿವೇಶನಗಳ ಒದಗಿಸುವಿಕೆ, ವಿದ್ಯಾರ್ಥಿ
ವೇತನ ಗಳಿಕೆ ಇತ್ಯಾದಿ—ಒದಗಿಸುವುದು ಇವೇ ಮೊದಲಾದ ರೀತಿಗಳಲ್ಲಿ ಅನ್ವೇಷಕ
ನಾದವನು ಸಮಾಜದ ಒಳಿತಿಗೆ ದುಡಿದರೆ ಆತ ಆ ಜನರ ಸೌಹಾರ್ದತೆ (rapport)
ಯನ್ನು ಬೆಳೆಸಬಲ್ಲ, ಉಳಿಸಬಲ್ಲ, ಇದು ಕ್ಷೇತ್ರಕಾರ್ಯದಲ್ಲಿ ಪ್ರಮುಖವಾದುದು.

ಅನ್ಯ ಸಮಾಜದಲ್ಲಿ ಹೊಂದಿಕೊಂಡು ಒಂದಾಗಿ ಬಾಳುವುದು ಸುಲಭಸಾಧ್ಯ
ವಲ್ಲ. ಇಂತಹ ಬಾಳ್ವೆಗೆ ಮಾನಸಿಕ ಹಾಗೂ ಶಾರೀರಿಕ ಆರೋಗ್ಯ ಅತ್ಯಾವಶ್ಯಕ. ಕೆಲ
ವೊಮ್ಮೆ ಆತ ಎಷ್ಟೋ ಅಡ್ಡಿ ಆತಂಕಗಳನ್ನು ಎದುರಿಸಬೇಕಾಗುತ್ತದೆ. ಕೆಲವೊಂದು
ಸಮಾಜದವರು ಅತ್ಯಂತ ಆದರದಿಂದ ಹೊರಗಿನವರನ್ನು ಬರಮಾಡಿಕೊಳ್ಳುವ
ಮನೋಪ್ರವೃತ್ತಿಯವರಾದರೆ (Goldsteir, 33, f. n. 10), ಉಳಿದವರು ಸಂಶಯ
ಭಾವದಿಂದ ಅವರನ್ನು ಕಂಡು ಆದಷ್ಟು ದೂರವಿಡುವ ಮನೋಧರ್ಮದವರಾಗಿರು-
ತ್ತಾರೆಂಬುದು ಕ್ಷೇತ್ರಭಾಷಾವಿಜ್ಞಾನಿಗಳ ಅನುಭವ (Herskovits, 1950: 85).

ಊಟನಿದ್ರೆಗಳ ಅವ್ಯವಸ್ಥೆ, ಜನರ ವಿಶಿಷ್ಟ ಆಚಾರವಿಚಾರ. ನೈರ್ಮಲ್ಯವಿಲ್ಲದಿರುವಿಕೆ. ಅಸಹ್ಯ ರೀತಿನೀತಿಗಳು ಆತನನ್ನು ಭಾವೋದ್ರೇಕಗೊಳಿಸಬಹುದು. ಇವುಗಳನ್ನೆಲ್ಲ ಸಹಿಸಿ, ಅವುಗಳಿಗೆ ಒಗ್ಗಿಕೊಂಡು, ತಾನೂ ಆ ಸಂಸ್ಕೃತಿಯನ್ನು ಮೈಗೂಡಿಸಿದರೆ ಮಾತ್ರ ಆ ಸಮಾಜದ ಸದಸ್ಯನಾಗಿ ಆತ ಇರಬಲ್ಲ. ಇದರಿಂದ ಯಶಸ್ವಿ ಅನ್ವೇಷಕ ನಾಗಬಲ್ಲ.

ಕ್ಷೇತ್ರಕಾರ್ಯದಿಂದ ಉಂಟಾಗುವ ಆಯಾಸ ಅಷ್ಟಿಷ್ಟಲ್ಲವಾದುದರಿಂದ ಆತ ಕೆಟ್ಟ ಹವ್ಯಾಸಗಳಿಂದ ಆದಷ್ಟು ದೂರವಿರಬೇಕಲ್ಲದೆ ಯೋಗ್ಯವಾದ ನೀರು ಆಹಾರ ಸೇವನೆ ಗಳೊಂದಿಗೆ ಸರಳ ವ್ಯಾಯಾಮ ಹಾಗೂ ಯೋಗ್ಯ ಬಿಡುವುಗಳ ಮೂಲಕ ತನ ಆರೋಗ್ಯಾಯುಷ್ಯಗಳನ್ನು ಕಾಪಾಡಿಕೊಂಡು ಬೆಳೆಯಿಸಿಕೊಳ್ಳಬೇಕು (Piddirgton, 539).

ಕ್ಷೇತ್ರಜ್ಞ ತನ್ನ ನಿರೂಪಕನೊ/ರೊಂದಿಗೆ ಪ್ರೀತಿಯಿಂದಿರಬೇಕು (Thompson 167). ಇವರಿಬ್ಬರ ನಡುವೆ ಸೌಹಾರ್ದತೆಯಿಲ್ಲದಿದ್ದರೆ ಕ್ಷೇತ್ರಕಾರ್ಯ ಸಾಧ್ಯವಾಗ-ಲಾರದು. (Paul, 445) ಭಿನ್ನಲಿಂಗಿ ನಿರೂಪಕರಿಗಿಂತ ಸ್ವಲಿಂಗಿ ನಿರೂಪಕರನ್ನು ಆರಿಸಿಕೊಳ್ಳುವುದೇ ಬಹುರೀತಿಯಿಂದ ಸೂಕ್ತ, ಅನ್ವೇಷಕನ ಆಸಕ್ತಿ ದತ್ತಸಂಗ್ರಹಣೆ ಯತ್ತ ಕೇಂದ್ರೀಕೃತಗೊಳ್ಳುವುದು ಇದರಿಂದಾಗಿ ಹೆಚ್ಚು ಸಾಧ್ಯ. ನಿರೂಪಕರನ್ನು ಸರಿ ಯಾಗಿ ಬಳಸಿಕೊಳ್ಳಬೇಕಾದರೆ ಅವರ ಭಾಷೆಯಲ್ಲಿಯೇ ಚೆನ್ನಾಗಿ ವ್ಯವಹರಿಸಲು ಕ್ಷೇತ್ರಜ್ಞ ಕಲಿತುಕೊಳ್ಳಬೇಕು. (Goldstein 31).

ಮೇಲೆ ಹೇಳಿದ ವ್ಯಕ್ತಿಗತ subjective ಗುಣಲಕ್ಷಣಗಳ ಜೊತೆ ತನ್ನ ಕಾರ್ಯ ನಿರ್ವಹಣೆಗೆ ಅಗತ್ಯವಾದ ವೈಜ್ಞಾನಿಕ ತರಬೇತಿಯೂ ಅನ್ವೇಷಕನಿಗೆ ಬೇಕಾಗುತ್ತದೆ. ಉಚ್ಚಾರಣಾತ್ಮಕ ಧ್ವನಿವಿಜ್ಞಾನ, ಭಾಷಾ ವಿಶ್ಲೇಷಣೆಯ ಪದ್ಧತಿ, ಧ್ವನಿಮಾತ್ಮಕ, ವ್ಯಾಕರಣಾತ್ಮಕ, ನಿಘಂಟಾತ್ಮಕ (lixico graphical) ಮೊದಲಾದ ವಿಷಯಗಳಲ್ಲಿ ಸರಿಯಾದ ಜ್ಞಾನ ಆತನಿಗಿರಬೇಕು, ಧ್ವನೀಜ (Phonetic script)ಯನ್ನು ಬಳಸುವುದರಲ್ಲಿ ಸರಿಯಾದ ತರಬೇತಿ ಪಡೆಯದಿದ್ದರೆ ಅಧಿಕ ವ್ಯತ್ಯಾಸವುಳ್ಳ (Our differentiated) ಅಥವಾ ಅಪೂರ್ಣ ವ್ಯತಾಸವುಳ್ಳ (Under differentiated) ಪಾಠಗಳು ದೊರಕುವ ಸಂಭವ ಜಾಸ್ತಿಯಾಗುತ್ತದೆ. ಇಂತಹ ಪಾಠಗಳು ಅಧಿಕ ವಾದರೆ ಸಂಗ್ರಹ ಕಾರ್ಯ ತನ್ನ ಮೌಲ್ಯವನ್ನು ಕಳೆದುಕೊಂಡು ವಿಶ್ಲೇಷಣೆ ಅಪೂರ್ಣ ವಾಗಿ ಉಳಿಯಬೇಕಾಗುತ್ತದೆ,

ಒಂದು ಭಾಷೆಯ ವಿಶ್ಲೇಷಣೆ ಮಾಡುತ್ತಿರುವಾಗ ವಾಂಶಿಕ ಸಂಬಂಧವುಳ್ಳ ಜ್ಞಾತಿಭಾಷೆಗಳ ವ್ಯಾಕರಣದ ಜ್ಞಾನವಿದ್ದರೆ ವಿಶ್ಲೇಷಣ ಕಾರ್ಯ ಕಾರ್ಯ ಸರಳ

ವಾಗುವುದು. ಹಲವು ಭಾಷಾ ವಿಶ್ಲೇಷಣೆಗಳನ್ನು ಗಮನಿಸಿ ಅವುಗಳ ಸತತ ಅಭ್ಯಾಸ ಮಾಡುತ್ತಿರುವವರಿಗೆ ಹೊಸ ಹೊಸ ಭಾಷೆಗಳ ವಿಶ್ಲೇಷಣೆ ಸುಲಭ ದಾಯಕವಾಗುತ್ತದೆ. ಸೂಕ್ತ ವೈಜ್ಞಾನಿಕ ತರಬೇತಿ ಇಲ್ಲದ ಸಂಗ್ರಹಕಾರನು ಹಲವಾರು ಪ್ರಮಾದಗಳಿಗೆ ಕಾರಣನಾಗಬಹುದು. ಭಾಷಾದತ್ತಸಂಗ್ರಹಣೆ, ಭಾಷಾ ವಿಶ್ಲೇಷಣೆಯಲ್ಲಿ ತೊಡಗಿದ ಹಲವಾರು ಭಾಷಾವಿಜ್ಞಾನಿಗಳ ಪರಿಚಯ ಹಾಗೂ ಒಡನಾಟ (karpales 8) ಆತನಿಗಿದ್ದರೆ ತನ್ನ ಕೆಲಸದಲ್ಲಿ ಆತನಿಗೆ ಪರಿಣತಿ ದೊರಕುವುದಲ್ಲದೆ ಧೈರ್ಯವಾಗಿ ಮುಂದೆ ಹೋಗಲು ಸಾಧ್ಯವಾಗುತ್ತದೆ.

ಭಾಷಾಕ್ಷೇತ್ರ :

ಒಂದು ಪ್ರದೇಶದಲ್ಲಿರುವ ಭಾಷಾ-ಸಮಾಜವೇ ಕ್ಷೇತ್ರಭಾಷಾವಿಜ್ಞಾನಿಗೆ ಭಾಷಾ ಕ್ಷೇತ್ರ. ಆತ ದತ್ತಾನ್ವೇಷಣಕ್ಕಾಗಿ ನಿರ್ದಿಷ್ಟ ಭಾಷಾಕ್ಷೇತ್ರಕ್ಕೆ ಹೋಗಬಹುದು ಅಥವಾ ಆ ಕ್ಷೇತ್ರವನ್ನೇ ತನ್ನಲ್ಲಿಗೆ ಬರಮಾಡಿಕೊಳ್ಳಬಹುದು. ಎಷ್ಟೋ ಸಲ ಅನುಕೂಲತೆಗೋಸ್ಕರ ನಿರೂಪಕರನ್ನು ತಮ್ಮ ಕೊಠಡಿಗಳಿಗೆ ಕರೆಯಿಸಿಕೊಂಡು ಕ್ಷೇತ್ರಭಾಷಾ ವಿಜ್ಞಾನಿಗಳು ಕ್ಷೇತ್ರಕಾರ್ಯವನ್ನು ನಡೆಯಿಸುವುದುಂಟು. ರಾಚನಿಕ ಅಧ್ಯಯನದ ಮಟ್ಟಿಗೆ ಈ ಅಭ್ಯಾಸವನ್ನು ಒಪ್ಪಬಹುದಾದರೂ ಭಾಷೆಯ ಸಮಗ್ರ ಅಧ್ಯಯನಕ್ಕೆ ಭಾಷಾಕ್ಷೇತ್ರಕ್ಕೆ ಹೋಗಿ ಅಲ್ಲಿದ್ದುಕೊಂಡೇ ದತ್ತಸಂಗ್ರಹ ಮಾಡುವುದು ಹೆಚ್ಚು ಪ್ರಯೋಜನಕಾರಿ ಹಾಗೂ ಅರ್ಥಪೂರ್ಣ.

ಭಾಷಾಧ್ಯಯನವೆಂದರೆ ಆಕೃತಿಮಗಳ ಶಬ್ದಾರ್ಥ ಹಾಗೂ ರಚನೆಯ ಅಧ್ಯಯನ ಮಾತ್ರವಲ್ಲ. ಪ್ರತಿಯೊಂದು ಭಾಷೆಗೂ ಅದರದ್ದೇ ಆದ ಸಾಮಾಜಿಕ, ಮಾನಸಿಕ, ಸಾಂಸ್ಕೃತಿಕ ಹಿನ್ನೆಲೆಗಳಿರುತ್ತವೆ. ಈ ಹಿನ್ನೆಲೆಗಳನ್ನು ಗಮನಿಸಿ ಭಾಷೆಯನ್ನು ಪರೀಕ್ಷಿಸಬೇಕಾದರೆ ಭಾಷಾಕ್ಷೇತ್ರದಲ್ಲಿರುವುದು ಅತ್ಯಗತ್ಯ. ಅಂತರ್-ಶಿಸ್ತಿನ ಅಧ್ಯಯನ (Inter disciplinary study)ದ ಈ ಕಾಲದಲ್ಲಿ ಭಾಷಾ ವಿಜ್ಞಾನಿಗಳು ಇತರ ವಿಜ್ಞಾನಗಳನ್ನು ಗಮನದಲ್ಲಿಟ್ಟು ತಮ್ಮ ಅಧ್ಯಯನ ನಡೆಯಿಸಬೇಕಾಗುತ್ತದೆ. ಹೀಗೆ ಹಲವು ಮುಖಗಳ ದರ್ಶನವಾಗಬೇಕಾದರೆ ಭಾಷಾಕ್ಷೇತ್ರದಲ್ಲಿದ್ದು ಸಂಗ್ರಹ ಹಾಗೂ ವಿಶ್ಲೇಷಣಾ ಕಾರ್ಯ ಮಾಡುವುದು ಅನಿವಾರ್ಯ.

ಭಾಷಾಕ್ಷೇತ್ರದ ಭೌಗೋಳಿಕ, ಸಾಮಾಜಿಕ, ಸಾಂಸ್ಕೃತಿಕ ಪರಿಚಯ ಅನ್ವೇಷಕನಿಗೆ ಸಾಕಷ್ಟು ಪ್ರಮಾಣದಲ್ಲಿ ಪಡೆಯಕೊಳ್ಳಬೇಕು (Notes and Queries, 28 Karpales, 8). ತಾನು ಪ್ರವೇಶಿಸುವ ಕ್ಷೇತ್ರದ ಹವಾಮಾನ, ವಸತಿಸೌಕರ್ಯ, ರಸ್ತೆಸಂಪರ್ಕಗಳ ವ್ಯವಸ್ಥೆ, ಭೇಟಿಯಾಗಬೇಕಾದ ವ್ಯಕ್ತಿಗಳು, ಬೇಕಾಗಿರುವ

ಸಾಮಗ್ರಿಗಳು, ಅವುಗಳ ಸಾಗಾಟದ ವ್ಯವಸ್ಥೆ, ಕೆಲಸದ ವೇಳಾಪಟ್ಟಿ ಆತ ಮೊದಲೇ ಕ್ಷೇತ್ರಕ್ಕನುಗುಣವಾಗಿ ಸಿದ್ಧಗೊಳಿಸಬೇಕು (Karpales 9–13, Paul. 430).

ಒಂದು ಭಾಷಾಸಮಾಜದಲ್ಲಿ ಕ್ಷೇತ್ರಭಾಷಾವಿಜ್ಞಾನಿ ಸ್ವೀಕೃತನಾಗುವುದು ಅಷ್ಟು ಸುಲಭದ ಕೆಲಸವಲ್ಲ. ಪರಕೀಯರ ಮೇಲೆ ಸಂಶಯಭಾವವಿರುವುದೇ ಹೆಚ್ಚು. ಅವರಿಗೆ ಅವರ ಆತಿಥ್ಯಗಳು ನೀಡುವುದು ಕಡಿಮೆ. ಅಲ್ಲದೆ ಅವರಿಗೆ ಭಾಷಾ ವೈಜ್ಞಾನಿಕ ಯೋಜನೆಗಳ ಪರಿಚಯವೂ ಇರುವುದಿಲ್ಲ. ಹೊರಗಿನವರು ಬಂದು ನಮ್ಮ ಭಾಷೆ ಸಂಸ್ಕೃತಿಗಳ ಬಗೆಗೆ ಪ್ರಶ್ನೆಹಾಕುವುದು ಅವರಿಗೆ ಸಂಶಯಾಸ್ಪದವಾಗುತ್ತದೆ. ರಾಜ್ಯಮಟ್ಟದಲ್ಲಿ ಆಡಳಿತದ ಹಂತದಲ್ಲಿ ಯಾವಸ್ಥಾನಮಾನವೂ ಇಲ್ಲದ 'ಕ್ಷುಲ್ಲಕ' ಭಾಷೆಯನ್ನು ಇವರೇಕೆ ಇಷ್ಟೊಂದು ಆಸಕ್ತಿಯಿಂದ ಸಂಗ್ರಹಿಸಿ ವಿಶ್ಲೇಷಿಸುತ್ತಾರೆಂಬುದು ಅವರಿಗೆ ಅರ್ಥವಾಗದ ಪ್ರಶ್ನೆ.

ಹೊರಗಿನವನು ಬಂದು ಆಂತರಿಕ ವಿಷಯಗಳ ಬಗೆಗೆ ಕಾಡಿಕಾಡಿ ಪ್ರಶ್ನೆ ಹಾಕಿ ವಿಷಯ ಸಂಗ್ರಹ ಮಾಡುತ್ತಿರುವಾಗ ಎಷ್ಟೋ ಮಂದಿಗೆ ಸಂಗ್ರಹಗಾರನು ದೇಶದ್ರೋಹಿಯಾಗಿರಬಹುದು ಅಥವಾ ವಿದೇಶಿ ಗುಪ್ತಚಾರನಾಗಿರಬಹುದೆಂಬ ಸಂಶಯ ಮಾಡುವ ಸಂಭವವೂ ಉಂಟು.

ಭಾಷಾಕ್ಷೇತ್ರವನ್ನು ಕುರಿತು ಆದಷ್ಟು ಮಾಹಿತಿಯನ್ನು ಅದನ್ನು ಪ್ರವೇಶಿಸುವ ಮೊದಲೇ ಮಾಡಿಕೊಂಡರೆ ಎಷ್ಟೋ ಸಮಸ್ಯೆಗಳನ್ನು ಎದುರಿಸಲು ಸುಲಭವಾಗುತ್ತದೆ. ಸಮಾಜದ ಗಣ್ಯವ್ಯಕ್ತಿಗಳ ಪರಿಚಯ ಮಾಡಿಕೊಂಡರೆ ಅಲ್ಲಿಯ ಜನರನ್ನು ಸಂಪರ್ಕಿಸುವುದು ತ್ರಾಸದಾಯಕವಾಗಲಾರದು. ಒಟ್ಟಿನಲ್ಲಿ ಕ್ಷೇತ್ರಭಾಷಾವಿಜ್ಞಾನಿ ಭಾಷಾಕ್ಷೇತ್ರವನ್ನು ಸರಿಯಾಗಿ ಅರ್ಥೈಸಿಕೊಂಡು ಅವರ ಜೊತೆ ಸೌಹಾರ್ದತೆಯಿಂದಿದ್ದರೆ ಕ್ಷೇತ್ರ ಕಾರ್ಯ ಸುಗಮವಾಗಬಲ್ಲುದು.

ಆಧಾರ ಸಾಹಿತ್ಯ :

Bartlet, F. (Ed.), **The Study of Society: Methods & Problems**, London, 19381/956.

Goldstein, Kenneth S., **A Guide for Field Workers in Fol lo e,** Hatboro, Pennsylwana, 1964.

Gupta, Sarkar Sen, **A Guide to Fieid Study,** Calcutta 1965.

Harskovits, M. J. **Man and His Worker,** New York. 1950.

Karpeles, Maud (Ed.) **The Collecting of Folk Music and Other Ethnomusicological Material; A Manual for Field Workers**, London, 1958.

Notes and Queries on Anthropology, 6th ed Revised and Rewritten by a Committee of the Royal Anthropogical Institute of Great Britain and Ireland, London, 1951.

Paul, Benjamin D., "Interview Techniques and Field Relationships", **Anthropology Today, Chicago, 1953**

Piddington, Ralph, **An Introduction to Social Anthropology,** 2 Vols, Edinburgh, 1950-1957.

Samarin, William J. **Field Linguistics : A Guide to Linguistic Field Work, New York, 1967**.

Thompson, Stith (Ed.) **Four Symposis on Folklore,** Indian University, Folklore Series No. 8, Bloomington, Ind., 1953.

ಪೈ. (ಎಸ್. ಜಿ.). ಸಿ. ಸಿ. ಎ.. ಜಾನಪದವೈಜ್ಞಾನಿಕಕ್ಷೇತ್ರಕಾರ್ಯ ಧಾರವಾಡ ೧೯೭೮.

ಮಾಡ್ತ, ವಿಲ್ಯಂ. "ಜಾನಪದ ಭಾಷಾವಿಜ್ಞಾನ" ಶಿರಸಿ ಸಾಹಿತ್ಯ ಸಮ್ಮೇಳನ, ಮಂ. ಮ. ನಾಗರಾಜಯ್ಯ (ಪ್ರ. ಸಂ.) ಬೆಂಗಳೂರು, ೧೯೮೨:

ಗರಣಿಯ ಬಸವಲಿಂಗ ಕೃತ
ತೋಂಟದ ಸಿದ್ಧೇಶ್ವರನ ಪವಾಡದ ತಾರಾವಳಿ

● ಬಿ. ಆರ್. ಹಿರೇಮಠ

ತೋಂಟದ ಸಿದ್ಧಲಿಂಗ ಶಿವಯೋಗಿಯನ್ನು ಕುರಿತು ರಚಿತವಾದ ಸಾಹಿತ್ಯ ವಿಪುಲವೂ ವೈವಿಧ್ಯಪೂರ್ಣವೂ ಆಮದಾಗಿದೆ. ಇದರಲ್ಲಿ ವೀರಶೈವ ಹಿರಿಯ ಸಾಹಿತ್ಯ ಪ್ರಕಾರಗಳು ಪ್ರಕಟವಾಗಿವೆ. ಆದರೆ ಕಿರಿಯ ಸಾಹಿತ್ಯ ಪ್ರಕಾರಗಳಾದ ಅಷ್ಟಕ, ದಂಡಕ, ಶತಕ, ನಾಂದ್ಯ, ತಾರಾವಳಿ ಮುಂತಾದವುಗಳಿಗೆ ಸಂಬಂಧಿಸಿದ ಇನ್ನೂ ಅನೇಕ ಕೃತಿಗಳು ಅಪ್ರಕಟಿತ ರೂಪದಲ್ಲಿವೆ. ಗರಣಿಯ ಬಸವಲಿಂಗ ರಚಿಸಿದ "ತೋಂಟದ ಸಿದ್ಧೇಶ್ವರನ ಪವಾಡದ ತಾರಾವಳಿ" ತೋಂಟದ ಸಿದ್ಧಲಿಂಗ ಶಿವ ಯೋಗಿಯನ್ನು ಕುರಿತ ಅಪ್ರಕಟಿತ ಕೃತಿಯಾಗಿರುತ್ತದೆ. ಈ ಕೃತಿಯನ್ನು ರಚಿಸಿದ ಗರಣಿಯ ಬಸವಲಿಂಗನ ಕಾಲ ಕ್ರಿ.ಶ. ಸು. ೧೬೦೦. ತೋಂಟದ ಸಿದ್ಧೇಶ್ವರನ ಕಾಲ ಕ್ರಿ. ಶ. ೧೫೬೧–೧೫೮೪ ಎಂದು ಇತ್ತೀಚಿನ ಸಂಶೋಧನೆಗಳಿಂದ ಗೊತ್ತಾಗಿದೆ.* ಇದರಿಂದ ತೋಂಟದ ಸಿದ್ಧೇಶ್ವರನು ಲಿಂಗೈಕ್ಯವಾದ ಸು. ೨೦–೩೦ ವರ್ಷಗಳ ಲ್ಲಿಯೇ ಈ ಕೃತಿ ರಚಿತವಾಗಿರುವುದು ತಿಳಿದುಬರುತ್ತದೆ.

ಗರಣಿಯ ಬಸವಲಿಂಗ ವೀರಶೈವ ಕವಿ. ಈತನು ಗರಣಿಯ ಪರ್ವತದೇವನ ಕರಸಂಜಾತನಾದ ಗರಣಿಯ ವಿರೂಪಾಕ್ಷನ ಶಿಷ್ಯ. ಗರಣಿಯ ಬಸವಲಿಂಗನು 'ತೋಂಟದ ಸಿದ್ಧೇಶ್ವರನ ಪವಾಡದ ತಾರಾವಳಿ'ಯನ್ನಲ್ಲದೆ 'ಬಸವೇಶ್ವರನ ಕಾವ್ಯ' (ಸಾಂಗತ್ಯ) ಹಾಗೂ 'ಬಸವರಾಜದೇವರ ತಾರಾವಳಿ'ಗಳನ್ನೂ ರಚಿಸಿರುವುದು ಗೊತ್ತಾಗುತ್ತದೆ.[೧] ಹೀಗೆ ಗರಣಿಯ ಬಸವಲಿಂಗನು ಒಟ್ಟು ಮೂರು ಕೃತಿಗಳನ್ನು ಬರೆದಿದ್ದಾನೆ. ಈತನ ಶಿಷ್ಯ. ಮರಿರಾಜಪಟ್ಟೀಶ (ಕ್ರಿ. ಶ. ಸು. ೧೬೨೦). ಈ ಮರಿರಾಜಪಟ್ಟೀಶನು ಪ್ರಭುನಟನ ತಾರಾವಳಿ. ಪ್ರಭುದೇವರ ಸ್ತೋತ್ರದ ತ್ರಿವಿಧಿ ಎಂಬ ಎರಡು ಕೃತಿಗಳನ್ನು ರಚಿಸಿರುವುದು ತಿಳಿದುಬರುತ್ತದೆ.[೨] ಹೀಗೆ ಗುರು

---

* ಬಸವಪಥ : ೩-೧

೧. ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ : ೨೪-೪, ಪುಟ ೨೮೧

೨. ಪ್ರಬುದ್ಧ ಕರ್ನಾಟಕ : ೫೬-೧, ಪುಟ ೯೧

ಶಿಷ್ಯರಿಬ್ಬರೂ ತಾರಾವಳಿ ಸಾಹಿತ್ಯ ಪ್ರಕಾರಕ್ಕೆ ಶಿವಶರಣರನ್ನು ಹಾಗೂ ಅವರ ಮಹಿಮೆಯನ್ನು ವಸ್ತುವನ್ನಾಗಿ ಸ್ವೀಕರಿಸಿದ್ದಾರೆ.

ಪ್ರಸ್ತುತ 'ತಾರಾವಳಿ'ಯಲ್ಲಿ ತೋಂಟದ ಸಿದ್ಧಲಿಂಗ ಶಿವಯೋಗಿಯ ಪವಾಡಗಳ ವಿವರಣೆ ಮಾತ್ರವಿದೆ. ಈ ಪವಾಡಗಳ ಮೂಲಕ ಗರಣಿಯ ಬಸವಲಿಂಗನು ಯತಿಶ್ರೇಷ್ಠ ಸಿದ್ಧಲಿಂಗೇಶ್ವರರ ಉತ್ತುಂಗವ್ಯಕ್ತಿತ್ವವನ್ನು ನಿರೂಪಿಸಿದ್ದಾನೆ.

ಗದಗಿನ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠದ ಹಸ್ತಪ್ರತಿ ಭಾಂಡಾರದ ಕಾಗದಪ್ರತಿ (ಬಿ. ೧೮೬/೨)ಯಲ್ಲಿ "ತೋಂಟದ ಸಿದ್ಧೇಶ್ವರನ ಪವಾಡದ ತಾರಾವಳಿ" ಇದೆ.[1] ಈ ಹಸ್ತಪ್ರತಿಯ ಆಧಾರದಿಂದ ಇದನ್ನು ಸಂಪಾದಿಸಿ ಇಲ್ಲಿ ಕೊಡಲಾಗಿದೆ.

ಪೊಗಳಲೆನ್ನಳವೆ ನಿಮ್ಮಗಣಿತ ಮಹಿಮೆಯ
ಮೃಗಧರಮಕುಟ ತೋಂಟದ ಸಿದ್ಧಲಿಂಗೇಶ* ॥ಪಲ್ಲ॥

ಶಿಲೆಯ ನಂದಿಯ ನುಡಿಸಿದನೆ ಪ್ರಸಾದವ
ಶಿಲೆಯ ಬಸವಗೆ ಉಣಿಸಿದನೆ ಚೋರರ
ಶಿಲೆಯ ಬಸವನಿಂದೋಡಿಸಿದನೆ ಜೈನರ
ಶಿಲೆಯ ಬಸವನಿಂದ ಭಂಗಿಸಿದನೆ ಕೂಪ
ಜಲಕೆ ಕುಂಭವ ಹಾಕಿ ಮೇಲಕೆಯ್ದಿಸಿದನೆ
ನಲಿದು ದೀಪಕೆ ನೀರನೆರೆದು ಬೆಳಗಿದನೆ
ಮೊಲವಮರೆಯಕಾಯ ಬದನೆಯಕಾಯನು
ಜ್ವಲಿಪಾಗ್ನಿಯಿಂ ಬೇಯದಂತಾಜ್ಞೆಗೆಯ್ದನೆ
ಕಲುಕುಣಿಕೆಯೊಳು ತೀರ್ಥದ ಕುಂಭ ಬಿಡೆ
ಯಲು ಮಳಲಲಿಂಗವಂ ಮಾಡಿಸಿದನೆ ಫಣಿರಾಜನ
ಬಿಲದಿಂದ ಬರಿಸಿ ಹೋಗೆಂದು ಕಳುಹಿದನೆ
ಹುಲಿಯುರ ಜ್ವರವ ಬಿಡಿಸಿದನೆ ಭಯದಿಂದ
ಮೊಲನೋಡೆ ನಿಲಿಸಿದನೆ ಬೇಡನ ಕಾಲ
ಎಲುದೋರೆ ಮುರಿಸಿದನೆ ಮೆರೆಯುತಿದ್ದ

೧. ಪ್ರಕಟನೆಗೆ ಅನುಮತಿ ದಯಪಾಲಿಸಿದ ಗದಗಿನ ಪರಮಪೂಜ್ಯ ಶ್ರೀ ತೋಂಟದಾರ್ಯ ಜಗದ್ಗುರುಗಳಿಗೆ ಭಕ್ತಿಪೂರ್ವಕ ಪ್ರಣಾಮಗಳು

* + ಪೊಗಳಲೆನ್ನಳವೆ ನಿಮ್ಮ (ಮೂ)

ಪಲನಿಗೆ ಪತಿಯಿತ್ತನೆ ವಸ್ತ್ರವ ನೇಯುವ
ಸೆಲದಿಗೆ ನಿಜರೂಪನಿತ್ತು ರಕ್ಷಿಸಿದನೆ ॥೧೦॥

ಪುತ್ತದೊಳೀಶಯೋಗವ ಬಲಿದನೆ ಗೋಪು
ಹುತ್ತದ ಮೇಲೆ ಕ್ಷೀರವ ತಾನೆ ಕರೆಯಲು
ನೆತ್ತಿಯು ಬಾಯೊಳುಂಡನೆ ಬುಕ್ಕಭೂಪಗೆ
ಪುತ್ತದ ಮೇಲೆ ಮಾವಿನಹಣ್ಣು ಕೊಟ್ಟನೆ
ಭಕ್ತರು ಪರ್ವವೆಸಗೆ ಹೋಗಿ ಬಯಲಾಗಿ
ಪುತ್ತದೊಳಗೆ ಲಿಂಗವಾಗಿ ಕಾಣಿಸಿದನೆ
ಬಿತ್ತಿದ ಬೆಳೆಗೆ ಮಳೆ ಬರಿಸೆಮೂರ್ಮ
ಹುತ್ತದೊಳಗೆ ಲಿಂಗವಾಗಿರೆ ತಾನೆ ದೇ
ವೋತ್ತಮನೆನೆ ವಾದಿಗಳ ಲಜ್ಜಿಸಿದನೆ ಐ
ವತ್ತು ದೇವರಿಗೆ ಭಿಕ್ಷವ ಮಾಡೆ ಪರುಸಿಗೆ
ತೃಪ್ತಿ ಪಡಿಸಿದನೆ ಅಣ್ಣ ಮಲ್ಲೇಶನಿಂ
ಮುತ್ತಿನ ಪಂಚಪಾವಡವ ಕೈಕೊಂಡನೆ
ಸಪ್ತ ಭೊಜಂಗ ತುರಂಗ ಜಂಗಮದೇವ
ರುತ್ತಮ ವೃಷಭ ಮಹಿಷಿ ಮಾರ್ಜಾಲ
ಗಿತ್ತನೆ ಪ್ರಾಣವನು ಹೊಳಲಗುಂದದ ಶಿವ
ಶಕ್ತಿಗೊಲಿದು ಉಂಡನೆ ಕದಂಗಳು
ತೆತ್ತಿರೆ ತೆಗೆಸಿದನೆ ಭಾವಿಗೆ ಜಲ
ಬತ್ತಿರೆ ಬರಿಸಿದನೆ ನಿಲ್ಲದೆ ಓಡುವ
ಎತ್ತಿಗೆ ನಿಮ್ಮಾಣೆಯಿಡಲು ನಿಲಿಸಿದನೆ ॥೧೧॥

ಕೊಲ್ಲಲೆಳಸಬಂದ ಚೋರರ ಫಣೆಯಿಂದ
ನಿಲ್ಲದೋಡಿಸಿದನೆ ಮೀಸಲಳಿಯದ ಅಕ್ಕಿ
ಚೆಲ್ಲೆ ಳೆನೀರ್ಗಳನಿಲ್ಲದಾಗಿಸಿದನೆ
ಕಲ್ಲಕೋಟೆಯ ತಿಮ್ಮನದಟ ತಗ್ಗಿಸಿದನೆ
ಪಲ್ಲಕ್ಕಿಯೊಳು ಮೂರ್ತಿಗೊಳಿಸಿ ಗುಬ್ಬಿಗೆ ತರು
ವಲ್ಲಿ ಬಯಲಾಗಿ ಕಡಬದೊಳಿರ್ದನೆ
ಮಲ್ಲಿಕಾರ್ಜುನಸೆಟ್ಟಿ ರಥವನಡರಿ ಪೋಗೆ
ಎಲ್ಲರ್ಗೆ ಕಾಣಿಸಿದನೆ ಗಾಳಿಪೂಜೆಯ

ಮಲ್ಲಿಕಾರ್ಜುನನ ಭಕ್ತಿಯ ಕೈಕೊಂಡೆನೆ
ಮಲ್ಲಿಸೆಟ್ಟಿಯು ಪಾದತೀರ್ಥವ ಮೋಸದಿ
ಚೆಲ್ಲಿಹೋಗಲು ಲಿಂಗಮಂ ತೊಲಗಿಸಿದನೆ
ಗೊಲ್ಲಗೆ ಹೇಳಿ ಪಾಯಸವ ಮಾಡಿಸಿದನೆ ಭಕ್ತ
ರೆಲ್ಲರು ಸಹವಾಗಿ ಸವಿದನೆ ಮೀಸಲ
ನೆಲ್ಲಿವಾರಿಸೆಯನಗ್ನಿ ಪಚಿಸಲ್ಕೆ ಸಾಮರ್ಥ್ಯ
ವೆಲ್ಲಿಯದೆನಿಸಿದನೆ ಬೆಟ್ಟದಾವರೆ
ಸಲ್ಲೀಲೆಯಿಂದ ನೂರೆಸಳಿನೊಳೊಲಿದನೆ ॥೩॥

ಎರಡು ಭೂತಗಳು ಸೇವೆಯ ಮಾಡೆ ಕೈಲಾಸ
ಪುರಕೆ ಕಳುಹಿದನೆ ನಾಗಸಮುದ್ರದೊ
ಳಿರುತಿಪ್ಪ ಬಯಲಾಗಿ ಹೋದನೆ ಅಲ್ಲಿಪ್ಪ
ಪರಬ್ರಹ್ಮಯೋಗಿ ರಂಧ್ರವನು ಹಾರಿಸಿಕೊಂಡು
ಪರನೊಳೊಂದಾದನೆಂದು ಹೆಬ್ಬೂರೊಳುಬರ್ದನೆ
ಚರದ ದೇವರುಗಳೈನೂರು ಬಲವಂದು
ಪರವಿಡೆ ಮೋನದಿಂದವೆ ಸಾಕೆನಿಸಿದನೆ
ಪರುಷದಿ ಕಣೆಯಕಲ್ಲೊಳು ತುಮುಕೂರೊಳು
ಪರವರೊಪ್ಪುವ ದೇವರಾಯ ಪಟ್ಟಣದಲ್ಲಿ
ಇರುಳೊಂದರೊಳು ಪೂಜೆಗೊಂಡನ ಪುಷ್ಪವ
ನೆರಡೆರಡೆಡೆಯೊಡನೆ ಸತಿ ತನಗೆಂದು
ಹಿರಿದಾಗಿ ಮಡಗಿರಲೆರಡ ತರುಣಿ ತಳಿಗಗೂಡ
ದಿರಲು ಬರಿಸಿದನೆ ಕುರುಡರಿಗೆ ಕಣ್ಣಿತ್ತನೆ
ಇರ್ಕಡಿಯಾದ ತುರುಕನಸುವಿತ್ತನೆ ಹುಟ್ಟು
ಗುರುಡಿಯ ಕರದ ಲಿಂಗದೊಳಿರ್ದನೆ ಜಂಗಮ [illegible]
ಲರಸು ನೀರಿಲಪೂರ್ಣ ಕ್ಷಣದೊಳಾಗಿಸಿದನೆ ॥೪॥

ಗುಡಿಯ ಬಾಗಿಲ ಲಿಂಗದಿಂದ ತೆಗಿಸಿದನೆ
ಬಸವನವೊಡೆಯರು ವಿನುತಾಜ್ಞೆಗೆಯಿಂದಂ
ದೊಡನೆ ನುತಿಸಿ ಭೂತವಾಗಿ ರಕ್ಷಿಸಿದನೆ
ಸಿಡಿಲಪೂಜೆಯನೊಪ್ಪುಗೊಂಡನೆ ಮಾನಿಸ
ಕೊಡವೆ ಮುಕುತಿಯ ಮುಡಿಯೊಳಿಟ್ಟು ಇದಿರಾಗಿ

ನಡೆದು ಕರಣನಿತ್ಯಲಿಂಗಕಾರ್ಶ್ಯಗೆಯ್ದನೆ
ಕಡುಗಿಚ್ಚಿನೊಳು ದೇವ ಮಂದಿರದೊಳು ಪ್ರತ್ಯ
ಸುಡದೆ ಮುಟ್ಟನ ಹಾಗೆ ಇರಿಸಿ ತೋರಿಸಿದನೆ
ಬಡವರ್ಗೆ ಬರದೊಳು ತವನಿಧಿ ಇತ್ತನೆ
ಪಡಿಗದೊಳಗೆ ನೃಪದ್ರವ್ಯ ತರುತಿರ್ದರ್
ಎಡವಿ ಕೆರೆಗೆ ಬಿದ್ದ ಕೊಡಗಾಸು ಹಿಡಿದನೆ
ತಡಿಗಳೆರಡು ಮೀರಿ ಹೊಳೆ ಬರಲ್ಕೆನೆ
ನಡು ತೊರೆಯೊಳಗೆ ವಿರಾಜಿಸಿದನೆ ಸರ್ವ
ಕಡಿಯೆ ವಿಷವನಿಳುಹಿದನೆ ಕೆರೆಗೆ ಹೋದ
ಕೊಡನ ಬರಿಸಿಕೊಟ್ಟನೆ ಪಡಿವಿ ನಿಲ್ಲದೊಳಯಿಗೆ ನಿಲಿಸಿದನೆ
ಮೃಡನ ಧ್ಯಾನಿಸುತಿರ್ದನೆ ನಿಮಗೆ ಒಪ್ಪದೆ
ಪಾತಕಿರನೆ ಬಯಲು ಮಾಡಿ ಮೆರೆದನೆ ೯೭

ಮೋಸದಿ ಭವಿ ಬರೆ ಕಾಮನ ಮುಟ್ಟಿಸಿದನೆ
ವಾಸಿಯು ಮೇಲೆ ಕೋಪವ ಮಾಡಿ ಪಶುಗಳ
ನಾ ಸಮಯದೊಳು ರಕ್ತವನು ಕರೆಸಿದನೆ
ಮೀಸಲು ಬೆಕ್ಕಯು ಶಿವಗೆ ಬೇಕೆಂದು
ಕಾಸಲದನು ರಕ್ತವಾಗಿಸಿದನೆ ಓರ್ವ
ದಾಸ ಮುಟಿದ ಶಿರಹಿಡಿದನೆ ಸ್ವಾಮಿಸಿದನೆ
ವಾಸುದೇವನ ಕರದಿಂದ ನಿಂದಿಸುತಿರ್ದ
ದಾಸನ ಹಲ್ಲುಗಳನುದುರಿಸಿ ಕುಟ್ಟಿದನೆ
ದಾಸ ಭೂತವ ಬಿಡಲವನ ಭಂಗಿಸಿದನೆ
ದಾಸನಿತ್ತರಡು ಭಾಗದಾಯವಗಳೊಳಗಿಂದ
ನೋಸರಿಸದೆ ಲಿಂಗವಂ ಮಾಡಿ ಕೊಟ್ಟನೆ
ಹಾಸನದವನಿತ್ತ ಭಕ್ತಿದಿ ಬಸವನ
ಲೇಸಾಗಿ ಮಾಡಿದನೆ ಪುಷ್ಪವನೊಯ್ದು
ದಾಸರ ತಗುಳ್ದವನೆ ಬಂಜೆಯಂಗೆ
ಕೂಸುಗಳ ಕೊಟ್ಟನೆ ಮಹಾಮಹೇಶನ
ದಾಸಕ್ಕೆ ಹೋಗಿ ಲಿಂಗದ ಮೇಲೆ ಕುಳಿತನೆ ೯೮

ಕಾರುಣ್ಯನಿಧಿಯು ಗೆಲಿಸು ಎಂದು ಪಾರ್ವನ
ನಾರಿ ದೀಪಕೆ ನೀರೆರೆಯಲುರುಪಿದನೆ
ಚಾರು ಜಂಗಮ ಪಾದತೀರ್ಥವ ಪತಿಯುಪ್ಪ
ನೀರಿನಿಂದ ಪಡೆದೆಲ್ಲರಿಗೆ ಕೊಟ್ಟು ತನಗೆ ಸಿಹಿ
ನೀರಿನಿಂದ ಪಡೆದು ಸೇವಿಪೆನೆನೆ ಬಾಯ್ಗದು
ಬಾರದ ಹಾಂಗೆ ಮಾಡಿದೆ ತಿಗುಳ್ವಾಣ್ಯದ
ವೀರಣಾರ್ಯಗಣವರ ರೋಗವಲ್ಲಿಯು ವಿಷ
ಪೂರಿಸಿರಲು ತೊಲಗಿಸಿದೆ ಕನ್ನಡ ಭಾಷೆ
ಬಾರದಕ್ಷಿಗಳಿಲ್ಲವೆನೆ ಕೃಪೆಯಾದನೆ
ಸಾರ ಪ್ರಸಾದವಾದುದು ವಿಷಕೆಂತೆನೆ
ಮಾರಮರ್ದನನೆ ನಿನ್ನಮೃತವೆನಿಸಿದೆ ಗಂ
ಭೀರನೆ ನಿನ್ನ ಪ್ರಸಾದ ಪುಷ್ಪವನು ವಿ
ಚಾರವಿಲ್ಲದೆ ಚೆಲ್ಲಿದವಳಿಷ್ಟಲಿಂಗವ
ನಾರ್ಕೈ ಕುಸುಮಾವಿರ್ದಲ್ಲಿ ಇರಿಸಿದೆ ವಿ
ಚಾರಿಸಿ ಶಿವರಾತ್ರಿಯು ದಿನದೊಳು ವಿ
ಸ್ತಾರ ಶ್ರೀವರಗಿರಿಯು ಗಂಗೆಯೊಳು ಮು
ಸೋರಮ್ಯ ದೇವರಾಯ ಪಟ್ಟಣದೊ
ಳಾ ರಾತ್ರಿ ಸಜ್ಜಲದಿನ್ನೆಯೊಳಿರ್ದನೆ ॥೭॥

ತುಂಬಿದ ಹೊಳೆಯು ದಾರಿಯು ಬಿಡಿಸಿದನೆ ತ್ರ
ಯಂಬಕೇಶನ ನುಡಿಸಿದನೆ ನೇತ್ರಿಯು ಬಾಯೊ
ಳೊಂಬತ್ತು ಕೊಳಗ ಪಾಲುಂಡನೆ ನಿಗಗಂಟಿ
ತುಂಬಿ ಕಾಣದೆ ಚಿಂತಿಸಲು ತೋರಿ ಕೊಟ್ಟನೆ
ಒಂಬತ್ತುದಿನ ಭಿಕ್ಷಮುಂ ಬೇಡಲಿಲ್ಲ
ವೆಂಬ ನುಡಿಯು ಕೇಳಿ ಹರುಷಿತನಾದನೆ
ಕುಂಬಳೇಶ್ವರನ ಭಕ್ತಿಯು ಕುಂಭಗೆ ಸಿರಿಯನಿತ್ತಲು ಮಲ್ಲೇಶ
ನಿಂ ಬುದ್ಧಿಯನು ಪೇಳಿಸಿದನೆ ನಿಂದಿಸಿ ವಿಪ್ರ
ದುಂಬಿಗಳಿಂದ ದೂಸಕರ ಕಡಿಸಿದನೆ
ಶಂಭು ಮೋದೂರಡವಿಯೊಳು ಕಿರಾತರ
ಡಿಂಬರೆ ಬದುಕೆಂದು ಹೊಸಕೆಯನಿತ್ತ ದಿ
ಗಂಬರ ನಿನ್ನ ಕಡಿದು ಮಡಿದಡಿಗಸುವ

ಕೊಂಬೆಡಗ ಬರಿಸಿದನೆ ಓೀನಜೋಗಿಯ
ಸ್ತಂಭವ ಬಿಡಿಸಿದನೆ ದೂಷಕರ ಮನೆ
ಯಂ ಭುಗಿಲನುರವಿಸು ನೆಟ್ಟನೆ ನೇಮವೆನೆ ಕೇಳಿ
ತುಂಬೆಯ ಹೂವಿನ ಮಳೆಯ ಕರಸಿದನೆ ॥೮॥

ಬಾಳೆಯ ಗೊನೆಯನಾಚೆಗೆ ತಿರುಗಿಸಿದನೆ
ಭಾಳಾಕ್ಷ ನಿಮ್ಮ ಪೊಗಳ ಹಳಿದೊರ್ವನು
ಕೀಳು ಪೋತಲ ರಾಜನೆ ಘನವೆನಿಸಿದನೆ
ಗೂಳಿ ಗದ್ದೆಯ ಮೇಯೆ ನಿಮ್ಮಾಣೆಯಿಡಲು
ಏಳೆಂಟುದಿನ ಮೇವು ತೊರೆಯೆ ರಕ್ಷಿಸಿದನೆ
ಬಾಳೆಯಹಣ್ಣು ಮೀಸಲೊಳೊಂದು ಚಿಪ್ಪನು
ಕೇಳದೆ ಮೆಲಿದ ಸತಿಯ ಪುರುಷನ ಲಿಂಗ
ವಾಳೋಕಿಸಿ ಬಯಲಾಗೆ ಬರಿಸಿದನೆ
ಏಳುನೂರೆಲೆ ನೀರ ನಿಮಗೆ ಶರಣುಮಾಡೆ
ಹೋಳು ಮಾಡಿದೊಡೇನುವಿಲ್ಲವಾಗಿಸಿದನೆ
ತಾಳಲಾರದೆ ಲಿಂಗಣ್ಣೊಡೆಯರು ಏಳುನೂರು
ಬಾಳೆಯ ಪೊಸಪಣ್ಗಳ ತಡೆಯದೆ ತಂದು ಕೆಸರಲ್ಲಿ
ಹೂಳಿ ನಿಂಬೆಯ ಪಣ್ಗಳ ಹೊಡಿಬಿಡದೆ ಈ
ರೇಳುದಿನದ ತಂಗುಳ ಬೋನವನು ನಿ
ರಾಳ ವಿರಕ್ತ ಸಲಿಸಿ ನಲುವಿಂ ಗೆಲಿದನೆ ॥೯॥

ಕೊಡನ ತುಂಬಿದ ಹಳಿದುಪ್ಪವ ಕೆಸರಲ್ಲಿ
ಮಡಗಿ ತೆಗೆದುತಂದ ಬಾಳೆಯಪಣ್ಗಳ
ರಡು ಸಾವಿರದೇಳ್ನೂರೆಳೆನೀರ್ಗಳ
ತಡೆಯದೆ ತಂದು ಮುಂದಿರಿಸಿ ಸಲಿಸುಯೆನ
ಲೆಡವಲ್ಲಿ ಕುಳ್ಳಿರ್ದದೊಡ ಸಿದ್ಧೇಶಗೆ
ಎಡೆ ಮಾಡಿಸೆಲ್ಲವನಿಲ್ಲವೆನಿಸಿದನೆ
ಕೊಡೆಯಕಲ್ಲೂರ ಬಾಗಿಲೊಳು ತಡೆಯ ಪೋಗಿ
ನಡುಬೀದಿಯೊಳಗೆ ವಿರಾಜಿಸುತಿರ್ದನೆ
ಕಡಬದೊಳಿರ್ದಂತೆ ನಿಟ್ಟೂರಲಿಂಗದ
ಗುಡಿಗೆಯ್ದು ಒರ್ವನ ಕರಕೆ ಭತ್ತವಿತ್ತು

ಪ್ರೌಢವಿಯಧಿಪ ಭೈರವನೆಡೆಗೆಯ್ದಿ ಕರವಲ್ಲಿ
ಕೊಡುಯೆಂದು ಕಳುಹಿದೊಡವನಿಯ ಭಸಿತಕೆ
ಪೊಡೆಮಟ್ಟು ಮುದಿಯಯ್ಯನೆಯಾಗಬೇಕೆಂದು
ನಡೆತಂದು ಅನಿಷ್ಟವೀಯೆಂದು ನಿಮ್ಮ ಮೆ
ಲ್ಲಡಿಗೆ ವಂದಿಸಲಿತ್ತನೆ ಕುರುಬರಿ
ಟ್ಟೆಡೆಯನಿಲ್ಲೆನಿಸಿದನೆ ತುರುವ ಕಾಯ್ವ
ಹುಡುಗರಿದಿರೊಳಿರ್ದನೆ ಅರೆಯ ಮೇಲೆ
ಮೃಡನ ವಾಹನ ರೂಪಿನಿಂದ ರಾಜಿಸಿದನೆ ॥೧೦॥

ಹೇಮಕೂಟ ನೋಡಿ ವಿದ್ಯಾನಗರಿಯ
ಸೋಮವಾರದ ಬಸವಮ್ಮನ ಮನೆಯೊಳ
ನಾಮಯ ಚರ ಪಾದತೀರ್ಥವ ಪಡೆದಿರ
ಲಾ ಮನೆಗೊರ್ವನು ಕಾಶಿಯುದಕವನು
ತಾಮಸವಿಲ್ಲದೆ ತರಲೆದ್ದು ಶರಣೆಂದು
ಪ್ರೇಮದಿ ಸೇವಿಸುತಿರೆ ಕಂಡು ಕಬ್ಬಿಣ
ಹೇಮಕ್ಕೆ ಸರಿಯಪ್ಪುದೆ ಪಾದತೀರ್ಥವಿ
ದೇ ಮುಕ್ತಿಗೆ ಸಾಧನವಧಿಕವೆಂಬುದನು ನಿ
ಸ್ಸೀಮ ನೀನೆಲ್ಲರೊಳುಸಿರ್ದು ತ್ರಾಸಿನೊಳಿಟ್ಟು
ಸಾಮಾನ್ಯವಧಿಕಮೆಂಬೆರಡನರುಹಿದೆ ನಿಃ
ಕಾಮ ನೀನಾ ವರ ಕಲ್ಲುಮಠವ ಬಿಟ್ಟು
ಭೂಮಿಗಧಿಕವಾದ ಗೂಳೂರಮಠಕೆ ಮ
ನೋಮುದದಿಂದ ಜಾವಕೆಯ್ತಂದೆ ನಿಮಗೆಣೆ
ಯೇ ಮಿಕ್ಕ ಜಂಗಮವೆಂದಾಡಿಪವನ ಬಾ
ಯ ಮಾಣದುಳಿಗಿಸಿದನೆ ಹುಚ್ಚವಿರೂಪಾಕ್ಷ
ಸ್ವಾಮಿಗೈಕ್ಯವ ಪೇಳ್ದನೆ ಭಜಕರಿಗೆ
ಕಾಮಿತ ಫಲವಿತ್ತನೆ ಮಹೇಶ್ವರ

ಸ್ತೋಮದೊಳೊಪ್ಪಿರ್ದನ ಎಡೆಯೂರ ಸು
ಭೂಮಿಯೆಂದುರೆ ಶಿವಯೋಗಿವರ ಬಂದನೆ ॥೧೧॥

ಗುರು ತೋಂಟದ ಯತಿರಾಯನ
ವರ ಮಹಿಮೆಯನೀಶಭಕ್ತರೆಲ್ಲ ಮಹೇ
ಶ್ವರರೋದಲೆಂದು ವರ ಕಿ
ನ್ನರ ಗರುಣೆಯು ಬಸವಲಿಂಗದೇವಂ ಪೇಳ್ದ ॥೧೨॥

ಸಿದ್ಧೇಶ್ವರನ ಪವಾಡದ [ತಾರಾವಳಿ] ಸಮಾಪ್ತ ಮಂಗಳ ಮಹಾಶ್ರೀಶ್ರೀಶ್ರೀ

ಶ್ರೀ ಬಸವಪ್ಪಶಾಸ್ತ್ರಿ ವಿರಚಿತ

ತ್ರಿಷಷ್ಠಿ ಪುರಾತನಗಣಸ್ತವ

● ಸರಡ್ಡಿ ಮಲ್ಲಿಕಾರ್ಜುನ

ಭಗವಂತನ ಅದ್ಭುತ ಲೀಲೆಯನ್ನೂ ಅವನ ಅವಿಭಾಜ್ಯ ಅಂಗವಾದ ಪ್ರಕೃತಿಯನ್ನೂ ಮತ್ತು ವಿಭಿನ್ನ ಸ್ವರೂಪದ ಪ್ರಪಂಚ ರಚನಾ ಕೌಶಲವನ್ನು ಅವಲೋಕಿಸಿದ ಮಾನವ ಮೊದಲು ಮೂಕವಿಸ್ಮಿತನಾದರೆ. ಕ್ರಮೇಣ ಅವನ ಪ್ರಭಾವಾತಿಶಯದ ವರ್ಣನೆಗೆ ಸಮರ್ಥನಾದನೆಂಬುದಕ್ಕೆ ಋಗ್ವೇದದಲ್ಲಿಯ ದೇವ ದೇವತೆಗಳ ಸ್ತೋತ್ರಗಳೇ ಸಾಕ್ಷಿ. ಭಕ್ತಿಯ ಪ್ರಾದುರ್ಭಾವ ಅನಂತ ಪ್ರಕೃತಿಯೊಡೆಯನ ಔನ್ನತ್ಯ, ಅವನ ಸರ್ವಜ್ಞತ್ವ, ಮತ್ತು ಸರ್ವಶಕ್ತಿಮತ್ತ್ವವನ್ನು ಅವಲೋಕಿಸಿದಾಗ ತಂತಾನೇ ಉಂಟಾಗುತ್ತದೆ. ಅವನ ಅನುಗ್ರಹದ ಪ್ರಾಪ್ತಿಗಾಗಿ ಅವನ ಸ್ತುತಿ ಅನಿವಾರ್ಯ. ಏಕೆಂದರೆ ದೇವಾಧಿ ದೇವತೆಗಳೂ ಸಹ ಮುಖಸ್ತುತಿಯ ಆಕರ್ಷಣೆಯಿಂದ ಪಾರಿಗಿಲ್ಲವೆಂದೇ ಹೇಳಬೇಕು. 'ಸ್ತೋತ್ರಂ ಕಸ್ಯನ ತುಷ್ಟಯೇ' ಎಂಬ ಸೂಕ್ತಿ ಪ್ರಸಿದ್ಧ. ಅದಕ್ಕಿಂತಲೂ ಪ್ರಸಿದ್ಧವಾದ ಇನ್ನೊಂದು ಸುಭಾಷಿತ ಕೆಳಗಿನಂತಿದೆ :

"ಪ್ರಿಯವಾಕ್ಯಪ್ರದಾನೇನ ಸರ್ವೇ ತುಷ್ಯಂತಿ ಜಂತವಃ ।
ತಸ್ಮಾತ್ ತದೇವ ವಕ್ತವ್ಯಂ ವಚನೇ ಕಾ ದರಿದ್ರತಾ ॥"

ಉಳ್ಳವರು ಶಿವಾಲಯವ ಮಾಡುವರು, ನಾನೇನು ಮಾಡಲಿ ಬಡವನಯ್ಯ' ಎಂದು ತೊರಗಿದ ಬಸವಣ್ಣನವರು ಭಕ್ತಿಪುರಸ್ಸರವಾಗಿ ಭಗವಂತನ ಸ್ತುತಿಗೈದು ತೃಪ್ತಿಪಡುವುದು ಅತಿ ಸಮಂಜಸ.

ಹೀಗೆ ಪರಮಾತ್ಮನ ವಿಷಯಕವಾದ ಪ್ರೀತಿಯೇ ಭಕ್ತಿಯೆನಿಸಿ (ಸಾ ತ್ವಸ್ಮಿನ್ ಪರಮಪ್ರೇಮರೂಪಾ[೧]) ಅದು ಮೂರು ವಿಧವಾಗಿದೆ— ೧) ಕಾಯಿಕೀ ೨) ಮಾನಸೀ ಮತ್ತು ೩) ವಾಚಿಕೀ. ಈ ವಾಚಿಕೀ ಭಕ್ತಿಯೇ ನವವಿಧ ಭಕ್ತಿ ಭೇದಗಳಲ್ಲೊಂದು ಕೀರ್ತನವೆನಿಸಿ ಸ್ತೋತ್ರವೆಂದು ಕರೆಯಲ್ಪಟ್ಟಿದೆ. ಉದ್ದೇಶವನ್ನು

---

೧) ನಾರದ ಭಕ್ತಿಸೂತ್ರ ೨

ಲಕ್ಷ್ಯದಲ್ಲಿಟ್ಟುಕೊಂಡು ಭಗವನ್ನಾಮ ಕೀರ್ತನ ರೂಪವಾದ ಸ್ತೋತ್ರವನ್ನು ಹಾಡುವ ಭಕ್ತರನ್ನು ನಾಲ್ಕು ವಿಧವಾಗಿ ವಿಂಗಡಿಸಲಾಗಿದೆ—

ಚತುರ್ವಿಧಾಃ ಭಜಂತೇ ಮಾಂ
ಜನಾಃ ಪ್ರಕೃತಿನೋಽರ್ಜುನ ।
ಆರ್ತೋ ಜಿಜ್ಞಾಸುರರ್ಥಾರ್ಥೀ
ಜ್ಞಾನೀ ಚ ಭರತರ್ಷಭ ॥[೨]

ಸ್ತೋತ್ರ ಸಾಹಿತ್ಯದ ವಿವಿಧ ಮುಖಗಳಲ್ಲಿ ಸಗುಣೋಪಾಸನೆಯ ದರ್ಶನವೇ ನಮಗಾಗುತ್ತದೆ. ನಿರ್ಗುಣೋಪಾಸನೆ ಕಠಿಣವಲ್ಲವೇ ?

ಕ್ಲೇಶೋಽಧಿಕ ತರಸ್ತೇಷಾಂ
ಅವ್ಯಕ್ತಾಸಕ್ತಚೇತಸಾಮ್।
ಅವ್ಯಕ್ತಾ ಹಿ ಗತಿರ್ದುಃಖಂ
ದೇಹವದ್ಭಿರವಾಪ್ಯತೇ ॥[೩]

ಭಗವದನುಗ್ರಹಪ್ರಾಪ್ತಿಗಾಗಿ ಭಕ್ತಿಯಷ್ಟು ಸುಲಭೋಪಾಯ ಬೇರೊಂದಿಲ್ಲ.

ನ ತಪೋಭಿರ್ನ ವೇದೈಃ
ನ ಜ್ಞಾನೇನ ನಾಪಿ ಕರ್ಮಣಾ ।
ಹರಿರ್ಹಿ ಸಾಧ್ಯತೇ ಭಕ್ತ್ಯಾ
ಪ್ರಮಾಣಂ ತತ್ರ ಗೋಪಿಕಾಃ ॥[೪]

ಸ್ಥಿರವಾದ ಈ ಭಕ್ತಿಯೇ ಈಶ್ವರ ಸಾಕ್ಷಾತ್ಕಾರದ ಸಾಧನವೆಂಬುದು ಕಾಳಿದಾಸನಿಗೂ ಸಮ್ಮತ :

ಸ ಸ್ಥಾಣುಃ ಸ್ಥಿರಭಕ್ತಿಯೋಗಸುಲಭೋ
ನಿಃಶ್ರೇಯಸಾಯಾಸ್ತು ವಃ ॥[೫]

ಭಕ್ತಿಮೀಮಾಂಸೆಯಲ್ಲಿ ಹೇಳಿರುವಂತೆ ಈಶ್ವರ ಸಾಕ್ಷಾತ್ಕಾರವೇ ಫಲವಾಗಿರುವ ಭಕ್ತಿಯನ್ನು ಪಂಚಮ ಪುರುಷಾರ್ಥವೆನ್ನುವಷ್ಟು ಅದರ ಮಹತ್ವವನ್ನು ಗುರುತಿಸಲಾಗಿದೆ :

---

೨. ಭಗವದ್ಗೀತೆ vii, ೧೬
೩. „ xi, ೫೪
೪. ಪದ್ಮಪುರಾಣದಲ್ಲಿ ಭಾಗವತ ಮಾಹಾತ್ಮ್ಯ ii. ೧೮
೫. ವಿಕ್ರಮೋರ್ವಶೀಯ i, ೧
೬. ಭಕ್ತಿಮೀಮಾಂಸೆ vi ೧

ಪಂಚಮಃ ಪುರುಷಾರ್ಥೋ ಹಿ
ಭಕ್ತಿಃ ಶೈವೀ ಸನಾತನೀ ॥[೭]

ದೃಢವಾದ ನಿಷ್ಠೆಯಿಂದ ಮಾಡುವ ಭಕ್ತಿಗೆ ಪೂಜಾಸಾಮಗ್ರಿಯ ಬಗ್ಗೆ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ.

'ಪತ್ರಂ ಪುಷ್ಪಂ ಫಲಂ ತೋಯಂ'[೮]

ಈ ರೀತಿ ಸರಳೀಕೃತವಾದ ಭಕ್ತಿ ಜನಸಾಮಾನ್ಯರಿಗೂ ಸುಲಭ ಸಾಧ್ಯವಾಗಿದ್ದು ಅಧಿಕ ವ್ಯಯವನ್ನೂ, ಶ್ರಮವನ್ನೂ ಒಳಗೊಂಡ ವೈದಿಕ ವಿಧಿಯ ಯಜ್ಞಯಾಗಾದಿಗಳಿಗಿಂತಲೂ ಶ್ರೇಷ್ಠವೆಂದು ಒಪ್ಪಿದರೆ ತಪ್ಪೇನಿಲ್ಲ.

ಕೀರ್ತನಾಪರನಾಮಧೇಯವುಳ್ಳ ವಾಚಿಕೀಭಕ್ತಿಯು ಸಾಮಾನ್ಯವಾಗಿ ಸಹಸ್ರನಾಮಾವಳಿಯಲ್ಲಿ ಪರ್ಯವಸಾನ ಹೊಂದಿದರೆ ಅದನ್ನು ಸಾಹಿತ್ಯದ ಪ್ರಕಾರವೆಂದು ಹೇಳಲಾಗದು. ಅದರ ಸಾಹಿತ್ಯೀಕರಣವನ್ನೂ ಮೂರು ವಿಧವಾಗಿ ಮಾಡಬಹುದು. ೧) ಶಬ್ದಾಲಂಕಾರಗಳು, ವಿಚಿತ್ರವೂ ಕ್ಲಿಷ್ಟವೂ ಆದ ವೃತ್ತಗಳು ಮತ್ತು ಶಬ್ದಾಡಂಬರ–ಇವುಗಳ ಪ್ರಯೋಗ ೨) ದೇವ ದೇವಿಯರ ಶೃಂಗಾರಾದಿಭಾವಗಳ ವರ್ಣನೆ. ೩) ವೇದಾಂತ ಪಾಠವನ್ನು ದೃಷ್ಟಾಂತಗಳ ಸಹಾಯದಿಂದ ಸುಲಭವಾಗಿ ವಿವರಿಸುವುದು. ಇದು ಭಕ್ತಿ ಸಾಹಿತ್ಯ ಬೆಳೆದು ಬಂದುದರ ಸಂಕ್ಷಿಪ್ತ ಪರಿಚಯ. ಇವೆಲ್ಲ ಹೇಳುವುದರ ಉದ್ದೇಶವಿಷ್ಟೇ. ತ್ರಿಷಷ್ಠಿ ಪುರಾತನರಭಕ್ತಿ ನಿಷ್ಠೆಯಿಂದ ಕೂಡಿದ್ದು. ವೇದ ವಿಧಿಗಳ ಬಗ್ಗೆ ಎಳ್ಳಷ್ಟು ಲಕ್ಷ್ಯ ವಹಿಸಿಲ್ಲ. ಅವರ ಭಕ್ತಿಭಾವದ ಪರಾಕಾಷ್ಠೆಯನ್ನು ವಿವರಿಸುವ ಕವಿ ಅವರ ಬಗ್ಗೆ ಭಕ್ತಿಭಾವವುಳ್ಳವನಾಗಿದ್ದರೂ. ಕಾವ್ಯಗುಣವನ್ನು ಎಷ್ಟೂ ಮರೆತಿಲ್ಲ. ಕೇವಲ 'ಹರಹರ ಮಹಾದೇವ' ಎಂಬ ಬಾಸಿತ್ತರಕ್ಕಿಮದ ಘೋಷಣೆಯಾಗಲೀ. ಬರಿ ನಾಮಾವಳಿಯಾಗಲೀ ಈ ಕೃತಿಯಲ್ಲಿ ಕಂಡು ಬರುವುದಿಲ್ಲ.

೧೯ನೆಯ ಶತಮಾನದ ಉತ್ತರಾರ್ಧದಲ್ಲಿ (ಕ್ರಿ.ಶ. ೧೮೪೩–೧೮೯೧) ಬದುಕಿದ ಮೈಸೂರರಸರ ಸಭೆಯಲ್ಲಿ ವಿದ್ವದ್ರತ್ನವಾಗಿ ಮೆರೆದ ಉಭಯ 'ಕವಿತಾ ವಿಶಾರದ'ನೆಂಬ ಗೌರವಕ್ಕೆ ಪಾತ್ರರಾಗಿ, ಅಭಿನವ ಕಾಳಿದಾಸನೆಂಬ ಬಿರುದಾಂಕಿತರಾದ, ಪಂಡಿತ ಮಾನ್ಯ ಶ್ರೀ ಬಸವಪ್ಪ ಶಾಸ್ತ್ರಿಗಳು, ಭಾಷಾಂತರ, ಕನ್ನಡದಲ್ಲಿ ಸ್ವತಂತ್ರ ಕೃತಿ ರಚನೆ, ಸಂಸ್ಕೃತದಲ್ಲಿ ಸ್ವತಂತ್ರ ಕೃತಿ ರಚನೆ ಹೀಗೆ ನಾನಾ ಮುಖವಾಗಿ ಸಾರ-

---

೭. ಮೊಗ್ಗೆಯ ಮಾಯಿದೇವ, ಶಿವಾನುಭವ ಸೂತ್ರ, viii ೭೮
೮. ಭಗವದ್ಗೀತಾ vii ೨೬

ಸ್ವತ ಸೇವೆಯಲ್ಲಿ ತೊಡಗಿದ್ದು, ೨೧ರಷ್ಟು ಗ್ರಂಥಗಳ ರಚನೆ ಮಾಡಿ ಕಾವ್ಯ ಲೋಕದಲ್ಲಿ ಧ್ರುವತಾರೆಯಾಗಿ ಮೆರೆಯುತ್ತಾರೆ. ಸಂಸ್ಕೃತ ಕಾವ್ಯರಚನೆಗೆ ವಿಶ್ರಾಂತಿಯೆಂಬುದಿಲ್ಲವೆಂಬುದಕ್ಕೆ ನಿದರ್ಶನರಾದ ಕವಿವರೇಣ್ಯರಲ್ಲಿ ಬಸವಪ್ಪ ಶಾಸ್ತ್ರಿಗಳು ಅಗ್ರೇಸರರಲ್ಲವೇ ? ಪುರಾಣ ಕವಿಗಳ ಕಾವ್ಯಕ್ಕೆ ಬೆಲೆಕೊಟ್ಟು ನವೀನರ ಕೃತಿಗಳ ಖಂಡನೆಯನ್ನು ಮಾಡುವವರ ವಿರುದ್ಧ ಕವಿಗುರು ಕಾಲಿದಾಸ ಅನೇಕ ಶತಮಾನಗಳ ಹಿಂದೆಯೇ ಬಂಡೆದ್ದುದನ್ನು ಅವನ ಮಾಲವಿಕಾಗ್ನಿ ಮಿತ್ರವೆಂಬ ಪ್ರಥಮ ನಾಟಕದಲ್ಲಿ ಕಾಣುತ್ತೇವೆ:

ಪುರಾಣಮಿತ್ಯೇವ ನ ಸಾಧು ಸರ್ವಂ
ನ ಚಾಪಿ ಕಾವ್ಯಂ ನವಮಿತ್ಯವದ್ಯಮ್ ।
ಸಂತಃ ಪರೀಕ್ಷ್ಯಾನ್ಯತರತ್ ಭಜಂತೇ
ಮೂಢಃ ಪರಪ್ರತ್ಯಯನೇಯ ಬುದ್ಧಿಃ ॥೯

ಇದೊಂದು ಕ್ರಾಂತಿಗೀತವೆಂದರೆ ತಪ್ಪಾಗದು. ಇಂಥದೇ ಕ್ರಾಂತಿಯ ಕಹಳೆಯನ್ನು ಅಭಿನವ ಕಾಲಿದಾಸರಾದ ಬಸವಪ್ಪ ಶಾಸ್ತ್ರಿಗಳು ಮತ್ತೊಮ್ಮೆ ಊದಿರುವುದನ್ನು ಕಾಣುತ್ತೇವೆ.

ರಸಮಂ ಗುಣಮಂ ನೋಡದೆ
ಪೊಸಗಬ್ಬಮಿದೆಂದನಾದರಿಪ ಮೂರ್ಖರ್ಗಾ-
ನೆಸಗಿವೆ ಎನಲ್ಕು ಕೃತಿಯಂ
ರಸಜ್ಞರಾಗರಿಪೆ ಪೇಳ್ದ ಕೃತಿ ಕೃತಕೃತ್ಯಂ ॥೧೦

ಶಿವಭಕ್ತಿ ಪಾರಮ್ಯದ ವಿಷಯವಾಗಿ ಜಗತ್ ಪಸಿದ್ಧರಾದ ೬೩ ಪುರಾತನರನ್ನು ಬಸವಾದಿ ಪ್ರಮಥರು ಸ್ಮರಿಸಿರುವುದನ್ನು ಕಾಣುತ್ತೇವೆ. 'ಆದ್ಯರ ವಚನ ಪರುಷ ಕಂಡಯ್ಯ' ಮುಂತಾದ ಉಕ್ತಿಗಳಲ್ಲಿ ಈ ಭಾವವನ್ನು ಕಾಣುತ್ತೆವೆ. ಇಂಥ ಮಹಿಮಾನ್ವಿತರ ಗುಣಗಾನದಿಂದಲೇ ಕಾವ್ಯ ಸಾರ್ಥಕ. ಕವಿಜೀವನ ಧನ್ಯವೆಂಬ ಭಾವದಿಂದಲೇ ಬಸವಪ್ಪ ಶಾಸ್ತ್ರಿಗಳು ತ್ರಿಷಷ್ಟಿಪುರಾತನಗಣಸ್ತವವನ್ನು ರಚಿಸಿದಂತೆ ತೋರುತ್ತದೆ. ಶಿವನಿಗಿಂತಲೂ ಜಗತ್ತಿನಲ್ಲಿ ಅಧಿಕನಾದ ದೇವನಿಲ್ಲ. ಆದರೆ ಶಿವಭಕ್ತರು ಶಿವನಿಗಿಂತಲೂ ದೊಡ್ಡವರೆಂದು ಶಿವನು ಗಿರಿಜೆಗೆ ಹೇಳಿದುದನ್ನು ಕವಿ ಕೆಳಗಿನಂತೆ ಉದ್ಧರಿಸುತ್ತಾನೆ.

---

೯. ಮಾಲವಿಕಾಗ್ನಿ ಮಿತ್ರ ೧.೩

೧೦. ಬಸವಪ್ಪ ಶಾಸ್ತ್ರಿ ವಿರಚಿತ ರೇಣುಕ ವಿಜಯ

ದೇವಾನಾಮಧಿಕೋऽಹಮಸ್ಮಿ ಶೃಣು ಮದ್ಭಕ್ತೋ ಹಿ ಮತ್ತೋऽಧಿಕಃ
ಸ್ವಾಮಿತ್ಯದ್ರಿ ಭುವೇ ಶಿವೇನ ಕಥಿತಂ ಸಂಶ್ರದ್ಧಧಾನೋಲಪಚ:[೧೧]
ಶಂಭುಶ್ರೀಪಾದಗತ್ರಿಷಷ್ಠಿಕಗಣಾನ್ ಸದ್ಭಕ್ತಿತಃ ಕೀರ್ತಿತುಂ[೧೨]
ಪ್ರೋದ್ಯುಕ್ತೋऽಹಮತೋऽಸ್ಮಿ ಕಃ ಕ್ಷಿತಿತಲೇ ಧನ್ಯೋ
ಮದನ್ಯೋಜನಃ[೧೩]
(ಶಾರ್ದೂಲ ವಿಕ್ರೀಡಿತ ವೃತ್ತ)

ಸುವರ್ಣ ಒಂದೇ ಆದರೂ ಅದು ಕೇಯೂರಾದಿ ನಾನಾವಿಧ ರೂಪಗಳನ್ನು ಧರಿಸಿ ಭಿನ್ನವಾಗಿ ತೋರುತ್ತದೆ. ಅದೇ ರೀತಿ ಶಿವನೊಬ್ಬನೇ ಆದರೂ ಗಣಾಧೀಶ್ವರ ರಾಗಿ ಭಿನ್ನವಾಗಿ ತೋರುತ್ತಾರೆ. ಭುಜಂಗ ಪ್ರಯಾತ ವೃತ್ತದಲ್ಲಿ ಈ ಪದ್ಯ ಇದನ್ನು ವಿವರಿಸುತ್ತದೆ:

ಯಥಾಸ್ವರ್ಣಮೇಕಂ ಕಿರೀಟಾದಿ ಭೂಷಾ—
ವಿಶೇಷೈರ್ವಿಭಿನ್ನಂ ತಥಾ ಶಂಭುರೇಕಃ ।
ಸ ಏಷಾಂ ಗಣಾಧೀಶ್ವರಾಣಾಂ ಪ್ರಭೇದೈ:
ಜಯತ್ಯೇವ ತಾನ್ ಕೀರ್ತಯಾಮ್ಯದ್ಯ ಭಕ್ತ್ಯಾ ॥[೧೪]

ಈ ಉಕ್ತಿ ರಚನೆಗೆ ಉಭಯಭಾಷಾವಿಶಾರದ ಎಳಂದೂರು ಶ್ರೀ ಷಡಕ್ಷರದೇವರ ಕೆಳಗಿನ ಪದ್ಯ ಪ್ರೇರಣೆಯಿತ್ತಿದುದರಲ್ಲಿ ಸಂದೇಹವಿಲ್ಲ.

ಸುದುರ್ಲಭಂ ಪ್ರಾಪ್ಯ ಕವಿತ್ವರತ್ನಂ
ತದಪ್ಯಮೇಶಾಯ ಸಮರ್ಪಣೀಯಮ್ ।
ಅನ್ಯಾರ್ಪಿತಂ ತದ್ಧಿ ಭವತ್ಯವಶ್ಯಂ
ನಿರರ್ಥಕಂ ಸ್ಯಾದಿತಿ ಮೇ ಮನೀಷಾ ॥[೧೫]

ಈ ವಿಷಯದಲ್ಲಿ ಆದರ್ಶಪ್ರಾಯನೂ ಕ್ರಾಂತಿಕಾರನೂ ಆದ ಹಂಪೆಯ ಹರಿಹರನನ್ನು ಈ ರೀತಿ ಷಡಕ್ಷರದೇವ ಸ್ತುತಿಸಿದ್ದಾನೆ—

---

೧೧. ಎಂ. ಜಿ. ನಂಜುಂಡಾರಾಧ್ಯರಿಂದ ಸಂಪಾದಿಸಲ್ಪಟ್ಟು ಮೈಸೂರಿನ ಸುಬೋಧ ಪುಸ್ತಕ ಮಾಲೆಯಿಂದ ಪ್ರಕಟಿತವಾದ 'ಅಭಿನವ ಕಾಳಿದಾಸ ಬಸವಪ್ಪ ಶಾಸ್ತ್ರಿಗಳ ಸಮಗ್ರ ಕೃತಿಗಳು' ಎಂಬ ಗ್ರಂಥದಲ್ಲಿ ಉಪಲಬ್ಧ.

೧೨. 'ಕೀರ್ತಯಿತುಂ' ಎಂಬುದು ಸಾಧು ಪಾಠವಾದರೂ ಛಂದಸ್ಸಿನ ದೃಷ್ಟಿಯಿಂದ ಇದೇ ಸರಿ.

೧೩. ತ್ರಿಷಷ್ಠಿಪುರಾತನಗಣಸ್ತವ —ಪದ್ಯ ೪

೧೪. ಅದೇ —ಪದ್ಯ ೫

೧೫. ಷಡಕ್ಷರದೇವ ವಿರಚಿತ ಕವಿಕರ್ಣರಸಾಯನ ೧-೫೯

ಶಿವಸ್ಯ ತದ್ಭಕ್ತತತೇರ್ವಿಧಾಯ
ಕೃತಿರನೇಕಾಃ ಸುಕವಿಪ್ರಣುತ್ಯಾಃ ।
ಶಿವಸ್ಯ ಸಾಯುಜ್ಯಮಿಹ ಪ್ರಪನ್ನೋ
ಹರೀಶ್ವರಸ್ತೇನ ಸಮಃ ಕವಿಃ ಕಃ ॥೧೬

ಶಿವನನ್ನೂ, ಶಿವಾಂಶಸಂಭೂತರಾದ ಶಿವಭಕ್ತರನ್ನೂ ಕುರಿತು ಶತಾಧಿಕ ಕೃತಿಗಳ ರಚನೆ ಮಾಡಿ ಮುಂದಿನ ಕವಿಗಣಕ್ಕೆ ಭಕ್ತಿಕಾವ್ಯದ ಪರಂಪರೆಯನ್ನು ದಯಪಾಲಿಸಿದ ಹಂಪೆಯ ಹರಿಹರನಿಗೆ ಸಮಾನರಾದ ಕವಿಗಳುಂಟೇ ? ಎಂದು ಷಡಕ್ಷರದೇವ ಕೇಳುವಲ್ಲಿ ಔಚಿತ್ಯವಿದೆ.

ಶಿವಭಕ್ತಿ ಪಾರಮ್ಯವನ್ನು ಸ್ಥಾಪಿಸುವಲ್ಲಿ ೬೩ ಪುರಾತನರು ವೇದ ವಿಧಿಯನ್ನು ತಿರಸ್ಕರಿಸಿದುದನ್ನು ಕಾಣುತ್ತೇವೆ. ಉದಾಹರಣೆಗೆ ಬೇಡರ ಕಣ್ಣಪ್ಪನನ್ನೇ ತೆಗೆದುಕೊಳ್ಳೋಣ. ಜಿಡ್ಡಿನ ಬಾಧೆಗೊಳಗಾದ ಶಿವನನ್ನು ಆ ಎಣ್ಣೆಯ ಜಿಡ್ಡಿನಿಂದ ಬಿಡುಗಡೆ ಮಾಡಲು ಕಾಲಿನ ಮೆಟ್ಟುಗಳನ್ನು ಉಪಯೋಗಿಸಲು ಹಿಂದೆ ಮುಂದೆ ನೋಡದಿದ್ದರೂ (ವೈದಿಕ ವಿಧಿಯಿಂದ ಶಿವಪೂಜೆ ಮಾಡಲು ಅಸಮರ್ಥನಾಗಿದ್ದರೂ) ತನ್ನ ಕಣ್ಣನ್ನೇ ಶಿವನಿಗೆ ಕೊಡಲು ಎಷ್ಟೂ ಅಳುಕದ ನಿಷ್ಕಾಮಭಕ್ತಿಯನ್ನು ಅವನಲ್ಲಿ ಕಾಣುತ್ತೇವೆ. ಈ ವಿಷಯವನ್ನೇ ಬಸವಪ್ಪ ಶಾಸ್ತ್ರಿಗಳು ಈ ರೀತಿ ಬಹು ಸುಂದರವಾಗಿ ವಿವರಿಸಿದ್ದಾರೆ—

ಯಸ್ಯಾಂಘ್ರಿರೀಶ ಮುಕುಟೀ ತಟನೀ ತಟಾಬ್ಜಂ
ಯಸ್ಯಾಸ್ಯತೋಯಮಭಿಷೇಕಪಯಃ ಶಿವಸ್ಯ ।
ಯಸ್ಯಾಂಬಕಂ ತ್ರಿಣಯನಾಕ್ಷಿ ಚಿಕಿತ್ಸಕಂ ತಂ
ಕಣ್ಣಪ್ಪ ಭಕ್ತಮನಿಶಂ ಶಿರಸಾ ನಮಾಮಿ ॥೧೭

(ವಸಂತತಿಲಕ ವೃತ್ತ)

ಕಾಲಿನಿಂದ ಶಿವನನ್ನು ಒದೆದು ಶಿವದ್ರೋಹಿಯಾದನೆಂದು ಭಾವಿಸಲು ಆಸ್ಪದವಿದ್ದರೂ ಸಹ ಅವನ ಕಾಲು ಶಿವಮುಕುಟಕ್ಕೆ ಕಮಲವಾಯಿತೆಂದು ರೂಪಕಾಲಂಕಾರದಿಂದ ಕವಿ ವರ್ಣಿಸಿದ್ದಾರೆ. ಅದೇ ರೀತಿ ಶಿವನ ಮೇಲೆ ಉಗುಳಿದನೆಂದು ಸಾಮಾನ್ಯವಾಗಿ ಹೇಳಬಹುದಾದ ಕ್ರಿಯೆಯನ್ನು ಶಿವಾಭಿಷೇಕವಾಯ್ತೆಂದು ಸ್ತುತಿಸಿದ್ದಾನೆ. ಇದೆಲ್ಲವನ್ನೂ ಮೀರಿದ ಅವನ ತ್ಯಾಗ ಅನ್ಯಾದೃಶ. ತನ್ನ ಕಣ್ಣನ್ನೇ

೧೬. ಕವಿಕರ್ಣರಸಾಯನ ೧.೧೪
೧೭. ತ್ರಿಷಷ್ಟಿಪುರಾತನಗಣಸ್ತವ ೧೮

ಶಿವನಿಗೆ ಕೊಡುವಲ್ಲಿ ಅವನಿಗಾವ ಆತಂಕವೂ ಇರಲಿಲ್ಲ. ಅಂತೆಯೇ ಶಿವಭಕ್ತ ಶಿರೋಮಣಿಯೆಂದು ಅವನು ಜಗತ್ಪ್ರಸಿದ್ಧನಾಗಿದ್ದಾನೆ. ಇದರಿಂದ ಒಂದು ವಿಷಯ ಸ್ಪಷ್ಟ. ವೈದಿಕ ವಿಧಿಯಿಂದ ಮಾಡುವ ಪೂಜಾದಿ ಕ್ರಿಯೆಗಳಿಂದ ಶಿವ ತೃಪ್ತನಾಗದೇ ಭಕ್ತಿಯ ಆವೇಶಕ್ಕೆ ಪ್ರಸನ್ನನಾಗುತ್ತಾನೆ. ಭಾವಗ್ರಾಹಿಯಾದ ಭಗವಂತನನ್ನು ಆಡಂಬರಗಳಿಂದ ಮೋಸಗೊಳಿಸಲು ಸಾಧ್ಯವಿಲ್ಲ. ಅಂತೆಯೇ 'ಭಕ್ತಿಪ್ರಿಯ ನಮ್ಮ ಕೂಡಲಸಂಗಮದೇವ' ಎಂದು ಬಸವಣ್ಣನವರು ನುಡಿದಿದ್ದಾರೆ. ಇದನ್ನೇ ಕೆಳಗಿನ ಪದ್ಯ ವಿಶದೀಕರಿಸುತ್ತದೆ.

ಮೂರ್ಖೋ ವದತಿ ವಿಷ್ಣಾಯ
ವಿಷ್ಣವೇ ಇತಿ ಪಂಡಿತಃ ।
ತಯೋರ್ಭಕ್ತಿಃ ಸಮಾನಾ ಸ್ಯಾತ್
ಭಾವಗ್ರಾಹೀ ಜನಾರ್ದನಃ ॥

ಭಕ್ತ ಪ್ರಹ್ಲಾದ ನಾರಸಿಂಹಾವತಾರ ತಾಳಿದ ವಿಷ್ಣುವಿನಿಂದ ತಂದೆಯನ್ನು ಕೊಲ್ಲಿಸಿದರೆ ಪುರಾತನರಲ್ಲೊಬ್ಬ (ಚಂಡನಾಥ) ಶಿವದ್ರೋಹಿಯಾದ ತಂದೆಯನ್ನು ಕೈಯಾರೆ ಕೊಂದುದನ್ನು ಕಾಣುತ್ತೇವೆ. ಪಿತೃಹತ್ಯೆ ಮಹಾಪಾತಕಗಳಲ್ಲೊಂದೆಂಬುದು ಸಾಮಾನ್ಯ ನಂಬುಗೆ. ಈ ಘಟನೆಯನ್ನು ವಿವರಿಸುವ ಪದ್ಯವಿಂತಿದೆ. [ಸ್ರಗ್ಧರಾವೃತ್ತ].

ಗೋಕ್ಷೀರೈರಿಂದು ಗೌರೈಃ ಸ್ನಾಪಿತ ಮನುಪದಂ ವೀಕ್ಷ್ಯ ಸಾಕ್ಷಾತ್ ಸ್ವಲಿಂಗಂ
ಧಿಕ್ಕೃತ್ಯಾಗಸ್ಕರಂ ಸ್ವಂ ಪಿತರಮಪಿಪರೀಭೂಯ ಹಸ್ತಾಯುಧೇನ ।
ಆಹೃತ್ಯಾಪಾಟಯ ತ್ರಿಪುರ ಹರಪುರೀಗೋಪುರೋದ್ಯತ್ಕವಾಟಂ
ತಂ ವಂದೇ ಚಂಡಿಕೇಶ ಪ್ರಥಿತಗಣಪದಶ್ರೀವಿಭುಂ ಚಂಡನಾಥಮ್[೧೮]

ಶಿವಪೂಜೆಗೆಂದು ಇರಿಸಿದ ಹೂವನ್ನು ಮೂಸಿ ನೋಡಿದ ಅಪರಾಧಕ್ಕಾಗಿ ಹೆಂಡಂದಿರ ಮೂಗನ್ನೋ ಕೈಯನ್ನೋ ಕತ್ತರಿಸಿದ ಪುರಾತನರುಂಟು (ಚಿರುತೊಂಡ ಮತ್ತು ಕಳಚುರ್ಯ). ಜಂಗಮವೇಷದ ಸೇವಕನ ಚರಣ ತೊಳೆಯಲೊಪ್ಪದ ಹೆಂಡತಿಯ ಕೈಯನ್ನೇ ಕತ್ತರಿಸಿದವರುಂಟು (ಕಲಿಕಂಬ). ಜಂಗಮವೇಷದಲ್ಲಿ ಪರೀಕ್ಷೆ ಮಾಡಲು ಬಂದ ಶಿವನಿಗೆ ತನ್ನ ಶಿರಸ್ಸನ್ನೇ ಅರ್ಪಿಸಿದವರುಂಟು (ಪಗಲ್ಬೋಳ). ಭಸ್ಮಧಾರಿಯಾದ ವೈರಿಗಳನ್ನು ಯುದ್ಧದಲ್ಲಿ ಕೊಲ್ಲಲಾರದೇ ಅವರ ಖಡ್ಗಕ್ಕೆ ಆಹುತಿಯಾಗಿ ಶಿವಸಾಯುಜ್ಯ ಪಡೆದವರುಂಟು. (ಏಣಾಧಿನಾಥ)

---

೧೮. ತ್ರಿಷಷ್ಟಿಪುರಾತನಗಣಸ್ತವ–ಪದ್ಯ ೧೧

ಶಿವನಿಂದಕರಾದ ಜೈನರನ್ನು ಸಂಹರಿಸಲೆಂದೇ ಶೂಲವನ್ನು ಸ್ಥಾಪಿಸಿದ ಕುಲಚ್ಚರಿ ಯಂಥ ಪುರಾತನರಲ್ಲಿ ಶಿವಭಕ್ತಿಯ ಅತಿರೇಕವನ್ನು ಅಂದರೆ ತಪ್ಪಾಗಿ ಭಾವಿಸಿದರೆ ಧರ್ಮಾಂಧತೆಯನ್ನು ಕಾಣುತ್ತೇವೆ. ಇಷ್ಟೇ ಅಲ್ಲ, ಶಿವನಿಗೇ ಲಿಂಗಧಾರಣೆ ಮಾಡಿದವರುಂಟು. ಅವರಲ್ಲಿ ಕಲಿಗಣನಾಥ ಅತ್ಯಂತ ಪ್ರಸಿದ್ಧ. ಅವನ ವಿಷಯ ವಾಗಿ ಕವಿ ಈ ರೀತಿ ನುಡಿದಿದ್ದಾರೆ.

ಭಕ್ತಿಸ್ತೇ ದೃಷ್ಟಪೂರ್ವೇತ್ಯವಿತಥವಚನೈರ್ಭಕ್ತವರ್ಯೈಸ್ಸಭಾಯಾಂ
ಉದ್ಬಾಹು ಶ್ಲಾಘ್ಯಮಾನಸ್ಸವಿಧಯಮುದಿತಾಂ ಪದ್ಧತೀಂ
ವೀರಶೈವಮ್ ।
ಧಿಕ್ಷುರ್ವಂತಂ ಕೃತಾಂತದ್ವಿಕ್ಷಮಪಿ ಕೃತವಾನ್ ಸಾಧು
ಲಿಂಗಾಂಗಿನಂ ಯೋ
ತಂ ವಂದೇ ದೇವವೃಂದೇಡಿತಂ ಕಲಿಗಣನಾಥಾಭಿದಂ
ಭಕ್ತವರ್ಯಮ್ ॥[೧೯]

ಕಲ್ಲುಗಳಿಂದ ಹೊಡೆದು ಶಿವನನ್ನು ಮೆಚ್ಚಿಸಿದವರಲ್ಲಿ ಸಾಂಖ್ಯತೊಂಡನು ಅಗ್ರಗಣ್ಯ. ಈ ಪ್ರಸಂಗದಲ್ಲಿ ಅರ್ಜುನನ ಜೊತೆ ಕಿರಾತವೇಷಧಾರಿಯಾಗಿ ಬಾಹುಯುದ್ಧದಲ್ಲಿ ತೊಡಗಿ ಅವನ ಮುಷ್ಟಿ ಪ್ರಹಾರಗಳಿಂದ ಸಂತುಷ್ಟನಾದ ಶಿವನೀ ರೀತಿ ನುಡಿಯುವುದನ್ನು ನೆನೆಯಬಹುದು.

ಯಥಾತೃತೀಯೇನ ಯುಧಿಪ್ರವೀರ
ತವಾಪರಾಧೇನ ಭವಾಮಿ ತುಷ್ಟಃ ।
ತಥಾ ನ ಭಕ್ತ್ಯಾ ನ ತಪಸಾಂ ವಿಭೂತ್ಯಾ
ತರುಪ್ರಸೂನಾರ್ಚನಾಯಾ ಚ ಬದ್ಧ್ಯಾ ॥

ಗಾನಸುಧೆಯಿಂದ ಶಿವನನ್ನು ಸಂತೋಷಗೊಳಿಸಿ ಶಿವಸಾಯುಜ್ಯ ಪಡೆದವರೂ ಉಂಟು. ಅವರಲ್ಲಿ ಚೊಕ್ಕನಾಯನಾರ ಮತ್ತು ತಿರುನೀಲಕಂಠರು ಮುಖ್ಯರು. ಶಿವಪೂಜೆಯ ದ್ರವಿಣಕ್ಕಾಗಿ ಜೂಜಾಡಿದ ಶಿವಭಕ್ತರೂ ಉಂಟು. ಅಚ್ಯುತ ಭಕ್ತನು ಜೂಜಾಡುವುದಷ್ಟೇ ಅಲ್ಲ, ಜೂಜಿನಲ್ಲಿ ಶಿವನನ್ನು ಸೋಲಿಸಿದ ಅದ್ಭುತವನ್ನು ಕವಿ ಈ ರೀತಿ ವರ್ಣಿಸಿದ್ದಾನೆ.

ದ್ಯೂತಾರ್ಜಿತಂ ದ್ರವಿಣಮೀಶ್ವರ ಭಕ್ತಿತೃಪ್ತ್ಯೈ
ಭಕ್ತ್ಯೋಪಯುಜ್ಯ ನಿಜವಾಸಮುಪಾಗತೇನ ।

---

೧೯. ತ್ರಿಷಷ್ಠಿಪುರಾತನಗಣಸ್ತವ, ಪದ್ಯ ೩೫

ದ್ಯುತಂ ಹರೇಣ ಕಲಯನ್ನಹರತ್ ಸ್ವಮರ್ಥಂ
ಸಂತಾಡ್ಯ ಯಸ್ತಮಹಮಚ್ಯುತಭಕ್ತಮೀಡೇ ॥ ೨೦

(ವಸಂತತಿಲಕ ವೃತ್ತ)

ಇನ್ನೂ ವಿಚಿತ್ರವೆಂದರೆ, ಸ್ತ್ರೀ ಕುಚವನ್ನೇ ಶಿವಲಿಂಗವೆಂದು ನಂಬಿ ಗಣಪದವಿಯನ್ನು ಪಡೆದವರೂ ಉಂಟು. ವೇಶ್ಯಾಸಕ್ತನಾದ ಸೌಂದರನಂಬಿಯು ವೇಶ್ಯೆಯ ಸ್ತನದಲ್ಲಿಯೇ ಶಿವಲಿಂಗದರ್ಶನ ಮಾಡಿ ಜ್ಞಾನೋದಯವಾಗಲು ಸದ್ಗತಿಯನ್ನು ಪಡೆದ ಕಥೆ ರೋಮಾಂಚಕವಲ್ಲವೇ ? ಈ ಘಟನೆಯನ್ನು ಬೇರೊಂದು ಕಡೆ ಹೀಗೆ ಹೇಳಲಾಗಿದೆ.

ಭರದಿ ಸೌಂದರನಂಬಿ ತಿರುವನಾಚಿಯ ಕುಚವ
ಪರಮ ಶಿವಲಿಂಗವೆಂದರ್ಚಿಸಲ್ಕೆ
ಪುರಹರ ಮೆಚ್ಚುತ ತರುಣಿ ಮೊಲೆಯೊಳಗುದಿಸಿ
ಪರಮ ಪದವಿಯನವನಿಗಿತ್ತನಲ್ತೆ ॥

ಶಿವಭಕ್ತಿಪಾರಮ್ಯ ಗಂಡಸರಿಗಷ್ಟೇ ಸೀಮಿತವಾಗಿಲ್ಲ. ಅದೇ ರೀತಿ ಅಥವಾ ಅದಕ್ಕೂ ಮಿಗಿಲಾಗಿ ಭಕ್ತಿಯ ಪರಾಕಾಷ್ಠೆಯನ್ನು ಮೆರೆದ ಶಿವಶರಣೆಯರುಂಟು. ಒಳಗೆ ಸುಳಿವಾತ್ಮ ಗಂಡೂ ಅಲ್ಲ, ಹೆಣ್ಣೂ ಅಲ್ಲ, ಎಂಬ ಶರಣವಾಣಿ ಸ್ಮರಣೀಯ. ವರ್ಣ ಭೇದವನ್ನೋ ಲಿಂಗಭೇದವನ್ನೋ ಇಲ್ಲವೆ ವಯೋಭೇದವನ್ನೋ ಭಕ್ತಿಯ ವಿಷಯದಲ್ಲಿ ಮಾಡಲಾಗದು. ಇಲ್ಲಿ ಕಾಳಿದಾಸನ ಉಕ್ತಿಯೊಂದನ್ನು ಸ್ಮರಿಸಬಹುದು—

ನ ಧರ್ಮವೃದ್ಧೇಷು ವಯಃ ಸಮೀಕ್ಷ್ಯತೇ ॥ ೨೧

ಅವರಲ್ಲಿ ಮಂಗಾಯಕ್ಕ ಯಸ್ಯಜ್ಞಾನೀ ಮತ್ತು ಕಾರಿಕಾಲಮ್ಮೆ ಪ್ರಾತಃಸ್ಮರಣೀಯರು. ಕಾರಿಕಾಲಮ್ಮೆಯ ಭಕ್ತಿಯಂತೂ ಎಲ್ಲರನ್ನೂ ಬೆರಗೆಡಿಸುವಂತಹದು. ಶಿವಶರಣರು ನಡೆದು ಹೋದ ದಾರಿಯಲ್ಲಿ ಕಾಲಿನಿಂದ ನಡೆದರೆ ಪ್ರಮಾದವೆಂದು ತಿಳಿದು ತಲೆಯಿಂದಲೇ ಶಿವಲೋಕವನ್ನು ಪ್ರವೇಶಿಸಿದ ಕಾರಿಕಾಲಮ್ಮೆಗೆ ಶಿವಾನುಗ್ರಹ ದೊರೆಯದಿದ್ದರೆ ಇನ್ನಾರಿಗೆ ದೊರೆಯಬಹುದು ? ಇದನ್ನು ಕವಿ ಈ ರೀತಿ ವರ್ಣಿಸಿದ್ದಾನೆ—

ಶಿವಶರಣಪದಾಬ್ಜನ್ಯಾಸಪತ್ಯಾಂ ಪದಾಭ್ಯಾಂ
ಮಯಿ ಯದಿ ವಿಚರಂತ್ಯಾಂ ದುಷ್ಕೃತಂ ಸ್ಯಾತ್ ಪದವ್ಯಾಮ್ ।
ಇತಿ ವಿನಮಿತ ಮೂರ್ಧ್ನಾ ಯಾ ಚಚಾರ ಕ್ಷಿತೌ ತಾಂ
ಅನುಪಮಮಭಿವಂದೇ ಕಾರಿಕಾಲಮ್ಮೆ ದೇವೀಮ್ ॥ ೨೨

---

೨೦. ತ್ರಿಷಷ್ಟಿಪುರಾತನಗಣಸ್ತವ, ಪದ್ಯ ೫೭
೨೧. ಕಾಳಿದಾಸ, ಕುಮಾರಸಂಭವ, v ೧೬
೨೨. ತ್ರಿಷಷ್ಟಿಪುರಾತನಗಣಸ್ತವ, ಪದ್ಯ ೬೯

ಈ ರೀತಿ ನಿಷಿದ್ಧವೆಂದು ಸಾಮಾನ್ಯವಾಗಿ ಕರೆಯಬಹುದಾದ ಕ್ರಿಯೆಗಳಲ್ಲಿ ತೊಡಗಿದ್ದರೂ ಭಕ್ತಿಯ ಅತಿರೇಕದಿಂದಾಗಿ ಜಗದ್ವಂದ್ಯರಾದ ಪುರಾತನರನ್ನು ಭಕ್ತಿ ಭಾವದಲ್ಲಿ ಮಾತ್ರ ಅನುಸರಿಸಬೇಕು. ಉಳಿದ ವಿಷಯವನ್ನು ನಾವು ಗಣನೆಗೆ ತೆಗೆದುಕೊಳ್ಳಬಾರದು. ಲಿಂಗ, ವರ್ಣ, ವೃತ್ತಿ ಏನೇ ಇದ್ದರೂ[೨೩] ಮನಃಪ್ರವೃತ್ತಿ ಸದ್ಭಾವನೆಯಿಂದ ಕೂಡಿದ್ದರೆ ಅಂದರೆ ಶಿವಭಕ್ತಿಯಿಂದಾಗಿ ಲೋಕವಂದ್ಯರಾಗುವ ಸಂಗತಿ ನಿಜಕ್ಕೂ ಅನುಪಮ. ಬಸವಾದಿ ಪ್ರಮಥರೂ ಸಹ ಪುರಾತನರನ್ನು ಭಕ್ತಿಯ ವಿಷಯವಲ್ಲಿ ಮಾತ್ರ ಅನುಕರಣೆ ಮಾಡಿದ್ದಾರೆ. ಆದರೆ ಅವರ ಆಚಾರ, ವಿಚಾರಗಳ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಹೀಗೆ ಭಕ್ತಿಯ ಆಂದೋಲನಕ್ಕೆ ಹರಿಕರರಾದ ೬೩ ಪುರಾತನರ ಹೆಸರುಗಳನ್ನಾದರೂ ನಾವು ಸ್ಮರಿಸಿದರೆ ನಮ್ಮ ಪಾಪವೆಲ್ಲ ಪರಿಹಾರ ವಾಗದಿದ್ದರೂ ಆ ದಿಶೆಯಲ್ಲಿ ಪ್ರವೃತ್ತರಾಗುವ ಶುಭ ಸೂಚನೆಯೆಂದು ತಿಳಿಯ ಬೇಕು. ಅವರ ಹೆಸರುಗಳು ಈ ರೀತಿ ಇವೆ :

೧] ಶ್ರೀ ನೀಲಕಂಠ ೨] ತಿಲ್ಲೆಯಾಳಾಂಡ ೩] ಇಹಪ್ಪಗೆಯಾಂಡ ೪] ಕೋಲ್ಪುಲಿಯಾಂಡ ೫] ಚಂಡನಾಥ ೬] ಚಿರುತೊಂಡ ೭] ಇರಿ ಭಕ್ತ ೮] ಚಿರುತೊಣೆಯಾಂಡ ೯] ಕಳಚಂಗ ೧೦] ಕಲಿಕಂಬ ೧೧] ಮಾನ ಕಂಜರ ೧೨] ಕಣ್ಣಪ್ಪ ೧೩] ಪಗಲ್ಶೋಳ ೧೪] ಅರಿವಾಳ್ತಾಂಡ ೧೫] ತಿರು ಕುರುತೆತೊಂಡ ೧೬] ಏಣಾಧಿನಾಥ ೧೭] ಚಲಸೇದಿರಾಜ ೧೮] ಕುಲಚ್ಚರಿಯ ೧೯] ನಾಟ್ಯನಮಿತಾಂಡಿ ೨೦] ಕಲಿಚಿಟ್ಟಿಯಾಂಡೆ ೨೧] ವಾಗೀಶ ೨೨] ತಿರು ಜ್ಞಾನ ಸಂಬಂಧಿ ೨೩] ಮಂಗಾಯಕ್ಕ ೨೪] ಸುಂದರಪಾಂಡ್ಯ ೨೫] ಅಮರನೀತಿ ೨೬] ಪೂಸಲಾಂಡಿ ೨೭] ತಿರುನಾಳ್ಪೋವ ೨೮] ಐಪಡೇಯದೇವ ೨೯] ಕಲಿ ಗಣನಾಥ ೩೦] ಓಹಿಲಾರ್ಯ ೩೧] ಕಳಚಂದ ೩೨] ಸಾಂಖ್ಯತೊಂಡೆ ೩೩] ತಿರುಮಲಾಲ ೩೪] ನೃಸರದೇವ ೩೫] ಪಗಲ್ತೊಣೆಯ ೩೬] ಒಳಘಂಡೆ ಮೂರ್ತಿ ೩೭] ಕೊಂಗುಲಿಯ ಕಲಿಗಣನಾಥ ೩೮] ಕಡವಲನಂಬಿ ೩೯] ಕಲಿ ಯುವ ವಿಭು ೪೦] ಇಳೆಯಾಂಡ ಗುಡಿಮಾರ ೪೧] ಮುರುಘ ೪೨] ಚೊಕ್ಕ ನಾಯಲಾರ ೪೩] ತಿರುನೀಲಕಂಠ ೪೪] ಸೋಮಾಸಿಮಾರ ೪೫] ಕಡವೂರಕಾರಿ ೪೬] ನಮಿನಂದಿ ೪೭] ರುದ್ರಪಶುಪತಿ ೪೮] ತಿರುನೀಲನಕ್ಕ ೪೯] ಅತಿಭಕ್ತ ೫೦] ಆಪೂತಿ ೫೧] ಅಚ್ಯುತ ಭಕ್ತ ೫೨] ಚಿರುಪುಲಿಯಾಂಡ ೫೩] ಮೊಸಿ ಯಾಂಡ ೫೪] ಪೆರುಮಾಳೆ ೫೫] ನರಸಿಂಗ ೫೬] ಸೌಂದರನಂಬಿ ೫೭] ಜಡೆಯ

---

೨೩. ಹೋಲಿಸಿ : ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿಸ್ಯುಃ ಪಾಪಯೋನಯಃ ।
ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಽಪಿ ಯಾಂತಿ ಪರಾಂ ಗತಿಮ್ ॥
ಗೀತಾ ix. ೩೨

ನೈನಾರ ೫೮] ಯಸ್ತ್ರಜ್ಞಾನೀ ೫೯] ಪೆರುಮಾಳವಿಯು ಕಾರುಂಬ ೬೦] ಮೆರೆ ಮಿಂಡದೇವ ೬೧] ಕಲಿಕಾಮ ೬೨] ಚೇರಮದೇವ ೬೩] ಕಾರಿಕಾಲಮ್ಮೆ.

ವಿವಿಧ ವೃತ್ತಗಳಲ್ಲಿ ರಚಿತವಾದ ೭೧ ಪದ್ಯಗಳಿಂದ ಕೂಡಿದ ಈ ಕೃತಿ 'ಶ್ರೀಮತ್ ಶೈಲೇಂದ್ರಬಾಲಾಕುಚಕಲಶ' ಎಂಬ ಸ್ರಗ್ಧರಾವೃತ್ತದಲ್ಲಿಯ ಶಿವಸ್ತುತಿಯಿಂದ ಪ್ರಾರಂಭವಾಗಿ ನಂತರ ಗಿರಿಜೆ ಹಾಗೂ ಗಣೇಶರ ಸ್ತುತಿಗಳನ್ನು ಹೊಂದಿದೆ. ಆಮೇಲೆ ಭೂಲೋಕದಲ್ಲಿ ಶಿವನಾಜ್ಞೆಯಿಂದ ಶಿವಮತ ಸ್ಥಾಪನೆಗಾಗಿ ಅವತರಿಸಿದ ಬಸವೇಶ್ವರರ ಸ್ತುತಿ ಈ ರೀತಿಯಿದೆ__

"ಶಂಭೋರಾಜ್ಞಾಂ ವಹನ್ ಸ್ವ ಶಿರಸಿ ಶಿವಮತಸ್ಥಾಪನಾರ್ಥಂ
ಧರಣ್ಯಾಂ
ಮಾದಾರ್ಯಂ ಮಾದಲಾಂಬಾಸ್ ಹಿ ಬಹು ಸುಖಯನ್
ಪುತ್ರಭಾವೇನ ಭೂಮ ॥
ಜಾನನ್ ಶ್ರೀ ಸಂಗಮೇಶಾಚ್ಚರ ಪರಿಚರಣ ಪ್ರಕ್ರಮಂ ವೀರಶೈವ
ಕ್ಷೀರಾಕೂಪಾರ ಚಂದ್ರೋಽಜನಿ ಶಿವಪುರಿಯಸ್ತಂ ನಿಷೇವೇ
ವೃಷೇಂದ್ರಾಂ ॥[೨೪]

ಈ ಕಾವ್ಯಕೃತಿ ವಿಭಿನ್ನ ಹಾಗೂ ಕ್ಲಿಷ್ಟವಾದ ವೃತ್ತಗಳು ಅಲಂಕಾರ ಯೋಜನೆ ಆದಿಪ್ರಾಸಾದಿ ಕಲಾತ್ಮಕತೆ-ಇವುಗಳಿಂದ ಸಹೃದಯರ ಮನಸ್ಸನ್ನು ಸೂರೆಗೊಳ್ಳು-ತ್ತದೆ. ಆದಿ ಪ್ರಾಸಕ್ಕೊಂದು ಉದಾಹರಣೆ—

"ಪ್ರಾಣೇಶ್ವರಾಯ ತುಹಿನಾದ್ರಿಭುವಃ ಪಾವತ್ತಂ
ಪ್ರಾಣಿಗ್ರಹಂ ಜನಮುದೀಕ್ಷ್ಯ ನಿರುಧ್ಯ ಬಾಧವ್ ।
ಶ್ರೇಣೀಭವಂತಮಪಿ ಬಂಧುಜನಂ ಪ್ರವೃತ್ತ್ಯಾ
ಸ್ಥಾಣುಂ ತುತೋಷ...ತ ಮಿಹಪ್ಪಣಿಯಾಂಡಮೀಡೇ" ॥[೨೫]

ರೂಪಕಾದಿ ಅಲಂಕಾರಗಳ ಯೋಜನೆಯಲ್ಲಿ ಕವಿ ಸಿದ್ಧಹಸ್ತನೆನ್ನುವುದಕ್ಕೆ ಕೆಳಗಿನ ಒಂದೇ ಉದಾಹರಣೆ ಸಾಕ್ಷಿ.

ಕಣ್ಣಪ್ಪನು ಕಾಲಿನಿಂದ ಶಿವನನ್ನು ಒದೆದನೆನ್ನುವುದನ್ನೇ ರೂಪಕಾಲಂಕಾರದಿಂದ ಈ ರೀತಿ ಸುಂದರವಾಗಿ ವರ್ಣಿಸಲಾಗಿದೆ.

'ಯಸ್ಯಾಂಘ್ರಿರೀಶಮುಕುಟೀ ತಟನೀತಟಾಬ್ಜಂ'

---

೨೪. ತ್ರಿಷಷ್ಠಿಪುರಾತನಗಣಸ್ತವ. ಪದ್ಯ ೬

೨೫. ಅದೇ ಪದ್ಯ ೯

ಅಂದರೆ ಕಣ್ಣಪ್ಪದೇವನ ಪಾದವೇ ಶಿವನ ಮುಕುಟಮಾಲೆಗೆ ಕಮಲವಾಗಿ ಪರಿಣಮಿಸಿತು. ಅನುಪ್ರಾಸಾದಿ ಶಬ್ದಾಲಂಕಾರಗಳ ಸೊಬಗನ್ನು ಕೆಳಗಿನ ಪದ್ಯದಲ್ಲಿ ಕಾಣಬಹುದು.

"ಸುಕುಮಾರಕುಮಾರಕಾಯಮಾಂಸಂ
ಜಿತಮಾರಾಯ ಹರಾಯ ಯೋ ನಿವೇದ್ಯ ॥[೨೬]

ಪ್ರತಿಪದ್ಯದಲ್ಲಿಯೂ ಭಕ್ತಿಭಾವ ಉಕ್ಕುವುದನ್ನು ಕಾಣುತ್ತೇವೆ. ಆದುದರಿಂದ ಭಾವ (ರಸಾದಿ) ಧ್ವನಿಪೂರ್ಣವಾದ ಉದಾಹರಣೆಗಳಿವು ಎಂದು ಹೇಳಬಹುದು. ಅಲಂಕಾರಗಳು ಭಾವಧ್ವನಿಗೆ ಅನುಗುಣವಾಗಿ ಬಂದಿರುವುದನ್ನು ಕಾಣುತ್ತೇವೆ. ಹೀಗೆ ಕ ವ್ಯ ಲಕ್ಷಣಗಳಿಂದ ಕೂಡಿದ್ದರೂ ಭಕ್ತಿದ್ಯೋತಕವಾಗಿ ಕಾಣುವ ಈ ಕೃತಿಯನ್ನು ಶ್ರದ್ಧೆಯಿಂದ ಪಠಿಸಿದರೆ ದೊರೆಯುವ ಫಲವನ್ನು ವಿವರಿಸುವ ವಸಂತ ವೃತ್ತದಲ್ಲಿ ರಚಿತದಾದ ಪದ್ಯದಿಂದ ಈ ಕೃತಿ ಕೊನೆಗೊಳ್ಳುತ್ತದೆ :

ಭಕ್ತ್ಯಾ ತ್ರಿಷಷ್ಟಿಗಣಾಳಿಪ್ರವೃತ್ತರಮ್ಯಾ-
ಮೇನಾಂ ಸ್ತುತಿಂ ಜಗತಿ ಯೋಽನುದಿನಂ ಪಠಂತಿ ।
ತೇ ತತ್ಪ್ರಸಾದಪರಿಪಾಕಮಯೀಂ ನಿಜೇಷ್ಟ
ಸಿದ್ಧಿಂ ಭಜಂತಿ ಸುತರಾಮಿರರಾನಪೇಕ್ಷಮ್ ॥[೨೭]

---

೨೬. ತ್ರಿಷಷ್ಟಿಪುರಾತನಗಣಸ್ತವ, ಪದ್ಯ ೧೯
೨೭. ಅದೇ ಪದ್ಯ ೭೧

ಮಹಿಳಾ ಕಾರ್ಮಿಕರ ಹಕ್ಕುಗಳು

● ವಿನೀತಾ ಬಿ. ಪೈ

ಪ್ರಾಚೀನ ಕಾಲದಿಂದಲೂ ಮಹಿಳೆಯು ಸಮಾಜದಲ್ಲಿ ಪುರುಷರಿಗೆ ಸಮಾನವಾಗಿ ದುಡಿಯುತ್ತಾ ಬಂದಿದ್ದಾಳೆ. ಸಾಗುವಳಿಯೇ ಆಗಲಿ, ಕೈಗಾರಿಕಾ ಕ್ಷೇತ್ರದಲ್ಲಿಯೇ ಆಗಲಿ, ಆಕೆ ಸಮಾನವಾಗಿ ಕಾರ್ಯ ಮಾಡುತ್ತಾ ಬಂದಿದ್ದಾಳೆ. ಆದರೆ, ಎಲ್ಲ ಕಾಲಕ್ಕೂ ಮಹಿಳೆಗೆ ಪುರುಷ ಪ್ರಧಾನವಾದ ನಮ್ಮ ಸಮಾಜದಲ್ಲಿ ಪುರುಷನಿಗಿಂತ ಕಡಿಮೆಯ ಸ್ಥಾನವೇ ಇದೆ. ಹೆಚ್ಚಿನದಿರಲಿ, ಸಮಾನ ಸ್ಥಾನವಾದರೂ ಆಕೆಗೆ ದೊರೆತಿಲ್ಲ. ಅನೇಕ ಕ್ಷೇತ್ರಗಳಲ್ಲಿ ಮಹಿಳೆಯನ್ನು ಜೀತದಾಳಿಗಿಂತ ಕಡೆಯಾಗಿಯೇ ಕಂಡಿದ್ದಾರೆ. ಇದಲ್ಲದೆ ಗುಲಾಮರಂತೆಯೂ ದುಡಿಸಿಕೊಂಡಿದ್ದಾರೆ. ಅದರ ಪರಿಣಾಮವಾಗಿ ಈಗ ಬದಲಾದ ಸಮಾಜದಲ್ಲಿ ಮಹಿಳೆಯ ಸ್ಥಾನಮಾನ-ಸ್ಥಿತಿ-ಗತಿಗಳ ಕುರಿತು ಬದಲಾವಣೆಗಳನ್ನು ತರಲಾಗಿದೆ.

ಬದಲಾವಣೆ ಹಾಗೂ ಔದ್ಯಮೀಕರಣಗಳಿಂದ ಬಹಳಷ್ಟು ಕುಟುಂಬಗಳು ಆರ್ಥಿಕವಾಗಿ ಬಳಲುವಂತಾಯಿತು. ಹೀಗೆ ಬದಲಾವಣೆ ಮತ್ತು ಔದ್ಯಮೀಕರಣಗಳು ಹೊಸ ಸಮಾಜದಲ್ಲಿ ಹೊಸ ಸಮಸ್ಯೆಗಳಿಗೆ ನಾಂದಿ ಹಾಡಿದವು. ಕುಟುಂಬದ ಆರ್ಥಿಕ ಸಮಸ್ಯೆಗಳಿಗೋಸ್ಕರ ಮಹಿಳೆಯರು ಹೆಚ್ಚು ಹೆಚ್ಚಾಗಿ ಕೈಗಾರಿಕಾ ಕ್ಷೇತ್ರಗಳಲ್ಲಿ ಕಾಲಿಡಲು ಪ್ರಾರಂಭಿಸಿದರು. ಹೀಗೆ ಬೇರೆ ದಾರಿಗಾಣದೆ ಈ ಕ್ಷೇತ್ರವನ್ನು ಪ್ರವೇಶಿಸಿದ ಮಹಿಳೆಯರ ಪರಿಸ್ಥಿತಿಯನ್ನು ಉದ್ಯಮಿಗಳು ಚೆನ್ನಾಗಿಯೇ ಉಪಯೋಗಿಸಿಕೊಳ್ಳತೊಡಗಿದರು. ಮಹಿಳೆಯ ಶೋಷಣೆ ಅವ್ಯಾಹತವಾಗಿಯೇ ಔದ್ಯಮಿಕ ಕ್ಷೇತ್ರದಲ್ಲಿ ನಡೆಯಲಾರಂಭಿಸಿತು. ಕುಟುಂಬದಲ್ಲಿಯ ಆರ್ಥಿಕ ಒತ್ತಡವನ್ನು ನಿವಾರಿಸಲಿಕ್ಕಾಗಿ ಕೈಗಾರಿಕಾ ಕ್ಷೇತ್ರವನ್ನು ಪ್ರವೇಶಿಸುತ್ತಿದ್ದ ಮಹಿಳೆಯರಿಗೆ ಉದ್ಯಮಿಗಳು ಎಷ್ಟೇ ಕಡಿಮೆ ಸಂಬಳವನ್ನಿತ್ತರೂ ಸ್ವೀಕರಿಸಬೇಕಾದ ಪರಿಸ್ಥಿತಿ ಬಂದೊದಗಿತು. ಇದರಿಂದ ಉದ್ಯಮಿಗಳು ಯಾವ ಕಾನೂನು-ಕಟ್ಟಳೆಗಳಿಲ್ಲದೇ ಮಹಿಳೆಯರನ್ನು ಬೇಕಾದಷ್ಟು ದುಡಿಸಿಕೊಳ್ಳುವ, ಮನ ಬಂದಾಗ ಅವರನ್ನು ಕೆಲಸದಿಂದ ವಜಾ ಮಾಡುವ ಸಾಮರ್ಥ್ಯ ಪಡೆದುಕೊಂಡರು. ಕೌಟುಂಬಿಕ ಅಗತ್ಯಗಳನ್ನು ಪೂರೈಸುವುದಕ್ಕಾಗಿ ಕೆಲಸದ ಮೊರೆಹೋಗುತ್ತಿದ್ದ ಮಹಿಳೆಯರ ಸಂಖ್ಯೆಯೇ

ಅಧಿಕವಾಗಿದ್ದುದರಿಂದ, ಇವರು ತಮ್ಮ ಶೋಷಣೆಯ ಬಗ್ಗೆ ಯಾವುದೇ ಚಕಾರ ಎತ್ತಲಾರದವರಾಗಿದ್ದಾರೆ. ಏನಿದ್ದರೂ ತಾವು ಪಡೆಯುವ ಆದಾಯ ಕೇವಲ ಪುರುಷರ ಆದಾಯವನ್ನು ಅಧಿಕಗೊಳಿಸಲು ಎಂದುಕೊಂಡು, ಮಹಿಳಾ ಕಾರ್ಮಿಕರು ತಾವು ಮಾಡುವ ಕಾರ್ಯ ಶಾಶ್ವತವಲ್ಲ ಎಂಬ ಭಾವನೆಯನ್ನು ಹೆಚ್ಚಾಗಿ ಹೊಂದುವಂತಾಗಿದೆ. ಈ ರೀತಿಯಾಗಿ ಮಹಿಳೆಯರನ್ನು ಕಾಯ್ದಿಟ್ಟ ಕೆಲಸಗಾರರ ಪಡೆಯಂತೆ ಬಳಸಿಕೊಳ್ಳಲಾಗಿದೆ. ಅಗತ್ಯವಿರುವಾಗ ಅವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಕೆಲಸಕ್ಕೆ ತೊಡಗಿಸಿಕೊಳ್ಳುತ್ತಿದ್ದರು. ಆದರೆ ಈ ಅಗತ್ಯ ಮುಗಿದ ಕೂಡಲೇ ಅವರನ್ನು ಮೊಟ್ಟ ಮೊದಲು ಕೆಲಸದಿಂದ ವಜಾ ಮಾಡುತ್ತಿದ್ದರು.

ಅನಾರೋಗ್ಯಕರ ವಾತಾವರಣದಲ್ಲಿ ಕೆಲಸ ಮಾಡುವ ಮಹಿಳೆಯರು ಸಹಜವಾಗಿಯೇ ಸಾಕಷ್ಟು ಸಮಸ್ಯೆಗಳಿಂದ ತೊಳಲಾಡುತ್ತಿದ್ದರು. ಆದರೆ ಅವರ ಸಹಾಯಕ್ಕೆ ಒದಗುವಂತಹ ಯಾವ ಕಟ್ಟು-ಕಟ್ಟಳೆಗಳೂ ಇರಲಿಲ್ಲ. ಪುರುಷ ಕಾರ್ಮಿಕರಂತೆ ತಮ್ಮನ್ನು ತಾವೇ ಸಂಘಟಿಸಿಕೊಂಡು ತಮ್ಮ ಹಕ್ಕುಗಳಿಗಾಗಿ ಹೋರಾಡುವಂತಹ ಧೈರ್ಯವೂ ಮಹಿಳೆಯರಿಗಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಕಾರ್ಮಿಕ ಮಹಿಳೆಯರ ಕಲ್ಯಾಣಕ್ಕಾಗಿ ಅನೇಕ ಕಾರ್ಯ ಕೈಕೊಂಡ ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯನ್ನು ನಾವು ಇಲ್ಲಿ ಅಗತ್ಯವಾಗಿ ಸ್ಮರಿಸಬೇಕು. ಈ ಸಂಸ್ಥೆಯು ಮಹಿಳಾ ಕಾರ್ಮಿಕರಿಗೆ ಕೆಲವೊಂದು ಪ್ರತ್ಯೇಕವಾದ ಹಕ್ಕುಗಳನ್ನು ಒದಗಿಸಿಕೊಡುವಲ್ಲಿ ಪ್ರಮುಖ ಪಾತ್ರವಹಿಸಿದೆ. ಇವುಗಳಲ್ಲಿ ಅತ್ಯಂತ ಮಹತ್ವದ ಘೋಷಣೆಯೆಂದರೆ ಸಮಾನತೆಯ ಬಗೆಗಿನದು, ಮಹಿಳಾ ಕಾರ್ಮಿಕರನ್ನು ಪುರುಷರಿಗೆ ಸಮಾನವಾಗಿ ನಡೆಸಿಕೊಳ್ಳಬೇಕು ಸಮಾನ ಅವಕಾಶಗಳನ್ನು ಕೊಡಬೇಕು. ಅಲ್ಲದೆ ಈ ಸಮಾನತೆಯನ್ನು ತರುವುದಕ್ಕಾಗಿ ಅಥವಾ ಕಾಯ್ದುಕೊಳ್ಳುವುದಕ್ಕಾಗಿ ವಿಶಿಷ್ಟ ವ್ಯವಸ್ಥೆಯನ್ನೂ ಮಾಡಬೇಕೆಂದು, ೧೯೭೫ ರಲ್ಲಿ ಈ ಸಂಸ್ಥೆ ಘೋಷಿಸಿತು.

ಇದರಂತೆ, ಭಾರತದ ಸಂವಿಧಾನವು ತನ್ನ ೧೬ ನೆಯ ವಿಧಿಯ ಮೂಲಕ ಯಾವುದೆ ಉದ್ಯೋಗದಲ್ಲಾಗಲೀ, ಯಾವುದೆ ಕಾರ್ಯಾಲಯದಲ್ಲಿಯ ನೇಮಕಾತಿಯಲ್ಲದಲೇ ಮಹಿಳೆಯರಿಗೆ ಸಮಾನ ಅವಕಾಶಗಳ ಹಕ್ಕನ್ನು ಕೊಡಮಾಡಿದೆ. ಸಂವಿಧಾನದ ೩೯(೧) ನೆಯ ವಿಧಿಯು ಪುರುಷರಂತೆ, ಮಹಿಳೆಯರಿಗೂ ಸಮರ್ಪಕ ಜೀವನೋಪಾಯ ಒದಗಿಸಿಕೊಡುವ ಹಕ್ಕನ್ನು ಕೊಡಮಾಡುವಂತೆ ನಿರ್ದೇಶಿಸಿದೆ. ಆದ್ದರಿಂದ ಮಹಿಳಾ ಕಾರ್ಮಿಕರ ಸ್ಥಿತಿಯು ಹಿಂದಿಗಿಂತಲೂ ಈಗ ಬಹಳಷ್ಟು ಸುಧಾರಿಸಿದೆ. ಎಲ್ಲ ಯೋಗ್ಯತೆಗಳಿದ್ದೂ ಮಹಿಳೆಯೆಂಬ ಕಾರಣಕ್ಕಾಗಿ ಅವರಿಗೆ ಉದ್ಯೋಗಾವಕಾಶ ಒದಗಿಸದಿದ್ದರೆ, ಉನ್ನತಾಧಿಕಾರ ನೀಡುವಲ್ಲಿ ಕಡೆಗಣಿಸಿದರೆ ಮಹಿಳೆಯರು ನ್ಯಾಯಾಲಯಕ್ಕೆ ಹೋಗಲು ಅವಕಾಶ ಕಲ್ಪಿಸಿ ಕೊಡಲಾಗಿದೆ.

ಮಹಿಳೆಯರನ್ನು ಅವರ ವಯಸ್ಸು, ಕೌಟುಂಬಿಕ ಜವಾಬ್ದಾರಿ, ವೈವಾಹಿಕ ಸಂಬಂಧ, ಗರ್ಭಧಾರಣೆ ಮಗುವಿನ ಜನನ ಮುಂತಾದ ಯಾವುದೇ ಕಾರಣದಿಂದಾಗಿ ಪುರುಷರಿಗಿಂತ ಭಿನ್ನವೆಂದು ಭಾವಿಸಬಾರದಾಗಿ ಈಗ ನಿರ್ದೇಶಿಸಲಾಗಿದೆ. ಆದ್ದರಿಂದ ಮಹಿಳೆಯರು ಈಗ ಈ ಯಾವುದೇ ಕಾರಣದಿಂದ ಕೆಲಸದಿಂದ ತೆಗೆದುಹಾಕಲ್ಪಟ್ಟಲ್ಲಿ, ಇಲ್ಲವೆ ಕೆಲಸಕ್ಕೆ ಪರಿಗಣನವಾಗದೇ ಇದ್ದ ಪಕ್ಷದಲ್ಲಿ ನ್ಯಾಯ ಕೇಳಬಹುದು. ಇಲ್ಲಿ ಭಾರತೀಯ ವಿಮಾನೋದ್ಯಮದ ಗಗನಸಖಿಯರ ಸಮಸ್ಯೆಯನ್ನು ನಾವು ಸ್ಮರಿಸಬಹುದು. ವಿವಾಹವಾದೊಡನೆ ಕೆಲಸಕ್ಕೆ ರಾಜೀನಾಮೆಯನ್ನೀಯಬೇಕೆಂಬ ನಿಯಮ ಈ ಮೊದಲು ಗಗನಸಖಿಯರಿಗಿದ್ದಿತು. ಇದನ್ನು ಪ್ರಶ್ನಿಸಿ ನ್ಯಾಯಾಲಯದ ಮೊರೆಹೊಕ್ಕ ಅವರಿಗೆ ವಿವಾಹವಾದ ಮೇಲೆಯೂ ಅವರು ತಮ್ಮ ಕೆಲಸವನ್ನು ಉಳಿಸಿಕೊಳ್ಳುವ ಹಕ್ಕನ್ನು ನ್ಯಾಯಾಲಯ ಎತ್ತಿಹಿಡಿಯಿತು.

ಈ ಸಮಾನ ಉದ್ಯೋಗಾವಕಾಶದ ಹಕ್ಕಿಗಿಂತಲೂ ಮೊದಲೇ ಅಂತರ್ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು ಸಮಾನವಾದ ಕೆಲಸಕ್ಕಾಗಿ ಸ್ತ್ರೀ–ಪುರುಷರಿಗೆ, ಸಮಾನವಾದ ವೇತನ ಕೊಡುವ ಇನ್ನೊಂದು ಹಕ್ಕನ್ನು ಮಹಿಳೆಯರಿಗೆ ನೀಡಿದೆ. ಭಾರತದ ಸಂವಿಧಾನವು ಈ ಒಡಂಬಡಿಕೆಯನ್ನು (convention) ತನ್ನ ೩೯(a)ನೇ ವಿಧಿಯಲ್ಲಿ ಅಳವಡಿಸಿದೆ. ಈ ದಿಶೆಯಲ್ಲಿ ೧೯೭೬ರಲ್ಲಿ ಸಮಾನ ವೇತನ ಕಾಯ್ದೆಯನ್ನೂ ಜಾರಿಯಲ್ಲಿ ತರಲಾಯಿತು. ಇದರ ಪ್ರಕಾರ ಈಗ ಸ್ತ್ರೀ–ಪುರುಷರು ಒಂದೇ ತೆರನಾದ ಕೆಲಸಗಳನ್ನು ಮಾಡುತ್ತಿದ್ದರೆ, ಯಾವ ಭೇದಭಾವವಿಲ್ಲದೆ ಅವರಿಬ್ಬರಿಗೂ ಸಮಾನ ವೇತನವನ್ನು ನೀಡಬೇಕಲ್ಲದೇ, ಮೊದಲಿನಂತೆ ಸ್ತ್ರೀಯರಿಗೆ ಕಡಿಮೆ ವೇತನವನ್ನು ಕೊಡಮಾಡುವಂತಿಲ್ಲ. ಇದಲ್ಲದೆ ಕನಿಷ್ಠವೇತನ ಕಾಯ್ದೆಯ ಮೇರೆಗೆ ಸರಕಾರ ಬೇರೆ ಬೇರೆ ಉದ್ಯೋಗಗಳಿಗೆ ಸಮರ್ಪಕವಾದ ಕನಿಷ್ಠ ವೇತನಗಳನ್ನು ನಿರ್ಧರಿಸಿದೆ. ಆದರೂ ನಮ್ಮ ಒಟ್ಟು ಉದ್ಯಮಗಳಲ್ಲಿ ಅರ್ಧಕ್ಕಿಂತ ಹೆಚ್ಚು ಉದ್ದಿಮೆಗಳಲ್ಲಿ ಮಹಿಳಾ ಕಾರ್ಮಿಕರಿಗೆ ಪುರುಷರಿಗಿಂತ ಕಡಿಮೆ ವೇತನವನ್ನು ಕೊಡಲಾಗುತ್ತಿದೆ ಎಂಬಂಶವನ್ನು ಇತ್ತೀಚಿನ ಸಂಶೋಧನೆಗಳ ಮೂಲಕ ಕಂಡು ಹಿಡಿಯಲಾಗಿದೆ. ಇಂತಹ ಉದ್ಯಮಗಳಲ್ಲಿ ಕಾರ್ಯ ಮಾಡುವ ಮಹಿಳೆಯರು ಸಮಾನ ವೇತನದ ತಮ್ಮ ಹಕ್ಕನ್ನು ತಿಳಿದುಕೊಂಡು ಅದರ ಸದುಪಯೋಗ ಮಾಡಿಕೊಳ್ಳಬೇಕು. ಇದು ಕೇವಲ ಸಂಘಟಿತ ಕಾರ್ಮಿಕರಿಗೆ ಮಾತ್ರವಲ್ಲ ಅಸಂಘಟಿತ ಕಾರ್ಮಿಕರಿಗೂ ಅನ್ವಯಿಸುವಂಥದ್ದಾಗಿದೆ. ಆದ್ದರಿಂದ ಅಸಂಘಟಿತ ಕ್ಷೇತ್ರಗಳಲ್ಲಿಯೇ ಹೆಚ್ಚಾಗಿ ಕೆಲಸ ಮಾಡುತ್ತಿರುವ ನಮ್ಮ ಮಹಿಳಾ ಕಾರ್ಮಿಕರು ಈ ಹಕ್ಕಿನ ಉಪಯೋಗ ಮಾಡಿಕೊಳ್ಳುವಂತಾಗಬೇಕು.

ಇದಲ್ಲದೆ ಮಹಿಳೆಯರನ್ನು ಶೋಷಣೆ, ವಂಚನೆ, ಅನಾರೋಗ್ಯ ಮುಂತಾದ ಗಂಡಾಂತರಗಳಿಂದ ರಕ್ಷಿಸುವುದಕ್ಕಾಗಿ ಹಲವಾರು ಕಾನೂನುಗಳಲ್ಲಿ ಪ್ರತ್ಯೇಕವಾದ

ಅವಕಾಶಗಳನ್ನು ಕಲ್ಪಿಸಲಾಗಿದೆ. ಮೊಟ್ಟ ಮೊದಲಿಗೆ ಮಹಿಳೆಯರ ಉದ್ಯೋಗ ವನ್ನೇ ತೆಗೆದುಕೊಂಡಲ್ಲಿ ಗಣಿಗಳ ಕಾಯ್ದೆ (Mines Act)ಯ ಪ್ರಕಾರ ಮಹಿಳೆಯ ರನ್ನು ಭೂಗತ (under ground) ಕೆಲಸದಲ್ಲಿ ತೊಡಗಿಸುವಂತಿಲ್ಲ. ಅವರನ್ನು ಮತ್ತಿತರ ಆಪತ್ತಿನ ಕೆಲಸಗಳಲ್ಲಿಯೂ ತೆಗೆದುಕೊಳ್ಳಬಾರದೆಂಬ ನಿರ್ಬಂಧಗಳನ್ನು ಹಾಕಲಾಗಿದೆ. ಇದರಿಂದ ಮಹಿಳೆಯರನ್ನು ಗಣಿಗಳಲ್ಲಿ (ಭೂಗತ ಕಾರ್ಯದಲ್ಲಿ). ಭಾರ ವನ್ನೆತ್ತುವುವಕ್ಕಾಗಲೀ, ಮತ್ತಾವುದೇ ಕೆಲಸಕ್ಕಾಗಲೀ ನಿಯಮಿಸಿಕೊಳ್ಳಲಾಗು ವುದಿಲ್ಲ.

ಇದರಂತೆ ೧೯೪೮ನೇ ಇಸ್ವಿಯ ಕಾರಖಾನೆಗಳ ಕಾಯ್ದೆ (Factories Act. 1948)ಯಲ್ಲಿಯೂ ಕೆಲವು ಅನುಕೂಲತೆಗಳಿರುತ್ತವೆ. ಅವಾವುವೆಂದರೆ.

೧) Prime-mover ಅಥವಾ Transmission ಯಂತ್ರಗಳು ಚಾಲನೆ ಯಲ್ಲಿರುವಾಗ, ಅವುಗಳ ದುರಸ್ತಿ ಹಾಗೂ ವ್ಯವಸ್ಥೆಗಾಗಿ ಅವುಗಳ ಯಾವುದೇ ಭಾಗ ದಲ್ಲಿ ಮಹಿಳೆಯರನ್ನು ನಿಯಮಿಸಬಾರದು. ಈ ಯಂತ್ರಗಳು ಚಾಲನೆಯಲ್ಲಿರದಿದ್ದಾ ಗಲೂ ಅವುಗಳ ಸಮೀಪ ಕೆಲಸ ಮಾಡುವಾಗ ಬೇರೆ ಯಾವುದೇ ಹತ್ತಿರದಲ್ಲಿರುವ ಯಂತ್ರಗಳಿಂದ ಅನಾಹುತಗಳಾಗುವ ಸಂಭವವಿದ್ದರೆ, ಮಹಿಳೆಯರನ್ನು ಅಲ್ಲಿ ಕೆಲಸಕ್ಕೆ ನಿಯಮಿಸಬಾರದೆಂದು ೨೨ನೇ ಕಲಮು ತಿಳಿಸುತ್ತಿದೆ.

೨) ೨೭ನೇ ಕಲಮಿನ ಪ್ರಕಾರ ಅರಳೆಯನ್ನು ಬಿಡಿಸುವ (Cotton-opener) ಯಂತ್ರವು ಚಾಲನೆಯಲ್ಲಿರುವ ಕಾರಖಾನೆಯ ಯಾವುದೇ ಭಾಗದಲ್ಲಿ, ಮಹಿಳೆಯರನ್ನು ಅರಳೆಯನ್ನು ಆಕುಂಚನ ಮಾಡುವುದಕ್ಕೋಸ್ಕರ ನಿಯಮಿಸ ಬಾರದು. ಆದರೆ ಅರಳೆಯನ್ನು ಯಂತ್ರದ ಬಾಯಿಗೆ ಹಾಕುವ ಭಾಗವು ಒಂದು ಕೋಣೆಯಲ್ಲಿದ್ದು, ಅದು ಹೊರ ಬರುವ ಭಾಗವು ಇನ್ನೊಂದು ಕೋಣೆಯಲ್ಲಿದ್ದು, ಅವೆರಡರ ಮಧ್ಯದ ಗೋಡೆಯು ಮೇಲ್ಛಾವಣಿವರೆಗಿದ್ದು, ಈ ಎರಡು ಭಾಗಗಳು ಒಂದಕ್ಕೊಂದು ಪ್ರತ್ಯೇಕವಾಗಿದ್ದರೆ ಮಾತ್ರ ಯಂತ್ರದ ಬಾಯಿಗೆ ಹತ್ತಿಯನ್ನು ಕೊಡುವ ಭಾಗದಲ್ಲಿ ಮಹಿಳೆಯರನ್ನು ಕಾರಖಾನೆಯ ವೀಕ್ಷಣಾಧಿಕಾರಿಗಳ ಪರ ವಾನಿಗೆಯಿಂದ ನಿಯಮಿಸಬಹುದಾಗಿದೆ. ಆದ್ದರಿಂದ ಇಂತಹ ಪರಿಣಾಮಕಾರಿ ಸೌಲಭ್ಯಗಳಿಲ್ಲದಿರುವಲ್ಲಿ ಮಹಿಳೆಯರು ಕೆಲಸ ಮಾಡಲು ನಿರಾಕರಿಸಬಹುದು.

೩) ಬಹಳಷ್ಟು ಮಹಿಳೆಯರು ತಮ್ಮ ಅನಕ್ಷರತೆಯಿಂದಾಗಿಯೋ ವೃತ್ತಿ ಶಿಕ್ಷಣದ ಕೊರತೆಯಿಂದಾಗಿಯೋ, ಕಾರ್ಯಾಗಾರಗಳಲ್ಲಿ ಭಾರವನ್ನೊತ್ತುವದೋ ಅಥವಾ ಯಾವುದೇ ಪರಿಣತಿಯಿಲ್ಲದ ದೈಹಿಕ ಶ್ರಮದ ಕೆಲಸವನ್ನು ಮಾಡುವುದು ಕಂಡುಬರುತ್ತದೆ. ಇಂತಹ ಮಹಿಳೆಯರ ರಕ್ಷಣೆಗೋಸ್ಕರ, ೩೪ನೇ ಕಲಮಿನಲ್ಲಿ

ತನ್ನ ಶಕ್ತಿಮೀರಿ ಭಾರವನ್ನೊತ್ತುವಂತಹ ಕೆಲಸದಲ್ಲಿ ಕಾರ್ಮಿಕರನ್ನು ನಿಯಮಿಸಬಾರದೆಂದು ತಿಳಿಸಲಾಗಿದೆ. ಯಾಕೆಂದರೆ ಈ ರೀತಿಯ ಹೆಚ್ಚು ಭಾರವನ್ನೆತ್ತುವ ಕೆಲಸಗಳು ಕಾರ್ಮಿಕನಿಗಾಗಲೀ ಕಾರ್ಮಿಕಳಿಗಾಗಲೀ ಬಹಳಷ್ಟು ಆಪತ್ತನ್ನು ತಂದೊಡ್ಡುತ್ತವೆ. ಆದ್ದರಿಂದ ಈ ಕಾನೂನಿನ ಪ್ರಕಾರ ರಾಜ್ಯ ಸರಕಾರವು ಪ್ರತಿಯೊಬ್ಬ ಕಾರ್ಮಿಕನೇ ಆಗಲಿ, ಕಾರ್ಮಿಕಳೇ ಆಗಲಿ ಸಾಧಾರಣವಾಗಿ ಎತ್ತಬಹುದಾದಂತಹ ಭಾರದ ಪ್ರಮಾಣವನ್ನು ಗುರುತಿಸಿ ಯಾದಿಯನ್ನು ರಚಿಸಬಹುದಾಗಿದೆ. ಅದರಂತೆ, ಮಹಿಳೆಯರು ತಮಗಾಗಿ ನಿಗದಿ ಪಡಿಸಿದಂತಹ ಭಾರದ ಮೊತ್ತವನ್ನು ತಿಳಿದುಕೊಂಡು, ತಮ್ಮ ಪ್ರಾಣಕ್ಕೆ ಆಪತ್ತನ್ನು ತಂದುಕೊಳ್ಳದೆ ಸಾವಧಾನವಾಗಿ ಕೆಲಸ ಮಾಡಬಹುದು. ನಿಗದಿತ ಭಾರಕ್ಕಿಂತ ಹೆಚ್ಚಿಗೆ ಹೊರಲು ಒತ್ತಾಯಿಸಿದಾಗ ಈ ಕಲಮಿನಂತೆ ಮಹಿಳೆಯರು ಅದನ್ನು ನಿರಾಕರಿಸಬಹುದಾಗಿದೆ.

೬) ಇದಲ್ಲದೆ ಈ ಕಾನೂನಿನ ಪ್ರಕಾರ ವಯಸ್ಕ ಕಾರ್ಮಿಕರನ್ನು ಒಂದು ವಾರದಲ್ಲಿ ೪೮ ಗಂಟೆಗಳಿಗಿಂತ ಹೆಚ್ಚಿಗೆ ದುಡಿಸಿಕೊಳ್ಳಲಾಗದು. ಎಲ್ಲ ಕಾರ್ಮಿಕರಿಗೂ ವಾರದ ಮೊದಲನೆಯ ದಿನ ವಾರದ ರಜೆಯನ್ನು ಕೊಡಬೇಕು. ಇಲ್ಲವೆ ಅವರಿಗೆ ೨೪ ಗಂಟೆಗಳ ಒಂದು ರಜೆಯನ್ನು ಈ ವಾರದ ಮೊದಲನೆಯ ದಿನದ ಮೊದಲ ಮೂರು ದಿನಗಳಲ್ಲಾಗಲೀ, ನಂತರದ ಮೂರು ದಿನಗಳಲ್ಲಾಗಲೀ ಕೊಡಲೇಬೇಕು. ಇಂತಹ ಬದಲಾವಣೆಗೋಸ್ಕರ ಕಾರ್ಖಾನೆಯ ಸಂಚಾಲಕನು ಕಾರ್ಖಾನೆಯ ವೀಕ್ಷಣಾಧಿಕಾರಿಗೆ ತಿಳಿಸಬೇಕಲ್ಲದೆ ಕಾರ್ಖಾನೆಯ ಸೂಚನಾ ಫಲಕದ ಮೇಲೆಯೂ ಇದರ ಬಗ್ಗೆ ಸೂಚನೆ ನೀಡಬೇಕು. ಏನಿದ್ದರೂ ಒಂದು ವಾರದ ರಜೆಯಿಂದ ಇನ್ನೊಂದು ವಾರದ ರಜೆಯ ಮಧ್ಯ ಹತ್ತು ದಿನಗಳಿಗಿಂತ ಹೆಚ್ಚಿನ ಅಂತರವಿರಕೂಡದು. ಈ ಯಾವುದೇ ನಿಯಮವನ್ನು ಕಾರ್ಖಾನೆಯ ಸಂಚಾಲಕರು ಉಲ್ಲಂಘಿಸಿದಾಗ ಕಾರ್ಮಿಕರು ಹಕ್ಕಿನಿಂದ ನ್ಯಾಯವನ್ನು ಕೇಳಬಹುದಾಗಿದೆ.

೭) ಇದರಂತೆ, ಪ್ರತಿದಿನ ಒಬ್ಬರಿಂದ ಎಷ್ಟು ಗಂಟೆಗಳವರೆಗೆ ಕೆಲಸಮಾಡಿಸಿಕೊಳ್ಳಬಹುದೆಂಬುದರ ಬಗ್ಗೆಯೂ ನಿಯಮಗಳನ್ನು ಈ ಕಾನೂನಿನಲ್ಲಿ ಮಾಡಲಾಗಿದೆ. ಈ ನಿಯಮಗಳ ಪ್ರಕಾರ ಕಾರ್ಮಿಕರನ್ನು ಒಂದು ದಿನಕ್ಕೆ ೯ ಗಂಟೆಗಳಿಗಿಂತ ಹೆಚ್ಚಿಗೆ ದುಡಿಸುವಂತಿಲ್ಲ. ಇದಲ್ಲದೆ ವಿಶ್ರಾಂತಿಯಿಲ್ಲದೆ ೫ ಗಂಟೆಗಳಿಗೂ ಮೀರಿ ದುಡಿಸಿಕೊಳ್ಳುವಂತಿಲ್ಲ. ೫ ಗಂಟೆಗಳ ನಂತರ ಅರ್ಧ ಗಂಟೆಯ ವಿಶ್ರಾಂತಿಯನ್ನಾದರೂ ಕೊಡಲೇಬೇಕು. ಕೆಲವು ಕಾರಣಗಳಿಂದ ರಾಜ್ಯಸರಕಾರ ಇಲ್ಲವೆ ಕಾರ್ಖಾನೆಗಳ ಹಿರಿಯ ವೀಕ್ಷಣಾಧಿಕಾರಿಗಳು (Senior inspector of factories) ಕೆಲವು ಸಲ ಕಾರ್ಖಾನೆಗಳನ್ನು ಈ ನಿಯಮದಿಂದ ಮುಕ್ತಗೊಳಿಸಲೂ

ಬಹುದು. ಏನಿದ್ದರೂ ವಿಶ್ರಾಂತಿ ಇಲ್ಲದೆ ದುಡಿದ ಒಟ್ಟು ಅವಧಿಯು ೬ ಗಂಟೆಗಳಿಗೆ ಮೀರಬಾರದು,

ಯಾರಾದರೂ ವಾರಕ್ಕೆ ೪೮ ಗಂಟೆಗಳಿಗಿಂತ ಹೆಚ್ಚಿಗೆ ಕೆಲಸ ಮಾಡಿದಲ್ಲಿ ಅವರಿಗೆ ಅದಕ್ಕಾಗಿ ಸಾಮಾನ್ಯವಾಗಿ ಸಿಗುವ ಸಂಬಳದ ದ್ವಿಗುಣ ಸಂಬಳವನ್ನು ಕೊಡಬೇಕೆಂಬ ನಿಯಮವೂ ಈ ಕಾನೂನಿನಲ್ಲಿದೆ. ಆದ್ದರಿಂದ ಯಾವುದೇ ಉದ್ಯಮದಲ್ಲಿ ಮಹಿಳೆಯರನ್ನು ಈ ರೀತಿ ಹೆಚ್ಚಿಗೆ ದುಡಿಸಿಕೊಳ್ಳುತ್ತಿದ್ದಲ್ಲಿ ಅವರು ಈ ಹೆಚ್ಚಿನ ಅವಧಿಯ ದುಡಿತವನ್ನು ನಿರಾಕರಿಸಬಹುದು. ಇಲ್ಲವೆ ಹೆಚ್ಚಿಗೆ ದುಡಿದ ಅವಧಿಗೆ ಅನುಗುಣವಾಗಿ ದ್ವಿಗುಣ ಸಂಬಳವನ್ನು ಪಡೆಯಬಹುದು. ಹೀಗಿದ್ದರೂ ಈ ಕಾನೂನು ಮಹಿಳೆಯರಿಗೆ ರಕ್ಷಣೆ ನೀಡುವುದಕ್ಕಾಗಿ ಒಂದು ಪ್ರತ್ಯೇಕ ನಿಯಮ ಮಾಡಿ, ಅವರನ್ನು ಮುಂಜಾನೆ ೬ ಗಂಟೆಯಿಂದ ಸಾಯಂಕಾಲ ೭ ಗಂಟೆಯ ವರೆಗೆ ಮಾತ್ರ ಕೆಲಸಕ್ಕಿಟ್ಟುಕೊಳ್ಳಬಹುದೆಂದು ತಿಳಿಸುತ್ತದೆ. ಆದರೆ ಕೆಲವು ಕಾರ್ಖಾನೆಗಳಲ್ಲಿ ಮಹಿಳೆಯರನ್ನು ಬೆಳಿಗ್ಗೆ ೫ ಗಂಟೆಯಿಂದ ರಾತ್ರಿ ೧೦ ಗಂಟೆಗಳ ವರೆಗೆ ಕೆಲಸಕ್ಕಿಟ್ಟುಕೊಳ್ಳಲು ಕೆಲವು ಸಲ ರಾಜ್ಯ ಸರಕಾರ ಅನುಮತಿ ನೀಡಬಹುದಾಗಿದೆ. ಮೀನು ಸಂಸ್ಕರಣ ಕಾರ್ಖಾನೆಗಳಿಗೆ ಈ ನಿಯಮ ಅನ್ವಯಿಸುವುದಿಲ್ಲ. ಯಾಕೆಂದರೆ ಇಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ರಾತ್ರಿ ಸಮಯದಲ್ಲಿ ದುಡಿಯುವ ಅವಕಾಶ ಕಲ್ಪಿಸಿ ಕೊಡದಿದ್ದರೆ ಮೀನುಗಳು ಕೆಟ್ಟು ಹೋಗುವ ಸಾಧ್ಯತೆ ಅಧಿಕವಾಗಿರುತ್ತದೆ.

ಈ ಕಾನೂನು ಮಹಿಳೆಯರ ಕಲ್ಯಾಣಕ್ಕಾಗಿಯೇ ಕೆಲವು ನಿಯಮಗಳನ್ನು ಮಾಡಿದೆ. ಇವುಗಳ ಪ್ರಕಾರ ಮಹಿಳೆಯರು ಬಹಳಷ್ಟು ಹಕ್ಕುಗಳನ್ನು ಪಡೆದುಕೊಳ್ಳಲು ಸಾಧ್ಯವಾಗಿದೆ. ಇವುಗಳಲ್ಲಿ ಅತಿ ಮುಖ್ಯವಾದುದು ಶಿಶುವಿಹಾರ (crehe)ದ ಸೌಲಭ್ಯ. ಮಹಿಳೆಯರಿಗೆ ಬಹುಮುಖ್ಯವಾದ ಸಂಪತ್ತೆಂದರೆ ಮಕ್ಕಳೆಂಬುದು ನಿರ್ವಿವಾದ. ಮಹಿಳೆಯರು ಮನೆಯಿಂದ ಹೊರಗಡೆ ದುಡಿಯಲು ಹೋದಾಗ ಮನೆಯಲ್ಲಿ ಮಕ್ಕಳನ್ನು ಜೋಪಾನ ಮಾಡಲು ಯಾರೂ ಇಲ್ಲದಿದ್ದರೆ, ಅವರು ಬಹಳಷ್ಟು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಇದರಿಂದ ಮಕ್ಕಳೂ ಬೇರೆ ಬೇರೆ ಅನಾಹುತಗಳಿಗೀಡಾಗುವ ಸಂಭವವಿವೆ. ಈ ಸಮಸ್ಯೆಯನ್ನು ಹೋಗಲಾಡಿಸಿ ಮಹಿಳೆಯರು ನಿರಾತಂಕವಾಗಿ ತಮ್ಮ ಕೆಲಸ ಮಾಡಲು ಸಾಧ್ಯವಾಗುವಂತೆ ಈ ಕಾನೂನು ಶಿಶುವಿಹಾರ (crehe) ದ ಸೌಲಭ್ಯವನ್ನು ಅವರಿಗೆ ಒದಗಿಸಿ ಕೊಟ್ಟಿದೆ. ಈ ನಿಯಮದನ್ವಯ ಯಾವುದೇ ಕಾರ್ಖಾನೆಯಲ್ಲಿ ೩೦ಕ್ಕಿಂತ ಹೆಚ್ಚು ಜನ ಮಹಿಳೆಯರು ದುಡಿಯುತ್ತಿದ್ದರೆ ಅಂತಹ ಕಾರ್ಖಾನೆಗಳಲ್ಲಿ ಸುವ್ಯವಸ್ಥಿತವಾದ ಶಿಶುವಿಹಾರ (crehe) ವನ್ನು ಪ್ರಾರಂಭಿಸಬೇಕಾಗುತ್ತದೆ. ರಾಜ್ಯ ಸರಕಾರದ ನಿಯಮಾನುಸಾರವಾಗಿ ಶಿಶುವಿಹಾರಕ್ಕಾಗಿ ಪ್ರತ್ಯೇಕ ಕಟ್ಟಡ ಕಟ್ಟಿಸಿ ಮಕ್ಕಳಿಗೆ

ಬೇಕಾಗುವ ಎಲ್ಲ ಸೌಲಭ್ಯಗಳನ್ನು ಅಲ್ಲಿ ಒದಗಿಸಿಕೊಡಬೇಕಾಗುತ್ತದೆ. ಇಲ್ಲಿ ಪ್ರತಿ ದಿನ ಮಕ್ಕಳಿಗೆ ನಿಗದಿತ ಪ್ರಮಾಣದಲ್ಲಿ ಹಾಲು ಹಾಗೂ ತಿಂಡಿಗಳನ್ನು (ಆಹಾರವನ್ನು) ಪುಕ್ಕಟೆಯಾಗಿ ಪೂರೈಸಬೇಕು. ಮಕ್ಕಳಿಗೆ ಆಡಲು ಮಲಗಲು ಸಾಕಷ್ಟು ಸ್ಥಳಾವಕಾಶ ಹಾಗೂ ಬೇಕಾದ ವಸ್ತುಗಳು ಅಲ್ಲಿ ಇರಬೇಕು. ಮಕ್ಕಳ ಪಾಲನೆ ಪೋಷಣೆಗಳ ಬಗ್ಗೆ ವಿಶೇಷ ತರಬೇತಿ ಹೊಂದಿದ ಮಹಿಳೆಯ ನೇತೃತ್ವದಲ್ಲಿ ಶಿಶು ವಿಹಾರವಿರಬೇಕು. ದುಡಿಯುವ ಮಹಿಳೆಯರು ಆಗಾಗ ಬಂದು ಮಕ್ಕಳಿಗೆ ಹಾಲು ಉಣ್ಣಿಸುವ ಇಲ್ಲವೆ ಊಟ ಮಾಡಿಸುವ ಸೌಲಭ್ಯವನ್ನು ಇದು ಹೊಂದಿರಬೇಕು. ಇವರಿಂದ ತಾಯಿ ತನ್ನ ಮಗುವಿಗಿಂದ, ಮಗು ತನ್ನ ತಾಯಿಯಿಂದ ಬಹಳಷ್ಟು ಹೊತ್ತು ದೂರವಿರುವುದನ್ನು ನಿವಾರಿಸಿದಂತಾಗುತ್ತದೆ. ಇದಲ್ಲದೆ ತಾಯಿ ನೆಮ್ಮದಿಯಿಂದ ತನ್ನ ಕೆಲಸ ಮಾಡಲು ಸಾಧ್ಯವಾಗುತ್ತದೆ.

ಮಹಿಳೆಯರಿಗೆ ಪ್ರತ್ಯೇಕವಾದ ಕೆಲವು ಸೌಲಭ್ಯಗಳೂ ಇರುತ್ತವೆ. ಕೈಕಾಲು ಮುಖ ತೊಳೆದುಕೊಳ್ಳುವುದಕ್ಕಾಗಿ ಪ್ರತ್ಯೇಕವಾದ, ಸರಿಯಾಗಿ ಮರೆ ಮಾಡಿರುವ ಸ್ಥಳವನ್ನು ಒದಗಿಸಬೇಕು. ಮಹಿಳೆಯರಿಗಿರುವ ಸ್ಥಳವನ್ನು ಪುರುಷರ ಸ್ಥಳವನ್ನು ನಾಮಫಲಕಗಳ ಮೂಲಕ ಸರಿಯಾಗಿ ಸೂಚಿಸಬೇಕು. ಇದರಂತೆ ಪ್ರತ್ಯೇಕವಾದ ಶೌಚಾಲಯ (Toilets) ಮೂತ್ರಾಲಯ (urinals) ಗಳನ್ನೂ ಒದಗಿಸಿರಬೇಕು. ಇವುಗಳನ್ನು ಸರಿಯಾಗಿ ನೋಡಿಕೊಳ್ಳುವ ವ್ಯವಸ್ಥೆಯನ್ನು ಮಾಡಿರಬೇಕು, ಇತ್ಯಾದಿ.

ಕೇವಲ ೧೯೪೮ ರ ಕಾರ್ಖಾನೆಗಳ ಕಾಯಿದೆ factories Act 1948 ಯಲ್ಲದೆ ಮತ್ತೆರಡು ಕಾನೂನುಗಳಿದ್ದು, ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ ಅಥವಾ ಹೆರಿಗೆ ಸೌಲಭ್ಯ ಎಂಬ ಮತ್ತೊಂದು ಪ್ರಮುಖ ಹಕ್ಕನ್ನು ಒದಗಿಸಿಕೊಟ್ಟಿದೆ. ೧೯೬೧ ರ ಹೆರಿಗೆ ಸೌಲಭ್ಯ ಕಾಯಿದೆ (Maternity Benefit act 1961) ಅಥವಾ ನೌಕರರ ರಾಜ್ಯ ವಿಮಾ ಕಾಯಿದೆ(Employees state Insurance act 1948) ಯನ್ವಯ ಈ ಅನುಕೂಲತೆಯನ್ನು ಪಡೆದುಕೊಳ್ಳಬಹುದಾಗಿದೆ. ಈ ಎರಡೂ ಕಾನೂನುಗಳ ಮೂಲಕ ಹೆರಿಗೆ ಅಥವಾ ಮಾತೃತ್ವದ ಕಾರಣದಿಂದ ಮಹಿಳೆಯರು ಕೆಲಸ ಕಳೆದುಕೊಳ್ಳುವ ಸಂದರ್ಭಗಳ ನಿವಾರಣೆಯಾಗಿದೆ. ಇಂಥ ಸಂದರ್ಭಗಳಲ್ಲಿ ಅವರಿಗೆ ಆರ್ಥಿಕ ಸಹಾಯವನ್ನು ನೀಡುವ ಸೌಲಭ್ಯವೂ ಇದೆ. ಯಾವ ಕಾರ್ಖಾನೆಗಳಲ್ಲಿ ೧೯೪೮ ರ ನೌಕರರ ರಾಜ್ಯ ವಿಮಾ ಕಾಯಿದೆ ಜಾರಿಯಲ್ಲಿಲ್ಲವೂ ಅಲ್ಲಿ ೧೯೬೧ ರ ಹೆರಿಗೆ ಸೌಲಭ್ಯ ಕಾಯಿದೆ ಅನ್ವಯವಾಗುತ್ತದೆ. ಗರ್ಭಿಣಿಯರಾದ ಮಹಿಳಾ ಕಾರ್ಮಿಕರಿಗೆ ಅವಶ್ಯವಾದ ವಿಶ್ರಾಂತಿ, ಹೆರಿಗೆ

ಬೇಕಾದ ರಜೆ, ಈ ಸಮಯದ ಸಂಬಳ ಸಂರಕ್ಷಣೆ, ಕೆಲಸದ ಸುರಕ್ಷಿತತೆಗಳನ್ನು ಕಾಪಾಡಲು ಈ ಕಾನೂನುಗಳು ಸಹಾಯ ನೀಡುತ್ತವೆ.

ಇಂತಹ ಸಮಯದಲ್ಲಿ ಮಹಿಳಾ ಕಾರ್ಮಿಕರಿಗೆ ಒಟ್ಟು ೧೨ ವಾರಗಳ ಹೆರಿಗೆಯ ರಜೆಯನ್ನು ಕೊಡಬೇಕೆಂಬ ನಿಯಮವಿದೆ. ಇದರ ಪ್ರಕಾರ ಮಹಿಳೆಯರು ಹೆರಿಗೆಗೆ ಮೊದಲು ೬ ವಾರಗಳ ರಜೆಯನ್ನೂ, ಹೆರಿಗೆಯ ನಂತರ ೬ ವಾರಗಳ ರಜೆಯನ್ನೂ ತೆಗೆದುಕೊಳ್ಳಬಹುದು. ಯಾವುದೇ ಕಾರ್ಖಾನೆಯವರು ಕಾರ್ಮಿಕಳ ವಿನಂತಿ ಮೀರಿ, ಅವಳು ಗರ್ಭವತಿಯಾಗಿರುವಾಗ ಅವಳ ಗರ್ಭಕ್ಕೆ ಪೆಟ್ಟಾಗುವ ಕೆಲಸ ಮಾಡುವಂತೆ ಒತ್ತಾಯಿಸಲಾಗದು. ಮಹಿಳಾ ಕಾರ್ಮಿಕರು ಹೆರಿಗೆಯ ಪೂರ್ವದ ೬ ವಾರಗಳ ಅವಧಿಗಿಂತ ಮೊದಲಿನ ಒಂದು ತಿಂಗಳಿನಲ್ಲಿ ಅಥವಾ ಈ ೬ ವಾರಗಳ ಅವಧಿಯಲ್ಲಿ ಇಂತಹ ವಿನಂತಿ ಮಾಡಿಕೊಳ್ಳಬಹುದಾಗಿದೆ. ಒಂದು ವೇಳೆ ಇಂಥ ಕೆಲಸಕ್ಕೆ ಅವಳ ವಿನಂತಿಯನ್ನು ಮೀರಿ ಒತ್ತಾಯಿಸಿದಲ್ಲಿ ಆಕೆ ಅದನ್ನು ನೇರವಾಗಿ ನಿರಾಕರಿಸಬಹುದಾಗಿದೆ.

ಒಂದು ವೇಳೆ ಮಹಿಳಾ ಕಾರ್ಮಿಕರು ಹೆರಿಗೆಯಲ್ಲಿ ಅಥವಾ ನಂತರದ ೬ ವಾರಗಳ ಅವಧಿಯಲ್ಲಿ ತನ್ನ ಮಗುವನ್ನುಳಿಸಿ ತೀರಿಕೊಂಡರೆ, ಅವಳಿಗೆ ಕೊಡಬೇಕಾದ ಪ್ರಯೋಜನಗಳು ೬ ವಾರಗಳ ವರೆಗೆ ಅಥವಾ ಮಗು ಜೀವಂತವಿರುವ ವರೆಗೆ (ಆ ಮಗುವಿಗೆ) ಸಿಗುವವು. ಈ ಕಾನೂನಿನ ಪ್ರಕಾರ ಮಹಿಳೆಯು ಈ ಪ್ರಯೋಜನ ಪಡೆದುಕೊಳ್ಳಲು ಒಬ್ಬ ನಾಮಕರಣ ವ್ಯಕ್ತಿಯನ್ನು ನಿಯಮಿಸಬಹುದು. ಮಹಿಳಾ ಕಾರ್ಮಿಕರು ಹೆರಿಗೆಗೆ ಮೊದಲ ೬ ವಾರಗಳ ಅವಧಿಯಲ್ಲಿ ಸಿಗುವ ಮೊತ್ತವನ್ನು ಅವಶ್ಯಕ ಮಾಹಿತಿ ಒದಗಿಸಿ ಮೊದಲೇ ಪಡೆದುಕೊಳ್ಳಬಹುದು. ಹೆರಿಗೆಯಾದುದಕ್ಕೆ ಆಧಾರಗಳನ್ನು ತೋರಿಸಿ ನಂತರದ ೪೮ ಗಂಟೆಗಳೊಳಗೆ ಉಳಿದ ಮೊತ್ತವನ್ನು ಪಡೆದುಕೊಳ್ಳಬಹುದು. ಈ ಕಾನೂನಿನ ಪ್ರಕಾರ ಸೂಚನೆ ಕೊಡದೆ ಇರುವ ಕಾರಣವೊಂದಕ್ಕೆ ಮಹಿಳಾ ಕಾರ್ಮಿಕರಿಗೆ ಈ ಪ್ರಯೋಜನವನ್ನು ಅಥವಾ ಯಾವುದೇ ಹಣದ ಮೊತ್ತವನ್ನು ಕೊಡದೆ ಇರುವಂತಿಲ್ಲ.

ಒಂದು ವೇಳೆ ಮಹಿಳಾ ಕಾರ್ಮಿಕರಿಗೆ ಗರ್ಭಪಾತವಾದಾಗ ಹೆರಿಗೆಯ ಸಮಯದಲ್ಲಿ ಕೊಟ್ಟಂತೆಯೇ ಸಂಬಳ ಸಹಿತ ೬ ವಾರಗಳ ರಜೆಯನ್ನು ಸರಿಯಾದ ಆಧಾರ ಕೊಟ್ಟು ಅವರು ಪಡೆಯಬಹುದಾಗಿದೆ. ಹೆರಿಗೆಯ ಸಮಯದಲ್ಲಿ ಉಂಟಾದ ತೊಂದರೆ/ಗರ್ಭಪಾತ/ಅವಧಿ ತುಂಬಿದ ಮಗುವಿನ ಜನನ ಮುಂತಾದವುಗಳಿಂದ ಮಹಿಳಾ ಕಾರ್ಮಿಕರು ಯಾವುದೇ ತೊಂದರೆಯಿಂದ ಬಳಲುತ್ತಿದ್ದರೆ ಸರಿಯಾದ ಸಾಕ್ಷ್ಯಾಧಾರಗಳನ್ನು ಕೊಟ್ಟು ಮತ್ತೆ ಒಂದು ತಿಂಗಳ ಸಂಬಳ ಸಹಿತ ರಜೆಯನ್ನು ಪಡೆದುಕೊಳ್ಳಬಹುದು.

ಹೆರಿಗೆಯ ನಂತರ ಮತ್ತೆ ಕೆಲಸಕ್ಕೆ ಸೇರಿಕೊಂಡನಂತರ ಮಹಿಳೆಗೆ ಅವಳ ವಿಶ್ರಾಂತಿಯ ಸಮಯವಲ್ಲದೆ ದಿನಕ್ಕೆ ಎರಡು ಸಲ ಮಗುವನ್ನು ನೋಡಿ ಕೊಳ್ಳು-ವುದಕ್ಕೋಸ್ಕರ ಅವಕಾಶವಿರಬೇಕು. ಮಗು ೧೫ ತಿಂಗಳಿನದಾಗುವವರೆಗೂ ಈ ಅವಕಾಶ ನೀಡಬೇಕಾಗುತ್ತದೆ. ಮಹಿಳೆಯು ಹೆರಿಗೆ ರಜೆಯ ಮೇಲಿರುವಾಗ ಒಂದು ವೇಳೆ ಅವಳನ್ನು ಕೆಲಸದಿಂದ ಕಿತ್ತಿ ಹಾಕಿದರೆ ಅದು ಕಾಯ್ದೆಬಾಹಿರವೆನಿಸುತ್ತದೆ. ಕಾರ್ಖಾನೆಯ ಮಾಲೀಕರು ಇಂತಹ ಸಮಯದಲ್ಲಿ ಅವಳನ್ನು ಕೆಲಸದಿಂದ ವಜಾ ಮಾಡುವುದಕ್ಕಾಗಿ ರಜೆ ಮುಗಿಯುವ ಮೊದಲೇ ರಜೆ ಮುಗಿಯುವ ಬಗೆಗಿನ ಸೂಚನೆಯನ್ನು ಕೊಡುವಂತಿಲ್ಲ. ಮಹಿಳೆಯರ ದುಡಿಯುವ ಹಾಗೂ ಕೆಲವು ಸಂದರ್ಭಗಳಲ್ಲಿ ತಮ್ಮ ಕೆಲಸವನ್ನು ಉಳಿಸಿಕೊಳ್ಳುವ ಹಕ್ಕನ್ನು ಬಲಪಡಿಸುವಲ್ಲಿ ಈ ಸೌಲಭ್ಯಗಳು ಸಹಕಾರಿಯಾಗಿ ನಿಲ್ಲುತ್ತವೆ.

ಪುರುಷರಂತೆ ಮಹಿಳಾ ಕಾರ್ಮಿಕರಿಗೂ ಕ್ಷೇಮ ನಿಧಿ, ಬೋನಸ್, ಪ್ರೋತ್ಸಾಹ ಧನ (Gratuity) ಮುಂತಾದ ಹಕ್ಕುಗಳನ್ನು ಬೇರೆ ಬೇರೆ ಕಾನೂನುಗಳು ಕೊಡ ಮಾಡಿವೆ. ಮೊದಲಿನಂತೆ ಈಗ ಮಹಿಳೆಯರನ್ನು ಬೇಕಾದಾಗ ಕೆಲಸಕ್ಕೆ ನಿಯಮಿಸಿ ಕೊಂಡು ಬೇಡವಾದಾಗ ಕಿತ್ತು ಹಾಕುವಂತಿಲ್ಲ. ಆದರೆ ಈ ಪ್ರತ್ಯೇಕವಾದ ಸೌಲಭ್ಯ ಗಳು ಕಾರ್ಖಾನೆಯ ಮಾಲೀಕರಿಗೆ ಹೆಚ್ಚಿನ ಖರ್ಚನ್ನು ಹೊರಿಸುತ್ತವೆ. ಹೀಗಾಗಿ ಇತ್ತೀಚೆಗೆ ಬಹಳ ಕಡೆಗಳಲ್ಲಿ ಮಹಿಳೆಯರನ್ನು ಕೆಲಸಕ್ಕೆ ತೆಗೆದುಕೊಳ್ಳದೇ ಇರುವು-ದನ್ನು ನೋಡಬಹುದಾಗಿದೆ. ಇದರಿಂದಾಗಿ ಇತ್ತೀಚಿನ ವರ್ಷಗಳಲ್ಲಿ ಮಹಿಳೆಯರು ಕೆಲಸಕ್ಕೆ ಸೇರಿಕೊಳ್ಳುವ ಪ್ರಮಾಣ ಹೆಚ್ಚಾಗಿದ್ದರೂ, ಕೈಗಾರಿಕಾ ಕ್ಷೇತ್ರಗಳಲ್ಲಿ ಅವರ ಪ್ರಮಾಣ ಬಹಳಷ್ಟು ಕಡಿಮೆಯಾಗಿದೆ. ಮಹಿಳೆಯರಿಗಾಗಿ ಇರುವ ರಕ್ಷಣಾತ್ಮಕ ಕಾನೂನುಗಳು ಹಾಗೂ ವಿಶೇಷ ಸೌಲಭ್ಯಗಳೇ ಇದಕ್ಕೆ ಕಾರಣವಾಗಿರಬೇಕು.

ಒಟ್ಟಿನಲ್ಲಿ ಮಹಿಳೆಯರು ಇನ್ನು ಜಾಗ್ರತರಾಗಿ ತಮ್ಮ ಸ್ಥಾನವನ್ನು ತಮ್ಮ ಕೆಲಸದ ಹಕ್ಕನ್ನು ಕಾಪಾಡಿಕೊಳ್ಳಲು ಹೋರಾಡಬೇಕು. ಮಹಿಳಾ ಕಾರ್ಮಿಕರಿಗೆ ತಮ್ಮದೇ ಆದ ಸಂಘಗಳನ್ನು ಕಟ್ಟಿಕೊಳ್ಳಲೂ ಹಕ್ಕಿದೆ. ಬಹಳ ಹಿಂದಿನ ಕಾಲ ದಿಂದಲೂ ಕಾರ್ಮಿಕ ಸಂಘಗಳಲ್ಲಿ ಪುರುಷರಿಗೆ ಸಮವಾಗಿ ಮಹಿಳೆಯರು ಭಾಗ ವಹಿಸುತ್ತ, ದುಡಿಯುತ್ತ ಬಂದಿದ್ದರೂ, ಅವರಿಗೆ ಅಲ್ಲಿ ಸರಿಯಾದ ಸ್ಥಾನ-ಮಾನ ಗಳು ಸಿಗುತ್ತಿಲ್ಲ. ಮಹಿಳೆಯರ ಸಮಸ್ಯೆಗಳನ್ನೂ ಅವರ ಹಕ್ಕುಗಳನ್ನೂ ಪರಿಗಣಿಸದೆ ಅವುಗಳಿಗೆ ಸರಿಯಾದ ಪ್ರಾಮುಖ್ಯತೆ ಕೊಡದೆ ಕಡೆಗಣಿಸಲಾಗಿದೆ. ಆದ್ದರಿಂದ ಮಹಿಳೆಯರು ಈಗ ಎಚ್ಚೆತ್ತು ತಮ್ಮ ಸಮಾನತೆಗಾಗಿ, ತಮ್ಮ ಹಕ್ಕುಗಳಿಗಾಗಿ ಹೋರಾಡಬೇಕಾಗಿದೆ. ಅನ್ಯಾಯಗಳನ್ನು ಪ್ರತಿಭಟಿಸಿ ತಮ್ಮ ಹಕ್ಕುಗಳನ್ನು

ಪಡೆಯಲೇಬೇಕಾಗಿದೆ. ಇಂದಿನ ಕಾಲದಲ್ಲಿ ಇದು ಅನಿವಾರ್ಯವೂ ಅಗತ್ಯವೂ ಆಗಿದೆ.

ಆಧಾರ ಸಾಹಿತ್ಯ :

1. Government of India : Constitution of India. (Bare Act). Published by : Central law Agency, Allahabad
2. Government of India : Employees' State Insurance Act, 1948. (Act No. : xxxiv of 1948) (Bare Act) Published by : Central law Agency, Allahabad
3. Government of India : The Factories Act, 1948. (Act No. : Lxiii of 1948) Bare Act, Published by : Central law Agency, Allahabad.
4. Government of India : The Indian Trade Unions Act. (Act No. xvi of 1926) Bare Act. Published by : Central law Agency, Allahabad.
5. Government of India : The Maternity Benefit Act, 1961 (Act No. 53 of 1961) Bare Act. Published by : Allahabad law Agency, Allahabad.

ಕನ್ನಡ ಸಂಖ್ಯಾಪುಂಜ—ಒಂದು ಆಕೃತಿಮೂತ್ಮಕ ಅಧ್ಯಯನ : ಒಂದು ಪ್ರತಿಕ್ರಿಯೆ

● ಸದಾನಂದ ಪಾಟೀಲ

ಕರ್ನಾಟಕ ಭಾರತಿ (೧೮:೨–೩)ಯಲ್ಲಿ ಡಾ॥ ಎ. ಮುರಿಗೆಪ್ಪ ಅವರು ಬರೆದ "ಕನ್ನಡ ಸಂಖ್ಯಾಪುಂಜ—ಒಂದು ಆಕೃತಿಮೂತ್ಮಕ ಅಧ್ಯಯನ" ಎಂಬ ಲೇಖನ ಓದಿದ ಮೇಲೆ ಕೆಲವು ಸಂಶಯಗಳು ಕಂಡುಬರುತ್ತವೆ. ಅವುಗಳನ್ನು ಇಲ್ಲಿ ವಿವರಿಸಲಾಗಿದೆ.

೧. ಅಕ್ಷರ ಸೂಚಿತ ಸಾಧಿತ ಸಂಖ್ಯಾವಾಚಿಗಳಲ್ಲಿ ಕೇವಲ ಗುಣಕ, ವ್ಯವಕಲನ, ಸಂಕಲನವಷ್ಟೇ ಇಲ್ಲ; ಸಂಧಿ ಮತ್ತು ಸಮಾಸಗಳ ಪ್ರಕ್ರಿಯೆ ಅಂತರ್ಗತವಾಗಿರಬೇಕೆನಿಸುತ್ತದೆ.

ಎರಡು × ಹತ್ತು = ಇಪ್ಪತ್ತೆಂಬ ಗುಣಕ, ಎರಡರ + ಹತ್ತು = ಇಪ್ಪತ್ತೆಂಬ ಸಂಕಲನ, ಇರ್ + ಪತ್ತು = ಇಪ್ಪತ್ತೆಂಬ ಸಮಾಸ ಕ್ರಿಯೆ ಇದೆ.

೨. ಒಂದು + ಅರ್ಧ = ಒಂದೂವರೆ ಎನ್ನುವುದಕ್ಕಿಂತ 'ಅರೆ' ಎಂಬುದು ಅರ್ಧ ಸೂಚಿಸುವ ಅರ್ಥದಲ್ಲಿ ಬಳಸಲ್ಪಡುವುದರಿಂದ ಒಂದು + ಅರೆ = ಒಂದೂವರೆ ಎಂಬ ವಕಾರಾಗಮ ಸಂಧಿಕ್ರಿಯೆ ಇದೆ. ಹಾಗು 'ಊ'ನ ಸಂಯೋಜಕ ಪಾತ್ರವೂ ಇದೆ. ಅಂದರೆ ಸಾಧಿತಗಳು ಕೇವಲ ಆಕೃತಿಮೂದ ತೊಡಕಿಗೊಳಗಾಗದೆ ಬೇರೆ ಬೇರೆ ಪ್ರಕ್ರಿಯೆಗೆ ಒಳಗಾಗಿ ಸಿದ್ಧವಾಗುತ್ತವೆ.

೩. ಅರ್ಥಕ್ಕೆ, ಸಂಖ್ಯಾಮೊತ್ತಕ್ಕೆ ಬಾಧೆ ಬರದಂತೆ ಶಾಸ್ತ್ರೀಯ ಫಲಗಳು ದೊರೆತಿಲ್ಲ 'ಹತ್ತರಲ್ಲಿ ಒಂದನ್ನು ಕಳೆ' ಎಂಬ ವ್ಯವಕಲನಾತ್ಮಕವು ಒಂಬತ್ತರ ಇತಿಹಾಸದ ಮುಂದಿನ ಸಂಖ್ಯೆಗಳನ್ನು ಪುಷ್ಟೀಕರಿಸುವುದಿಲ್ಲ. 'ಇಪ್ಪತ್ತರಲ್ಲಿ ಒಂದನ್ನು ಕಳೆ' ಎಂಬುದು ಅಥವಾ 'ಹತ್ತು + ಹತ್ತರಲ್ಲಿ ಒಂದನ್ನು ಕಳೆ' ಎಂಬುದು 'ಹತ್ತೊಂಬತ್ತು' ಆಗಲಾರದು. ಆದ್ದರಿಂದ ಇನ್ನುಳಿದ ದ್ರಾವಿಡ ಭಾಷೆಗಳ ಸಂಬಂಧ ಹೊಂದಿ ಈ ಒಂಬತ್ತರ ನಿಷ್ಪತ್ತಿ ಬೇರೆಯೇ ಇರಬೇಕೆನಿಸುತ್ತದೆ.

೪. ಹನ್ನೊಂದು, ಹನ್ನೆರಡು–ಇವು ಹದಿನೊಂದು, ಹದಿನೆರಡು ಎಂದು ಉಚ್ಚರಿಸಲ್ಪಡುತ್ತಲೇ ಹನ್ನೊಂದು ಹನ್ನೆರಡಾಗಿವೆ. ಮುಂದಿನವು ಹಾಗೆಯೇ ಇವೆ; ಹದಿಮೂರು, ಹದಿನಾಲ್ಕು, ಹದಿನೈದು, ಹದಿನಾರು, ಹದಿನೇಳು, ಹದಿನೆಂಟು, ಹದಿನೊಂಬತ್ತು ಅಥವಾ ಹತ್ತೊಂಬತ್ತು.

ಇಲ್ಲಿ 'ಹತ್ತು + ಒಂದು = ಹತ್ತು + ಆಖ್ಯಾತ ಹೆಚ್ಚುವರಿ' ಇನ್ + ಒಂದು = ಹನ್ನೊಂದು' ಎಂಬ ವಿಶ್ಲೇಷಣೆಗಿಂತಲೂ ಬೇರೆ ನಿಷ್ಪತ್ತಿ ಇದ್ದಿರಬೇಕು.

ಹತ್ತು + ಇನ್ನೊಂದು = ಹತ್ತಿನ್ನೊಂದು > ಹತಿನೊಂದು > ಹದಿನೊಂದು
ಹದ್ನೊಂದು > ಹನ್ನೊಂದು

ಹತ್ತು + ಇನ್ನೆರಡು = ಹತ್ತಿನ್ನೆರಡು > ಹತಿನೆರಡು > ಹದಿನೆರಡು
> ಹದ್ನೆರಡು > ಹನ್ನೆರಡು

ಹತ್ತು + ಇನ್ನೊಂಬತ್ತು = ಹತ್ತಿನ್ನೊಂಬತ್ತು > ಹತಿನೊಂಬತ್ತು > ಹದಿನೊಂಬತ್ತು ಅಥವಾ ಹತ್ತು + ಒಂಬತ್ತು = ಹತ್ತೊಂಬತ್ತು.

ಈ ಉದಾಹರಣೆಗಳಲ್ಲಿರುವ 'ಇನ್' ಎಂಬುದು ಸಂಯೋಜಕ ಅಥವಾ ಆಖ್ಯಾತ ಹೆಚ್ಚುವರಿ ಪ್ರತ್ಯಯ ಆಗದೆ "ಇನ್ನು" "ಮೇಲೆ" ಎಂಬ ಅಧಿಕಾರ್ಥದ ಶಬ್ದ ಮಾತ್ರ. ಆಡುನುಡಿಯ ಹಾಗು ಅಕ್ಷರ ಪಲ್ಲಟ ಕ್ರಿಯೆಯ ನಿಷ್ಪತ್ತಿಗಳೇ ಹನ್ನೊಂದು ಹನ್ನೆರಡು.

೫. 'ಅರ್' ನ ವಿಶ್ಲೇಷಣೆ ಗೊಂದಲಮಯವಾಗಿದೆ. ಸಂಕಲನದ ಇಪ್ಪತ್ತರ ಒಂದು ನಲವತ್ತರ ಎರಡು-ಇವನ್ನು ಷಷ್ಠಿ ರಚನೆಯಲ್ಲಿ ಹಿಡಿದಿಟ್ಟರೆ ಇಪ್ಪತ್ತರ ಒಂದು ಎಂಬುದರ ಮೂಲ್ಯ ಗುಣಕ ಇಪ್ಪತ್ತೇ ಆಗುತ್ತದೆ. ನಲವತ್ತರ ಎರಡು ಎಂಬಾದು ಎಂಬತ್ತಾಗುತ್ತದೆ. ಹತ್ತರ + ಒಂದು = ಹತ್ತರೊಂದು ಎಂಬ ಭಾಗಾಕಾರದ ಅಂಶಿಕ ಫಲ ಬರುತ್ತದೆ ಹೊರತು ಸಂಕಲನದ ಫಲ ದೊರೆಯುವುದಿಲ್ಲ. ಆದ್ದರಿಂದ ಷಷ್ಠಿ ರಚನೆಯಲ್ಲಾಗಲಿ, ಸಂಖ್ಯಾಪುಂಜಕ್ಕೆ ಸಂಬಂಧಿಸಿ 'ಅರ್' ನ ಆಗಮ ನಿಯಮವಾಗಲಿ ಇಲ್ಲಿ ಸಮಹೋಗಲಾರದು.

ಸಂಖ್ಯಾಪುಂಜಗಳ ವಿಗ್ರಹ ಮಾಡಿದಾಗ ಅದರ ಸಂಖ್ಯಾ ಮೂಲ್ಯಕ್ಕೆ ಬಾಧೆ ಬರಬಾರದೆನ್ನುವವ ನಾನು. ಮತ್ತು ಆ ಮೂಲ್ಯ ಕಳೆದುಕೊಂಡ ನಿರ್ಮಾಣವಾಗಲಿ, ಬಳಕೆಯಾಗಲಿ ಜನಮನದಲ್ಲಿ ರೂಢಿಯಲ್ಲಿಲ್ಲ.

'ಇಪ್ಪತ್ತೊಂಬತ್ತು.' ಎಂಬುದು 'ಇಪ್ಪತ್ತರ ಮೇಲೆ ಒಂಬತ್ತು' ಎಂಬರ್ಥದಲ್ಲಿ ಭಾಷೆಯ ಸರಳೀಕರಣದ ಆಡುನುಡಿಯಲ್ಲಿ ಬಳಸಲ್ಪಡುತ್ತದೆ ಹೊರತು ಷಷ್ಠೀ ರಚನೆಯ ರೂಪ ಪಡೆದು ಅಲ್ಲ. ಪುಟ್ಟ ಮಕ್ಕಳು ಅಂಕಿ ಸಂಖ್ಯೆಯನ್ನು ರಾಗವಾಗಿ ಹೇಳುವಾಗ ಗಮನಿಸಬೇಕು : ಇಪ್ಪತ ಒಂದೋ, ಇಪ್ಪತ ಎರಡೋ, ಇಪ್ಪತ ಮೂರೋ....ಇತ್ಯಾದಿ.

೬. ವಚನಕಾರರಲ್ಲಿ ಇಪ್ಪತ್ತನ್ನು ಹತ್ತುಹತ್ತು ಎಂದು. ಇಪ್ಪತ್ತೈದನ್ನು ಹತ್ತು ಹತ್ತು ಐದು ಎಂದು ಬಳಸಿದ್ದು ಕಂಡು ಬರುತ್ತದೆ. ಬಿಜಾಪುರದ ಕಡೆ

ಈಗಲೂ ನಾಲ್ಕಿಪ್ಪತ್ತು, ಎರಡ್ಪತ್ತು, ಮೂರೆಂಬತ್ತು, ಪಡ್ಡಿ, ಎರಡೊಡ್ಡಿ, ಮೂರೊಡ್ಡಿ, ಎಂದು ದಶಪೂರ್ವ. ದಶೋತ್ತರ, ಶತೋತ್ತರ ಸಂಖ್ಯೆ ಬಳಸುವುದು ಕಂಡು. ಬರುತ್ತದೆ ಇವಾದರೂ ಗುಣಕವಾಗಿಯೆ ಇವೆ.

೭. ಒಂಬೊಂಬೈಲೆ ಎಂಬಾ ಒಂದು, ಒಂಬೈನೂರು ಈ ಉಚ್ಚಾರಣೆಯ ಹಿಂದಿನ ಇತಿಹಾಸವೇನು ?ಒಂಬೈನೂರು ಅಥವಾ ಒಂಬಯಿನೂರು–ಹೀಗಾಗಿರಲೂ ಬಹುದು.

ಒಂಬತ್ತು × ನೂರು = ಒಂಬತ್ನೂರು > ಒಂಬತನೂರು
> ಒಂಬದನೂರು > ಒಂಬದಿನೂರು
> ಒಂಬಯಿನೂರು

ಒಂಬತ್ತು + ಒಂಬೊತ್ತಲೆ = ಎಂಬತ್ತೊಂದು ಎಂಬಲ್ಲಿನ 'ಒಂಬತ್ತೊಂಬತ್ಲೆ' ಇದು ಅಕ್ಷರಪಲ್ಲಟ ಮತ್ತು ಲೋಪ ಕ್ರಿಯೆಯಿಂದಾಗಿ 'ಒಂಬೊಂಬೈಲೆ' ಆಗಿರಬೇಕು. ಹಾಗೆಯೆ ಹಳಗನ್ನಡದ 'ಎಣ್ಬ' ಎಂಬ ಶಬ್ದವನ್ನು ಬಳಸಿ ದೃಶ್ಯವತ್ತಾಗಿ ಹಿಡಿದಿಟ್ಟಂತೆ ಎಣ್ಬಾ + ಒಂದು = ಎಂಬತ್ತೊಂದು > ಎಂಬಾ ಒಂದು-ಎಂದು ಉಚ್ಚರಿಸುತ್ತಿರಬೇಕೆನಿಸುತ್ತದೆ.

ಸದಾನಂದ ಪಾಟೀಲರ ಪ್ರತಿಕ್ರಿಯೆಗೆ ಉತ್ತರ

● ಎ. ಮುರಿಗೆಪ್ಪ

ಸದಾನಂದ ಪಾಟೀಲರು ಸೂಚಿಸಿದಂತೆ ಅಕ್ಷರ ಸೂಚಿತ ಸಂಖ್ಯಾವಾಚಿಗಳಲ್ಲಿ ಸಂಧಿ ಸಮಾಸ ಪ್ರಕ್ರಿಯೆಗಳ ಬಗ್ಗೆ ಅನುಮಾನ ಬೇಕಿಲ್ಲ. ನನ್ನ ಲೇಖನದಲ್ಲಿ ಅದನ್ನು ಚರ್ಚೆಗೆ ತೆಗೆದುಕೊಂಡಿಲ್ಲ. ೨) ಒಂದು + ಅರ್ಧ ಎನ್ನುವಲ್ಲಿ ಅರ್ಧನ್ನು ಆಕೃತಿಮಾ ಎಂಬರ್ಥದಲ್ಲಿ ಬಳಸಿದ್ದೇನೆ. ಅರೆ ಎಂಬುದು ಉಪ ಆಕೃತಿಮಾವಾಗಿದ್ದು ನಿರ್ದಿಷ್ಟ ಪರಿಸರದಲ್ಲಿ ಬರುತ್ತದೆ. ಪಾಟೀಲರು ತಿಳಿಸಿದಂತೆ ಈ ಸಂದರ್ಭದಲ್ಲಿ ಅರ್ಧ ಆಕೃತಿ-ಮಾದ ಉಪಆಕೃತಿಮಾ ಅರೆ ಇಲ್ಲಿ ಬರುತ್ತದೆ. ಇನ್ನು ಊ ಸಂಯೋಜಕದ ಬಗ್ಗೆ ನನ್ನ ಲೇಖನದಲ್ಲಿ ಮುಂದೆ ಚರ್ಚಿಸಿದ್ದೇನೆ. ೩) ಇಪ್ಪತ್ತರಲ್ಲಿ ಒಂದನ್ನು ಕಳೆಯುವುದರಿಂದ ಹತ್ತೊಂಬತ್ತು ಸಾಧಿಸುವುದಿಲ್ಲ, ಒಮ್ಮೆ ಹತ್ತರಲ್ಲಿ ಒಂದನ್ನು ಕಳೆಯು-ವುದರ ಮುಖಾಂತರ ಒಂಬತ್ತು ಸಾಧಿಸಿದ ನಂತರ, ಒಂಬತ್ತು ನೇರವಾಗಿ ಇತರ ಸಂಖ್ಯೆಗಳ ಜೊತೆ ಸೇರಿ ಹತ್ತೊಂಬತ್ತು, ಇಪ್ಪತ್ತೊಂಬತ್ತು ಮುಂತಾದ ರೂಪಗಳು ಸಾಧಿಸುತ್ತವೆ. ಒಂಬತ್ತು ಸಂಖ್ಯೆಯ ಬಗ್ಗೆ A comparative Grammar of South Dravidian or South Indian Languages–Cardwell ನೋಡಿ. ೪) ಪಾಟೀಲರ ಶೋಧನೆ ಕೇವಲ ಆಕಸ್ಮಿಕ. ಅವರ ವಾದವನ್ನೇ ಸವಾಲಿಸುವಂತೆ ಹತ್ತೊಂಬತ್ತು ರೂಪ ಇರುವುದರಿಂದ ಹತ್ತು + ಒಂಬತ್ತು ಎಂಬ ಇನ್ನೊಂದು ಸಾಧ್ಯತೆಯನ್ನು ಪಾಟೀಲರೇ ನೀಡಿದ್ದಾರೆ. ಪಾಟೀಲರ ಪ್ರಕಾರ ಇಪ್ಪತ್ತಿನ್ನೊಂದು, ನಲವತ್ತಿನ್ನೆರಡು ರೂಪಗಳು ಸಾಧಿತವಾಗಬೇಕಿತ್ತು. ಅಂತೆಯೇ ಸಾವಿರ + ಇನ್ನೊಂದು ಸಾವಿರಿನ್ನೊಂದು ರೂಪ ಸಾಧಿಸಿದೆ. ಸಾವಿರದೊಂದು ರೂಪ ಬಳಕೆ-ಯಲ್ಲಿದೆಯಲ್ಲ! ೫) ವಿಮರ್ಶಕರೇ ತಿಳಿಸುವಂತೆ "ಇಪ್ಪತ್ತರ ಮೇಲೆ ಒಂಬತ್ತು" ಎಂಬಲ್ಲಿ 'ಇಪ್ಪತ್ತರ' ರಚನೆಯಲ್ಲಿ ಷಷ್ಠಿ ಪ್ರಯೋಗವಿಲ್ಲವೆ ? ಇನ್ನು ನಲವತ್ತರ ಎರಡು ಎಂಬಲ್ಲಿ ಎಂಬತ್ತರ ನೇರಸಂಖ್ಯಾ ಕಲ್ಪನೆ ಇದೆ. ಅಂತೆಯೇ ನಲವತ್ತರ ಘಟಕಕ್ಕೆ ಸೇರಿದ ಎರಡು ಎಂಬ ಸಂಬಂಧಸೂಚಕ ರಚನೆಯೂ ಸಾಧಿತವಾಗಿದೆ. ಇಲ್ಲಿ ಒಂದೇ ರಚನೆಗೆ ಎರಡು ಅರ್ಥವಿರುವುದು ನಿಜ. ಅರ್ಥ ಸಂದಿಗ್ಧತೆಯನ್ನು ಹೋಗಲಾಡಿಸುವ ಸಲುವಾಗಿ ಮುಂದೆ ನಲವತ್ತರ ಒಂದು ಎಂಬ ರಚನೆಗಳು ನಲವತ್ತರ ಒಂದು <ನಲವತ್ತೊಂದು ಎಂದು ಬದಲಾಗಿರಬೇಕು ಎನ್ನುವುದು ನನ್ನ ಪ್ರಮೇಯ ಪೂರ್ವ (Hypothesis) ಪಾಟೀಲರು ಸೂಚಿಸಿರುವಂತೆ ಹತ್ತರೊಂದು ಎಂಬಲ್ಲಿ ಭಾಗಾಂಶ ಎಂಬ ಮೂರನೇ ಅರ್ಥವೂ ಸ್ಫುರಿಸುತ್ತದೆ.

ಕೇವಲ 'ಇಪ್ಪತ್ತೊಂಬತ್ತು' ರೂಪವನ್ನು ಮಾತ್ರ ಷಷ್ಠಿ ರಚನೆಗೆ ಉದಾಹರಣೆಯಾಗಿ ನಾನು ತೆಗೆದುಕೊಂಡಿಲ್ಲ. ನೂರಾ ಇಪ್ಪತ್ತು, ಸಾವಿರದ ಒಂದು ರಚನೆಗಳಂತೆ ಇಪ್ಪತ್ತೊಂಬತ್ತು ಇನ್ನೊಂದು ಷಷ್ಠಿ ರಚನೆ. ೬)ವಚನಕಾರರಲ್ಲಿ ಉದಾಹರಿತ ರಚನೆಗಳು ಗುಣಕವಲ್ಲ. ಮುಂದಿನ ರಚನೆಗಳಲ್ಲಿ ಗುಣಕ ಇದೆ. ಆಯಾಯ ಸಂಸ್ಕೃತಿಗೆ ತಕ್ಕಂತೆ ಹೆಚ್ಚಿನ ಸಂಖ್ಯೆಗಳನ್ನು ಬಳಿಸದ ಸಮುದಾಯಗಳಲ್ಲಿ ಈ ರೀತಿಯ ಸೀಮಿತ ಸಂಖ್ಯೆಯನ್ನು ಗುಣಕ, ಸಂಕಲನ ರಚನೆಗಳನ್ನು ಸಾಮಾನ್ಯವಾಗಿ ಬಳಸುವುದು ಕಂಡುಬರುತ್ತದೆ. Numeral System in Gonji-Reddy Parandama ಓದಿ ೭) 'ಒಂಬೊಂಬೈಲೆ ಎಂಬಾ ಒಂದು' ಎಂಬ ಪ್ರಯೋಗ ನನಗೆ ಹೊಸದು. ಇದನ್ನೇ 'ಒಂಬೊಂಬೈಲೆ ಎಂಬತ್ತೊಂದು' ಎಂದು ವಿಜಾಪುರದ ಕಡೆಗೆ ಬಳಸುವರಂತೆ 'ಎಣ್ಬ' ಎಂಬ ಸಂಖ್ಯೆಯನ್ನು ಶಿಲಾಶಾಸನಗಳಲ್ಲಿಯ ದಾಖಲೆಯ ಮುಖಾಂತರ ಗುರುತಿಸಬಹುದು ಅಥವಾ ಪಕ್ಕದ ತೆಲುಗು ಭಾಷೆಯಿಂದ ಪ್ರಭಾವಿತ ಎಂದು ಹೇಳಲೂ ಸಾಧ್ಯ. ಅದೇ ರೀತಿ ಒಂಬಯಿನೂರು. ಸದ್ಯಕ್ಕೆ ಇವರ ಬಗ್ಗೆ ಯಾವುದೇ ನಿರ್ಣಯಕ್ಕೆ ನಾನು ಸಾಮಗ್ರಿಕೊರತೆಯಿಂದಾಗಿ ಬರಲಾರೆ.

ಡಾ॥ ಅಂಬೇಡ್ಕರ್ ಮತ್ತು ಬೌದ್ಧಧರ್ಮ

● ಕೆ. ಅಭಿಶಂಕರ

ಸನ್ಮಾನ್ಯ ಉಪಕುಲಪತಿ ಡಾ॥ ದೇಸಾಯಿ ಅವರೆ, ಡಾ॥ ಬಾಬಾಸಾಹೇಬ್ ಅಂಬೇಡ್ಕರ್‌ಪೀಠದ ಮುಖ್ಯಸ್ಥರಾದ ಡಾ॥ ರಾಜಶೇಖರಯ್ಯನವರೆ, ಪರಿಶಿಷ್ಟ ಜಾತಿ ಮತ್ತು ಜನಾಂಗ ಘಟಕದ ಮೇಲ್ವಿಚಾರಕರಾದ ಪ್ರೊಫೆಸರ ಮಾದರ ಅವರೆ ಮಿತ್ರರೆ, ಬೋಧಿಸತ್ವ ಬಾಬಾಸಾಹೇಬರವರ ಉಜ್ವಲ ಅಭಿಮಾನಿ ಬಂಧುಗಳೆ.

"ಡಾ॥ ಅಂಬೇಡ್ಕರ್ ಮತ್ತು ಬೌದ್ಧ ಧರ್ಮ" ಎಂಬ ವಿಷಯದ ಮೇಲೆ ಈ ವರ್ಷದ ಸ್ಮಾರಕ ಉಪನ್ಯಾಸವನ್ನು ಮಾಡಬೇಕೆಂದು ವಿಶ್ವವಿದ್ಯಾಲಯದ ಪರವಾಗಿ ಪ್ರೊಫೆಸರ್ ರಾಜಶೇಖರಯ್ಯನವರು ಕೇಳಿದರು. ಭೀಮರಾವ್ ಅಂಬೇಡಕರ್ ಅವರ ಭೀಮ ಸಾಹಸದ ವೀರ ಹೋರಾಟದ ಬಗ್ಗೆ ನನಗೆ ತುಂಬಾ ಮೆಚ್ಚಿಗೆ–ಗೌರವ–ಅಭಿಮಾನ ಇರುವುದರಿಂದ ಮತ್ತು ವಿರಾಟ್ ಬೌದ್ಧ ಪರಂಪರೆ, ವಿಚಾರ ಶೀಲತೆ, ಸಂಸ್ಕೃತಿಯನ್ನು ತಿಳಿದುಕೊಳ್ಳಲು ಸ್ವಲ್ಪ ಪ್ರಯತ್ನ ಮಾಡಿದ್ದೇನಾದ್ದರಿಂದ ಈ ಅಳಿಲು ಸೇವೆ ಸಲ್ಲಿಸಲು ಸಂತೋಷದಿಂದ ಒಪ್ಪಿದೆ.

ಬಂಡಾಯಗಾರ ಬಾಬಾಸಾಹೇಬರ ಜೀವನ ಚರಿತ್ರೆ ಚಿತ್ತಾಕರ್ಷಕವಾಗಿದೆ. ಅವರು ಇಡೀ ಭಾರತಕ್ಕೆ ಏಕೆ, ಇಡೀ ಮಾನವಕುಲಕ್ಕೇ ಭೂಷಣರು, ರತ್ನಪ್ರಾಯರು. ದಲಿತರಲ್ಲಿಯೇ ಹುಟ್ಟಿ ಬೆಳೆದ ಅವರು ಅತೀವ ಅನ್ಯಾಯ, ಬಡತನ, ಅವಹೇಳನ, ಅವಮಾನ, ದೌರ್ಜನ್ಯಕ್ಕೆ ಗುರಿಯಾಗಿ, ಅವನ್ನು ಸಹಿಸಿಕೊಂಡು, ಅವನ್ನು ಮೀರಿನಿಂತು, ದೇಶ–ವಿದೇಶಗಳಲ್ಲಿ ಅತ್ಯುನ್ನತ ವ್ಯಾಸಂಗ ಮಾಡಿ ನ್ಯಾಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರಗಳಲ್ಲಿ ಪ್ರಾವೀಣ್ಯ ಪಡೆದು ತಮ್ಮ ಉಪ-ಜೀವನಕ್ಕಾಗಿ ಉದ್ಯೋಗ ಮಾಡುತ್ತಲೂ, ದಲಿತರ ಕಣ್ಣು ತೆರೆಸಿದರು, ಅವರ ನಾಯಕರಾಗಿ ಸಂಘಟನೆ ಮಾಡಿದರು, ತಲೆತಲಾಂತರಗಳ ಅನ್ಯಾಯಗಳ ವಿರುದ್ಧ ಸಿಡಿದೆದ್ದು ಹೋರಾಟ ನಡೆಸಿದರು, ಮಂತ್ರಿಗಳಾದರು, ಸ್ವತಂತ್ರ ಭಾರತದ ಸಂವಿಧಾನದ ಶಿಲ್ಪಿಯಾದರು. ಅಸ್ಪೃಶ್ಯತೆಯನ್ನು ಸಂವಿಧಾನದ ದ್ವಾರವೇ ನಿಷೇಧಿಸಿದರು. ದಲಿತರ ವಿಕಾಸಕ್ಕಾಗಿ ಮೀಸಲಾತಿಗಳನ್ನು ಒದಗಿಸಿದರು. ಅನೇಕ ಮುಖಗಳ ಮಹಾನ್ ಶಕ್ತಿಯಾಗಿದ್ದ, ಅವರ ವಿಸ್ಮಯಕರ, ಘಟನಾಮಯ ಜೀವನದ ಕೊನೆಯ ದಿನಗಳಲ್ಲಿ ತಮ್ಮ ಲಕ್ಷಾವಧಿ ಅನುಯಾಯಿಗಳ ಜೊತೆಗೆ ಹಿಂದೂ ಧರ್ಮವನ್ನು ತ್ಯಜಿಸಿ, ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಇದು, ಅವರು ಇದ್ದಕ್ಕಿದ್ದಂತೆ, ದುಡುಕಿ ಮಾಡಿದ ನಿರ್ಧಾರವಲ್ಲ; ಮತ–ಪರಿವರ್ತನೆಯ ವಿಚಾರ. ಅವರ ಚಿಂತನ–ಮಂಥನದಲ್ಲಿ

ದೀರ್ಘ ಕಾಲದ ವರೆಗೆ ಇತ್ತು. ಅದನ್ನು ಬಹಿರಂಗವಾಗಿಯೇ ಅನೇಕ ಸಲ ವ್ಯಕ್ತಪಡಿಸಿದ್ದರು. ಅದು ಕ್ರಮೇಣ ಪಕ್ವವಾಗಿ, ಮೂರ್ತ ಸ್ವರೂಪ ತಾಳಿತು.

ಮತ-ಪರಿವರ್ತನೆಯ ಈ ವಿಷಯ ಗಹನವಾದದ್ದು, ಭಾವನಾತ್ಮಕವಾದದ್ದು, ವಿವಾದಾತ್ಮಕವಾದದ್ದು. ಈ ಸಮಾರಂಭದಲ್ಲಿ, ತಮ್ಮ ದೀರ್ಘ ಸಮಯವನ್ನು ತೆಗೆದುಕೊಳ್ಳದೆ ಕೆಲವು ಅಂಶಗಳನ್ನು ಮಾತ್ರ ಈಗ ತಮ್ಮ ಮುಂದೆ ಇಡಲು ಬಯಸುತ್ತೇನೆ. ಹೆಚ್ಚು ವಿಸ್ತಾರವಾಗಿ, ಪುಸ್ತಿಕೆಯ ರೂಪದಲ್ಲಿ ವಿಚಾರಗಳನ್ನು ಮಂಡಿಸಿ, ಪ್ರಕಟಣೆಗೆ ಕೊಡುವ ಆಲೋಚನೆ ಇದೆ.

ಭಾರತದಲ್ಲಿ ವರ್ಣ-ವರ್ಗ-ಜಾತಿ-ಧರ್ಮ ಇವು ಪರಸ್ಪರ ಹೆಣೆದುಕೊಂಡಿರುವುದರಿಂದ. ಇಲ್ಲಿ ಹಿನ್ನಲೆಯ ಒಂದು ಪಕ್ಷಿ ನೋಟ ಅಗತ್ಯ. ಪ್ರಪಂಚದ ಅನೇಕ ದೇಶಗಳ ಒಳಗಿನ ಮಾನ್ಯ ಸಮಾಜದಲ್ಲಿ ಕೆಲವು ಆನುವಂಶಿಕ ಗುಂಪುಗಳು ಇದ್ದವು. ಈಗಲೂ ಇವೆ. ರಾಜನ ಮಗ ರಾಜ. ಸಾಮಂತನ ಮಗ ಸಾಮಂತ. ಸರ್ದಾರನ ಮಗ ಸರ್ದಾರ ಹೀಗೆ. ಸಾಮಾನ್ಯವಾಗಿ. ಈ ಗುಂಪುಗಳಲ್ಲಿ ಅವರವರ ಸ್ಥಾನಮಾನಕ್ಕೆ ಅನುಸಾರವಾಗಿ ಅವರವರಲ್ಲಿ ವಿವಾಹ ಸಂಬಂಧ. ಇದು ವರ್ಣ-ಜಾತಿ ಕಲ್ಪನೆಯ ಪ್ರಾಥಮಿಕ ರೂಪವೇ. ಆದರೆ, ಇದು ಇತರ ದೇಶಗಳಲ್ಲಿ ಸೀಮಿತವಾಗಿಯೇ ಉಳಿಯಿತು. ಸಾರ್ವತ್ರಿಕವಾಗಲಿಲ್ಲ. ಆದರೆ ಈ ಪ್ರವೃತ್ತಿ ವಿವಿಧ ಕುಲಗಳ ಸಂಗಮ-ಸ್ಥಾನವಾದ ಭಾರತದಲ್ಲಿ ಬೆಳೆದು, ಒಟ್ಟು ಸಾಮಾಜಿಕ ಸಂಘಟನೆಯ ತಳಹದಿಯೇ ಆಯಿತು, ಧಾರ್ಮಿಕ ಕಟ್ಟಳೆಯಾಯಿತು, ವಕ್ರಗತಿಯನ್ನು ಹಿಡಿಯಿತು, ಶೋಷಣೆಯ ಸಾಧನವಾಯಿತು.

ನಾಲ್ಕೂ ವೇದಗಳಲ್ಲಿ ಬರುವ ಪುರುಷಸೂಕ್ತದ ೧೨ನೆಯ ಋಕ್ಕು ಇದಕ್ಕೆ ಬುನಾದಿ (ಬ್ರಾಹ್ಮಣೋಽಸ್ಯ ಮುಖಮಾಸೀದ್ಬಾಹೂ ರಾಜನ್ಯಃ ಕೃತಃ । ಊರೂ ತದಸ್ಯ ಯದ್ವೈಶ್ಯಃ ಪದ್ಭ್ಯಾಂಶೂದ್ರೋ ಅಜಾಯತ ೧) ನಾಲ್ಕು ವರ್ಣಗಳವರು ವಿರಾಟ್ ಪುರುಷನ ನಾಲ್ಕು ಅವಯವಗಳಿಂದ—ಅಂದರೆ ಮುಖ, ಭುಜ, ತೊಡೆ, ಪಾದಗಳಿಂದ-ಉತ್ಪನ್ನರಾದರು ಎಂಬ ರೂಪಕ ಕಲ್ಪನೆ ಇದು. ಈ ಪುರುಷಸೂಕ್ತದ ಭಾಷೆಯನ್ನು ಪರೀಕ್ಷಿಸಿ, ಇದನ್ನು ಕಾಲಾಂತರದಲ್ಲಿ ವೇದಗಳಿಗೆ ಜೋಡಿಸಲಾಯಿತು ಎಂದು ಕೆಲವು ಭಾಷಾ ಪ್ರವೀಣರ ಅಭಿಪ್ರಾಯವಿದೆ. ಅದೇನೇ ಇರಲಿ, ಆದರೆ ವ್ಯಕ್ತಿಯು ಹುಟ್ಟಿನಿಂದಲೇ ವರ್ಣದ ನಿರ್ಧಾರ-ವೆಂಬ ಅರ್ಥ ಇದರಿಂದ ಬರುವುದಿಲ್ಲ. ಭಗವದ್‌ಗೀತೆಯ "ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣ-ಕರ್ಮ-ವಿಭಾಗಶಃ" ಎಂಬ ಶ್ಲೋಕದಲ್ಲಿಯೂ ಜನ್ಮದಿಂದ ವರ್ಣವೆಂದು ಹೇಳಿಲ್ಲ. ಆದರೆ, ಇದಕ್ಕೆ ವ್ಯತಿರಿಕ್ತವಾಗಿ ಗೀತೆಯ ಬೇರೆ ಭಾಗದಲ್ಲಿ ವರ್ಣ-ಸಂಕರದ ಪ್ರಸ್ತಾಪ ನಿಷೇಧಾರ್ಥದಲ್ಲಿ ಮೊದಲು ಅರ್ಜುನನಿಂದ, ತದನಂತರ ಕೃಷ್ಣನಿಂದ ಬರುತ್ತದೆ. ಇದರಿಂದ, ವರ್ಣವು

ಹುಟ್ಟನ್ನು ಅವಲಂಬಿಸಬೇಕು ಅಂದಹಾಗಾಯಿತು. ಚಾತುರ್ವರ್ಣ್ಯಕ್ಕೆ ಸಂಬಂಧಪಟ್ಟ ಪ್ರಸ್ತಾಪ ಇಂಡೋನೇಷ್ಯದ ಬಾಲಿ ದ್ವೀಪದಲ್ಲಿ ಪ್ರಚಲಿತವಿರುವ ಭಗವದ್ಗೀತೆಯಲ್ಲಿ ಇಲ್ಲವೆಂದು ಒಬ್ಬ ಡಚ್ ವಿದ್ವಾಂಸರು ಹೇಳಿದಂತೆ ಕಾಣುತ್ತದೆ. ಇದನ್ನು ಖಚಿತ ಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. ಒಂದು ವೇಳೆ, ಅದು ಅದರಲ್ಲಿ ಇಲ್ಲದಿದ್ದರೆ ನಮ್ಮಲ್ಲಿರುವ ಗೀತೆಯಲ್ಲಿ ಅದು ಪ್ರಕ್ಷಿಪ್ತ ಎಂದು ತಿಳಿದೀತು. ಬೋಯಿತಿಯ ಪುತ್ರರಾದ ವೇದ-ವ್ಯಾಸರೇ ಸ್ವತಃ ವರ್ಣ ಸಂಕರ-ಸಂಜಾತರು. ವರ್ಣ-ವ್ಯವಸ್ಥೆಯನ್ನು ಮೀರಿದ, ಇಂತಹ ಅನೇಕ ಋಷಿಗಳ ಉದಾಹರಣೆಗಳಿವೆ. ಇದಕ್ಕೆ ಸಮಾಧಾನವಾಗಿ, ಋಷಿಗಳ ಮೂಲವನ್ನು ಹುಡುಕಬಾರದು ಎಂಬ ಗಾದೆ ಮಾಡಿದರು. ಪ್ರಾಚೀನ ಯುಗದಿಂದಲೂ ಪುರೋಹಿತ ವರ್ಗದ ಕೆಲವು ಧೀರರು ರಾಜ್ಯಾಧಿಕಾರವನ್ನು ಪ್ರತ್ಯಕ್ಷವಾಗಿ ವಶಪಡಿಸಿಕೊಂಡು, ವರ್ಣವ್ಯವಸ್ಥೆಯನ್ನು ಉಲ್ಲಂಘಿಸಿದ ಅನೇಕ ಪ್ರಸಂಗಗಳಿವೆ. ಮೊದಲಿನ ಎರಡು ವರ್ಣಗಳಲ್ಲಿ ಯಾವುದು ಶ್ರೇಷ್ಠ ಎಂಬ ವಿವಾದ, ಪೈಪೋಟಿ ಆಗಾಗ ನಡೆದೇ ಇತ್ತು. ಹುಟ್ಟುತ್ತ ಎಲ್ಲರೂ ಶೂದ್ರರು ಎಂದು ಮಹಾಭಾರತದಲ್ಲಿ ಒಂದು ಕಡೆ ಉಲ್ಲೇಖ ಬರುತ್ತದೆ. ಸತ್ಯಕಾಮ ಜಾಬಾಲಿಯ ಗುರು-ಕುಲ ಪ್ರವೇಶದ ಉದಾರ ಉದಾಹರಣೆಯೂ ಇದೆ.

ವೈದಿಕ ಪರಂಪರೆಗೆ ಭಿನ್ನವಾದ, ವೇದಗಳನ್ನು ಅವಲಂಬಿಸದ ಸಾಂಖ್ಯ, ಲೋಕಾಯುಕ್ತ, ಜೈನ ಮುಂತಾದ ಸ್ವತಂತ್ರ ವಿಚಾರ-ಸರಣಿಗಳೂ ಉದಯಿಸಿದವು. ಅವುಗಳಲ್ಲಿ ಮುಖ್ಯವಾಗಿ ಒಟ್ಟು ಜನತೆಯ ಮೇಲೆ ಪರಿಣಾಮ-ಮಾಡಿ ಬೆಳೆದದ್ದು ಸಿದ್ಧಾರ್ಥ ಗೌತಮಬುದ್ಧನ ತತ್ವ-ಪ್ರಣಾಲಿ ವರ್ಣ-ವ್ಯವಸ್ಥೆ ಬುದ್ಧನಿಗೆ ಮಾನ್ಯವಿಲ್ಲ. ಎಲ್ಲಾ ಮಾನವರೂ ಸಮಾನರು. ದುಃಖನಿವಾರಣೆಗೆ ಬುದ್ಧ ಅಷ್ಟಾಂಗಮಾರ್ಗವನ್ನು ಬೋಧಿಸಿದ. ಪ್ರತಿಯೊಬ್ಬನಿಗೂ ಸ್ವ-ಅನುಭವವೇ ಪ್ರಮಾಣ. ಶೀಲವಂತನಾಗಿ, ಮೈತ್ರಿ, ಕರುಣೆ, ಮುದಿಷ, ಉಪೇಕ್ಷಾ-ಭಾವನೆಗಳನ್ನು ಬೆಳೆಸಿಕೊಂಡು. ಕುಶಲ ಕಾರ್ಯಗಳನ್ನೇ ಮಾಡುವುದರಿಂದ ತನಗೂ, ಸಮಾಜಕ್ಕೂ ಸಮೃದ್ಧಿ. ಅತಿರೇಕಗಳನ್ನು ಬಿಟ್ಟು ಮಧ್ಯ ಮಾರ್ಗವನ್ನು ಅನುಸರಿಸುವುದು ಹಿತಕರ. ಈ ನಡವಳಿಕೆಯಿಂದ ಮತ್ತು ಧ್ಯಾನದಿಂದ ಪ್ರತಿಯೊಬ್ಬ ಮಾನವನೂ ಸಂಬೋಧಿಯನ್ನು, ನಿರ್ವಾಣವನ್ನು ಪಡೆಯಬಲ್ಲ. ಈ ದಿಶೆಯಲ್ಲಿ ಬಹುಜನರ ಹಿತಕ್ಕಾಗಿ. ಬಹುಜನರ ಸುಖಕ್ಕಾಗಿ ಶ್ರಮಿಸಲು ಸಿದ್ಧರಾದ ಭಿಕ್ಷುಗಳ ಸಂಘವನ್ನು ಬುದ್ಧ ಸ್ಥಾಪಿಸಿದ. ಯಾವ ಭೇದ-ಭಾವವೂ ಇಲ್ಲದೆ ಇವರಲ್ಲಿ ಮುಕ್ತ ಪ್ರವೇಶವಿತ್ತು. ಸುನೀತ ನೆಂಬ ಶುಚಿ-ಕಾರ್ಮಿಕ, ಉಪಾಲಿ ಎಂಬ ನಾಪಿತ, (ಅಂಗುಲಿಮಾಲನೆಂಬ ಪಾತಕಿ ಸಹಿತ) ಶೂದ್ರ ವರ್ಣದವರೆಂದು ಕಣಿಗಣಿಸಲ್ಪಟ್ಟ ಎಷ್ಟೋ ಮಂದಿ ಬೌದ್ಧ ಭಿಕ್ಷುಗಳಾಗಿ ಉನ್ನತ ಸ್ಥಾನ-ಮಾನ ಪಡೆದರು, ಅರ್ಹತರಾದರು. ಬುದ್ಧ ಮತ್ತು ಭಿಕ್ಷುಗಳು ಜಾತಿ-ಉದ್ಯೋಗ ಯಾವುದನ್ನು ಲೆಕ್ಕಿಸದೆ. ಕರೆದವರ ಮನೆಗೆ ಭಿಕ್ಷೆಗೆ ಹೋಗುತ್ತಿದ್ದರು.

ಬುದ್ಧನ ಉಪದೇಶದ ಅಂಬಷ್ಟ ಸೂತ್ರ, ಸೋಣದಂಡ ಸೂತ್ರ ಮುಂತಾದ ಅನೇಕ ಸೂತ್ರಗಳಲ್ಲಿ ವರ್ಣ-ವ್ಯವಸ್ಥೆಯನ್ನು ಕುರಿತು ವಿಸ್ತೃತವಾದ ಸಂಭಾಷಣೆಗಳು ಬಂದಿವೆ. ತಮ್ಮ ವರ್ಣವೇ ಶ್ರೇಷ್ಠವೆಂದು ವಾದಿಸಲು ಹೋದವರು, ತಮ್ಮ ನಿಲವು ತಪ್ಪೆಂದು ಒಪ್ಪಿಕೊಂಡು ಬೌದ್ಧರಾದರು. ವರ್ಣ-ವ್ಯವಸ್ಥೆ ಹೇಗೆ ಅಸ್ವೈಸರ್ಗಿಕವಾದದ್ದು, ನಿರಾಧಾರವಾದದ್ದು ಎಂಬುದನ್ನು ಕಥಾಗತನು ತರ್ಕಬದ್ಧವಾಗಿ ವಿವರಿಸಿ, ಅದು ಗ್ರಾಹ್ಯವೆಲ್ಲವೆಂದು ಮನಗಾಣಿಸಿ ಕೊಟ್ಟದ್ದು ಕುತೂಹಲಕರವಾಗಿದೆ. ವಿಚಾರ-ಪ್ರಚೋದಕವಾಗಿದೆ. ಬುದ್ಧ ಗೀತೆಯೆಂದು • ಹೆಸರಾದ ಧರ್ಮಪದದಲ್ಲಿ ಬ್ರಾಹ್ಮಣ ವಗ್ಗ (ವರ್ಗ) ಎಂಬ ೪೧ ಪದ್ಯಗಳ ಅಧ್ಯಾಯವೇ ಇದೆ. ಅದರಲ್ಲಿ, ಹುಟ್ಟಿನಿಂದಲೇ ಯಾರೂ ಬ್ರಾಹ್ಮಣರಾಗುವುದಿಲ್ಲವೆಂದು ಸ್ಪಷ್ಟಪಡಿಸಲಾಗಿದೆ. (ನ ಚಾಹಂ ಬ್ರಾಹ್ಮಣಂ ಬ್ರೂಮಿ. ಯೋನಿಜಂ ಮತ್ತಿ ಸಂಭವಂ ೧)

ಸಾಮ್ರಾಟ ಅಶೋಕ ಮೌರ್ಯ ಬೌದ್ಧ ಧರ್ಮದಿಂದ ಪ್ರೇರಣೆ ಪಡೆದು ನೀತಿ ತತ್ವಗಳನ್ನು. ಬುದ್ಧನ ಸಂದೇಶವನ್ನು ದೇಶ-ವಿದೇಶಗಳಲ್ಲಿ ಪ್ರಚುರ ಪಡಿಸಲು ಏನೆಲ್ಲ ಮಾಡಿದ ಎಂಬುದು ಬಹುಜನರಿಗೆ ತಿಳಿದ ವಿಷಯ. 'ಸಮವಾಯ ಏವ ಸಾಧು ॥ "-ಅಂದರೆ ಸಾಮರಸ್ಯವೇ ಒಳ್ಳೆಯದು ಎಂದು ಅವನು ಒತ್ತು ಕೊಟ್ಟು ಹೇಳಿದ. ಜನ-ಕಲ್ಯಾಣ ಕಾರ್ಯ ಮಾಡಿದ. ಅವನ ಪ್ರಯತ್ನದಿಂದ ಬೌದ್ಧ ಧರ್ಮವು ಅಂತರ್‌ರಾಷ್ಟ್ರೀಯವಾಗಲು ನಾಂದಿಯಾಯಿತು. ಭಾರತದಲ್ಲಿ ಬೌದ್ಧ ಧರ್ಮದ ಪ್ರಸಾರದಿಂದ, ಅದಕ್ಕೆ ಮೌರ್ಯರ ಪ್ರಭುತ್ವಶಕ್ತಿಯ ಬೆಂಬಲದಿಂದ, ಚಾತುರ್ವರ್ಣ್ಯ-ವ್ಯವಸ್ಥೆಯ ಬಲಕಡಿಮೆಯಾಗಿ, ಮೇಲ್ ವರ್ಣಗಳ ಜನರ ಪ್ರತಿಷ್ಠೆ. ಅಧಿಕಾರ. ಸ್ವಪ್ರಯೋಜನಗಳಿಗೆ ಧಕ್ಕೆ ಉಂಟಾಯಿತು. ಸಾಮ್ರಾಟ ಬೃಹದ್ರಥ ಮೌರ್ಯನನ್ನು ಅವನ ಸೇನಾಪತಿ ಪುಷ್ಯಮಿತ್ರ ಸುಂಗನೇ ಕೊಲೆ ಮಾಡಿ, ರಾಜ್ಯಾಧಿಕಾರವನ್ನು ಅಪಹರಿಸಿದ. · ಇದು ತೀವ್ರವಾದ ಪ್ರತಿಕ್ರಿಯೆಯಿಂದ ಉಂಟಾದ ಗಮನಾರ್ಹವಾದ ರಾಜ್ಯಕ್ರಾಂತಿ. ಇದೇ ಮನುಸ್ಮೃತಿ ರಚನೆಯಾದ ಕಾಲ. ಈಗ, ಪುನರಪಿಯಜ್ಞಯಾಗಾದಿ ಕರ್ಮ-ಕಾಂಡಕ್ಕೆ, ವರ್ಣ-ವ್ಯವಸ್ಥೆಗೆ ಉತ್ತೇಜನ ದೊರೆಯಿತು. ತದನಂತರ ಬಂದ ರಾಜರಾದ ಕನಿಷ್ಕ, ಮಿಲಿಂದ,ಹರ್ಷ ಮುಂತಾದವರಿಂದ ಪ್ರೋತ್ಸಾಹ ದೊರಕಿ, ಬೌದ್ಧ ಧರ್ಮ ಕೆಲವು ಸಮಯದವರೆಗೆ ಅಲ್ಲಲ್ಲಿ ಚೇತರಿಸಿಕೊಂಡಿತ್ತು.

ಭಾರತದಲ್ಲಿ ಬೌದ್ಧ ಧರ್ಮದ ಅವನತಿ ಆಗುತ್ತಿದ್ದಾಗ, ವರ್ಣ-ವ್ಯವಸ್ಥೆ ಪುನಃ ಪ್ರಬಲವಾಯಿತು. ಈ ಮೊದಲೇ, ಅಲೆಮಾರಿಗಳು ಗ್ರಾಮಗಳ ಮೇಲೆ ನಡೆಸುತ್ತಿದ್ದ ದಾಳಿಗಳನ್ನು ಎದುರಿಸಲು ಕೆಲವರನ್ನು ನೌಕರಿಗೆ ಇಟ್ಟುಕೊಳ್ಳಲಾಗಿತ್ತೆಂದು ಕಾಣುತ್ತದೆ; ಇವರು ಊರಿನ ಹೊರಗೆ ವಾಸಿಸಬೇಕಾಗಿತ್ತು: ಬೌದ್ಧ

ಮತಕ್ಕೆ ಒಲಿದ ಇವರಿಗೂ ಸಾಮಾಜಿಕ ಸ್ಥಾನ-ಮಾನವನ್ನು ಕೊಡಲು ಬೌದ್ಧರು ಪ್ರಯತ್ನಿಸಿದರು; ಆದರೆ, ಇವರು ಬೌದ್ಧ ಮತವನ್ನು ಬಿಡದಿದ್ದ ಕಾರಣ ಬಹಿಷ್ಕರಿಸಲ್ಪಟ್ಟರು ಮತ್ತು ಆರ್ಥಿಕವಾಗಿ ದುಸ್ಥಿತಿಯಲ್ಲಿದ್ದ ಇವರನ್ನು ಅಸ್ಪೃಶ್ಯತೆಗೆ ಗುರಿಮಾಡಲಾಯಿತು. ಎಂದು ಬಾಬಾಸಾಹೇಬರು ಅಭಿಪ್ರಾಯಪಟ್ಟಿದ್ದಾರೆ. ಗೋ-ವಧೆ, ಗೋಮಾಂಸ ಭಕ್ಷಣವನ್ನು ನಿಷೇಧಿಸಿದ ಗುಪ್ತ ಸಾಮ್ರಾಜ್ಯದ ಕಾಲಕ್ಕೆ ಅಂದರೆ ಸುಮಾರು ನಾಲ್ಕನೆಯ ಶತಮಾನದಿಂದ ಅಸ್ಪ್ರಶ್ಯತೆ ಪ್ರಾರಂಭವಾಯಿತೆಂದು ಅವರ ಶೀರ್ಮಾನ. ಶೂದ್ರ-ಅತಿ ಶೂದ್ರರು ಬೌದ್ಧ ಧರ್ಮದಲ್ಲಿ ಇದ್ದರೆಂಬ ಬಗ್ಗೆ ಭಾರತದ ಪೂರ್ವ ಪ್ರದೇಶದಲ್ಲಿ ಹೆಚ್ಚು ಪ್ರಮಾಣವಿದೆ. ಮಾನವ-ಮಾನವರಲ್ಲಿ ಸಾಮಾಜಿಕ ಭೇದ-ಭಾವಗಳನ್ನು ಒಪ್ಪದ, ಬೌದ್ಧ ಧರ್ಮದ ಉದಾರವಾದ ದೃಷ್ಟಿ ಮತ್ತು ಸರಳ ಮಾರ್ಗದ ಬಗ್ಗೆ ಶೋಷಿತ ವರ್ಗಗಳು ವಿಶೇಷ ಒಲವನ್ನು ತೋರಿಸಿದ್ದರೆ. ಅದು ಸಹಜವೇ ಸರಿ. ಹೀಗೆಯೂ, ಅಂತ್ಯಜರು, ಪಂಚಮರು, ಅತಿ-ಶೂದ್ರರು ಮುಂತಾಗಿ, ದೂಷಿಸಲ್ಪಟ್ಟವರು ಮಾಜಿ-ಬೌದ್ಧರೆಂಬ ಗ್ರಹಿಕೆಗೆ ಅವಕಾಶವಿದೆ.

ಸ್ಮೃತಿಗಳು ಹಾಗು ಪುರಾಣಗಳು ವರ್ಣ-ವ್ಯವಸ್ಥೆಯನ್ನು ಮತ್ತಷ್ಟು ಬಿಗು-ಗೊಳಿಸಿದವು. ವಿವಾಹ-ಸಂಬಂಧ, ಸಹ-ಭೋಜನ, ಸಹಚರ್ಯ, ವೃತ್ತಿ, ಕಸಬು-ಗಳನ್ನು ಅವರವರಿಗೇ ಕಠೋರವಾಗಿ ಮಿತಗೊಳಿಸಿದವು. ಈ ವಿಪರೀತದ ಪ್ರವೃತ್ತಿಯಿಂದ ಸಣ್ಣ-ಪುಟ್ಟ ಕಾರಣಗಳಿಂದಲೂ ಸಾವಿರಾರು ಜಾತಿ-ಉಪಜಾತಿಗಳು ಹುಟ್ಟಿಕೊಂಡವು. ಈ ಪಿಡುಗಿನ ಪ್ರಸಾರದಿಂದ ಅಸ್ಪೃಶ್ಯರಲ್ಲಿಯೂ ಸಹ ಬಲಗೈ-ಎಡಗೈ, ಮೇಲು-ಕೀಳು ಎಂಬ ವಿಪರ್ಯಾಸ ತಲೆದೋರಿತು. ಇದೆಲ್ಲ ಹಿಂದೂ ಸಮಾಜದ ಪೆಡಂಭೂತವಾಗಿ ಪರಿಣಮಿಸಿತು. ಕ್ರಿಸ್ತ ಶಕದ ೧೨ನೆಯ ಶತಮಾನದಲ್ಲಿ, ವರ್ಣ-ವ್ಯವಸ್ಥೆ ಮತ್ತು ಜಾತೀಯತೆಯ ವಿರುದ್ಧ ನೇರವಾಗಿ ಬಂದು ಹೂಡಿದವರೆಂದರೆ ಕ್ರಾಂತಿಕಾರ ಬಸವಣ್ಣನವರು. ಅಸ್ಪೃಶ್ಯರು ಇರುವಲ್ಲಿಯೇ ಹೋಗಿ, ಅವರೊಡನೆ ಸಮ್ಮಿಳಿತರಾಗಿ, ಅವರನ್ನು ಸಹಾನುಭೂತಿ-ಆತ್ಮೀಯತೆಯಿಂದ ಕಂಡು. ಅವರಿಗೆ ಬೋಧನೆ ಮಾಡಿ, ಅವರೂ ಇತರರಿಗೆ ಸಮಾನರು, ಅವರಿಗೂ ವಿದ್ಯೆ ಪಡೆಯುವ, ಧರ್ಮಾಚರಣೆಯ ಅಧಿಕಾರವಿದೆ ಎಂಬ ಅರಿವನ್ನು ಬಸವಣ್ಣನವರು ಉಂಟು-ಮಾಡಿದರು. ಅಸ್ಪೃಶ್ಯ ಹರಳಯ್ಯ-ವಿಪ್ರ ಮಧುವರಸರ ಪರಿವಾರಗಳ ನಡುವೆ ವಿವಾಹ ಸಂಬಂಧವನ್ನು ಪ್ರೋತ್ಸಾಹಿಸಿದರು. ಇದೆಲ್ಲದರ ಪ್ರತಿಕ್ರಿಯೆಯಿಂದ ರಾಜ್ಯ ಕ್ರಾಂತಿಯಾಯಿತು. ದುರಂತ ಸನ್ನಿವೇಶ ಉಂಟಾಯಿತು. ಇದು. ವರ್ಣ-ವ್ಯವಸ್ಥೆಯ ಪ್ರತಿಪಾದಕರು ಮಾಡಿದ ಎರಡನೆಯ ದೊಡ್ಡ ರಾಜ್ಯ ಕ್ರಾಂತಿ. ಇವರಲ್ಲಿ ನೇರವಾಗಿ ಅಸ್ಪೃಶ್ಯರ ವಿಷಯ ಅಡಕವಾಗಿದೆ ಎಂಬುದು ವಿಶೇಷವಾಗಿ ಗಮನಿಸತಕ್ಕ ಸಂಗತಿ. ಉತ್ತರ ಭಾರತೀಯರಿಗೆ ಈ ಘಟನಾವಳಿಯ ಮಹತ್ವದ ಅರಿವು ಇಲ್ಲದೇ ಇರುವುದು ಶೋಚನೀಯ. ಬೋಧಿ ಪಥಕ್ಕೂ, ಶರಣ ಪಥಕ್ಕೂ ಕೆಲವು ಸಾಮ್ಯಗಳಿವೆ. ಎರಡೂ

ಪ್ರೊಟೆಸ್ಟೆಂಟ್ ವಿಚಾರಸರಣಿಗೆ ಸೇರಿದವು. ಜಾತಿವಾದದ ನಿರಾಕರಣೆ, ಕರುಣೆ ಅಥವಾ ದಯೆಯ ಮಹತ್ವ ಈ ಎರಡು ಮತಗಳಿಗೂ ಒಪ್ಪಿಗೆ. ಶರಣತ್ರಯ (ಅಂದರೆ ತ್ರಿರತ್ನ), ಶೂನ್ಯತೆ, ನಿರ್ವಾಣ ಮುಂತಾದ ಪದಗಳು ಎರಡರಲ್ಲಿಯೂ ಬಳಕೆಯಲ್ಲಿವೆ, ಅವುಗಳ ವ್ಯಾಖ್ಯೆಗಳಲ್ಲಿ ಅಂತರವಿದೆಯಾದರೂ, ಉಪಾಸಕರ ಸಾಮಾಜಿಕ ಮತ್ತು ಧಾರ್ಮಿಕ ಮಾರ್ಗದರ್ಶನಕ್ಕಾಗಿ ದೊಡ್ಡ ಸಂಖ್ಯೆಯಲ್ಲಿ ಮಠಗಳ ನಿರ್ಮಾಣ__ಇವು ಎರಡೂ ಆಂದೋಳನಗಳಿಗೆ ಸಮಾನವಾಗಿದೆ. ತದನಂತರ, ಮಧ್ಯ ಕಾಲದಲ್ಲಿ, ವರ್ಣ-ವ್ಯವಸ್ಥೆ ಅಸ್ಪೃಶ್ಯತೆ ಹಾಗು ಇಸ್ಲಾಮ್ ಧರ್ಮದವರ ದಬ್ಬಾಳಿಕೆಯ ವಿರುದ್ಧ ಸಿಖ್ ಪಂಥ ಹೋರಾಡಿತು.

ಹೀಗೆ ಹಿಂದೂ ಸಾಮಾಜಿಕ ಕೆಡಕುಗಳಿಗೆ ಪ್ರಾಜ್ಞರಿಂದ ಪ್ರತಿಭಟನೆ ಇದ್ದರೂ ಅವು ಉಳಿದು ಬೆಳೆದವು. ಸ್ವಹಿತಾಸಕ್ತಿಯ ಮೂರು ಉಚ್ಚ ವರ್ಣಗಳ ದೃಢ ಬೆಂಬಲವನ್ನು ಪಡೆದ, ರಾಜದಂಡದ ಸಂಘಟಿತ ಶಕ್ತಿ ಜಾತಿ–ವ್ಯವಸ್ಥೆಯನ್ನು, ಅದರ ಅತಿರೇಕವಾದ ಅಸ್ಪೃಶ್ಯತೆಯನ್ನು ಎತ್ತಿ ಹಿಡಿಯಿತು. ವಿದ್ಯಾಧಿಕಾರದಿಂದ ವಂಚಿತವಾಗಿ, ಅಜ್ಞವಾಗಿದ್ದ ಈ ಬಡ ಜನಸ್ತೋಮ ನಿಸ್ಸಹಾಯಕವಾಗಿತ್ತು. ಕರ್ಮ–ವಿಚಾರವನ್ನು ವಿಧಿವಾದವನ್ನಾಗಿ ಮಾಡಿ, ಪಟ್ಟಭದ್ರಹಿತಗಳು ತಮ್ಮ ಲೌಕಿಕ ಪ್ರಯೋಜನಕ್ಕಾಗಿ ಬಳಸಿಕೊಂಡವು. ಇದಕ್ಕೆಲ್ಲ ಧಾರ್ಮಿಕ ನಂಬಿಕೆಯ ಮುದ್ರೆ ಬಿತ್ತು, (ಕೆಳ ಜಾತಿಯಲ್ಲಿ, ಅಸ್ಪೃಶ್ಯ ಕುಟುಂಬದಲ್ಲಿ ಹುಟ್ಟಿದ್ದಕ್ಕೆ, ನಿನ್ನ ಪೂರ್ವ ಕರ್ಮಫಲವೇ ಕಾರಣ. ಈ ಜನ್ಮದಲ್ಲಿ ನಿನ್ನ ಪಾಲಿಗೆ ಬಂದಿರುವ, ಸ್ವಜಾತಿಯ ಕರ್ತವ್ಯಗಳನ್ನು ನೀನು ಮಾಡಬೇಕು. ಹಾಗೆ ಮಾಡಿದರೇ, ಮುಂದಿನ ಜನ್ಮದಲ್ಲಿ ನಿನ್ನ ಸ್ಥಿತಿಯ ಸುಧಾರಣೆ ಸಾಧ್ಯ–ಇದು ವಿಧಿವಾದ. ದೇಶೀಯ ಸ್ವಾತಂತ್ರ್ಯ, ಸಂಸ್ಕೃತಿಯ ರಕ್ಷಣೆಗಾಗಿ ಹೋರಾಡಿದ ವೀರ ಸಾಹಸಿ ಮಹಾನ್ ಶಿವಾಜಿಗೇ ವೇದೋಕ್ತ ಸಂಸ್ಕಾರಗಳನ್ನು ಕೊಡದ ಮಟ್ಟಿಗೆ ವಾದಿಸಿದವರ ಗರ್ವ, ಸಂಕುಚಿತ ಭಾವನೆ, ಅವಿವೇಕ ಎಷ್ಟರಮಟ್ಟಿಗೆ ಮಿತಿಮೀರಿತ್ತು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಶಿವಾಜಿಯ ವಂಶಕ್ಕೆ ಸೇರಿದ ಕೊಲ್ಲಾಪುರದ ಅರಸರಿಗೆ ಕೊನೆಯವರೆಗೂ ವೇದೋಕ್ತ ಸಂಸ್ಕಾರಗಳು ಲಭಿಸಲಿಲ್ಲ. ಸ್ವಾಮಿ ವಿವೇಕಾನಂದರು ಕೇರಳದಲ್ಲಿದ್ದ ಅಸ್ಪೃಶ್ಯತೆಯ ಭಯಂಕರ ರೂಪದಿಂದ ವಿಸ್ಮಿತರಾಗಿ, ಅದೊಂದು **Lunatic Asylum**__ (ಹುಚ್ಚರ, ತಲೆ-ಕೆಟ್ಟವರ ಆಶ್ರಯಸ್ಥಾನ) ಎಂದು ಉದ್ಗರಿಸಿದ್ದರು. ಶರಣ ಆಂದೋಲನದ ಪರಿಣಾಮವಾಗಿ ಕರ್ನಾಟಕದಲ್ಲಿ ಅಸ್ಪೃಶ್ಯತೆ ಇತರ ಪ್ರದೇಶಗಳಲ್ಲಿಯಷ್ಟು ಕ್ರೂರವಾಗಿದ್ದಿಲ್ಲವೆಂದು ಕಾಣುತ್ತದೆ.

ಅಸ್ಪೃಶ್ಯತೆಯ ಬವಣೆಯನ್ನು ಸ್ವತಃ ಅನುಭವಿಸಿ, ನೊಂದು ಬೆಂದ ಡಾ. ಭೀಮರಾವ್ ಅಂಬೇಡ್ಕರ್ ಅವರು ಜಾತೀಯತೆಯ, ಅಸ್ಪೃಶ್ಯತೆಯ ಅನಿಷ್ಟಗಳಿಗೆ

ಧಾರ್ಮಿಕ ಸಮರ್ಥನೆಯೂ ಹೇಗೆ ದೊರಕಿತ್ತು ಎಂಬುದನ್ನು ಆಳವಾಗಿ ಅಧ್ಯಯನ ಮಾಡಿದ್ದರು. ಶತಮಾನಗಳ ಭೂಮಿಕೆಯನ್ನು ಯಥಾರ್ಥವಾಗಿ ಪರಿಶೀಲಿಸದವರಿಗೆ, ಬಾಬು ಸಾಹೇಬರವರ ಮನೋಭಾವ ನಿಲುವು ಧೋರಣೆ ಅರ್ಥವಾಗುವುದು ಕಷ್ಟ. ಆದ್ದರಿಂದ, ಈ ಸಂದರ್ಭದಲ್ಲಿ ಈ ಹಿನ್ನೆಲೆಯನ್ನು ಹೇಳುವುದು ಅನಿವಾರ್ಯ ವಾಯಿತು.

ಜಾತಿ–ಪಾತಿಯನ್ನು, ಸಂಕುಚಿತ ಧಾರ್ಮಿಕ ಭಾವನೆಯನ್ನು ಮೀರಿ ನಿಂತ ಭಕ್ತಿ ಪಂಥದ ಸಂತ ಕಬೀರರ ಪ್ರಭಾವಕ್ಕೆ ಬಾಬಾ ಸಾಹೇಬರ ಮನೆತನ ಒಳ–ಗಾಗಿತ್ತು ಕಬೀರರ ಅನೇಕ ಧಾರ್ಮಿಕ ದೋಹಾಗಳನ್ನು ಅವರ ತಂದೆ ಅವರಿಗೆ ಚಿಕ್ಕಂದಿನಿಂದಲ್ಲೇ ಕಲಿಸಿದ್ದರು. ಆಧುನಿಕ ಕಾಲದಲ್ಲಿ ಮಹಾರಾಷ್ಟ್ರದಲ್ಲಿ ಸಮಾಜ ಸುಧಾರಣೆ ಮತ್ತು ವಿದ್ಯಾ ಪ್ರಸಾರದ ಪ್ರವರ್ತಕರಾದ ಜ್ಯೋತಿಬಾ ಫೂಲೆ ಅವರ ಮಹತ್ ಕಾರ್ಯವೂ ಅವರ ಮನಸ್ಸಿನ ಮೇಲೆ ಪರಿಣಾಮ ಮಾಡಿತ್ತು. ಇದಕ್ಕೆಲ್ಲಾ ಮೇಲಾಗಿ ವಿಶಾಲವಾದ ಬೌದ್ಧ ಧಾರ್ಮಿಕ, ಸಾಂಸ್ಕೃತಿಕ ಪರಂಪರೆಯು ಅವರನ್ನು ಎಳೆಶನದಲ್ಲಿಯೇ ಆಕರ್ಷಿಸಿತ್ತು. ಸ್ವಪ್ರಯತ್ನ, ಸ್ವಾನುಭವ, ಮಾನವೀಯ ಮೌಲ್ಯ ಗಳಿಗೆ ಬುದ್ಧನು ಕೊಟ್ಟ ಮಹತ್ವವು ಅವರಿಗೆ ಆಗಲೇ ಮೆಚ್ಚಿಗೆಯಾದ ವಿಷಯ.

೧೯೩೫ರ ವರೆಗೂ ಅವರು, ಹಿಂದೂ ಸಮಾಜದಲ್ಲಿರುವ ಕುಂದು–ಕೊರತೆ–ಗಳನ್ನು ನಿವಾರಣೆ ಮಾಡುವುದು ಸಾಧ್ಯವೆಂದು ತಿಳಿದ ಹಾಗೆ ಕಾಣುತ್ತದೆ. ಅನೇಕ ಸಮಾಜ–ಸುಧಾರಕರು ಈ ದಿಶೆಯಲ್ಲಿ ಪ್ರಯತ್ನ ಮಾಡುತ್ತಿದ್ದರೆಂಬುದು ಅವರಿಗೆ ಸ್ವಲ್ಪ ಸಮಾಧಾನವನ್ನು ತಂದಿರಬೇಕು. ಮುಖ್ಯವಾಗಿ, ಗಾಂಧೀಜಿಯವರು ಅಸ್ಪೃಶ್ಯ ತೆಯ ಕಲಂಕವನ್ನು ತೊಡೆದುಹಾಕುವ ಬಗ್ಗೆ ದೇಶವ್ಯಾಪಿ ಆಂದೋಲನವನ್ನು ನಡೆಸಿ ದ್ದರು. ಅದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ರಮ–ದಲ್ಲೂ ಸೇರಿತ್ತು. ಆರ್ಯಸಮಾಜ, ಬ್ರಹ್ಮಸಮಾಜ. ಪ್ರಾರ್ಥನಾಸಮಾಜ, ಜಾತಿ–ಪಾತಿ–ತೋಡಕ್ ಮಂಡಲ ಮುಂತಾದವು ಜಾತಿವಾದದ ವಿರುದ್ಧ ಸೊಲ್ಲು ಎತ್ತಿದ್ದವು. ಬಾಬಾಸಾಹೇಬರವರು ದಲಿತರ ಸಂಘಟನೆ ಮಾಡುತ್ತ, ಅವರಿಗೆ ಆತ್ಮ–ವಿಶ್ವಾಸ, ಆತ್ಮಗೌರವ, ಧೈರ್ಯವನ್ನು ಕೊಡುತ್ತ. ಅವರ ರಾಜಕೀಯ, ಸಾಮಾಜಿಕ ಹಕ್ಕು–ಬಾಧ್ಯತೆಗಳನ್ನು ಪ್ರತಿಪಾದಿಸುತ್ತಿದ್ದರು ಭಾರ ತೀಯ ಮತ್ತು ಬ್ರಿಟಿಷ್ ವಲಯಗಳಲ್ಲಿ. ಬಾಬಾ ಸಾಹೇಬರು ೧೯೨೫ ರಿಂದ ೩೫ ರವರೆಗೆ, ಅಸ್ಪೃಶ್ಯರಿಗೆ ಸಾರ್ವಜನಿಕ ಸ್ಥಳಗಳಲ್ಲಿ ಪ್ರವೇಶ ಮತ್ತು ಸಾರ್ವಜನಿಕ ಸವಲತ್ತುಗಳ ಉಪಯೋಗಕ್ಕಾಗಿ ಸಕ್ರಿಯ ಚಳುವಳಿ ನಡೆಸಿವರು. ಮಹಾಡ್ ಪಟ್ಟ ಣದ ಸಾರ್ವಜನಿಕ ಕೆರೆಯ ನೀರನ್ನು ಅಸ್ಪೃಶ್ಯರು ಉಪಯೋಗಿಸುವ ಬಗ್ಗೆ, ನಾಸಿಕ್ ಕ್ಷೇತ್ರದ ದೇವಾಲಯ ಪ್ರವೇಶದ ಬಗ್ಗೆ ಅವರ ನೇತೃತ್ವದಲ್ಲಿ ದೀರ್ಘಕಾಲ ಸಂಘ

ಟಿತ ಸತ್ಯಾಗ್ರಹ ನಡೆಯಿತು. ೧೯೨೭ ರಲ್ಲಿ ಅವರು ನಡೆಸಿದ ಮಹಾಡ್ ಕೆರೆ ಸತ್ಯಾಗ್ರಹವು ಮೂರು ವರ್ಷಗಳ ಬಳಿಕ ೧೯೩೦ ರಲ್ಲಿ ಗಾಂಧೀಜಿಯವರು ಉಪ್ಪಿನ ಸತ್ಯಾಗ್ರಹಕ್ಕಾಗಿ ಮಾಡಿದ ದಾಂಡಿ ಯಾತ್ರೆಯನ್ನು ಹೋಲುತ್ತದೆ. ಬಾಬಾ ಸಾಹೇಬರ ನೇತೃತ್ವದಲ್ಲಿ ಮೂರು ಸಾವಿರಕ್ಕೂ ಹೆಚ್ಚು ಮಂದಿ ಸತ್ಯಾಗ್ರಹಿ ಪ್ರತಿನಿಧಿಗಳು ಮಹಾಡ್‌ದಲ್ಲಿ ಭಾಗ ವಹಿಸಿದ್ದರು. ನಂತರ ಆ ಕೆರೆಯನ್ನು ವೈದಿಕರು ಪಂಚಗವ್ಯ-ದಿಂದ ಶುದ್ಧೀಕರಿಸಿದರು; ಹಿಂದೂ ಸಮಾಜದ ಪ್ರತಿಗಾಮಿಗಳ ನಿರ್ಣಯ ನಿಲುವಿನಿಂದ, ಕೃತ್ಯಗಳಿಂದ ಬಾಬಾ ಸಾಹೇಬರಿಗೆ ತೀವ್ರ ನಿರಾಶೆಯಾಯಿತು. ಸಾಮಾಜಿಕ ಅಸಮಾನತೆ, ವಿವಿಧ ಜಾತಿಗಳಲ್ಲಿ ಹುಟ್ಟು-ಇವೆಲ್ಲ ದೈವ-ನಿರ್ಮಿತ ಎಂದು ನಂಬುವವರಿಂದ ಹೃದಯ ಪರಿವರ್ತನೆಯನ್ನು ನಿರೀಕ್ಷಿಸುವುದು ಹೇಗೆ ?

ಆರ್ಥಿಕ ಶೋಷಣೆಯಲ್ಲದೆ, ಈ ದೇಶದಲ್ಲಿ ಸಾಮಾಜಿಕ ಅವನತಿ-ಅವಮಾನದಿಂದಲೂ ದುಃಖ-ದುಮ್ಮಾನ ಸಂಭವಿಸಿದೆಯೆಂದೂ, ಸಾಮಾಜಿಕ ಪ್ರಜಾಸತ್ತೆಯೇ ರಾಜಕೀಯ ಪ್ರಜಾಸತ್ತೆಗೆ ತಳಹದಿಯಾಗಬೇಕೆಂದೂ ಅವರ ಖಚಿತ ಅಭಿಪ್ರಾಯವಾಗಿತ್ತು. "Caste and Democracy cannot go together" ಜಾತಿ ಮತ್ತು ಪ್ರಜಾಸತ್ತೆ ಕೂಡಿ ನಡೆಯುವುದು ಸಾಧ್ಯವಿಲ್ಲ "ಎಂಬ ಅವರ ಮಾತು ಈಗಲೂ ಅಡಿಗಡಿಗೆ ಅನುಭವಕ್ಕೆ ಬರುತ್ತಿದೆ. ಸರಕಾರದಷ್ಟೇ ಸಮಾಜದಿಂದಲೂ ಪೀಡನೆ ಆಗಬಲ್ಲದೆಂದೂ, ಸಾಮಾಜಿಕ ಅಸಮಾನತೆ. ಜಾತೀಯತೆ ಇರುವವರೆಗೆ ಒಗ್ಗಟ್ಟೆಂಬುದು ಈದೇಶದಲ್ಲಿ ಕನಸೇ ಎಂದು ಅವರಿಗೆ ಮನವರಿಕೆಯಾಗಿತ್ತು. ಹಿಂದುತ್ವವು ಸ್ಪೃಶ್ಯ ಹಿಂದೂಗಳಿಗೆ ಎಷ್ಟು ಸೇರಿದ್ದೇ, ಅಷ್ಟೇ ಅಸ್ಪೃಶ್ಯ ಹಿಂದೂಗಳಿಗೂ ಸೇರಿದ್ದು ಎಂದು ಹೇಳಿದರು. ಹಿಂದು ಸಮಾಜವನ್ನು ಜಾತೀಯತೆಯ ನಿವಾರಣೆ ಮತ್ತು ಸಾಮಾಜಿಕ ಸಮಾನತೆಯ ಆಧಾರದ ಮೇಲೆ ಪುನರ್ರಚಿಸುವುದು ಅಗತ್ಯವೆಂದು ಕರೆಕೊಟ್ಟರು" If you say your religion is our religion, then your rights and ours must be equal ...If not, on what ground's do you say that we must remain in the Hindu fold...? ... The religion which discriminates between two followers is partial, & the religion which treats crores of its adherents worse than dogs and criminals and inflicts upon them insufferable disabilities is no religion at all. Religion is not the appellation for such an unjust order. Religion and slavery are incompatible" ಅಂದರೆ-"ನಿಮ್ಮ ಧರ್ಮವು ನಮ್ಮ ಧರ್ಮವಾಗಿದೆಯೆಂದು ಹೇಳುವುದಾದರೆ, ನಿಮ್ಮ ಮತ್ತು ನಮ್ಮ ಅಧಿಕಾರಿಗಳು ಒಂದೇ ಆಗಿರಬೇಕು. ಇಲ್ಲದಿದ್ದರೆ, ನಾವು

ಹಿಂದೂಗಳಾಗಿಯೇ ಇರಬೇಕೆಂದು ಯಾವ ಆಧಾರದ ಮೇಲೆ ಹೇಳುತ್ತೀರಿ ?... ತನ್ನ ಎರಡು ಅನುಯಾಯಿಗಳಲ್ಲಿ ಭೇದ ಭಾವ ಮಾಡುವ ಧರ್ಮವು ಪಕ್ಷಪಾತಿ. ಯಾವ ಧರ್ಮವು ತನ್ನ ಕೋಟಿಗಟ್ಟಲೆ ಅನುಚರರನ್ನು ನಾಯಿಗಳಂತೆ, ಅಪರಾಧಿಗಳಂತೆ ನಡೆಸಿಕೊಳ್ಳುತ್ತದೋ ಮತ್ತು ಅವರ ಮೇಲೆ ಅಸಹ್ಯವಾದ ಅನರ್ಹತೆಗಳನ್ನು ಹೇರುತ್ತದೋ ಅದು ಧರ್ಮವೇ ಅಲ್ಲ. ಅಂಥ ಅನ್ಯಾಯದ ವ್ಯವಸ್ಥೆಗೆ ಧರ್ಮ ಎಂಬ ಹೆಸರು ಸಲ್ಲದು. ಧರ್ಮ ಮತ್ತು ದಾಸತ್ವ ಹೀಗೆ ಅವರು ನಿರ್ದಾಕ್ಷಿಣ್ಯವಾಗಿ ಸಾರಿದ್ದು ೧೯೨೭ ರಲ್ಲಿ. ಅವರ ವಿಚಾರದ ವಿಕಾಸ-ಕ್ರಮದಲ್ಲಿ ಮುಂದಿನ ಮೈಲುಗಲ್ಲನ್ನು ನಾವು ಎರಡು ವರ್ಷಗಳ ಬಳಿಕ ಅಂದರೆ ೧೯೨೯ ರಲ್ಲಿ ಕಾಣುತ್ತೇವೆ. ದಲಿತರ ಸ್ಥಿತಿಗತಿಯ ಬಗ್ಗೆ ಸವರ್ಣೀಯರ ಅಸಡ್ಡೆ ಮುಂದುವರಿದರೆ, ಬೇರೆ ಧರ್ಮಕ್ಕೆ ಹೋಗಬೇಕೆಂಬ ಗೊತ್ತುಗಳಿಯನ್ನು ಅವರ ಅಧ್ಯಕ್ಷತೆಯಲ್ಲಿ ಜಳಗಾವದಲ್ಲಿ ಸೇರಿದ್ದ ಸಮ್ಮೇಳನ ಸ್ವೀಕರಿಸಿತು. ಒಂದು ಕಾಲಮಿತಿಯೊಳಗೆ ಅದನ್ನು ಸವರ್ಣೀಯರು ನಿವಾರಣೆ ಮಾಡದಿದ್ದರೆ, ಯಾರಿಗೆ ಅದನ್ನು ಸಹಿಸಲು ಶಕ್ಯವಿಲ್ಲವೋ ಅವರು ಬೇರೊಂದು ಧರ್ಮವನ್ನು ಸ್ವೀಕರಿಸಬೇಕೆಂದು ಸಲಹೆ ಮಾಡಿದರು. ಇದನ್ನು ಅವರು ಕೆಲವರಿಗೆ ಮಾತ್ರ ಅನ್ವಯಿಸಿದ್ದನ್ನು, ಕಾಲಮಿತಿಯನ್ನು ಸೂಚಿಸಿದ್ದನ್ನೂ ಗಮನಿಸಬೇಕು.

"ಜನರನ್ನು ಒಡೆದು ಆಳು" ಎಂಬ ಕುಟಿಲ ಉಪಾಯವನ್ನು ಅನುಸರಿಸುತ್ತಿದ್ದ ಬ್ರಿಟಿಷರು ಪ್ರತ್ಯೇಕ ಚುನಾವಣಾ ಪದ್ಧತಿಯಿಂದ ಮುಸ್ಲಿಮರನ್ನು ಹಿಂದುಗಳಿಂದ ಮತ್ತಷ್ಟು ಪ್ರತ್ಯೇಕಿಸಿದಂತೆ, ಅಸ್ಪೃಶ್ಯರನ್ನೂ ಸಹ ಇತರ ಹಿಂದುಗಳಿಂದ ಬೇರ್ಪಡಿಸುವ ಸಲುವಾಗಿ ತಮ್ಮ "Communal Award"–"ಕೋಮುವಾರು ನಿರ್ಣಯ"ವನ್ನು ಪ್ರಕಟಪಡಿಸಿದರು. ಇದನ್ನು ಪ್ರತಿಭಟಿಸಿ, ಗಾಂಧೀಜಿಯವರು ೧೯೩೨ ರಲ್ಲಿ ಉಪವಾಸ ಸತ್ಯಾಗ್ರಹ ಹೂಡಿದರಷ್ಟೆ. ದಲಿತರ ಜಾಗೃತಿಯ ದೃಷ್ಟಿಯಿಂದ ಪ್ರಾಯೋಗಿಕವಾಗಿ ಅಂಬೇಡ್ಕರ ಅವರ ಬೆಂಬಲ ಆಪ್ರಸ್ತಾವಿತ ಚುನಾವಣಾ ವ್ಯವಸ್ಥೆಗೆ ಇತ್ತು. ಅದರೂ ಕೂಡ ಗಾಂಧೀಜಿಯವರ ಹಾಗು ಇತರ ನಾಯಕರ ನಿಲುವಿಗೆ ಮಣಿದು. ಅವರಲ್ಲಿ ತಮ್ಮ ಸ್ವಂತದ ಕೆಲವು ತಿದ್ದುಪಡಿಗಳನ್ನು ಮಾಡಿ, "Poona pact" "ಪುಣೆ ಒಪ್ಪಂದ" ವೆಂದು ಹೆಸರಾದ ಕರಾರಿಗೆ ಸಮ್ಮತಿಸಿ, ದಲಿತರ ಕಲ್ಯಾಣದ ಜೊತೆಗೆ, ದೇಶದ ಹಿತವನ್ನು ಸಾಧಿಸಿದರು. ಅಸ್ಪೃಶ್ಯರ ವಿಮೋಚನೆಯಲ್ಲದೆ, ದೇಶದ ಒಟ್ಟು ಹಿತದ ರಕ್ಷಣೆ ಮತ್ತು ಭಾರತೀಯ ಸಂಸ್ಕೃತಿಯ ಪರಂಪರೆಯ ಉತ್ತಮಾಂಶಗಳ ಪೋಷಣೆಯೂ ಅವರ ಹಂಬಲದಲ್ಲಿ ಯಾವಾಗಲೂ ಇತ್ತು. ಧರ್ಮಗಳ ಬಗ್ಗೆ ಅವರ ನಿಲುವನ್ನು ತಿಳಿದುಕೊಳ್ಳುವಾಗಲೂ ಸಹ ನಾವು ಇದನ್ನು ಗಮನದಲ್ಲಿಡಬೇಕು.

ವರ್ಣ-ಜಾತಿ-ಅಸ್ಪೃಶ್ಯತೆ ರಹಿತವಾದ ಸಾಮಾಜಿಕ ಸಮಾನತೆಯು, ಸರ್ವ ಹಿತಕರ ತಳಹದಿಯ ಮೇಲೆ ಹಿಂದೂ ಸಮಾಜದ ಪುನರ್ರಚನೆ ಆಗುವುದೆಂಬ ಬಗ್ಗೆ ಅವರಿಗೆ ಮನವರಿಕೆ ಆಗಲಿಲ್ಲ, ಅಂತಹ ಆಶಾಕಿರಣ ಕಂಡು ಬರಲಿಲ್ಲ. ಭಾರತಕ್ಕೆ ಸ್ವಾತಂತ್ರ್ಯ ಹೇಗೆ ಮುಖ್ಯವೋ, ಹಾಗೆ ದಲಿತರಿಗೆ ಸಾಮಾಜಿಕ, ಧಾರ್ಮಿಕ ವಿಮೋಚನೆ ಅಗತ್ಯ. ದೇಶದ ಪರಾಧೀನತೆ ನೀಗುವುದಕ್ಕೆ ಕಾಲಮಿತಿಯನ್ನು ಹೇಗೆ ನಿರೀಕ್ಷಿಸಬಹುದೋ, ಹಾಗೆ ಅಸ್ಪೃಶ್ಯರ ದಾಸ್ಯದ ಬಿಡುಗಡೆಗೂ ಅದನ್ನು ನಿರೀಕ್ಷಿಸಬಹುದು. ಈ ಸಂಬಂಧದಲ್ಲಿ ಅವರಿಗೆ ಹಿಂದೂ ಸಮಾಜದಿಂದ ಯಾವ ಪ್ರಕಾರದ ಆಶ್ವಾಸನೆಯೂ ದೊರಕಲಿಲ್ಲ. ನಿರಾಶರಾಗಿ ಅಸ್ಪೃಶ್ಯರು ಹಿಂದೂ ಧರ್ಮದಿಂದ ಹೊರಬಂದು ಬೇರೊಂದು ಧರ್ಮವನ್ನು ಅಂಗೀಕರಿಸುವುದಾಗಿ ೧೯೩೫ ರಲ್ಲಿ ಪ್ರಕಟಿಸಿದರು. ತಾನು ಹಿಂದೂವಾಗಿ ಜನ್ಮಿಸಿದೆ, ಆದರೆ ಹಿಂದುವಾಗಿ ನಿಧನವಾಗುವುದಿಲ್ಲ ಎಂದೂ ಅವರು ಉದ್ಗರಿಸಿದ್ದು ಅದೇ ವರ್ಷವೇ. ಪರಂಪರಾಗತ ಮತವನ್ನು ಬಿಡುವ ಈ ಮನೀಷೆಯನ್ನು ಅವರು ತತ್ವತಃ ವ್ಯಕ್ತಪಡಿಸಿದರು. ಆದರೆ ಅವರೂ, ಅವರ ಅನುಯಾಯಿಗಳೂ ಹೊಸದಾಗಿ ಆರಿಸಿಕೊಳ್ಳುವ ಧರ್ಮ ಯಾವುದು ಎಂಬುದನ್ನು ತಿಳಿಸಲಿಲ್ಲ. ಅದನ್ನು ಪ್ರಶ್ನಾರ್ಥಕವಾಗಿ ತಮ್ಮ ಜನರ ಮುಂದೆ ಇಟ್ಟಿದ್ದರು. ತಮಗೆ ಬೌದ್ಧ ಧರ್ಮದ ಕಡೆಗೆ ಒಲವಿದೆ ಎಂದು ಎರಡು ವರ್ಷಗಳ ಮುಂಚೆಯೇ ಹೇಳಿದ್ದರಲ್ಲದೆ, ೧೯೩೫ ರಲ್ಲಿ ತಮ್ಮ ನಿವಾಸಕ್ಕೆ ಬೌದ್ಧ ಧರ್ಮದ ಇತಿಹಾಸದ ಒಂದು ಮುಖ್ಯ ಸ್ಥಳವಾದ 'ರಾಜಗೃಹ' ಎಂಬ ಹೆಸರನ್ನಿಟ್ಟರು.

ಅವರ ಮತಪರಿವರ್ತನೆಯ ನಿರ್ಧಾರದಿಂದ ಕೆಲವು ಹಿಂದೂ ವಲಯಗಳಲ್ಲಿ ವಿವಂಚನೆ ವ್ಯಕ್ತಪಡಿಸಲಾಯಿತು. ದೇಶದ ಕೆಲವೆಡೆಗಳಲ್ಲಿ ಅಸ್ಪೃಶ್ಯರಿಗೆ ಹಿಂದೂ ಮಂದಿರ ಪ್ರವೇಶಕ್ಕೆ ಅವಕಾಶ ಮಾಡಿಕೊಡಲಾಯಿತು. ಶತ-ಶತಮಾನಗಳಿಂದ ಜಡಭರಿತವಾದ ಹಿಂದೂ ಸಮಾಜದಲ್ಲಿ ವಿಶೇಷವಾದ ವಿಚಾರ-ಪ್ರಚೋದನೆಯಾಗಲಿ, ವಿದ್ಯುತ್ ಸಂಚಾರವಾಗಲಿ ಆಗಲಿಲ್ಲ. ಮರುವರ್ಷ ಅವರು ಮುಂಬಯಿಯಲ್ಲಿ ಮಹಾರ್ ಸಮ್ಮೇಳನವನ್ನು ಕರೆದಾಗ, ಅವರಲ್ಲಿ ಕ್ರೈಸ್ತ, ಮುಸ್ಲಿಂ, ಸೀಖ್ ಪ್ರತಿನಿಧಿಗಳು ಆಸಕ್ತಿಯಿಂದ ಉಪಸ್ಥಿತರಿದ್ದು, ತಮ್ಮ ತಮ್ಮ ಧರ್ಮದ ಕಡೆಗೆ ದಲಿತರನ್ನು ಆಕರ್ಷಿಸಲು ಪ್ರಯತ್ನಿಸಿದರು.

ಅಸ್ಪೃಶ್ಯತೆಯ ನಿವಾರಣೆಗೆ ಶ್ರದ್ಧೆಯಿಂದ ಆಂದೋಳನ ನಡೆಸುತ್ತಿದ್ದ ಗಾಂಧೀಜಿಯವರು ವರ್ಣಾಶ್ರಮದ ಬೆಂಬಲಿಗರು. ಅವರ ಪ್ರಕಾರ, ವರ್ಣಾಶ್ರಮಕ್ಕೂ ಜಾತಿಗೂ ಸಂಬಂಧವಿಲ್ಲ. ನಮ್ಮ ನಮ್ಮ ಪ್ರಾಚೀನ ಉದ್ಯೋಗಗಳನ್ನು ಅನುಸರಿಸಿ ನಾವು ನಮ್ಮ ಉಪಜೀವನವನ್ನು ನಡೆಸಬೇಕೆಂದೂ, ನಮ್ಮ ಹಕ್ಕುಗಳನ್ನಲ್ಲ, ಆದರೆ ನಮ್ಮ ಕರ್ತವ್ಯಗಳನ್ನು ವರ್ಣವ್ಯವಸ್ಥೆ ತಿಳಿಸುತ್ತದೆಂದೂ ಗಾಂಧೀಜಿ

ತಮ್ಮ 'ಹರಿಜನ' ಪತ್ರಿಕೆಯಲ್ಲಿ ಬರೆದರು. ವರ್ಣ-ವ್ಯವಸ್ಥೆಯ ಸಮರ್ಥಕರಾದ ಬನಿಯ ಗಾಂಧೀಜಿ ವ್ಯಾಪಾರ-ಉದ್ದಿಮೆ ಅಂದರೆ ವೈಶ್ಯವೃತ್ತಿಯನ್ನು ಅನುಸರಿಸ ಬೇಕಾಗಿತ್ತೆಂದೂ, ಅದನ್ನು ಬಿಟ್ಟದ್ದೇಕೆಂದೂ ಬಾಬಾಸಾಹೇಬರು ಸವಾಲು ಹಾಕಿದರು. ಅಂದರೆ ವರ್ಣ-ವ್ಯವಸ್ಥೆಯ ಸಮರ್ಥಕರಾವ ಗಾಂಧೀಜಿಯವರೇ ಅವನ್ನು ಉಲ್ಲಂಘಿಸಿದ್ದಾರೆಂಬುದು ಅರ್ಥ. ಶೂದ್ರನು ವಿದ್ವಾಂಸನಾದರೂ ಪ್ರಯೋಜನ ವಿಲ್ಲ, ಆದರೆ ವಿಪ್ರನು ಮೂರ್ಖನಾದರೂ, ಪತಿತನಾದರೂ ಪೂಜಾರ್ಹನು ಎಂದು ಸಂತ ರಾಮದಾಸರು ಒಂದು ಅಭಂಗದಲ್ಲಿ ಹೇಳಿದ್ದಾರೆ. ಇಂತಹ ಅಸಂಗತ ಮನೋಭಾವಗಳು ಬೇರೂರಿದ, ಅಸಮಾನತೆಗಳ ಆಗರವಾದ ಹಿಂದೂ ಸಮಾಜ ದಲ್ಲಿ ಮುಂದುವರಿಯಲು ಡಾ॥ ಅಂಬೇಡ್ಕರ್ ಅವರ ಆತ್ಮಸಾಕ್ಷಿ ಒಪ್ಪದಿದ್ದರೆ, ಆಶ್ಚರ್ಯವಲ್ಲ. ಹೀಗಿದ್ದರೂ, ಹಿಂದೂಗಳ ಹೃದಯ-ಪರಿವರ್ತನೆಗಾಗಿ ಕೆಲವು ವರ್ಷಗಳ ವರೆಗೆ ತಾವು ಕಾದು ನೋಡುವುದಾಗಿಯೂ. ಹಿಂದೂ ಸಮಾಜದಿಂದ ಖಚಿತ ಆಶ್ವಾಸನೆಗಳು ಬಂದರೆ, ತಮ್ಮ ಮತ-ಪರಿವರ್ತನೆಯ ವಿಚಾರವನ್ನು ಪುನರ್-ಪರಿಶೀಲಿಸುವುದಾಗಿಯೂ ಅವರು ಹೇಳಿದ್ದು, ಅವರ ಅಸಾಧಾರಣ ತಾಳ್ಮೆ ಮತ್ತು ಔದಾರ್ಯದ ದ್ಯೋತಕ. ದಲಿತರು ಹಿಂದೂ ಧರ್ಮವಲ್ಲಿಯೇ ಮುಂದು ವರಿದು, ತಮ್ಮ ಹಕ್ಕು-ಬಾಧ್ಯತೆಗಳಿಗಾಗಿ ಪ್ರಯತ್ನಿಸುತ್ತ, ಹಿಂದೂ ಸಮಾಜದಲ್ಲಿ ಮಾರ್ಪಾಡುಗಳನ್ನು ತರಬೇಕು ಎಂಬ ಅಭಿಪ್ರಾಯ ಎಂ.ಸಿ. ರಾಜಾ, ಶ್ರೀನಿವಾ ಸನ್,ಕಾಜ್ರೋಲ್‌ಕರ್ ಮುಂತಾದ ಕೆಲವು ದಲಿತ ಮುಂದಾಳುಗಳಲ್ಲಿ ಇತ್ತು. ಇದು ಚಿಂತನಶೀಲರೂ, ಕ್ರಿಯಾಶೀಲರೂ ಆಗಿದ್ದ ಡಾ॥ ಭೀಮರಾವ್ ಅಂಬೇಡಕರ್ ಅವರಿಗೆ ಒಪ್ಪಿಗೆಯಾಗಲಿಲ್ಲ. ಆದರೆ, ಅವರು ಅವಸರವಲ್ಲಿ ಯಾವ ಕ್ರಮಗಳನ್ನೂ ಕೈಗೊಳ್ಳಲಿಲ್ಲವೆಂಬುದು ಲಕ್ಷಿಸತಕ್ಕ ಸಂಗತಿ. ಹಿಂದೂ ಸಮಾಜವನ್ನು ಜಾಗ್ರತ ಗೊಳಿಸಲು ಅವರು ಮತ್ತೆ ಮತ್ತೆ ಎಚ್ಚರಿಕೆ ಕೊಟ್ಟರು.

ಧರ್ಮ ವಿತಕ್ಕೆ ಬೇಕು ?—ಅದರ ಅಗತ್ಯವಿಲ್ಲ ಎಂಬ ವಾದವೂ ಇದೆ. ಮತ-ಧರ್ಮಗಳು ಮತ್ತು ಭಾವವಾದಗಳು ಅರ್ಥವಿಲ್ಲದವು. ಅವು ಪ್ರಾಚೀನ ಮಾನವನ ಕಲ್ಪನೆಗಳು, ಮೂಢ ನಂಬಿಕೆಗಳು, ಅವು ಸಮಾಜದಲ್ಲಿ ಪ್ರತಿಗಾಮಿ ಪಾತ್ರ ವಹಿಸಿ, ಅರಿಯದವರನ್ನು ಶೋಷಿಸುವ ಸಾಧನಗಳಾಗಿವೆ.—ಹೀಗೆ ದ್ವಂದ್ವಮಾನ ಭೌತ ವಾದದ, ಚಾರಿತ್ರಿಕ ಭೌತವಾದದ. ವೈಜ್ಞಾನಿಕ ಭೌತವಾದವ, ವಿಚಾರವಾದದ ಪುರಸ್ಕರ್ತರು ವಾದಿಸುತ್ತಾರೆ, ಪ್ರಚಾರ ಮಾಡುತ್ತಾರೆ. ಧರ್ಮವೆಂಬುದು ಜನತೆಯ ಅಫೀಮು ಎಂದು ಮಾರ್ಕ್ಸ್ ಹೇಳಿದ್ದಾನೆ. ಅಂದರೆ ಧರ್ಮವೆಂಬುದು ಒಂದು ಭ್ರಮೆ ಮಾತ್ರ. ಚಾರ್ವಾಕರೇ ಮೊದಲಾದ ಭಾರತದ ಪ್ರಾಚೀನ ಭೌತವಾದಿಗಳಿಗೂ ಧರ್ಮದಲ್ಲಿ ನಂಬಿಕೆ ಇರಲಿಲ್ಲ. ಈಗ ಮಾನವ-ಕುಲದಲ್ಲಿ ಸುಮಾರು ಮೂರರಲ್ಲಿ ಒಂದರಷ್ಟು ಭಾಗ, ಧರ್ಮದಲ್ಲಿ ನಂಬಿಕೆಯಿಲ್ಲದ ಭೌತವಾದಿಗಳ ಶಾಸನಗಳಿಗೆ

ಒಳಪಟ್ಟಿದೆ. ಆ ದೇಶಗಳಲ್ಲಿ. ಭೌತವಾದವೇ ಪರಮ ಸತ್ಯವೆಂದು ತಿಳಿಸಲೂ ಧರ್ಮ ದಲ್ಲಿನ ವಿಶ್ವಾಸವನ್ನು ನಿವಾರಿಸಲೂ ಸರ್ವ ಪ್ರಯತ್ನ ಮಾಡಲಾಗುತ್ತಿದೆ.

ಡಾ॥ ಅಂಬೇಡ್ಕರ್ ಅವರು ಸ್ವತಃ ಪ್ರಕಾಂಡ ಅರ್ಥಶಾಸ್ತ್ರಜ್ಞರು, ಸಮಾಜ-ಶಾಸ್ತ್ರಜ್ಞರು, ಪ್ರಾಜ್ಞರು, ಕೇಂದ್ರದಲ್ಲಿ ಕಾರ್ಮಿಕ ಇಲಾಖೆಯ ಮಂತ್ರಿಗಳೂ ಆಗಿದ್ದರು. ಅವರು ಭೌತವಾದಿಗಳ ಧರ್ಮ ನಿರಾಕರಣೆಯನ್ನು ಒಪ್ಪಲಿಲ್ಲ. ಧರ್ಮದ ಹೆಸರಿನಲ್ಲಿ, ಅವರೂ, ಅವರು ಹುಟ್ಟಿ ಬೆಳೆದ ಜನಾಂಗವೂ ಅಪಾರ ಅನ್ಯಾಯ ಗಳಿಗೆ ಗುರಿಯಾಗಿದ್ದರೂ ಅವರು ಧರ್ಮದ ಅಗತ್ಯವನ್ನು ಎಂದೂ ನಿರಾಕರಿಸಿಲ್ಲ ಆರ್ಥಿಕ ಬೆಳೆವಣಿಗೆಯೇ ಸರ್ವಸ್ವ ಅಲ್ಲ, ಧರ್ಮ ಮನುಷ್ಯನ ಜೀವನದ ವಿಕಾಸಕ್ಕೆ. ಅದರ ಧ್ಯೇಯವನ್ನು ಸಾಧಿಸುವುದಕ್ಕೆ ಅವನ ಉದ್ಧಾರಕ್ಕೆ ಅವಶ್ಯಕ; ಅದು ಮನಸ್ಸನ್ನು ಶುದ್ಧೀಕರಿಸಬೇಕು. ಅದು ತತ್ವಗಳ ಮೇಲೆ ಆಧಾರಿತವಾಗಿರ ಬೇಕು, ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವವನ್ನು ಒಳಗೊಂಡಿರಬೇಕು ಎಂಬುದು ಅವರ ಅಭಿಪ್ರಾಯ : "Man cannot live by bread alone, He has a mind which needs food for thought. Religion instills hope in man and drives him to activity"—"ಮನುಷ್ಯ ಜೀವನಕ್ಕೆ ಆಹಾರವೊಂದೇ ಸಾಲದು. ಅವನಲ್ಲಿ ಮನಸ್ಸು ಎಂಬುದು ಇದೆ. ಚಿಂತನೆಗಾಗಿ ಅದಕ್ಕೆ (ಬೇರೆ) ಆಹಾರ ಬೇಕು. ಧರ್ಮವು ಅವನಿಗೆ ಲವಲವಿಕೆಯನ್ನು ಕೊಟ್ಟು ಕಾರ್ಯ ಚಟುವಟಿಕೆಗಳಿಗೆ ಹುರಿದುಂಬಿಸುತ್ತದೆ" ಎಂದು ಅವರು ಹೇಳಿದ್ದಾರೆ. ಅವರಿಗೆ ಪಾರಮಾರ್ಥಿಕತೆಯಲ್ಲಿ ವಿಶ್ವಾಸವಿತ್ತು. ಶುಷ್ಕ, ಯಾಂತ್ರಿಕ ಪೂಜಾ-ವಿಧಾನಗಳಲ್ಲಿ ನಂಬಿಕೆ ಇರಲಿಲ್ಲ. ವ್ಯಕ್ತಿ ಮತ್ತು ಸಮಾಜ ಪರ-ಸ್ಪರ ಅವಲಂಬಿಗಳಾಗಿವೆ. ಸಾಮಾಜಿಕ ಜೀವನದಿಂದಲೇ ಧರ್ಮ, ಕಲೆ, ಸಂಸ್ಕೃತಿ, ವಿಜ್ಞಾನ ಇತ್ಯಾದಿ ಸಾಧ್ಯವಾಗಿವೆ, ವಿಕಸಿತವಾಗಿವೆ. ಆದ್ದರಿಂದ ಧರ್ಮವಲ್ಲಿ ಶ್ರೇಷ್ಠ ಸಾಮಾಜಿಕ ಮೌಲ್ಯಗಳಿಗೆ ಅವರು ಅತ್ಯಂತ ಮಹತ್ವ ಕೊಟ್ಟಿದ್ದಾರೆ.

ಮತ-ಪರಿವರ್ತನೆ ಮಾಡುವುದಾಗಿ ಪ್ರಕಟಿಸಿ, ಸುಮಾರು ಇಪ್ಪತ್ತು ವರ್ಷ-ಗಳ ಮೇಲೆ ಅವರು ಹಾಗೆ ಮಾಡಿದರು. ಈ ಎರಡು ದಶಕಗಳ ದೀರ್ಘ ಅವಧಿಯಲ್ಲಿ ಅವರಿಗೂ, ಇತರರಿಗೂ ವಿಚಾರ—ಮಂಥನಕ್ಕಾಗಿ ಬೇಕಾದಷ್ಟು ಅವಕಾಶ ಸಿಕ್ಕಿತು. ಬಾಬಾಸಾಹೇಬರು ಬೌದ್ಧ, ಸಿಖ್, ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳ ಸಾಮಾ-ಜಿಕ ಮತ್ತು ಧಾರ್ಮಿಕ ಮೌಲ್ಯ ಮತ್ತು ತತ್ವಗಳನ್ನು, ಪರಿಪಾಠ-ರೀತಿ-ರಿವಾಜು ಗಳನ್ನು, ಅವುಗಳ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪಾತ್ರಗಳನ್ನು ಮತ್ತಷ್ಟು ಅಧ್ಯ ಯನ ಮಾಡಿದರು. ಆ ವಿವಿಧ ಧರ್ಮಗಳ ಕೆಲವು ಪ್ರಮುಖರು ತಮ್ಮ-ತಮ್ಮ

ಮತಗಳ ಕಡೆಗೆ ಅವರ ಮನವೊಲಿಸಲೂ ಪ್ರಯತ್ನಿಸಿದರು. ದಲಿತರಿಗೆ, ಸವರ್ಣೀಯರಿಗೆ ಸಮನಾದ ಸಾಮಾಜಿಕ ಸ್ಥಾನ, ಪರಸ್ಪರ ಅಂತರ್‌ವಿವಾಹ ಇತ್ಯಾದಿಗೆ ಅವಕಾಶವಾದರೆ, ಸೂಕ್ತವಾಗಿ ಹಿಂದೂ ಸಮಾಜದ ಪುನರ್ರಚನೆಯಾದರೆ, ಅಸ್ಪೃಶ್ಯರು ಹಿಂದೂ ಸಮಾಜದಲ್ಲಿ ಸಮರಸರಾಗಲು ಸಾಧ್ಯವಾಗಬಹುದೇನೋ ಎಂಬ ಹಾರೈಕೆಯನ್ನು ಅವರು ೧೯೪೬ ರಲ್ಲಿ ಸಹ ವ್ಯಕ್ತಪಡಿಸಿದರು. ಇದರ ಬಳಿಕ ಹತ್ತು ವರ್ಷಗಳಾದರೂ ಹಿಂದೂ ಸಮಾಜದ ಪರವಾಗಿ ನಿರ್ದಿಷ್ಟ ಫಲಿತಾಂಶಗಳೇನೂ ಕಂಡುಬರಲಿಲ್ಲ.

ಮಹಾ ಮಾನವತಾವಾದಿ ಬಸವಣ್ಣನವರು ಮತ್ತು ಇತರ ಪ್ರಮಥರು ವರ್ಣ ವ್ಯವಸ್ಥೆಯ ವಿರುದ್ಧ ಬಂಡೆದ್ದು, ಸಮಾನ ಸಾಮಾಜಿಕ ಮತ್ತು ಧಾರ್ಮಿಕ ಮೌಲ್ಯಗಳ ಆಧಾರದ ಮೇಲೆ ಸಮಾಜವನ್ನು ಪುನರ್ರಚಿಸಲು, ದೀನ–ದಲಿತರನ್ನು ಉದ್ಧರಿಸಲು ಭಗೀರಥ ಎತ್ನುಗಡೆ ಮಾಡಿದರಷ್ಟೆ. ಬಸವಣ್ಣನವರು ತಾನು ಅಸ್ಪೃಶ್ಯ ಮಾದಾರ ಚನ್ನಯ್ಯನ ಮಗನೆಂದು ಆತ್ಮೀಯವಾಗಿ ಹೇಳಿಕೊಂಡಿದ್ದಾರೆ, ದಲಿತರೊಡನೆ ಅಂತರ್–ವಿವಾಹಕ್ಕೆ ಪ್ರೋತ್ಸಾಹ ನೀಡಿ ದುರಂತ ಸನ್ನಿವೇಶಕ್ಕೆ ಈಡಾಗಿದ್ದಾರೆ. ಭಾರತದ ಸಾಮಾಜಿಕ ಮತ್ತು ಧಾರ್ಮಿಕ ಇತಿಹಾಸದಲ್ಲಿ ಬೌದ್ಧ ಧರ್ಮದ ಉದಯದ ತರುವಾಯ ಇದೊಂದು ಅಪೂರ್ವ ಮಾರ್ಮಿಕ ಅಧ್ಯಾಯ. ಈ ವಿಷಯವನ್ನು ಯಾರೂ ಗಂಭೀರವಾಗಿ ಬಾಬಾಸಾಹೇಬರ ಗಮನಕ್ಕೆ ತಂದಂತೆ ಇಲ್ಲ. ಇದೊಂದು ಶೋಚನೀಯ ಲೋಪ ಎಂದು ಹೇಳಬಹುದು. ಇದಲ್ಲದೆ, ಆಧುನಿಕ ಕಾಲದಲ್ಲಿ ಮೇಡ್ಯಾಮ್ ಬ್ಲ್ಯಾವಟ್‌ಸ್ಕಿ ಎಂಬ ಮಹಾ ಪ್ರಾಜ್ಞೆ ಥಿಯಾಸಫಿ ಎಂಬ ಪ್ರಣಾಲಿಯನ್ನು ರೂಪಿಸಿದರು. ಇದು ವಿಜ್ಞಾನ, ಧರ್ಮ ಹಾಗು ತತ್ತ್ವ–ಶಾಸ್ತ್ರಗಳನ್ನು ಬೆಸೆಯಲು, ವಿವಿಧ ಧರ್ಮಗಳ ಸಾರವನ್ನು ಗ್ರಹಿಸಲು ಪ್ರಯತ್ನ ಮಾಡಿದೆ. ಇದು ಅನೇಕ ದೇಶಗಳ ಬುದ್ಧಿಜೀವಿಗಳ ಮೇಲೆ ಪ್ರಭಾವ ಬೀರಿ, ಇನ್ನೂ ಅವರಿಗೇ ಸೀಮಿತವಾಗಿದೆ. ಇದು ಪ್ರತ್ಯೇಕ, ಔಪಚಾರಿಕ ಧರ್ಮವಲ್ಲ, ಧರ್ಮಗಳ ಸಮನ್ವಯದ ಪ್ರಯತ್ನ. ಅದರಲ್ಲಿ ಮತಾಂತರದ ಪ್ರಶ್ನೆ ಇಲ್ಲ.

ಕ್ರೈಸ್ತ ಧರ್ಮ ಜಗತ್ತಿನ ಬಹಳಷ್ಟು ದೇಶಗಳಲ್ಲಿ ಹರಡಿದೆ. ಅವಕ್ಕೆ ಸಮೃದ್ಧ ರಾಷ್ಟ್ರಗಳ ಜನರ ಬೆಂಬಲವಿದೆ, ಧನಬಲ, ಜನಬಲದ ಕೊರತೆ ಇಲ್ಲ. ಭಾರತದಲ್ಲಿ ಮತ್ತು ಇನ್ನಿತರ ಕೆಲವು ದೇಶಗಳಲ್ಲಿ, ಅದನ್ನು ಪ್ರಸಾರ ಮಾಡಲು ಎಲ್ಲಾ ಸಾಧನ ಸೌಕರ್ಯಗಳೊಡನೆ ಮಿಷನರಿಗಳು ಕಂಕಣಬದ್ಧರಾಗಿದ್ದಾರೆ. ವಿಶೇಷವಾಗಿ, ದಲಿತರು ಕಳೆದ ಒಂದೆರಡು ಶತಮಾನಗಳಿಂದ ಅವರಲ್ಲಿ ಸೇರುತ್ತಲೂ ಇದ್ದಾರೆ. ಅದರಂತೆಯೇ ಇಸ್ಲಾಂ ಧರ್ಮದ ಪ್ರಸಾರವೂ ಶತಮಾನಗಳಿಂದ ಸತತವಾಗಿ ನಡೆದೇ ಇದೆ. ಈ ಧರ್ಮಗಳಿಗೆ ಮತಾಂತರವಾಗಿದ್ದರಿಂದ ರಾಜಕೀಯ ತಿರುವು, ಪರಿಣಾಮ,

ಸ್ಥಿತ್ಯಂತರವೂ ಹಿಂದೆ ಉಂಟಾಗಿತ್ತು, ಈಗಲೂ ಉಂಟಾಗಬಲ್ಲದು. ಆ ಮತಗಳನ್ನು ಸೇರುವವರಿಗೆ ಧಾರ್ಮಿಕ, ಸಾಮಾಜಿಕವಲ್ಲದೆ, ಆರ್ಥಿಕ, ರಾಜಕೀಯ ಲಾಭ ಮತ್ತು ಪ್ರತಿಷ್ಠೆಗಳ ಆಮಿಷಗಳು ಇದ್ದವು, ಇವೆ. ಅಂತಹ ಪ್ರಲೋಭನೆಗಳಿಗೆ ಅವರು ಒಳಗಾಗಲಿಲ್ಲ. ಮತಾಂತರದಿಂದ ಸ್ವಾರ್ಥ ಸಾಧಿಸುವ, ಭೌತಿಕ ಪ್ರಯೋಜನಗಳನ್ನು ಪಡೆಯುವ ಉದ್ದೇಶವೇ ಅವರಲ್ಲಿ ಇರಲಿಲ್ಲ. ಆ ಧರ್ಮಗಳ ಕೆಲವು ಮೌಲ್ಯಗಳು ಅವರಿಗೆ ಒಪ್ಪಿಗೆಯಾಗಲಿಲ್ಲ. ಅವು Denationalise ಅಂದರೆ ಅರಾಷ್ಟ್ರೀಕರಣ ಮಾಡುತ್ತವೆಂದೂ, ಆ ಮತಗಳನ್ನು ಅಂಗೀಕರಿಸಿದರೆ. ದಲಿತರು ಹಿಂದೂ ಧರ್ಮಕ್ಕಷ್ಟೇ ಅಲ್ಲ, ಹಿಂದೂ ಸಂಸ್ಕೃತಿಗೂ ಪರಕೀಯರಾಗುವರೆಂದೂ, ಅಂತಹ ಮತಾಂತರದಿಂದ ಜನಸಂಖ್ಯಾ ಪ್ರಮಾಣವೂ ಹೆಚ್ಚು–ಕಡಿಮೆಯಾಗಿ. ರಾಜಕೀಯ ಪರಿಣಾಮವೂ ಸಂಭವಿಸುವುದೆಂದೂ ಬಾಬಾಸಾಹೇಬರು ಸ್ಪಷ್ಟವಾಗಿ ಹೇಳಿದ್ದಾರೆ. ಅಂತಹ ಮತಾಂತರದಿಂದ ವೈಯಕ್ತಿಕ ಕಾನೂನಿನ ಅನ್ವಯವೂ ಬದಲಾಗಬೇಕಾಗುತ್ತದೆ. ಅವರು ಉಜ್ವಲ ದೇಶಾಭಿಮಾನಿ. ರಾಷ್ಟ್ರದ ಹಿತಕ್ಕೆ ಎಂದೂ ಅಪಚಾರ ಮಾಡಿದವರಲ್ಲ. ಸೀಖ್ ಮತವು ಜಾತೀಯತೆ. ಮೇಲುಕೀಳೆಂಬ ಭಾವನೆ, ಮೂರ್ತಿ ಪೂಜೆ ಇತ್ಯಾದಿಗಳನ್ನು ಪ್ರತಿಭಟಿಸಿ ಉದ್ಭವಿಸಿತು. ಅದು ದಬ್ಬಾಳಿಕೆಯ ವಿರುದ್ಧ ಹೋರಾಡಿದ ಭವ್ಯ, ವೀರ ಇತಿಹಾಸವನ್ನು ಹೊಂದಿದೆ. ಅದು ಹಿಂದೂ ಪರಂಪರೆಯ ಸುಧಾರಿತ ರೂಪಾಂತರ; ಅವರಲ್ಲಿ ಸಾಮಾಜಿಕ ಸಮಾನತೆ ಇದೆ. ಆದ್ದರಿಂದ ಸೀಖ್ ಮತದ ವಿಚಾರದಲ್ಲಿ ಅವರಿಗೆ ಆಸಕ್ತಿ ಉಂಟಾಗಿತ್ತು. ಕೆಲವು ಹಿಂದೂ ಪ್ರಮುಖರೂ ಈ ಬಗ್ಗೆ ಅವರಿಗೆ ತಮ್ಮ ನೈತಿಕ ಬೆಂಬಲವನ್ನು ಸೂಚಿಸಿ, ಇವಕ್ಕೆ ಇತರ ಅನೇಕರ ಸಮರ್ಥನೆ, ಪ್ರೋತ್ಸಾಹ ಪಡೆಯಲೂ ಪ್ರಯತ್ನಿಸಿದರು. ಡಾ॥ ಅಂಬೇಡ್ಕರ್‌ರು ಸೀಖ್ ರೀತಿ–ರಿವಾಜು ಮುಂತಾದವನ್ನು ತಿಳಿದುಕೊಳ್ಳಲು ಅಮೃತಸರಕ್ಕೆ ತಮ್ಮ ಮಗನನ್ನೂ, ಸೋದರಸಂಬಂಧಿಯನ್ನೂ, ಕೆಲವು ಅನುಯಾಯಿಗಳನ್ನೂ ಕಳಿಸಿದ್ದರು. ಆದರೆ ಈ ವಿಷಯ ಮುಂದುವರಿಯದೆ ಅಲ್ಲಿಗೇ ನಿಂತು ಹೋಯಿತು.

ಬಾಬಾಸಾಹೇಬರಿಗೆ ಮತಪರಿವರ್ತನೆ ಶುದ್ಧ. ತಾತ್ವಿಕ ಮನವರಿಕೆಯ ಪ್ರಶ್ನೆಯಾಗಿತ್ತು. ಭಾರತದಲ್ಲಿ ಹುಟ್ಟಿ ಬೆಳೆದು, ವಿಶ್ವದ ಅನೇಕ ದೇಶಗಳಲ್ಲಿ ಪ್ರಸಾರವಾಗಿ, ಹತ್ತಾರು ದೇಶಗಳಲ್ಲಿ ಇನ್ನೂ ಜ್ವಲಂತ ಧರ್ಮವಾಗಿ ಬೆಳಗುತ್ತಿರುವ ಬೌದ್ಧ ಧರ್ಮದ ಸಂಸ್ಕೃತಿಯ ಇತಿಹಾಸ ಬಹು ದೊಡ್ಡದು, ಚಿತ್ತಾಕರ್ಷಕವಾದದ್ದು. ಇದು ಅವರ ಗಮನವನ್ನು ವಿಶೇಷವಾಗಿ ಸೆಳೆದಿತ್ತು. ಅವರ ಅಧ್ಯಯನವನ್ನು ಅವರು ಮಾಡುತ್ತಲೇ ಇದ್ದರು. ನೆರೆಯ ಎರಡು ಬೌದ್ಧ ದೇಶಗಳಾದ ಸಿಂಹಳ ಮತ್ತು ಬರ್ಮಾಕ್ಕೆ ಭೇಟಿ ಕೊಟ್ಟು ವಿಚಾರವಿನಿಮಯ ಮಾಡಿದರು. ಆಗ ಅಂದರೆ ೧೯೫೪ರಲ್ಲಿ ಬರ್ಮಾದಲ್ಲಿ ನಡೆದ ಅಂತರ್‌ರಾಷ್ಟ್ರೀಯ ಬೌದ್ಧ

ಸಮ್ಮೇಳನದಲ್ಲಿ ಭಾಗವಹಿಸಿದರು. ಬುದ್ಧನು ತೋರಿಸಿದ ಮಾರ್ಗವು ಸಾಧಾರಣ ಅರ್ಥದಲ್ಲಿ ಧರ್ಮ ಎನ್ನುವುದಕ್ಕಿಂತಲೂ, ಅದು ಮಾನಸಿಕ ವಿಕಾಸದ ವಿಚಾರ ಶೀಲತೆ, ನೀತಿಸಂಹಿತೆ ಮತ್ತು ಪಥ ಎಂದು ಕೆಲವರ ಅಭಿಪ್ರಾಯ. ಒಳಿತಿಗೂ ಕೆಡುಕಿಗೂ ಮನಸ್ಸೇ ಮೂಲ. "ಸಬ್ಬ ಪಾಪಸ್ಸ ಅಕರಣಮ್, ಕುಸಲಸ್ಸ ಉಪ-ಸಂಪದ। ಸಚಿತ್ತ ಪರಿಯೋದಪನಂ, ಏಕಂ ಬುದ್ಧಾನುಶಾಸನಮ್॥ "ಅನೀತಿಯ ಯಾವ ಕೃತ್ಯಗಳನ್ನೂ ಮಾಡದಿರುವುದು, ಒಳ್ಳೆಯ ಕೃತ್ಯಗಳನ್ನೇ ಮಾಡುವುದು, ಮಲಿನವಾಗದಂತೆ ಚಿತ್ತವನ್ನು ಶುದ್ಧವಾಗಿಡಬೇಕು. ಇದು ಬುದ್ಧನ ಒಂದು ವಚನ. ಬೌದ್ಧ ಧರ್ಮವು ವಿಚಾರವಾದಿ ಪ್ರಣಾಲಿಯದು. ತನ್ನ ಬೋಧನೆಯನ್ನು ತನ್ನ ಬಗೆಗಿನ ಗೌರವದಿಂದಾಗಿ ನಂಬಬಾರದೆಂದೂ, ಶ್ರಾವಕರು ಅದನ್ನು ತಮ್ಮ ವಿಚಾರದ ಒರೆಗಲ್ಲಿಗೆ ಹಚ್ಚಿ ಮನಗಂಡರೆ ಮಾತ್ರ ಸ್ವೀಕರಿಸಬಹುದೆಂದೂ ತಥಾಗತ ತಿಳಿಸುತ್ತಿದ್ದ. ಬೌದ್ಧ ಪರಂಪರೆಯಲ್ಲಿ ವೀಕ್ಷಣೆ, ವಿಶ್ಲೇಷಣೆ ಮತ್ತು ವಿವೇಕಕ್ಕೆ ಮಹತ್ವ ಇದೆ. ಸ್ವಾನುಭವದಿಂದ ವಿಷಯಗಳನ್ನು ಪುನಃ ಪರಿಶೀಲಿಸಲು ಸ್ವಾತಂತ್ರ್ಯವಿದೆ. ಪರಮ ಸತ್ಯದ ಪರಿಜ್ಞಾನಕ್ಕೆ ಸ್ವಪ್ರಯತ್ನ ಅಗತ್ಯ. ಅನುಭವವೇ ಪ್ರಮಾಣ. ಪ್ರತಿ-ಯೊಬ್ಬನೂ ಸಂಬೋಧಿಯನ್ನು ಪಡೆಯಬಲ್ಲ. ಅದಕ್ಕೆ ನಿರ್ಧಾರ, ಸಾಧನೆ ಬೇಕು. ಬೌದ್ಧ ವಿಚಾರದಲ್ಲಿ ಎಲ್ಲಾ ಮಾನವರು ಸಮಾನರು ಸುಜಾತ–ಕುಜಾತ ಎಂಬ ಯಾವ ಭೇದಭಾವವೂ ಇಲ್ಲ. ಬೌದ್ಧರ ಭ್ರಾತೃತ್ವ ಸ್ವಧರ್ಮೀಯರಿಗೆ ಮಾತ್ರ ಸೀಮಿತವಲ್ಲ. ಅದು ಎಲ್ಲ ಮನುಷ್ಯರಿಗೂ ಅನ್ವಯಿಸುವ ವಿಶ್ವ ಭ್ರಾತೃತ್ವ. ಅನೇಕ ಪಾಶ್ಚಿಮಾತ್ಯ ವಿಚಾರವಾದಿಗಳು, ವಿಜ್ಞಾನಿಗಳು, ಚಿಂತಕರು, ಬುದ್ಧಿಜೀವಿಗಳು ಬೌದ್ಧ ತತ್ತ್ವಶಾಸ್ತ್ರದಿಂದ ಪ್ರಭಾವಿತರಾಗಿದ್ದಾರೆ. ಅವರದು ಒಂದು ಪ್ರಕಾರದ Intellectual Buddhism—ಬೌದ್ಧಿಕ ಬೌದ್ಧ ವಿಚಾರ ಎಂದು ಹೇಳಬಹುದು. ಪ್ರಖ್ಯಾತ ವಿಜ್ಞಾನಿ ಆಲ್‌ಬರ್ಟ್ ಐನ್‌ಸ್ಟೀನ್ ಬೌದ್ಧ ಧರ್ಮವು future cosmic religion ಎಂದು ಹೇಳಿದ್ದಾನೆ. ಎಲ್ಲಾ ಧರ್ಮಗಳ ಪೈಕಿ, ಬೌದ್ಧ ಧರ್ಮವು ಹೆಸರಾಂತ ವಿಚಾರವಾದಿ ಬೆರ್‌ಟ್ರ್ಯಾಂಡ್ ರಸ್ಸೆಲ್‌ರಿಗೆ ಆಕರ್ಷಕವಾಗಿತ್ತು.

ಕಳೆದ ಶತಮಾನದಲ್ಲಿ ಭಾರತದಲ್ಲಿ ಪುನರ್‌ಜಾಗೃತಿ ಪ್ರಾರಂಭವಾದ ಬಳಿಕ, ಮರೆತಿದ್ದ ಬೌದ್ಧ ಪರಂಪರೆಯ ಭವ್ಯತೆಯ ಕಡೆಗೆ ಭಾರತೀಯ ವಿದ್ವಾಂಸರ ದೃಷ್ಟಿ ಹರಿಯಿತು. ಪಶ್ಚಿಮದ ಮತ್ತು ಪೂರ್ವ ವಿಶ್ವದ ತಜ್ಞರೂ ಬೌದ್ಧ ಧರ್ಮ, ಸಂಸ್ಕೃತಿಗೆ ಸಂಬಂಧಪಟ್ಟ ಅನೇಕ ಸಂಗತಿಗಳನ್ನು ಬೆಳಕಿಗೆ ತಂದರು. ಭಾರತೀಯ ರಲ್ಲಿ ಬೌದ್ಧ ವಿಷಯಗಳ ಬಗ್ಗೆ ಕುತೂಹಲ ಉಂಟಾಗತೊಡಗಿತು. ಭಾರತದ ಇಂಪೀರಿಯಲ್ ಗ್ಯಾಜೇಟಿಯರುಗಳ ಸಂಪಾದಕರಾಗಿದ್ದ ಸರ್ ವಿಲಿಯಮ್ ಹಂಟರ್ ಅವರು ಭಾರತದಲ್ಲಿ ಬೌದ್ಧ ಧರ್ಮದ ಪುನರುಜ್ಜೀವನದ ಸಾಧ್ಯತೆ ಇದೆ ಎಂದು

ನೂರು ವರ್ಷಗಳಿಗೂ ಹಿಂದೆಯೇ ಅಂದರೆ ೧೮೮೧ರಲ್ಲಿ ಪಡಿನುಡಿದದ್ದು ಆಶ್ಚರ್ಯ ಕರವೆನಿಸುತ್ತದೆ,

ಪ್ರಾಚೀನ ಕಾಲದಲ್ಲಿ ಈ ಧರ್ಮ ಭೌಗೋಲಿಕ ಅಡೆತಡೆ, ದೇಶ, ಭಾಷೆ, ಕುಲ ಇತ್ಯಾದಿಗಳ ಇತಿಮಿತಿಗಳನ್ನು ಮೀರಿ ಪ್ರಯಾಣಿಸಿ, ವಿವಿಧ ದೇಶಗಳಲ್ಲಿ ಪ್ರಸಾರವಾದ ಪ್ರಥಮ ಧರ್ಮ. ಆಕ್ರಮಣ, ಒತ್ತಡ, ಇತರ ಪರಂಪರೆಗಳ ನಿಂದೆ, ಪ್ರಲೋಭನೆ, ಅಸಹನೆ, ಬಲಾತ್ಕಾರ, ಯುದ್ಧ ಹಿಂಸೆ-ರಕ್ತಪಾತ, ಮತಾಂಧತೆ-ಇತ್ಯಾದಿ ಹಾನಿಕರ, ತಪ್ಪು ಸಾಧನಗಳನ್ನು ಉಪಯೋಗಿಸದೆ, ಬೌದ್ಧಧರ್ಮವು ವಿಜ್ಞಾನದಂತೆ ಹರಡಿತು. ಜನರ ಮನವನ್ನು, ಹೃದಯವನ್ನು ಗೆಲ್ಲಬಲ್ಲ ಉದಾತ್ತ ವೈಚಾರಿಕತೆ, ತತ್ವಗಳು, ಗುಣಗಳು, ಅಂತಃಸತ್ವ ಕ್ರಿಯಾಶೀಲತೆ-ಮುಂತಾದವೇ ಅದರ ಪ್ರೇರಕ, ಪ್ರಸಾರಕ ಶಕ್ತಿ. ಅದು ಎಲ್ಲಿಗೂ ಭಾರತದ ಜಾತೀಯತೆಯ ಪಿಡುಗನ್ನು ಕೊಂಡೊಯ್ಯದೆ ವಿಶಾಲ ಸಾಮಾಜಿಕ, ಧಾರ್ಮಿಕ ಮೌಲ್ಯಗಳನ್ನು ಕೊಟ್ಟಿತು. ವಿದೇಶಗಳ ಜನರನ್ನು ಅರಾಷ್ಟ್ರೀಯರನ್ನಾಗಿ ಮಾಡಲಿಲ್ಲ. ಅಲ್ಲಲ್ಲಿಯ ನಾಗರಿಕತೆಗೆ, ಸಂಸ್ಕೃತಿಯ ಪರಂಪರೆಗೆ ಹಾನಿ ತರದೆ, ಬಾಧಕವಾಗದೆ, ಪೂರಕವಾಯಿತು, ಪೋಷಕವಾಯಿತು. ಅಲ್ಲಲ್ಲಿ ಹಾಲಿನಲ್ಲಿ ಸಕ್ಕರೆಯಂತೆ ಬೆರೆತು, ಆ ಆ ದೇಶಗಳ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿತು. ಸಹನೆ, ಪರಸ್ಪರ ಸಹಕಾರ ಸಮ್ಮಿಲನದಿಂದ ತಾನೂ ಆಯಾ ದೇಶಗಳಿಗೆ ವಿಶಿಷ್ಟವಾದ ರೀತಿಯಲ್ಲೇ ರೂಪಗೊಂಡು ವಿಕಸಿತವಾಯಿತು. ಕುಟುಂಬಕ್ಕೆ ಸಂಬಂಧಪಟ್ಟ ಆಯಾ ದೇಶಗಳ ಕಾನೂನೇ ಆಯಾ ದೇಶಗಳ ಬೌದ್ಧರಿಗೂ ಅನ್ವಯಿಸುತ್ತದೆಯೇ ಹೊರತು, ಯಾವುದೋ ಕಾಲದ ಪ್ರತ್ಯೇಕ ಕಾನೂನನ್ನು ಅದು ಅವರ ಮೇಲೆ ಹೇರಲಿಲ್ಲ. ಬೌದ್ಧ ಪರಂಪರೆಯ ಈ ಸಮನ್ವಯದ ಸ್ವಭಾವ, ಔದಾರ್ಯಗಳು ಅಪೂರ್ವ.

ಮಾನವ ಕುಲದ ಬಹು ಸಂಖ್ಯಾತ ಜನರ ಧರ್ಮ, ಸಂಸ್ಕೃತಿ, ವಿಚಾರಸರಣಿ, ನೈತಿಕತೆ, ಕಲೆ, ಸಾಹಿತ್ಯ, ಶಾಸ್ತ್ರಗಳ ಮೇಲೆ ಬೌದ್ಧಧರ್ಮ ಅಚ್ಚಳಿಯದ ಪ್ರಭಾವ ಬೀರಿದೆ. ಪ್ರಪಂಚದ ಸಂಸ್ಕೃತಿಯ ಉತ್ತಮಾಂಶಗಳಿಗೆ ಬೌದ್ಧ ಪರಂಪರೆಯು ನೀಡಿದ ಕಾಣಿಕೆಗೆ ಸಾಟಿಯುಲ್ಲ. ಜಗತ್ತಿಗೆ ಇದು ಭಾರತದ ಅತ್ಯಂತ ದೊಡ್ಡ ಕೊಡುಗೆ.

ವಿವಿಧ ಈ ಎಲ್ಲಾ ಕಾರಣಗಳನ್ನು ಪರಿಶೀಲಿಸಿ, ಪರಿಗಣಿಸಿ, ಸುಮಾರು ಇಪ್ಪತ್ತು ವರ್ಷಗಳ ಪಕ್ವ ಮನನ-ಚಿಂತನದ ಬಳಿಕವೇ ಡಾ || ಅಂಬೇಡ್ಕರ್ ಅವರು ಅಂತಿಮವಾಗಿ ಬೌದ್ಧ ಧರ್ಮವನ್ನು ಆರಿಸಿಕೊಂಡರು. ೧೯೫೬ ಅಕ್ಟೋಬರ್ ೧೪ ವಿಜಯದಶಮಿ ಅವರ ವಿಚಾರ-ಮಂಥನದ ವಿಜಯದ ದಿನ. ಅಂದು ಅವರೂ,

ಸುಮಾರು ಮೂರು ಲಕ್ಷ ಮಂದಿ ಅನುಯಾಯಿಗಳೂ ನಾಗಪುರದಲ್ಲಿ ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಧರ್ಮಗಳ ಇತಿಹಾಸದಲ್ಲಿಯೇ ಇದೊಂದು ಅಸಾಧಾರಣ ದಿನ. ಬೌದ್ಧ ಧರ್ಮವು ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗ; ಈ ದೇಶದ ಸಾಂಸ್ಕೃತಿಕ ಪರಂಪರೆ ಮತ್ತು ಚರಿತ್ರೆಗೆ ನನ್ನ ಮತಾಂತರದಿಂದ ಧಕ್ಕೆಯಾಗದಂತೆ ಎಚ್ಚರಿಕೆ ವಹಿಸಿದ್ದೇನೆ ಎಂಬ ಅವರ ಹೇಳಿಕೆ ಒಟ್ಟು ಭಾರತದ ಹಿತರಕ್ಷಣೆಯ ಬಗ್ಗೆ ಅವರಿಗಿದ್ದ ಕಳಕಳಿಯನ್ನು ವ್ಯಕ್ತಪಡಿಸುತ್ತದೆ. ಬಳಿಕ ಅವರು ನೇಪಾಳದ ಖಾಟ್ಮಂಡುವಿನಲ್ಲಿ ನಡೆದ ವಿಶ್ವ ಬೌದ್ಧ ಬಾಂಧವ್ಯ ಸಮ್ಮೇಳನದಲ್ಲಿ ಭಾಗವಹಿಸಿದರು. ಬೌದ್ಧ ಕ್ಷೇತ್ರಗಳಿಗೆ ಭೇಟಿ ಕೊಟ್ಟರು. ದೆಹಲಿಯಲ್ಲಿ ಬುದ್ಧನ ೨೫೦೦ನೆಯ ಮಹಾ ಪರಿನಿರ್ವಾಣ ಸಮಾರಂಭದಲ್ಲಿ ಭಾಗವಹಿಸಿದರು. ಕೆಲ ಸಮಯದಿಂದ ಬೌದ್ಧ ಧರ್ಮವನ್ನು ಕುರಿತು ತಾವು ಬರೆಯುತ್ತಿದ್ದ ಗ್ರಂಥದ ರಚನೆಯನ್ನು ಪೂರ್ತಿಮಾಡಿ, ತಮ್ಮ ಸಾರ್ಥಕ, ಧನ್ಯ ಜೀವನದ ಯಾತ್ರೆಯನ್ನು ೧೯೫೬ ಡಿಸೆಂಬರ್ ೬ರಂದು ಮುಗಿಸಿದರು. ಅವರ ಕಳೇಬರದ ದಹನ ಕ್ರಿಯೆಯ ಸ್ಥಳದಲ್ಲೇ ಸುಮಾರು ಒಂದು ಲಕ್ಷ ಮಂದಿ ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಭಾರತದ ಚರಿತ್ರಾರ್ಹ ಸಂವಿಧಾನದ ರೂವಾರಿಯಾಗಿದ್ದ ಅವರಿಗೆ, ೧೯೫೦ರಲ್ಲಿ ಆ ಮಹಾ ಕಾರ್ಯದ ಯಶಸ್ವಿ ಮುಕ್ತಾಯದಿಂದ ಮತ್ತು ೧೯೫೬ರಲ್ಲಿ ಬೌದ್ಧ ಧರ್ಮದ ಸ್ವೀಕಾರದ ಮೂಲಕ ಅದರ ಪುನರುಜ್ಜೀವನದ ಐತಿಹಾಸಿಕ ಮಹತ್ವದ ಕ್ರಮದಿಂದ ತಮ್ಮ ಘಟನಾಮಯ ಬಾಳಿನ ಗುರಿಯನ್ನು ಸಾಧಿಸಿದ ಸಂತೃಪ್ತಿ ಅವರಿಗೆ ಉಂಟಾಗಿತ್ತು ಎಂಬುದರಲ್ಲಿ ಸಂಶಯವಿಲ್ಲ. ಬಹುಮುಖ ಪ್ರತಿಭೆಯ ಕ್ರಿಯಾಶೀಲರಾದ, ದಲಿತರ ದಾಸ್ಯ ವಿಮೋಚನೆಯ ಕಾರಣ ಪುರುಷರಾದ ಅವರು ಮಹಾನ್ ಅಶೋಕ, ನಾಗಾರ್ಜುನ ಮುಂತಾದ ಬೌದ್ಧ ಮಾರ್ಗವನ್ನು ಪ್ರಶಸ್ತಗೊಳಿಸಿದ ಶಿಖರ ವ್ಯಕ್ತಿಗಳ ಸಾಲಿಗೆ ಸೇರಿದವರು.

ಬುದ್ಧನ ಸಹೃದಯತೆ ಭಾರತಕ್ಕೆ ಪುನಃ ಬರುವ ವರೆಗೆ ಈ ದೇಶದ ಜನತೆ ಆಶಾರಹಿತ ಸ್ಥಿತಿಯಲ್ಲೇ ಇರುತ್ತಾರೆ. (until the Buddha's heart comes back into India, the people of India will remain in hopeless state)– ಎಂದು ಸ್ವಾಮಿ ವಿವೇಕಾನಂದರು ಉದ್ಗರಿಸಿದ್ದರು. ಅವರ ಈ ಹಾರೈಕೆಯನ್ನು ಬಾಬಾಸಾಹೇಬರು ನೆರವೇರಿಸಿ, ನವ ಚೈತನ್ಯವನ್ನು ತಂದಿದ್ದಾರೆ. ಚರಿತ್ರೆಯಲ್ಲಾದ ಒಂದು ಮಹಾ ಪ್ರಮಾದದ ಪರಿಮಾರ್ಜನೆ ಮಾಡಿದ್ದಾರೆ. ಅವರು ತಮ್ಮ ಪ್ರಾಜ್ಞತೆ, ಜಾಣ್ಮೆ, ದೂರದೃಷ್ಟಿ, ಮನಸ್ಸಂಕಲ್ಪ ಮತ್ತು ಕ್ರಿಯಾಶಕ್ತಿಯಿಂದ ದಲಿತರಿಗಷ್ಟೇ ಅಲ್ಲ, ಇತರ ಹಿಂದೂಗಳಿಗೆ, ಬೌದ್ಧರಿಗೆ, ಅಖಿಲ ಭಾರತಕ್ಕೆ, ಪ್ರಪಂಚದ ವಿಚಾರವಾದಿತ್ವಕ್ಕೆ ಚಿರಸ್ಮರಣೀಯ ಸೇವೆ ಸಲ್ಲಿಸಿದ್ದಾರೆ. ಇದಕ್ಕಾಗಿ ಇಡೀ ಮಾನವ ಕುಲದ ಕೃತಜ್ಞತೆ ಅವರಿಗೆ ಸಲ್ಲಬೇಕು.

"ಬುದ್ಧ ಮತ್ತು ಅವನ ಧಮ್ಮ" (Buddha and his Dhamma) ಎಂಬ ಅವರ ಗ್ರಂಥ ಅವರಿದ್ದಾಗಲೇ ಪ್ರಕಟಿಸಲು ಕಾಲಾವಕಾಶವಾಗದೆ, ಅವರು ಗತಿಸಿದ ಬಳಿಕ ಬೆಳಕು ಕಂಡಿತು. ಅದರಲ್ಲಿ, ಸಿದ್ಧಾರ್ಥನ ಗೃಹ ತ್ಯಾಗ, ಧರ್ಮ ಚಕ್ರ ಪರಿವರ್ತನೆ, ಕರ್ಮ, ಪುನರ್ಜನ್ಮ, ಅಹಿಂಸೆ, ಬೌದ್ಧ ಯತಿಗಳ ಸಂಘ, ಸಾಮಾಜಿಕ ವ್ಯವಸ್ಥೆಮುಂತಾದ ವಿಷಯಗಳ ಮೇಲೆ ಅವರು ವ್ಯಕ್ತಪಡಿಸಿದ ವ್ಯಾಖ್ಯಾನಗಳ ಬಗ್ಗೆ ಕೆಲವು ಬೌದ್ಧ ವಿದ್ವಾಂಸರು ಭಿನ್ನಾಭಿಪ್ರಾಯವನ್ನು ಸೂಚಿಸಿದ್ದಾರೆ. ಬೌದ್ಧ ಪರಂಪರೆ ವಿಚಾರವಾದಿಯಾದ್ದರಿಂದ ಸ್ವ-ಅನುಭವ, ವೀಕ್ಷಣೆ, ವಿಶ್ಲೇಷಣೆಯ ಆಧಾರದ ಮೇಲೆ ಅರ್ಥೈಸುವ ವಿಚಾರ-ಸ್ವಾತಂತ್ರ್ಯವಿದೆ. ಬೌದ್ಧ ಧರ್ಮದ ಸಾಹಿತ್ಯ ಅನೇಕ ದೇಶಗಳಲ್ಲಿ ವಿಪುಲವಾಗಿ, ವಿವಿಧವಾಗಿ ಬೆಳೆದಿದೆ. ಭಾರತದಲ್ಲಿ ಮತ್ತು ಬೇರೆ ದೇಶಗಳಲ್ಲಿಯೂ ಈ ಹಿಂದೆ ಪ್ರಕ್ಷೇಪ ಮಾಡುವ ಅಂದರೆ ಮೂಲ ಗ್ರಂಥದಲ್ಲಿ ಇಲ್ಲದ ಮಾತನ್ನು ಯಾವುದೋ ಕಾರಣದಿಂದ, ಅದರಲ್ಲಿ ಅನಧಿಕೃತವಾಗಿ ಸೇರಿಸುವ ಚಪಲವಿತ್ತು. ಮೂಲಭೂತ ತತ್ವಗಳಿಗೆ ಅನುಗುಣವಾಗಿಲ್ಲದಿದ್ದರೆ, ಯಾವುದೊಂದು ವಚನ ಪ್ರಕ್ಷಿಪ್ತವೆಂಬ ಸಂದೇಹ ಬರುತ್ತದೆ. ಹಾಗೆ ಸಂಶಯ ಬರಬೇಕು. ಈ ಸಂಗತಿಯನ್ನು ಅಲ್ಲಗಳೆಯುವುದು ಸಮಂಜಸವಲ್ಲ. ಬಾಬಾ ಸಾಹೇಬರು ಸಾಮಾಜಿಕ ಮೌಲ್ಯಗಳಿಗೆ ವಿಶೇಷ ಗಮನವನ್ನು, ಮಹತ್ವವನ್ನು ಕೊಟ್ಟಿರುವುದು ಸಹಜ. ಯಥಾರ್ಥ. ಅವರು ಅವುಗಳನ್ನು ಕುರಿತು ಆಳವಾಗಿ, ತುಲನಾತ್ಮಕ ಅಧ್ಯಯನ, ಚಿಂತನ-ಮಂಥನ ಮಾಡಿದ್ದಾರೆ. ವ್ಯಕ್ತಿಯ ಜೀವನ ಮತ್ತು ಸಾಮಾಜಿಕ ವಿಕಾಸದಲ್ಲಿ ಅವುಗಳ ಪಾತ್ರ ದೊಡ್ಡದು. ಅವು ಮುಖ್ಯ ಒರೆಗಲ್ಲು ಎಂಬುದನ್ನು ಮರೆಯಬಾರದು. ಮಾನವ ಮಗು ಅರಣ್ಯದಲ್ಲಿ ಪಶುಗಳ ಮಧ್ಯೆ ಬೆಳೆದರೆ ನಿಜವಾದ ಅರ್ಥದಲ್ಲಿ ಅದಕ್ಕೆ ಮನುಷ್ಯತ್ವವೇ ಬರುವುದಿಲ್ಲ. ಅನುಭವ, ವಿಚಾರ, ಚಿಂತನ-ಮಂಥನ ಭೇದದಿಂದ ದೃಷ್ಟಿ ಭೇದ. ಬೌದ್ಧ ಧರ್ಮದಲ್ಲಿ ಥೇರವಾದ, ಮಹಾಯಾನ, ವಜ್ರಯಾನ ಇತ್ಯಾದಿ ಪ್ರಭೇದಗಳಿವೆ. ಇತರ ಧರ್ಮಗಳಲ್ಲಿಯೂ ಒಳಭೇದಗಳಿವೆ. ವಿವಿಧ ಆಧುನಿಕ ವಾದಗಳಲ್ಲಿಯೂ ಎಷ್ಟೋ ಭಿನ್ನಮತಗಳು ಉಂಟಾಗಿವೆ. ಬೌದ್ಧ ಧರ್ಮವನ್ನು ಕುರಿತು ತಮ್ಮ ವಿವೇಚನೆ: ವ್ಯಾಖ್ಯಾನಗಳ ಸಂಬಂಧದಲ್ಲಿ ವಿವಾದದ ಸಂಭವವನ್ನು ಬಾಬಾ ಸಾಹೇಬರು ಮುಂಚಾಗಿಯೇ ನಿರೀಕ್ಷಿಸಿದ್ದರೆಂದು ಕಾಣುತ್ತದೆ. ಏಕೆಂದರೆ, ತಾನು ಪ್ರಸಾರ ಮಾಡುತ್ತಿರುವುದನ್ನು ನವ ಬೌದ್ಧ ಯಾನ, ನವಯಾನವೆಂದು ಬೇಕಾದರೂ ಕರೆಯಬಹುದೆಂದು ಅವರು ಆಗಲೇ ಹೇಳಿದ್ದರು.

ಸ್ವಾರ್ಥ, ದುರಾಶೆ, ಲೋಭಾದಿಗಳಿಂದ ಜಾತಿ ಮತ್ತು ಬಡತನವನ್ನು ಮಾನವ ಸಮಾಜವೇ ಉಂಟು ಮಾಡಿದೆ. ಇದಕ್ಕೆ ಕರ್ಮನಿಯಮವನ್ನು ಅನ್ವಯಿಸುವುದು ಅಪಾರ್ಥ. ಕೆಲವು ಬೌದ್ಧ ಸೂತ್ರಗಳಿಂದ ಇದನ್ನು ತಿಳಿದುಕೊಳ್ಳ-

ಬಹುದು. ಧರ್ಮವನ್ನು ಸರಿಯಾಗಿ ತಿಳಿದುಕೊಂಡು, ವ್ಯಾಖ್ಯಾನ ಮಾಡಿ, ಆಚರಣೆಗೆ ತಂದರೆ, ನಮ್ಮನ್ನು ಅದು ಅತ್ಯುನ್ನತ ಮಟ್ಟಕ್ಕೆ ಕರೆದೊಯ್ಯುತ್ತದೆ; ಅದನ್ನು ತಪ್ಪಾಗಿ ಅರ್ಥ ಮಾಡಿಕೊಂಡು, ಮಿಥ್ಯಾ ರೂಪದಲ್ಲಿ ವ್ಯಾಖ್ಯಾನಿಸಿ, ತಪ್ಪಾಗಿ ನಡೆದರೆ, ಅದರಿಂದ ಕಷ್ಟಪರಂಪರೆ—ಈ ಬುದ್ಧ ವಚನ ಎಲ್ಲರಿಗೂ ಅನ್ವಯಿಸುವ ಮಾತು.

ಬಾಬಾ ಸಾಹೇಬರು ಸಮಾಜವಾದಿಯೂ ಹೌದು ಎಂಬುದನ್ನು ಲಕ್ಷದಲ್ಲಿಡಬೇಕು. ರಾಜ್ಯ ಸಮಾಜವಾದವನ್ನು ಮತ್ತು ಭೂಮಿಯ ಸ್ವಾಮಿತ್ವ ಸಮಾಜ-ದ್ದಾಗಿರಬೇಕೆಂದು ಅವರು ಪ್ರತಿಪಾದಿಸಿದ್ದಾರೆ. ಬುದ್ಧ ಧರ್ಮವೊಂದೇ ಮಾರ್ಕ್ಸ-ವಾದಕ್ಕೆ ಉತ್ತರ, ಬುದ್ಧನ ಮಾರ್ಗ ಪ್ರಜಾಸತ್ತಾತ್ಮಕವಾದದ್ದು, ಮಾರ್ಕ್ಸನದು ಬಲಾತ್ಕಾರದ ಮೇಲೆ ಆಧಾರಿತವಾಗಿದೆಯೆಂದು ಅವರು ಹೇಳಿದ್ದುಂಟು. ಮಾರ್ಕ್ಸ-ವಾದವು ಮಾನವನ ಎಲ್ಲಾ ಅಗತ್ಯಗಳನ್ನು ಪೂರೈಸುವುದಿಲ್ಲ; ಮನುಷ್ಯನಿಗೆ ಸಮುಚಿತ ಧರ್ಮದ ಅವಶ್ಯಕತೆಯೂ ಇದೆ ಎಂಬುದು ಅವರ ತೀರ್ಮಾನವಾಗಿತ್ತು. ದುಃಖ-ನಿವಾರಕ ಮಾರ್ಗವನ್ನು ತೋರಿಸಿದ ಬುದ್ಧನು ಆಸ್ತಿ-ಸಂಗ್ರಹವನ್ನು ವಿರೋಧಿಸಿದ್ದಾನೆ; ಖಾಸಗಿ ಆಸ್ತಿಯನ್ನು ರದ್ದುಗೊಳಿಸುವುದಾದರೆ, ಬುದ್ಧ ಮಾರ್ಗವು ಹಾಗೆ ಮಾಡಲು ಅಡ್ಡಿಯಾಗುವುದಿಲ್ಲ-ಎಂದೂ ಅವರು ಅರ್ಥೈಸಿದ್ದಾರೆ.

ಬೌದ್ಧ ಧರ್ಮ ನಿರಾಶಾವಾದಿ, ಸಪ್ಪೆ, ದುರ್ಬಲ ಎಂದು ಕೆಲವರು ಟೀಕಿಸಿ-ದ್ದುಂಟು. ಜೀವನದಲ್ಲಿ ದುಃಖವಿದೆ ಎಂಬ ವಸ್ತುಸ್ಥಿತಿಯನ್ನು ಹೇಳಿ ಅದನ್ನು ನಿವಾರಣೆ ಮಾಡುವ ಮಾರ್ಗವನ್ನು ತೋರಿಸಿದರೆ, ಅದು ನಿರಾಶಾವಾದ ಹೇಗೆ ಆಗುತ್ತದೆ ? ಬೌದ್ಧರು ನಿರಾಶಾವಾದಿಗಳಾಗಿದ್ದರೆ, ಜಪಾನ್, ಚೀನಾ, ಕೋರಿಯ, ವಿಯಟ್‌ನಾಮ್ ಮುಂತಾದ ದೀರ್ಘ ಬೌದ್ಧ ಭೂಮಿಕೆಯುಳ್ಳ ದೇಶಗಳು ಅಷ್ಟೊಂದು ಪ್ರಗತಿಯನ್ನು ಹೇಗೆ ಸಾಧಿಸುತ್ತಿದ್ದವು ? 'ವಿಯಟ್‌ನಾಮು'ವಂತಹ ಒಂದು ಸಣ್ಣ ದೇಶ ಅತಿ ಬಲಾಢ್ಯ ರಾಷ್ಟ್ರವನ್ನು ಅಪ್ರತಿಮ ಧೈರ್ಯದಿಂದ ಬಲಿದಾನದಿಂದ ಹೇಗೆ ಅನೇಕ ವರ್ಷಗಳ ಕಾಲ ಎದುರಿಸಿ, ಜಯಿಸಿ, ಇತಿಹಾಸವನ್ನೇ ನಿರ್ಮಿಸುತ್ತಿತ್ತು ? ಜಪಾನ್ ದೇಶದ ಅನುಪಮ ಉನ್ನತಿ ಸಾಧನೆಯಲ್ಲಿ ಕೆಲವು ಬೌದ್ಧ ತತ್ವಗಳ ಆಚರಣೆಯ ಪಾತ್ರ ದೊಡ್ಡದು ಎಂಬುದು ಸ್ಪಷ್ಟ. ಬೌದ್ಧ ಮಾರ್ಗ ಸಮನ್ವಯದ್ದು. ಅಹಿಂಸೆಯ ವಿಷಯದಲ್ಲಿಯೂ ಸಹ ಅದು ಅತಿರೇಕಕ್ಕೆ ಎಂದೂ ಹೋಗಿಲ್ಲ. ಧರ್ಮದ ಹೆಸರಿನಲ್ಲಿ ಯಜ್ಞಯಾಗಾದಿಗಳ ಮೂಲಕ ನಿಷ್ಕಾರಣವಾಗಿ ಪ್ರಾಣಿಗಳ ಬಲಿ ಕೊಡುವುದಕ್ಕೆ, ವಿನೋದಕ್ಕಾಗಿಯೇ ಮೃಗಯಾ ವಿಹಾರ ಮಾಡು-ವುದಕ್ಕೆ ಅದರ ವಿರೋಧ ಇದಲ್ಲದೆ, ಇನ್ನೊಂದು ತಪ್ಪು ಕಲ್ಪನೆಯೂ ಇದೆ. ಬೌದ್ಧ ಧರ್ಮದ ಪ್ರಸಾರದಿಂದ ಭಾರತ ನಿರ್ಬಲವಾಗಿ ವಿದೇಶೀ ಆಕ್ರಮಣಗಳಿಗೆ ಗುರಿ-

ಯಾಯಿತೆಂದು ತಿಳಿಯದೆಯೋ ಅಥವಾ ಉದ್ದೇಶ ಪೂರ್ವಕವಾಗಿಯೋ ಕೆಲವರು ಬರೆದಿದ್ದುಂಟು. ನುಡಿದದ್ದುಂಟು. ಈ ಮೊದಲೇ ಹೇಳಿದಂತೆ, ಬೌದ್ಧ ಧರ್ಮ ಅಹಿಂಸೆಯ ಅತಿರೇಕಕ್ಕೂ ಹೋಗಿಲ್ಲ, ಮತ್ತಾವ ಅತಿರೇಕವೂ ಅದಕ್ಕೆ ಮಾನ್ಯವಿಲ್ಲ. ಬೌದ್ಧ ಧರ್ಮ ಭಾರತದಲ್ಲಿ ಲುಪ್ತಪ್ರಾಯವಾದ ಮೇಲೆ, ಬಹಳ ಶತಮಾನಗಳ ವರೆಗೆ, ೧೯ನೆಯ ಶತಮಾನದವರೆಗೂ ಭಾರತೀಯರು ಪರಕೀಯರಿಗೆ ಸೋತು, ದಾಸ್ಯವನ್ನು ಏಕೆ ಅನುಭವಿಸಿದರು ? ಈ ದೀರ್ಘ ದಾಸ್ಯವೇ ಒಂದು ವಿಶ್ವ ದಾಖಲೆ! ಬೌದ್ಧ ಧರ್ಮ ಭಾರತದಲ್ಲಿ ಇದ್ದಾಗಲೂ ಸಂಪ್ರದಾಯಸ್ಥರು ಜಾತೀಯತೆಯ ಜಾಡ್ಯವನ್ನು ಬಿಟ್ಟದ್ದಿಲ್ಲ. ಹಿಂದೂಗಳಲ್ಲಿ ಸ್ನಿಗ್ಧ ಭ್ರಾತೃಭಾವನೆ, ಐಕ್ಯತೆಯ ಭಾವನೆಯ ಅತೀವ ಅಭಾವವಿತ್ತು; ಈ ಅಭಾವ ಇನ್ನೂ ಕೆಲ ಮಟ್ಟಿಗೆ ಇದೆ. ಅನೇಕಾನೇಕ ಜಾತಿ–ಉಪಜಾತಿಗಳಿಂದ, ಸಾಮಾಜಿಕ ಅಸಮಾನತೆಯಿಂದ, ಮೇಲು ಕೀಳೆಂಬ ತೀವ್ರ ಭಾವನೆಗಳಿಂದ, ಪರಸ್ಪರ ವೈಷಮ್ಯಗಳಿಂದ ಅವರು ಛಿದ್ರವಿಚ್ಛಿದ್ರ-ರಾಗಿ, ಅವರಲ್ಲಿ ನೈತಿಕ ಶಕ್ತಿ ಕುಗ್ಗಿ ಹೋಗಿತ್ತು. ಸಮಾನ ಸಾಮಾಜಿಕ ಧ್ಯೇಯ, ಅದಕ್ಕಾಗಿ ಸಾಕಷ್ಟು ಸಮೀಕೃತ ಪ್ರಯತ್ನವಿರಲಿಲ್ಲ. ದೇಶಕ್ಕೆ ವಿಪತ್ತು ಬಂದಾಗಲೂ, ಅದನ್ನು ಎದುರಿಸುವುದು ಒಟ್ಟು ಸಮಾಜದ ಏಕನಿಷ್ಠ ಕರ್ತವ್ಯವೆಂಬ ಭಾವನೆ, ಕ್ರಿಯೆ ಇರಲಿಲ್ಲ. ವಿಚ್ಛಿದ್ರಕಾರಿ ಜಾತೀಯತೆಯ ಈ ವಿಶ್ವದಾಖಲೆಯೇ ಭಾರತದ ಪಾರತಂತ್ರ್ಯದ ವಿಶ್ವದಾಖಲೆಗೂ ಕಾರಣವಾಯಿತು.

ತನ್ಹಾ, ತೃಷ್ಣೆ ಅಂದರೆ ಅತಿ ಆಶೆ, ದುರಾಶೆ, ಇತರರ ಹಿತಕ್ಕೆ ಹಾನಿ ತರುವ ಸ್ವಾರ್ಥ, ತನ್ನ–ತಮ್ಮ ಆಶೆಗಳ ತೃಪ್ತಿಗಾಗಿ ಇತರರನ್ನು ಬಲಿಗೊಡುವ ದಾಹ. ಇದೇ ತನಗೆ ಮತ್ತು ಸಮಾಜಕ್ಕೆ ದುಃಖ ಪರಂಪರೆಯನ್ನು ತರುವ ಮುಖ್ಯ ಕಾರಣ. ಇದನ್ನು ತಿಳಿದು. ವ್ಯಕ್ತಿ ಮತ್ತು ಸಮಾಜದ ಸಮನ್ವಯ ಹಿತ ಮತ್ತು ವಿಕಾಸಕ್ಕಾಗಿ ಸಮ್ಯಕ್ ವಿಚಾರ (ಸಂಕಲ್ಪ), ಸಮ್ಯಕ್ ದೃಷ್ಟಿ, ಸಮ್ಯಕ್ ವಚನ, ಸಮ್ಯಕ್ ಕ್ರಿಯೆ, ಸಮ್ಯಕ್ ಪ್ರಯತ್ನ, ಸಮ್ಯಕ್ ಜೀವನ, ಸಮ್ಯಕ್ ಎಚ್ಚರಿಕೆ, ಸಮ್ಯಕ್ ಧ್ಯಾನದ ಮಾರ್ಗವನ್ನು ಅನುಸರಿಸಬೇಕೆಂದು ಬುದ್ಧ ಬೋಧಿಸಿದ. ವಿಶ್ವವಿಶಾಲ ದೃಷ್ಟಿಯ ಬೌದ್ಧ ಪ್ರಣಾಲಿಯ ಇತರ ಅನೇಕ ಗಹನ ತಾತ್ವಿಕ ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಲು ಸಮಯ-ಸಂದರ್ಭ ವಿಲ್ಲ. ಇಡೀ ಮಾನವ ಕುಲದ ಉದಾತ್ತ ವಿಚಾರಗಳನ್ನು, ಸಾಧನೆಗಳ ಉತ್ತಮಾಂಶಗಳನ್ನು ಕ್ರೋಢೀಕರಿಸಿ, ಗ್ರಹಿಸಿ ವಿಜ್ಞಾನ ಮತ್ತು ಅಧ್ಯಾತ್ಮಿಕತೆ (ಪಾರಮಾರ್ಥಿಕತೆ) ಯ ಸಮ್ಮಿಳನಕ್ಕೆ ಪ್ರಯತ್ನಿಸುವುದು ಶ್ರೇಯಸ್ಕರ. ಬೌದ್ಧ ಪರಂಪರೆಯ ಸಮನ್ವಯ ದೃಷ್ಟಿ ಇದಕ್ಕೆ ದಾರಿ ತೋರಿಸಿದೆ.

ನಹಿ ವೇರೇನ ವೇರಾನಿ ಸಮ್ಮಂತಿಧ ಕದಾಚನಮ್ । ಅವೇರೇನ ಚ ಸಮ್ಮಂತಿ ಏಸ ಧಮ್ಮೋ ಸನಾತನೋ ವೈರವುವೈರದಿಂದ ಎಂದೂ ಶಮನವಾಗುವುದಿಲ್ಲ=ಅವೈರ

ದಿಂದಲೇ ವೈರ ಶಮನವಾಗುತ್ತದೆ, ಇದು ಸನಾತನವಾದ ನಿಯಮ; ಅಂದರೆ ವೈರ ಸಾಧಿಸಿದರೆ ವಿಷ ವರ್ತುಲ ಉಂಟಾಗುತ್ತದೆ; ಆದ್ದರಿಂದ ವೈರವನ್ನು ಮೈತ್ರಿಯಿಂದ ಗೆಲ್ಲಬೇಕು. ನತ್ಥಿ ರಾಗ ಸಮೋ ಅಗ್ಗಿ, ನತ್ಥಿ ದೋಷ ಸಮೋ ಕಲಿ = ಅತಿ ಆಶೆಗೆ ಸಮನಾದ ಬೆಂಕಿ ಇಲ್ಲ, ದ್ವೇಷಕ್ಕೆ ಸಮನಾದ ಅಪರಾಧವಿಲ್ಲ. ತಥಾಗತನು ಕೊಟ್ಟ ಈ ಎಚ್ಚರಿಕೆಯನ್ನು ಗಮನಿಸಿ, ಯಾರೂ, ಯಾವ ಸಂದರ್ಭವಲ್ಲೂ ದ್ವೇಷ ಭಾವ ನೆಗೆ ಎಡೆ ಮಾಡಿಕೊಡಬಾರದು.

ಭಾರತದ ಸಾಮಾಜಿಕ–ಧಾರ್ಮಿಕ ಚರಿತ್ರೆಯಲ್ಲಿ ಬುದ್ಧ–ಬಸವಣ್ಣ–ಬಾಬಾ ಸಾಹೇಬರು ಈ ತ್ರಿಮೂರ್ತಿಗಳ ಪಾತ್ರ ವಿಶಿಷ್ಟವಾದದ್ದು. ಆಧುನಿಕ ಕಾಲದಲ್ಲಿ, ಇತಿಹಾಸ–ನಿರ್ಮಾಪಕ ಬಾಬಾಸಾಹೇಬರಿಂದ ಭಾರತಕ್ಕೆ, ಇಡೀ ಮಾನವ ಕುಲಕ್ಕೆ ಮಹದುಪಕಾರವಾಗಿದೆ. ಬುದ್ಧ–ಬಸವರ ಸಂದೇಶಗಳನ್ನು ಅವರು ಪುನರುಜ್ಜೀವನ ಗೊಳಿಸಿದ್ದಾರೆ. ತುಲನಾತ್ಮಕವಾಗಿ ಹೇಳುವುದಾದರೆ, ಕರ್ನಾಟಕದಲ್ಲಿ ದಲಿತರ ಬಗ್ಗೆ ಹೆಚ್ಚು ಸಹಾನುಭೂತಿ ಇದೆ. ಇದು ಕೆಲಮಟ್ಟಿಗಾದರೂ ಸಮಾಧಾನಕರ ಸಂಗತಿ. ಅಂಬೇಡಕರ ರಸ್ತೆಗಳು, ಅಂಬೇಡ್ಕರ್ ಮೂರ್ತಿಗಳು, ಅಂಬೇಡ್ಕರ್ ವಿದ್ಯಾ ಸಂಸ್ಥೆ ಗಳು ಅವರಿಗೆ ಪ್ರಿಯವಾದ ಸಿದ್ಧಾರ್ಥ,ಆನಂದ ಪ್ರಿಯದರ್ಶಿ, ಮಿಲಿಂದ ಮುಂತಾದ ಹೆಸರುಗಳ ಶಾಲಾ ಕಾಲೇಜುಗಳು ಕರ್ನಾಟಕ ಅನೇಕ ಕಡೆಗಳಲ್ಲಿ ಇವೆ. ಇವಲ್ಲದೆ, ಕಾರಣ ಪುರುಷ ಬಾಬಾಸಾಹೇಬರ ಅನುಪಮ ಸೇವೆಯನ್ನು, ಅವರ ಹಿರಿ ಮೆಯ ಮರ್ಮವನ್ನು ಎಲ್ಲ ವಿಶ್ವವಿದ್ಯಾಲಯಗಳಿಗಿಂತ ಹೆಚ್ಚಾಗಿ, ಕರ್ನಾಟಕ ವಿಶ್ವವಿದ್ಯಾಲಯವು ಅರ್ಥ ಮಾಡಿಕೊಂಡು, ನಿರ್ದಿಷ್ಟ ಕಾರ್ಯ ಕೈಕೊಂಡಿವೆ ಎಂಬುದಕ್ಕೆ, ಭಾರತದಲ್ಲಿಯೇ ಪ್ರಥಮವಾಗಿ ಇಲ್ಲಿ ಈ ಅಂಬೇಡ್ಕರ್ ಸ್ಮಾರಕ ಪೀಠದ ಸ್ಥಾಪನೆಯೇ ಸಾಕ್ಷಿ. ಸಾಮಾಜಿಕ ಸಮಾನತೆಯ ಶರಣ ಆಂದೋಳನದ ಪರಂಪರೆಯಿಂದ ಇದಕ್ಕೆ ಪ್ರೇರಣೆ-ಸ್ಫೂರ್ತಿ ದೊರಕಿರಬೇಕು.

ದುರ್ಬಲ ವರ್ಗಗಳಿಗೆ ಸಾಮಾಜಿಕ ನ್ಯಾಯವನ್ನು ದೊರಕಿಸುವ ಸಮಸ್ಯೆ-ಗಳನ್ನು ಕುರಿತು ಈ ಪೀಠವು ಅಧ್ಯಯನ ಮತ್ತು ಸಂಶೋಧನೆ ಮಾಡುತ್ತಿರುವುದು ಸ್ತುತ್ಯ. ಜಾತ್ಯಾತೀತ ಅಂತರ್ ವಿವಾಹಗಳ ಅವಶ್ಯಕತೆ ಮತ್ತು ಅವರ ಸಮಸ್ಯೆಗಳ ಬಗ್ಗೆಯೂ ಪೀಠ ಗಮನ ಕೊಡಬಹುದು. ಅಂತರ್‌ವಿವಾಹದ ನಿಷೇಧ, ಅಭಾವವೇ ಜಾತೀಯತೆಗೆ, ಅದರ ಅತಿರೇಕವಾದ ಅಸ್ಪೃಶ್ಯತೆಗೆ ಮೂಲಾಧಾರ. ಇದು ಹೋಗದ ವಿನಾ ಜಾತೀಯತೆಯ ನಿವಾರಣೆ ಬರೀ ಕನಸು. ಉಳ್ಳವರು ದಲಿತರ ಮಕ್ಕಳ ವಿದ್ಯಾಭ್ಯಾಸಕ್ಕೆ ವಿವಿಧ ರೀತಿಗಳಲ್ಲಿ ನೆರವಾಗುವಂತೆ ಮನವೊಲಿಸುವ ಸಂಘಟಿತ ಪ್ರಯತ್ನವೂ ಅಗತ್ಯ. ಶತಮಾನಗಳ ಅನ್ಯಾಯವನ್ನು ತೊಳೆಯಲು, ಆತ್ಮೀಯ ಭಾವವನ್ನು ಕುದುರಿಸುವ ದಿಶೆಯಲ್ಲಿ ಇದು ನೆರವಾಗಬಲ್ಲದು. ಮೂಲ

ಬೌದ್ಧ ಸಾಹಿತ್ಯವು ದೊಡ್ಡ ಪ್ರಮಾಣದಲ್ಲಿ ಪಾಲಿ ಭಾಷೆಯಲ್ಲಿ ಇದೆ. ಬೌದ್ಧ ಸಂಸ್ಕೃತಿಯನ್ನು ಪರಂಪರೆಯನ್ನು ಮೂಲದಿಂದಲೇ ತಿಳಿದುಕೊಳ್ಳಲು ಪಾಲಿ ಭಾಷೆಯ ಅಧ್ಯಯನ ಅವಶ್ಯಕ. ಆದ್ದರಿಂದ, ಕರ್ನಾಟಕ ವಿಶ್ವವಿದ್ಯಾಲಯವು ಪಾಲಿಯ ಪಾಠ ಪ್ರವಚನಕ್ಕೆ ಸೂಕ್ತ ಏರ್ಪಾಡು ಮಾಡಬೇಕು. ಅದನ್ನು ಕಲಿಯಲು ಪ್ರೋತ್ಸಾಹ ನೀಡಬೇಕು.

ಸಮಾಜಕ್ಕೆ ನೇರವಾಗಿ ಅಗತ್ಯವೂ, ಉಪಯೋಗಕರವೂ ಆದ ರಚನಾತ್ಮಕ ಸೇವೆ ಸಲ್ಲಿಸುತ್ತಿರುವ ಡಾ॥ ಬಾಬಾಸಾಹೇಬ ಅಂಬೇಡ್ಕರ್ ಸ್ಮಾರಕದ ಈ ಸಾರಸ್ವತ ಪೀಠ ಇಡೀ ಭಾರತಕ್ಕೆ ಒಂದು ದೊಡ್ಡ ಉದಾಹರಣೆ, ಆದರ್ಶಪ್ರಾಯ. ಇದಕ್ಕಾಗಿ, ವಿಶ್ವವಿದ್ಯಾಲಯವನ್ನು, ಈ ಪೀಠದ ಮುಖ್ಯಸ್ಥರಾದ ಪ್ರಾಧ್ಯಾಪಕ ಡಾ॥ ರಾಜಶೇಖರಯ್ಯನವರನ್ನು, ಅವರ ಸಹೋದ್ಯೋಗಿಗಳನ್ನು ಮನಸಾರೆ ಅಭಿನಂದಿಸುತ್ತೇನೆ. ಇದನ್ನು ಅಭಿವೃದ್ಧಿಪಡಿಸುವುದಕ್ಕೆ ಎಲ್ಲ ಸ್ರೋತಗಳಿಂದಲೂ ಉತ್ತೇಜನ ದೊರಕಬೇಕು. ಇದು ಬರುವ ವರ್ಷಗಳಲ್ಲಿ ಬೆಳೆದು ಹೆಮ್ಮರವಾಗಲಿ. ಬೋಧಿಸತ್ವ ಬಾಬಾ ಸಾಹೇಬರನ್ನು ವಿಶೇಷವಾಗಿ ಸ್ಮರಿಸುವ ಅವರ ಜನ್ಮದಿನದ ಈ ಸಮಾರಂಭದಲ್ಲಿ ತಮ್ಮೆಲ್ಲರ ಜೊತೆಗೆ ಸೇರಿ, ಇದರಲ್ಲಿ ಭಾಗವಹಿಸುವುದಕ್ಕೆ, ಕೆಲವು ವಿಚಾರಗಳನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ಮಾಡಿಕೊಟ್ಟ ಪೀಠದ ಅಧಿಕಾರಿಗಳಿಗೆ ಕೃತಜ್ಞನಾಗಿದ್ದೇನೆ. ತಾಳ್ಮೆಯಿಂದ, ಈ ನಾಲ್ಕು ಮಾತುಗಳನ್ನು ಕೇಳಿದ ತಮಗೆಲ್ಲ ನಮಿಸುತ್ತೇನೆ. ಧನ್ಯವಾದ.

ನಮೋ ತಸ್ಸ ಭಗವತೋ ಸಮ್ಮಾಸಮ್ ಬುದ್ಧಸ್ಸ ।

●

ಕಲಾವಿದ ಡಿ. ವ್ಹಿ. ಹಾಲಭಾವಿ*

● ಎಸ್. ಸಿ. ಪಾಟೀಲ

"ಸಾಹಸ ಜೀವಿಗಳು ಪ್ರಸಂಗಕ್ಕೆ ಹೆದರದೆ ಮುನ್ನುಗ್ಗುತ್ತಿರುವದು ಸಹಜ. ಇಂತಹ ವ್ಯಕ್ತಿಗಳು ತಮ್ಮ ಜೀವನದ ಸಂಕಲ್ಪ ಸಾಧನಗಳಿಂದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದುಂಟು. ಇವರಿಗೆ ಜೀವನವು ಒಂದು ಹೋರಾಟದ ಕ್ಷೇತ್ರವಾಗುವುದು; ಸೋಲುಗೆಲುವುಗಳು ಅಂತಿಮವಾಗಿರುವದಿಲ್ಲ. ಸಂಕಲ್ಪಸಾಧನಗಳೇ ಪ್ರಾಶಸ್ತ್ಯವಾಗಿರುವವು". ಇಂತಹ ಸಾಹಸ ಜೀವಿಗಳ ಸಾಲಿನಲ್ಲಿ ಕಲಾವಿದ ಶ್ರೀ ಡಿ. ವ್ಹಿ. ಹಾಲಭಾವಿಯವರಿಗೆ ಒಂದು ವಿಶಿಷ್ಟ ಸ್ಥಾನವಿದೆ. ಕಲೆಗಾಗಿಯೇ ತಮ್ಮನ್ನು ಅರ್ಪಿಸಿಕೊಂಡ ಅವರು ತಾವು ಬದುಕಿ ಬೆಳೆಯುವುದರೊಂದಿಗೆ ಚಿತ್ರಕಲೆಯನ್ನೂ ಬೆಳೆಸಿ ಶ್ರೀಮಂತಗೊಳಿಸಿದರು. ಅವರ ಬದುಕಿನ ವಿವಿಧ ಮುಖಗಳ ಸ್ಥೂಲ-ಪರಿಚಯವನ್ನು ತಿಳಿಸುವುದು ಈ ಲೇಖನದ ಉದ್ದೇಶ.

ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಧಾರವಾಡಕ್ಕೊಂದು ವಿಶೇಷ ಪ್ರಾಮುಖ್ಯತೆಯಿದೆ. "ಕಣ್ಮನ ಸೆಳೆಯುವ ಹಸಿರುಗಿಡಗಳ ಪೊದೆಯ ಮರೆಯಲ್ಲಿ ಕಾಜಾಣಕೋಗಿಲೆಗಳ ಇಂಚರ, ಕವಿಹೃದಯ ಬಡಿದೆಬ್ಬಿಸಿ ನೂರಾರು ಸುಂದರ ಕಾವ್ಯಸೃಷ್ಟಿಗೆ ಕಾರಣವಾಗಿದ್ದರೆ, ಸಂಜೆ ರವಿಯ ಹೊಂಗಿರಣ, ಮತ್ತು ಬರಿಸುವ ಕೆಂಬಣ್ಣ, ನೂರಾರು ಸುಂದರ ಕನಸುಗಳು ಕ್ಯಾನವಾಸಿನಲ್ಲಿ ರೂಪುಗೊಳ್ಳುವಂತೆ ಮಾಡಿವೆ.[೧] ಈ ವಾತಾವರಣದಲ್ಲಿ ಕನಸುಗಾರ, ಪ್ರಕೃತಿ ಪ್ರಿಯ ಹಾಲಭಾವಿಯವರ ಬದುಕು ಇಂದು ಹೆಮ್ಮರವಾಗಿ ಬೆಳೆದುನಿಂತಿದೆ.

ಬಾಲ್ಯ :

ಹಾಲಭಾವಿ ದಾನಪ್ಪನವರು ನವ್ಹಂಬರ ಇಪ್ಪತ್ತೆಂಟು ಹತ್ತೊಂಬತ್ತನೂರಾ ಏಳರಂದು ಧಾರವಾಡದಲ್ಲಿ ಜನ್ಮತಾಳಿದರು. ತಾಯಿ ಚನ್ನಬಸಮ್ಮ, ತಂದೆ ವೀರಭದ್ರಪ್ಪನವರು. ಇವರು "ಎಂಬತ್ತು ವರ್ಷಗಳ ಹಿಂದೆ ಒಂದನೆಯ ವರ್ಗದ ನ್ಯಾಯಾಧೀಶರಾಗಿ ಕನ್ನಡ ನಾಡು-ನುಡಿ, ಇತಿಹಾಸ, ಧರ್ಮ, ಸಾಹಿತ್ಯ, ಸಂಸ್ಕೃತಿಗಳನ್ನು ನ್ಯಾಯಸಮ್ಮತವಾಗಿ ಉಳಿಸಲು ಮತ್ತು ಬೆಳೆಸಲು ಅವಿರತಶ್ರಮಿಸಿ ಅಚ್ಚಳಿ

---

* ಈ ಲೇಖನ ಬರೆಯುವಾಗ ಸಲಹೆ ಸೂಚನೆಗಳನ್ನು ಕೊಟ್ಟು ಮಾರ್ಗದರ್ಶನ ಮಾಡಿದ ಡಾ. ಬಿ. ಆರ್. ಹಿರೇಮಠ ಅವರಿಗೆ ಕೃತಜ್ಞತೆಗಳು.

೧. ಬಿ. ಶ್ರೀವಲ್ಲಭ ದೇಸಾಯಿ 'ಕನಸುಗಾರ ಕಲಾಗುರು ಹಾಲಬಾವಿ' "ನವನಾಡು" ದಿನಪತ್ರಿಕೆ ೩೦-೬-೧೯೮೫ ನೋಡಿ.

ಯದ ಕೀರ್ತಿಯನ್ನು ಗಳಿಸಿಕೊಂಡು ಕಣ್ಮರೆಯಾದ ವೀರಶೈವ ಪುಣ್ಯಪುರುಷ[1]ರಾಗಿದ್ದಾರೆ. ಶರಣ ಸಂಸ್ಕೃತಿಯ ಮನೆತನದಲ್ಲಿ ದ್ವಿತೀಯ ಪುತ್ರರಾಗಿ ಹುಟ್ಟಿದ ದಾನಪ್ಪನವರು ತಂದೆ ತಾಯಿಗಳ ಅಕ್ಕರೆಯ ಮಗನಾಗಿ ಬೆಳೆದರು. ಎಷ್ಟೋ ಜನ ಪ್ರಸಿದ್ಧ ಕಲಾವಿದರ ಜನನ ಸಾಮಾನ್ಯವಾಗಿ ತುಂಬ ಕಡುಬಡತನದಲ್ಲಾದರೆ ಹಾಲಭಾವಿಯವರ ಜೀವನ ಅದಕ್ಕೆ ತದ್ವಿರುದ್ಧವಾಗಿದೆ.

ದಿವಂಗತ ವೆಂಕಟರಂಗೋ ಕಟ್ಟಿಯವರ ಮನೆ ದಿವಂಗತ ಶಾಂತವೀರರಾಚಿ–ದೇವ ಕಿತ್ತೂರ ಇವರ ಚಿರಂಜೀವರ ವೈದ್ಯಶಾಲೆ; ಕನ್ನಡ ಕವಿಗಳಿಗೆ 'ಪ್ರಭಾತ', 'ಜಯ ಕರ್ನಾಟಕ', 'ಸ್ವಧರ್ಮ', ಒದಗಿಸಿದ ಯಶವಂತ ಉರ್ಫ ಬಳವಂತರಾವ ಜಠಾರ ಇವರ ನಿವಾಸ, ಮುದ್ರಣಾಲಯ ಅದರ ನೆರೆಯಲ್ಲಿ ದಿವಂಗತ ಮುದವೀಡು ಕೃಷ್ಣರಾಯರ ಕರ್ನಾಟಕ ದಿನಪತ್ರಿಕೆಯ ಕಾರ್ಯಾಲಯ ಮುಂದೆ ದಿವಂಗತ ಸಾವಕಾರರ ಕಛೇರಿ, ಅದರ ಮುಂದೆ ದಿವಂಗತ ಕಬ್ಬೂರ ಮಧ್ವರಾಯರ ರಾಜ–ನೈತಿಕ ಆಶ್ರಮ ಇದಕ್ಕೆ ಹತ್ತಿರ ಗರಗ ಸಿದ್ಧಲಿಂಗಪ್ಪನವರ ಮನೆ, ನಾಟಕ ಶಾಲೆ. ಈ ವಯಸ್ಸಿನಲ್ಲೂ ನನ್ನ ಕಣ್ಣೆದರು ಒಂದು ಅಗ್ರಹಾರದಂತೆ, ಈ ಬಿಡಾರಗಳ ಗುಂಪು ದೊಡ್ಡಾಟದ ಪಾತ್ರಗಳಂತೆ ಕುಣಿದಾಡುತ್ತದೆ. ಕಲಾಕಾರ ದಾನಪ್ಪನವರ ಬಾಲ್ಯವು ಈ ಪರಿಸರದಲ್ಲಿ ಕಳೆಯಿತು.[2] ಎಂದು ದ. ರಾ. ಬೇಂದ್ರೆಯವರು ತಮ್ಮ ಒಂದು ಲೇಖನದಲ್ಲಿ ಬರೆದಿದ್ದಾರೆ. ದಾನಪ್ಪನವರ ಬಾಲ್ಯಜೀವನ ಸುಸಂಸ್ಕೃತ ವ್ಯಕ್ತಿ-ಗಳ ಪರಿಸರದಲ್ಲಿ ಪ್ರಫುಲ್ಲಿತವಾಗಿ ಪಲ್ಲವಿಸಿತು.

ಬೆಳೆಯ ಸಿರಿ ಮೊಳಕೆಯಲ್ಲಿ :

ಇಂಗ್ಲೀಷನ್ನು ಕಲಿತು ಪದವೀಧರನಾಗಿ ಒಳ್ಳೆಯ ನೌಕರಿಯನ್ನು ತಮ್ಮ ಮಗ ಮಾಡಬೇಕು ಎಂದು ಹಿರಿಯರು ಅಪೇಕ್ಷಿಸುತ್ತಿದ್ದ ಕಾಲ; ಡ್ರಾಯಿಂಗ, ಸಂಗೀತ ನಾಟಕ, ಸಾಹಿತ್ಯದಂತಹ ಕಲೆಗಳಿಗೆ ಸಮಾಜದಲ್ಲಿ ವಿಶೇಷ ಮನ್ನಣೆ ಇರದಿದ್ದ ಪರಿಸರ; ಅಂಥವರಲ್ಲಿ ಸಾಂಪ್ರದಾಯಿಕ ಮೌಲ್ಯಗಳನ್ನು ಪ್ರತಿಭಟಿಸಿ ಕುಂಚಕ್ಕೆ ಮಾರುಹೋಗಿ ಅದರೊಂದಿಗೆ ನಂಟುತನ ಬೆಳೆಯಿಸಿಕೊಂಡು. ಸೃಷ್ಟಿಯ ನಲಿವಿನ ನಿಗೂಢತೆಯನ್ನು ಅರಸುವ ದೃಢ ಹಂಬಲದ ಚಿತ್ರಕಾರನಾಗಿ ಮುಂದುವರಿಯುವ ಹಟತೊಟ್ಟರು ಹಾಲಭಾವಿಯವರು. ಚಿಕ್ಕಂದಿನಿಂದಲೂ ಇವರಿಗೆ ಚಿತ್ರಕಲೆ ಪಂಚ ಪ್ರಾಣ. ಯಾವಾಗಲೂ ಚಿತ್ರರಚನೆಯಲ್ಲಿ ಮಗ್ನನಾಗುತ್ತಿದ್ದ ಹಾಲಭಾವಿಯವರು. ತಂದೆಯವರಿಂದ ಹೊಡೆತತಿಂದರು. ಇವರ ಹಟಮಾರಿತನಕ್ಕೆ ಕೊನೆಗೂ ಜಯ

---

೧. ಡಾ. ವೀರಣ್ಣ ರಾಜೂರ "ಹಾಲಭಾವಿ ವೀರಭದ್ರಪ್ಪನವರು" ಪುಟ ೧.

೨. ದ. ರಾ. ಬೇಂದ್ರೆ 'ಕಲಾಚಾರ್ಯ ಶ್ರೀ ದಾನಪ್ಪ ವೀರಭದ್ರಪ್ಪ ಹಾಲಭಾವಿ' "ಅರವತ್ತರ ಒಸಗೆ" ಗೌರವಗ್ರಂಥ. ಪುಟ ೫, ಧಾರವಾಡ ೧೯೬೮

ಸಿಕ್ಕಿತು. ನ್ಯಾಯಾಧೀಶ ತಂದೆಯವರ ನಿಷ್ಪಕ್ಷಪಾತವಾದ ನ್ಯಾಯ ದಾನಪ್ಪನವರಿಗೆ ಆದ ಹರ್ಷ ಅಷ್ಟಿಷ್ಟಲ್ಲ.

ಮನೆಯೇ ಮೊದಲ ಪಾಠಶಾಲೆ :

ಹಾಲಭಾವಿ ದಾನಪ್ಪನವರಿಗೆ ಮನೆಯೇ ಮೊದಲ ಪಾಠಶಾಲೆ. ಅವರ ತಂದೆಯವರೇ ಇವರಿಗೆ ಶಿಕ್ಷಕರಾಗಿ ಮನೆಯಲ್ಲಿ ವಿದ್ಯಾಭ್ಯಾಸ ಮಾಡಿಸಿದರು. ಶಿಸ್ತಿನ ಶಿಪಾಯಿಯಾಗಿದ್ದ ಇವರ ತಂದೆ ಕಲಿಸುವಾಗ ಮಮತೆ. ಮೋಹಗಳನ್ನು ಬದಿಗಿರಿಸಿ ಇವರನ್ನು ದಂಡಿಸಿ ಅಚ್ಚುಕಟ್ಟಾಗಿ ಬೆಳೆಯಲು, ಜಾಣರೆನಿಸಿಕೊಳ್ಳುವಂತೆ ಮಾಡಲು ತುಂಬಾಶ್ರಮಪಟ್ಟರು. ಕನ್ನಡ ಶಾಲೆಯನ್ನು ಇವರು ಹತ್ತಲೇ ಇಲ್ಲ. ಆಗಿನ ಕಾಲದ ಶಿಕ್ಷಣದ ಪರಿಸ್ಥಿತಿಯೇ ಹಾಗಿತ್ತು. ತಮ್ಮ ೫೦ನೆಯ ವಯಸ್ಸಿನಲ್ಲಿ ಎಸ್. ಎಸ್. ಸಿ ಪರೀಕ್ಷೆಯನ್ನು ೧೯೫೭ರಲ್ಲಿ ಮುಗಿಸಿದರು. ಅವರ ೬೦ನೆಯ ವಯಸ್ಸಿನಲ್ಲಿ ಬಿ. ಎ. ಪ್ರಥಮವರ್ಷದ ಪರೀಕ್ಷೆಯನ್ನು ೧೯೭೪ರಲ್ಲಿ ಪಾಸಾಗಿದ್ದಾರೆ. ಹಾಲಭಾವಿಯವರ ಕಲಿಕೆಯು ತಡವಾಗಿ ಆಗಲು ಚಿತ್ರಕಲೆಯ ಕಡೆಗೆ ಇದ್ದ ಒಲವೇ ಇದಕ್ಕೆ ಕಾರಣವಾಗಿದೆ.

ಕಲಾ ಶಿಕ್ಷಣ :

ದಾನಪ್ಪನವರಿಗೆ ಕಲಾಶಿಕ್ಷಣದ ಮೊದಲ ಗುರು ಹೊನ್ನಾವರದ ದಾಸ ಪೈ. ಈ ಕಲಾಗುರುವಿನ ಸಂಪರ್ಕ, ಸಂಸ್ಪರ್ಶಗಳಿಂದ ಚಿತ್ರಕಲೆಯ ಗೀಳು ಇನ್ನಷ್ಟು ಗಾಢವಾಯಿತು. ೧೯೧೭ರಲ್ಲಿ ಎಲೆಮೆಂಟರಿ ಡ್ರಾಯಿಂಗ ಗ್ರೇಡ ಪರೀಕ್ಷೆ, ೧೯೭೩ರಲ್ಲಿ ಇಂಟರಮಿಡಿಯೇಟ ಡ್ರಾಯಿಂಗ ಗ್ರೇಡ ಪರೀಕ್ಷೆಯನ್ನು ಬೆಳಗಾಂವದಲ್ಲಿ ಮುಗಿಸಿದರು. ಹೆಚ್ಚಿನವ್ಯಾಸಂಗಕ್ಕಾಗಿ ಮುಂಬಯಿಯ§ ಸರ್ ಜೆ. ಜೆ. ಸ್ಕೂಲ ಅಫ್ ಆರ್ಟ ಕಲಾಶಾಲೆಗೆ ಸೇರಿದರು. ಅಲ್ಲಿ ಡ್ರಾಯಿಂಗ ಶಿಕ್ಷಕರ ತರಬೇತಿ ಕೋರ್ಸನ್ನು, ಮತ್ತು ೧೯೩೫ರಲ್ಲಿ (ಕ್ಲಾಸಿಕಲ್) ಪೇಂಟಿಂಗ ಡಿಪ್ಲೋಮಾ ಪರೀಕ್ಷೆಯನ್ನು, ೧೯೩೬ರಲ್ಲಿ ಆರ್ಟಮಾಸ್ಟರ ಕಲಾ ಪರೀಕ್ಷೆಯನ್ನು ಉನ್ನತ ಶ್ರೇಣಿಯಲ್ಲಿ ಪಾಸಾದರು.

ಸಪ್ತವರ್ಣದ ಕನ್ನಡ ಗುಂಪು :

ಮುಂಬಯಿಯಲ್ಲಿ ಕಲಾಭ್ಯಾಸಮಾಡುವಾಗ ಅವರ ಸಹಪಾಠಿಗಳಾಗಿದ್ದ ಕಲಾವಿದ ದಂಡಾವತಿಮಠರವರು ತಮ್ಮ ವಿದ್ಯಾರ್ಥಿ ಜೀವನದ ಮಧುರ ನೆನಪು

---

§ ಹಾಲಭಾವಿಯವರ ಕಾಲದಲ್ಲಿ ಉನ್ನತ ಕಲಾಪರೀಕ್ಷೆಗಳು ಕರ್ನಾಟಕದಲ್ಲಿ ಆಗ ಇರಲಿಲ್ಲ. ಮುಂಬೈಯಿಂದ ಬಂದ ನಂತರ, ಹಾಲಬಾವಿಯವರು ಕರ್ನಾಟಕವಲ್ಲಿ ಪ್ರಥಮವಾಗಿ ಕಲಾಶಾಲೆಯನ್ನು ಪ್ರಾರಂಭಿಸಿ ಈ ಕೊರತೆಯನ್ನು ಹೋಗಲಾಡಿಸಿದರು.

ಗಳನ್ನು ತಮ್ಮ ಲೇಖನವೊಂದರಲ್ಲಿ[೪] ಈ ರೀತಿ ವ್ಯಕ್ತಪಡಿಸಿದ್ದಾರೆ : "ಮುಂಬಯಿಯಲ್ಲಿ ಕರ್ನಾಟಕದವರೇ ಆದ ಶ್ರೀ ಗಂಗಾಧರಪ್ಪ ಸಾಬೋಜಿಯವರ ಉದಾರಾಶ್ರಯದಲ್ಲಿ ನಾನು ಮತ್ತು ಸಪ್ತವರ್ಣಗಳೆಂತಿದ್ದ[†] ನಮ್ಮ ಕನ್ನಡ ಗುಂಪು ಪ್ರತಿದಿನ ಸಂಜೆ ಊಟವಾದ ನಂತರ ಸಾಬೋಜಿಯವರ ಅಟ್ಟದ ಮೇಲೆ ಕೂಡುತ್ತಿದ್ದೆವು. ನಿತ್ಯವೂ ಕ್ಲಾಸಿನಲ್ಲಿ ನಡೆದ ಅಭ್ಯಾಸ. ಸುಖದುಃಖ ಚರ್ಚಿಸಿ ವಿನೋದದಿಂದ ಕಾಲ ಕಳೆಯುತ್ತಿದ್ದೆವು. ನಮ್ಮ ಕನ್ನಡ ಕಲಾವಿದರ ಅಚ್ಚುಮೆಚ್ಚಿನ ಗುಂಪನ್ನು ನೋಡಿ ಜನ ಆಶ್ಚರ್ಯಪಡುತ್ತಿದ್ದರು. ಸರ್. ಜೆ. ಜೆ. ಸ್ಕೂಲಿನ ನಿಯಮಕ್ಕನುಗುಣವಾಗಿ ಮನಸ್ಸುಗೊಟ್ಟು ಕಲಿಯುತ್ತಿದ್ದೆವು. ನಮಗೆ ಕಲಿಸತಕ್ಕ ಗುರುವರ್ಯರು ಸಹ ಅಂಥವರೇ. ಅವರ ಪೇಶ್ವೆ ಕಾಲದ ಪೇಟಾ. ಶೆಲ್ಲೆಯಜೋಡಿ. ಕಪ್ಪುಮಿಶ್ರಿತಕೋಟು, ದಪ್ಪಮೀಸೆಯ ಗಂಭೀರ ಮುಖಮುದ್ರೆಯನ್ನು ನೆನೆಸಿದರೆ ಸಾಕು ಭಯಭಕ್ತಿಯಿಂದ ಮಸ್ತಕವು ತಾನೇ ಬಾಗುತ್ತಿತ್ತು. ಯುರೋಪಿಯನ್ ಡೈರೆಕ್ಟರರಾದ ಕ್ಯಾಪ್ಟನ್ ಗ್ಲ್ಯಾಡಸ್ಟನ್ ಸಾಲೋಮನ್‌ರವರು ತುಂಬಾ ಶಿಸ್ತಿನವರು, ಉದಾರಿಗಳು, ಶ್ರೇಷ್ಠ ಕಲಾವಿದರೂ ಕೂಡ. ಅವರು ನಮ್ಮ ಕನ್ನಡ ಗುಂಪಿನ ಮೇಲೆ ಬಹಳ ಪ್ರೇಮವನ್ನಿರಿಸಿದ್ದರು. ಕರ್ನಾಟಕದವರೇ ಶ್ರೇಷ್ಠದರ್ಜೆಯ ಕಲಾವಿದರೆನ್ನುತ್ತಿದ್ದರು. ಅಷ್ಟೇ ಅಲ್ಲದೆ ದಿಲ್ಲಿಯ ರಾಷ್ಟ್ರಪತಿ–ಭವನದ ಗುಮ್ಮಟಗಳ ಮೇಲೆ ಚಿತ್ರಗಳನ್ನು ಚಿತ್ರಿಸಲು ಕನ್ನಡ ಕಲಾವಿದರನ್ನೇ ಆಯ್ಕೆ ಮಾಡಿ ಕರೆದೊಯ್ದಿದ್ದರು. ನಮ್ಮ ಗುಂಪಿನಲ್ಲಿ ಮಿಣಜಿಗಿಯವರು. ವಿನೋದಪ್ರಿಯರಾಗಿದ್ದರೆ, ಹಾಲಭಾವಿಯವರು ಮುಗ್ಧಶಾಂತ ಸ್ವಭಾವದವರಾಗಿದ್ದರು. ಒಬ್ಬ ಮಿತ್ರ ಹಾಲಭಾವಿಯವರನ್ನು ಯಾವಾಗಲೂ ಕಾಗೆ ಗುಬ್ಬಿ ಬರೆಯೋದಕ್ಕಿಂತ ಗಂಧರ್ವ ಕಂಪನಿಗಾದರೂ ಹೋಗಿ ಬರಬಾರದೆ ಅಂತ ಪೀಡಿಸುತ್ತಿದ್ದನು. ಈಗ ಅವನು ಹಾಲಭಾವಿಯವರ ಬೆಳವಣಿಗೆಯನ್ನು ಕಾಣಬೇಕು ಎಂದು ತಮ್ಮ ಲೇಖನದಲ್ಲಿ ಬರೆಯುತ್ತಾರೆ.

ಶಿಕ್ಷಕ ವೃತ್ತಿ :

ಇವರು ಚಿಕ್ಕೋಡಿಯ ಆರ್. ಡಿ. ವ್ಹಿ. ಸ್ಕೂಲಿನಲ್ಲಿ ಎರಡು ವರ್ಷ (೧೯೨೪ ರಿಂದ ೧೯೨೬ರ ವರೆಗೆ) ಕಲಾಶಿಕ್ಷಕರಾಗಿ ಸೇವೆ ಸಲ್ಲಿಸಿದರು. ಕೆಲವು ತಿಂಗಳು ನಿಪ್ಪಾಣಿಯ ಮುನ್ಸಿಪಲ್ ಹೈಸ್ಕೂಲಿನಲ್ಲಿ ಚಿತ್ರಕಲಾ ಶಿಕ್ಷಕರಾಗಿ ನೇಮಕಗೊಂಡಿ

---

೪. ಜಿ. ಎಸ್. ದಂಡಾವತಿಮಠ 'ಮಧುರ ನೆನಹುಗಳು' 'ಅರವತ್ತರ ಒಸಗೆ' ಪುಟ ೧೬-೧೮

†. ಸಪ್ತವರ್ಣಗಳೆಂದರೆ, ಇಲ್ಲಿ ಏಳು ಜನ ವರ್ಣಚಿತ್ರಕಾರರು. ೧. ಎಮ್. ವ್ಹಿ. ಮಿಣಜಗಿ, ೨. ಡಿ. ಜಿ. ಬಡಿಗೇರ, ೩. ಕಮತೊಳ್ಳಿ, ೪. ಎಮ್. ಎ. ಚಟ್ಟಿ, ೫. ಕರಡಗಿ ೬. ಶೆಣಾಯ್ ೭. ಹಾಲಭಾವಿ, ಇವರೆಲ್ಲ ಕರ್ನಾಟಕದ ಪ್ರಖ್ಯಾತ ಕಲಾವಿದರು.

ದ್ದರು. ೧೯೨೮ರಲ್ಲಿ ಅದೇ ವರ್ಷ ಆ ಹುದ್ದೆಯಿಂದ ಬಿಡುಗಡೆ ಹೊಂದಿದರು. ಈ ಹಂತದಲ್ಲಿ ಅವರು ಪಡೆದ ಅನುಭವ ಅಪಾರ, ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಶಿಕ್ಷಕರೆಂದು ಆಗಲೇ ಹೆಸರು ಪಡೆದಿದ್ದರು. ಹಾಲಭಾವಿಯವರ ತಂದೆಯವರ ಹತ್ತಿರ ಚಿಕ್ಕೋಡಿ ಶಾಲೆಯ ಹೆಡ್‌ಮಾಸ್ತರರು ಶಾಲೆಗೆ ದೇಣಗಿಯ ಸಂಗ್ರಹಕ್ಕೆಂದು ಬಂದು ಕೇಳಿದಾಗ ವೀರಭದ್ರಪ್ಪನವರು ದಾನಪ್ಪನವರನ್ನೇ ಎರಡು ವರ್ಷ ಪುಕ್ಕಟೆಯಾಗಿ ಸೇವೆ ಸಲ್ಲಿಸಲು ಕಳಿಸಿಕೊಟ್ಟರು.

ಕಷ್ಟದ ಕಾರ್ಮೋಡ :

ಹತ್ತೊಂಬತ್ತನೂರಾ ಇಪ್ಪತ್ತನಾಲ್ಕರಲ್ಲಿ ಹಾಲಭಾವಿಯವರಿಗೆ ಅವರ ಹದಿನೇಳನೆಯ ವಯಸ್ಸಿನಲ್ಲಿ ಮದುವೆಯಾಯಿತು. ಮುಂದೆ ನಾಲ್ಕು ವರ್ಷದಲ್ಲಿಯೇ ಇವರ ಪತ್ನಿ ನರ್ಮದಾ ಅವರು ಅಕಾಲಮೃತ್ಯುವಿಗೆ ತುತ್ತಾದರು. ಹೊಸ ಜೀವನದ ದಾಂಪತ್ಯ ಜೀವನದಲ್ಲಿ ಅವರಿಗೆ ಇದೊಂದು ದೊಡ್ಡ ಆಘಾತ. ಇದಾದ ಸ್ವಲ್ಪ ದಿನಗಳಲ್ಲಿಯೇ ತಾಯಿಯವರು ನಿಧನರಾದರು. ೧೯೨೮ ರಲ್ಲಾದ ಈ ದುರ್ಧರ ಪ್ರಸಂಗಗಳು ಅವರನ್ನು ಜರ್ಜರಿತರನ್ನಾಗಿಸಿದವು. ಈ ವಿಯೋಗದಿಂದ ಅವರಿಗೆ ಬರಸಿಡಿಲೆರಗಿದಂತಾಯಿತು. ಗಾಯದ ಮೇಲೆ ಗಾಯ ತಂದೆಯ ಧೈರ್ಯ ಸ್ಥೈರ್ಯಗಳಿಂದ ಅವರ ಬದುಕಿನಲ್ಲಿ ಮತ್ತೆ ವಸಂತದ ದಿನಗಳು ಉದಯಿಸಿದವು. ೧೯೩೨ ರಲ್ಲಿ ಸರ್ವಮಂಗಳಾ ಅವರೊಂದಿಗೆ ಎರಡನೆಯ† ಮದುವೆಯಾಯಿತು.

ಕಪ್ಪು ಕಾರ್ಮೋಡದಲ್ಲೊಂದು ಬೆಳ್ಳಿಯ ಚಿಕ್ಕೆ :

ಹಾಲಭಾವಿಯವರದು ಕ್ರಿಯಾಶೀಲ ಮನಸ್ಸು. ಸದಾ ಯಾವುದಾದರೊಂದು ಹೊಸದನ್ನು ಕುರಿತು ಚಿಂತನೆಯಲ್ಲಿ ತೊಡಗಿರುತ್ತಿದ್ದ ಅವರು ಕೇವಲ ವಿದ್ಯಾಲಯದ ಓದಿನಿಂದ ತೃಪ್ತಿ ಹೊಂದಲಿಲ್ಲ. ಅವರ ಜೊತೆಗೆ ಸಾರ್ವಜನಿಕ ಕೆಲಸಗಳನ್ನು ಮಾಡಿದುದಲ್ಲದೆ, ಮುಂದೆ ಮಾಡಬೇಕಾದ ಇನ್ನೂ ಹಲವಾರು ವಿಧಾಯಕ ಕಾರ್ಯಗಳ ಬಗೆಗೆ ಹೊಳಹನ್ನು ಆಗಲೇ ಹಾಕಿಕೊಂಡಿದ್ದರು.[೫] ದಾನಪ್ಪನವರನ್ನು ಹೊರತುಪಡಿಸಿ ಉಳಿದ ಇವರ ಬಂಧುಗಳು ಸರಕಾರಿವಲಯದಲ್ಲಿ ಉಚ್ಚ ಅಧಿಕಾರಿಗಳಾಗಿದ್ದಾರೆ. ಬ್ರಿಟಿಷ್ ಆಡಳಿತದಲ್ಲಿ ಸುಶಿಕ್ಷಿತರೆಲ್ಲರೂ ಸರಕಾರಿ ನೌಕರಿಗಳಲ್ಲಿ ಕೆಲಸಮಾಡುವ ರೂಢಿ ಮತ್ತು ಪ್ರಭಾವವಿದ್ದಿತು. ಆದರೆ ಶ್ರೀ ದಾನಪ್ಪ ಹಾಲ–

---

†. ಹಾಲಭಾವಿ ದಾನಪ್ಪನವರ ತಂದೆ ವೀರಭದ್ರಪ್ಪನವರು ೧೮೯೮ರಲ್ಲಿ ಮೊದಲ ಹೆಂಡತಿಯ ಮರಣದ ನಂತರ ಎರಡು ವರ್ಷದಲ್ಲಿ ಅಂದರೆ ೧೯೦೦ರಲ್ಲಿ ಎರಡನೆಯ ಮದುವೆ ಮಾಡಿಕೊಂಡರು.

೫. ಡಾ. ವೀರಣ್ಣ ರಾಜೂರ, "ಹಾಲಭಾವಿ ವೀರಭದ್ರಪ್ಪನವರು" ಪುಟ-೩೬

ಭಾವಿಯವರಿಗೆ ಈ ಮಾರ್ಗ ರುಚಿಸಲಿಲ್ಲ. ಮುಂಬಯಿ ನಗರದ ಕಲಾಶಿಕ್ಷಣಾಲಯದ ಪದವೀಧರರಾಗಿ ಕಲಾಜೀವನವನ್ನು ನಡೆಸಿಕೊಂಡು ಹೋಗುವ ಛಲದಿಂದ ಖಾಸಗಿ ಶಿಕ್ಷಣ ಸಂಸ್ಥೆಯನ್ನು ರೂಪಿಸಿದರು. ಅದೇ ಇಂದಿನ 'ಸ್ಕೂಲ ಆಫ್ ಆರ್ಟ'[೬] ಚಿತ್ರಕಲಾಶಾಲೆ. ಸಾವಿರದಾ ಒಂಬಯಿನೂರಾ ಮೂವತ್ತೈದರಂದು ಧಾರವಾಡದಲ್ಲಿ ಈ ಕಲಾನಿಲಯವೊಂದು ತಲೆಎತ್ತಿತು. ಶ್ರೀ ಹಾಲಭಾವಿ ದಾನಪ್ಪನವರೇ ಆ ದೇವ ನಿಲಯದ ಆರಾಧಕರಾಗಿ ನಿಂತರು. ಶ್ರೀ ಹಾಲಭಾವಿಯವರು ಒಂದು ಗಳಿಗೆ ಬಿಡುವು ದೊರೆತರೆ ಸಾಕು. ಕೈಯಲ್ಲಿ ಕುಂಚಹಿಡಿಯುತ್ತಿದ್ದರು. ಕಲಾ ಪ್ರತಿಭೆ-ಗಳೊಂದಿಗೆ ಚಿನ್ನಾಟವಾಡುತ್ತ ಸುಂದರ ಚಿತ್ರಗಳನ್ನು ಬರೆಯುತ್ತಾರೆ. ಇಂತಹ ಹುಟ್ಟುಕಲಾವಿದ, ತರುಣಕಲಾವಿದರ ಕಲಾಶಿಕ್ಷಣದ ಯೋಜಕರಾಗಿ ಹೇಗೆ ಕೆಲಸ-ಮಾಡುತ್ತಾರೋ ಎಂಬುದು ಆಶ್ಚರ್ಯವೇ[೭] ಆಗಿದೆ ಎನ್ನುತ್ತಾರೆ ಎನ್ಕೆ ಅವರು.

ಕಲಾಮಂದಿರದಂತಹ ಸಂಸ್ಥೆಯನ್ನು ಧಾರವಾಡದಲ್ಲಿ ಕಟ್ಟಿ ಬೆಳೆಸುವುದು ಸುಲಭದ ಮಾತಲ್ಲ. ಆದರೆ ಸಾಹಸಿ ಮತ್ತು ಆಶಾವಾದಿ ಆದ ದಾನಪ್ಪ ಮೂವತ್ತು§ ವರುಷಗಳಿಗೆ ಮೇಲ್ಪಟ್ಟು ಹಲವಾರು ಬಗೆಯ ಅನಾನುಕೂಲತೆಗಳ ಮಧ್ಯದಲ್ಲಿಯೂ ಜಿಗುಟುತನದಿಂದ ಕಲಾಮಂದಿರವನ್ನು ನಡೆಯಿಸಿಕೊಂಡು ಬಂದಿದ್ದಾರೆ. ಸಂಸ್ಥೆಗಳ ಹೆಸರಿನಲ್ಲಿಯೇ ಇಲ್ಲವೆ ಸಾರ್ವಜನಿಕ ಸೇವೆಯ ನಿಮಿತ್ತವೆಂದೋ ಅನೇಕರು ಲಾಭ-ದಾಯಕ ಕಾರ್ಯದಲ್ಲಿ ತೊಡಗಿದುದನ್ನು ದಾನಪ್ಪ ತಮ್ಮ ಕಣ್ಮುಂದೆಯೇ ಕಂಡಿ-ದ್ದಾರೆ. ಆದರೆ ಮೃದು ಮಾತಿನ ದಾನಪ್ಪನವರು ತಮಗೆ ಬೇಕಾದುದನ್ನು ಸಾಕಷ್ಟು ಗಟ್ಟಿಯಾಗಿ ಕೂಡ ಹೇಳಲಾರರು. ಸಾರ್ವಜನಿಕ ರಂಗದಲ್ಲಿ ಗೆಲುವು ಪಡೆಯಲು ಬೇಕಾಗುವ ಪ್ರಚಾರ ಸಾಧನವನ್ನು ಇವರು ಒಲಿಸಿಕೊಂಡವರಲ್ಲ. ಕಲಾಮಂದಿರ ಸ್ಥಾಪನೆಯ ಆರಂಭದಿಂದ ನಾನು ಧಾರವಾಡದಲ್ಲಿ ನೆಲೆಸಿ ಆ ಸಂಸ್ಥೆಯು ಕ್ರಮ ಕ್ರಮವಾಗಿ ಬೆಳೆಯುತ್ತಿರುವುದನ್ನು ಕಂಡು ಸಂತೋಷಪಟ್ಟಿದ್ದೇನೆ.[೮] ಎಂಬ ಅವರ ಈ ಮಾತು ದಾನಪ್ಪನವರ ಸಂತೃಪ್ತ ಕಲಾಜೀವನವನ್ನು, ಪಾರದರ್ಶಕ ವ್ಯಕ್ತಿತ್ವ ವನ್ನು ತಿಳಿಸುತ್ತದೆ.

---

೬. ತಲ್ಲೂರ ರಾಯನಗೌಡ ಪಾಟೀಲ 'ಕಲಾಪ್ರಸಾಧಿ ಹಾಲಭಾವಿ ದಾನಪ್ಪ 'ಅರವತ್ತರ ಒಸಗೆ' ಪುಟ-೧೫.

೭. ಎನ್ಕೆ 'ಹಾಲಭಾವಿಯವರ ಕಲಾಕಮ್ಮಟ' "ಅರವತ್ತರ ಒಸಗೆ" ಪುಟ-೧೦

§. ಈ ಲೇಖನ ಬರೆಯುವಾಗ ಇದಕ್ಕೆ (೧೯೬೮ರಲ್ಲಿ) ಮೂವತ್ತು ವರ್ಷವಾಗಿದ್ದಿತು. ಈಗ ಸ್ಕೂಲ ಆಫ್ ಆರ್ಟ ೫೦ನೆಯ ವರ್ಷದ ಸುವರ್ಣಮಹೋತ್ಸವವನ್ನು ಆಚರಿಸುತ್ತಲಿದೆ.

೮. ಸ. ಸ. ಮಾಳವಾಡ 'ಕಲಾಜೀವಿ ದಾನಪ್ಪ' "ಅರವತ್ತರ ಒಸಗೆ" ಪುಟ-೮

೧೯೩೭ ರಿಂದ 'ಸ್ಕೂಲ ಆಫ್ ಆರ್ಟ'ದಲ್ಲಿ ಹತ್ತು ವರ್ಷ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತ, ಹಾಲಭಾವಿಯವರೊಂದಿಗೆ ನಿಕಟ ಸಂಬಂಧವಿಟ್ಟುಕೊಂಡ ಶ್ರೀ ನಿರಂಜನ ಬಡಿಗೇರ ಅವರು ಹೀಗೆ ಹೇಳುತ್ತಾರೆ : "ಹಾಲಭಾವಿಯವರ ಕಲಾಶಾಲೆಯಲ್ಲಿ ಕಲಿತವರನೇಕರು ಕರ್ನಾಟಕದುದ್ದಕ್ಕೂ ಕಲಾಶಿಕ್ಷಕರಾಗಿದ್ದಾರೆ, ಅವರು ಎಂದೂ ಕ್ಲಾಸಿನ ಫೀ ಸಲುವಾಗಿ ವಿದ್ಯಾರ್ಥಿಗಳನ್ನು ಒತ್ತಾಯಿಸಿದವರಲ್ಲ. ಕಲಾಭಿಮಾನಿಗಳು (ವಿದ್ಯಾರ್ಥಿಗಳು) ಕಲಿತರೆ ಸಾಕು ಎಂಬ ಅಭಿಮಾನ. ವಿದ್ಯಾರ್ಥಿಗಳು ತಾವಾಗಿಯೇ ಪ್ರೀತಿಯಿಂದ ಕೊಟ್ಟಿದ್ದನ್ನು ತೆಗೆದುಕೊಂಡು 'ಕಲಾಪ್ರಸಾರವೇ ತಮ್ಮ ಜೀವನದ ಉಸಿರು" ಎಂದು ಪದೇ ಪದೇ ಅನ್ನುವದನ್ನು ಇಂದಿಗೂ ನಾನು ಕೇಳುತ್ತಲೇ ಇದ್ದೇನೆ. ಒಮ್ಮೆ ಸಂದರ್ಶಕರೊಬ್ಬರು ದಾನಪ್ಪನವರಿಗೆ ನಿಮ್ಮಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಫೀಜು ಕೊಡುತ್ತಾರೆ ಎಂದು ಕೇಳಿದ್ದಕ್ಕೆ ಅವರು ಸುಮ್ಮನೆ ನಕ್ಕುಬಿಟ್ಟಿದ್ದನ್ನು ನೋಡಿದ್ದೇನೆ. ಹಾಲಭಾವಿ ಹಣಕ್ಕಾಗಿ ಹೆಣಗಾಡಿದವರಲ್ಲ" ಎನ್ನುವ ಮಾತುಗಳನ್ನು ಇಲ್ಲಿ ಗಮನಿಸಬೇಕು. ಈ ಭಾವನೆಗೆ ಬಹುಶಃ ತಂದೆಯ ಶ್ರೀಮಂತಿಕೆಯೂ ಒಂದು ಕಾರಣವಿರಬೇಕು.

ಹಾಲಭಾವಿಯವರ ಕಲ್ಪನೆಯ ಕೂಸಾದ ಈ ಕಲಾಮಂದಿರ ಮೊದಲು ಇಬ್ಬರು ವಿದ್ಯಾರ್ಥಿಗಳಿಂದ ಪ್ರಾರಂಭವಾಯಿತು. ಇಂದು ಇಲ್ಲಿ ನೂರಾರು ವಿದ್ಯಾರ್ಥಿಗಳು ಶ್ರದ್ಧೆಯಿಂದ ಕಲಾಶಿಕ್ಷಣ ಪಡೆಯುತ್ತಿದ್ದಾರೆ. ಇದು ಕರ್ನಾಟಕದಲ್ಲಿ ಸ್ಥಾಪನೆಯಾದ 'ಪ್ರಪ್ರಥಮಕಲಾಶಾಲೆ ದಾನಪ್ಪನವರು ಪ್ರಥಮ ಈ ಕಲಾಶಾಲೆಯ ಪ್ರಥಮ ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸಿವರು.

೧೯೫೭ ರಲ್ಲಿ ಈ ರಾಜ್ಯಕ್ಕೆ ಒಂದೇ ಚಿತ್ರಕಲಾಶಿಕ್ಷಕರ ತರಬೇತಿ ಕೇಂದ್ರವಾಗಿದ್ದ ಈ ಕಲಾಶಾಲೆಗೆ ಮುಂಬಯಿ ಸರಕಾರದಿಂದ ಪ್ರಥಮಬಾರಿ ಮನ್ನಣೆ ಸಿಕ್ಕಿತು. ಅದೇ ವರ್ಷ ಪೇಂಟಿಂಗ ಪರೀಕ್ಷೆಗೆ ಇಲ್ಲಿ ಸೆಂಟರ ಕೂಡ ದೊರೆಯಿತು. ೧೯೬೫ ರಲ್ಲಿ ಪ್ರಥಮಬಾರಿಗೆ 'ಆರ್ಟಗಿಲ್ಡ' ಎಂಬ ಕಲಾಪತ್ರಿಕೆ ಪ್ರಾರಂಭಗೊಂಡಿತು.§ 'ಸ್ಕೂಲ ಆಫ್ ಆರ್ಟ'ನಲ್ಲಿ ಕಲಾಕೃತಿಗಳ ಸಂಗ್ರಹ. ಡೇಮೋಸ್ಟ್ರೇಶನ್, ಸೇಮಿನಾರಗಳು, ವರ್ಕಶಾಪ್‌ಗಳು ಕಲಾಪ್ರದರ್ಶನಗಳು, ಕಲಾವಿದರಿಗೆ ಸನ್ಮಾನಗಳು. ಹೀಗೆ ಹಲವಾರು ಕಾರ್ಯಕ್ರಮಗಳ ಒಂದು ಸಾಂಸ್ಕೃತಿಕ ಕೇಂದ್ರವಾಗಿ ಇದು ಬೆಳೆದು ಬಂದಿದೆ. ಎಂದರೆ ತಪ್ಪಾಗಲಾರದು ಸ್ಕೂಲ ಆಫ್ ಆರ್ಟನ ಕೀರ್ತಿ ದೇಶವಿದೇಶಗಳಲ್ಲಿ ಪಸರಿಸಿದೆ ೧೯೫೩ರಲ್ಲಿ ಸ್ವಿಡನ್‌ದ ಪ್ರವಾಸಿ ಗುಲಿ

---

೯. ಎನ್. ಜಿ. ಬಡಿಗೇರ 'ಕಲಾದಾನಿ ಹಾಲಭಾವಿ' "ಅರವತ್ತರ ಒಸಗೆ"

§. ಈಗ 'ಆರ್ಟ ಗಿಲ್ಡ' ಕಲಾಪತ್ರಿಕೆ ಸ್ಥಗಿತಗೊಂಡಿದೆ.

ಯಾನೋ ಈ ಶಾಲೆಗೆ ಸಂದರ್ಶನವಿತ್ತಿದ್ದಾನೆ. ೧೯೬೦ ರಲ್ಲಿ ಹಾಲಂಡದ ಖ್ಯಾತ ಕಲಾವಿದ ಸಿಗ್ನೋರ ಹೊಂಡಿಅಸ್ ಮತ್ತು ಫ್ರಾನ್ಸದೇಶದ ಪ್ರೋಫೆಸರ ಫಿಲಿಜೋ ಭೆಟ್ಟಿಕೊಟ್ಟು ಈ ಕಲಾಶಾಲೆಯ ಬೆಳವಣಿಗೆಯ ಬಗ್ಗೆ ಉತ್ತಮ ಅಭಿಪ್ರಾಯಗಳನ್ನು ಪ್ರಕಟಪಡಿಸಿದ್ದಾರೆ.

ಈ ಶಾಲೆಯಿಂದ ಹೊರಬಂದ ಅನೇಕ ವಿದ್ಯಾರ್ಥಿಗಳು ರಾಷ್ಟ್ರೀಯ, ಹಾಗೂ ಅಂತಾರಾಷ್ಟ್ರೀಯ ಮಟ್ಟದ ಖ್ಯಾತಿಯನ್ನು ಗಳಿಸಿದ್ದಾರೆ. ಕರ್ನಾಟಕದುದ್ದಕ್ಕೂ ಅನೇಕರು ಕಲಾಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈಗ ಕರ್ನಾಟಕ ರಾಜ್ಯ ಲಲಿತ ಕಲಾ ಅಕಾಡೆಮಿಯ ಅಧ್ಯಕ್ಷರಾಗಿರುವ ಶ್ರೀಸೋಮಶೇಖರ ಸಾಲಿ. ಖ್ಯಾತ ಕಲಾವಿದ ಎಸ್. ಜಿ. ಚಿನ್ನಣ್ಣವರ, ರವಿ ಪರಾಂಜಪೆ ಬಿ.ಕೆ ಹುಬ್ಬಳ್ಳಿ, ಎಮ್. ಜಿ. ವಾಚೇದಮಠ, ಎಸ್. ಬಿ. ಜರಳಿ, ಎಮ್. ಆರ್. ಬಾಳಿಕಾಯಿ, ಆರ್.ಬಿ. ಗರಗ, ಸುರೇಶ ಹಾಲಭಾವಿ. ಈಶ್ವರ ಮುರುಗೋಡ, ಭರತಕುಮಾರ ಶ್ರೀಮತಿ ತಾರಾ ಪವಾರ, ಗಾಯಿತ್ರಿ ಗೌಡರ,ಎಂ. ಬಿ. ಪಾಟೀಲ,ಎಸ್. ಸಿ. ಪಾಟೀಲ, ಮಧು ಹೀಗೆ ಅನೇಕ ಹಿರಿ-ಕಿರಿಯ ಕಲಾವಿದರನ್ನು ಹೆಸರಿಸಬಹುದು.

ಸೃಜನ ಶೀಲ ಕಲೆಗಾರ :

ಹಾಲಭಾವಿಯವರ ಚಿತ್ರರಚನೆ ಮತ್ತು ಚಿತ್ರಪ್ರದರ್ಶನಗಳು ೧೯೩೮ ರಿಂದ ಒಂದು ವ್ಯವಸ್ಥಿತ ಕ್ರಮದಲ್ಲಿ ನಡೆದುಬಂದಿರುತ್ತವೆ. ಆಗಿನ ಇವರ ಚಿತ್ರಗಳು



ಭಾರತೀಯ 'ಸಂಪ್ರದಾಯ ಶೈಲಿಯಲ್ಲಿ ನಿರೂಪಿತವಾದವು. ಇವು ನಿಸರ್ಗದ ದೃಶ್ಯಗಳು. ದೇವಾಲಯಗಳು. ಸಾಮಾನ್ಯ ಜನಜೀವನದ ದೃಶ್ಯಗಳಿಗೆ ಸಂಬಂಧಿಸಿದವುಗಳಾಗಿರುತ್ತವೆ. ೧೯೫೭ರಲ್ಲಿ ಮುಂಬಯಿಯ ಆರ್ಟ ಸೊಸಾಯಿಟಿಯ ಕಲಾ-ಪ್ರದರ್ಶನದಲ್ಲಿ 'ಎ ರೋಡ ಆ್ಯಟ್ ಹಳಿಯಾಳ' ಎಂಬ ನಿಸರ್ಗ ಕೃತಿಗೆ ಪ್ರಶಸ್ತಿ ಸಿಕ್ಕಿತು. ಇವರು ಅಧ್ಯಯನ ಕಾಲದಲ್ಲಿ ಜೆ. ಜೆ. ಸ್ಕೂಲಿನಲ್ಲಿ ಚಾರಕೋಲ್‌ನಲ್ಲಿ ಮಾಡಿದ ಕೃತಿಯೊಂದು ಪ್ರಶಸ್ತಿ ಗಳಿಸಿತು. ೧೯೫೪ರಲ್ಲಿ ವಿಜಾಪೂರದ ಆ್ಯಂಟಿ ಫ್ಯಾಮಿನ್ ಇನ್‌ಸ್ಟೂಟಿಗೆ ಕಳಿಸಿದ ಚಿತ್ರವಾಗಲಿ ವ್ಹಿ.ಎಚ್. ನಾಯಕ್ ಕಲೆಕ್ಟರ್‌ರವರ ತೈಲಚಿತ್ರ, ಡೆಪ್ಯೂಟಿ ಚನ್ನಬಸಪ್ಪ, ಡಿ. ಸಿ. ಪಾವಟೆ, ರೊದ್ದ ಶ್ರೀನಿವಾಸ ಮತ್ತು ಟಿ. ಸಿ. ಎಮ್. ಧಾರವಾಡದ ಶತಮಾನೋತ್ಸವಕ್ಕೆ ಕಳುಹಿಸಿದ ಚಿತ್ರಗಳೆಲ್ಲ, ೧೯೫೭ ರಲ್ಲಿ ರಚನೆಗೊಂಡಂತಹುಗಳಾಗಿವೆ. ೧೯೬೦ರಲ್ಲಿ ಬಿ. ಡಿ. ಜತ್ತಿಯವರ ತೈಲಚಿತ್ರ. ಲಮಾಣಿ ಸ್ತ್ರೀ, ಗೋಳಗುಮ್ಮಟದ ಚಿತ್ರಗಳನ್ನು ಇಂಗ್ಲಂಡಿನ 'ಸ್ಲೇ' ಎಂಬ ಕಲಾವಿದ ೧೯೬೦ರಲ್ಲಿ ಖರೀದಿಸಿ ತನ್ನ ದೇಶಕ್ಕೆ ಒಯ್ದಿರುವನು. ಇಂಡಿಯನ್ ಇಂಕದ ೩೦ ಚಿತ್ರಗಳನ್ನು ಅಮೇರಿಕಾದ ಕಲಾಕಾರನೊಬ್ಬ ೨೦-೬-೧೯೬೧ರಲ್ಲಿ ಖರಿದಿಸಿ ಒಯ್ದಿ-ರುವನು. ೧೯೬೪ರಲ್ಲಿ ಛತ್ರಪತಿ ಶಿವಾಜಿಯ ತೈಲಚಿತ್ರವನ್ನು ಧಾರವಾಡದ ಮರಾಠಾ ಮಂಡಳಕ್ಕೆ ಮಾಡಿಕೊಟ್ಟಿದ್ದಾರೆ. ೧೯೭೬ರಲ್ಲಿ ಉಳವಿ ಚನ್ನಬಸವೇಶ್ವರ ಗುಡಿಯಲ್ಲಿ ಇವರು ಪೇಂಟಿಂಗ್ಸಗಳನ್ನು ಮಾಡಿದ್ದಾರೆ. ಮೂರು ತೈಲಚಿತ್ರಗಳನ್ನು ಅಮೇರಿಕೆಯ ಕ್ಯಾನಡಾದಲ್ಲಿ ವಾಸಿಸಿರುವ ಧಾರವಾಡದ ಡಾ. ಶ್ರೀಮತಿ ವಿಜಯ ಮತ್ತು ಅವಳ ಪತಿ ಡಾ. ಬೆಳಗಾಂವಕರ ದಂಪತಿಗಳು ಕ್ಯಾನಡಾಕ್ಕೆ ಒಯ್ದಿದ್ದಾರೆ. ಇವರ ಶಾಲೆ-ಯಿಂದ ಧಾರವಾಡದ ಕಲೆಕ್ಟರರು ೧೯೬೨ರಲ್ಲಿ ದಸರಾ ಉತ್ಸವಕ್ಕೆ ಅಶ್ವಾರೂಢ ಕಿತ್ತೂರ ಚೆನ್ನಮ್ಮನ ರೂಪಕವೊಂದನ್ನು (ಟ್ಯಾಬಲ್ಲೋ) ಮಾಡಿಸಿ ಮೈಸೂರಿಗೆ ಕಳಿಸಿದ್ದರು. ೧೯೬೫ರಲ್ಲಿ ರಚಿಸಿದ ಅಜಂತಾ ಎಲ್ಲೋರದ ಪ್ರತಿಚಿತ್ರಗಳು, ರೇಖಾ ಚಿತ್ರಗಳು, ೧೯೭೮ರಲ್ಲಿಯ ಉಣಕಲ್ಲಿನ ಚಂದ್ರಮೌಳೇಶ್ವರರ ಚಿತ್ರ ೧೯೮೧ರಲ್ಲಿಯ ಐಹೊಳೆ ಪಟ್ಟದಕಲ್ಲಿನಲ್ಲಿ ಚಿತ್ರಿಸಿರುವ ಚಿತ್ರಗಳು ೧೯೮೪ರಲ್ಲಿ ಹಂಪೆಯಲ್ಲಿ ರಚಿಸಿದ ಕಲಾಕೃತಿಗಳು ಹೀಗೆ ಅವರ ಚಿತ್ರಗಳ ಪಟ್ಟಿ ಏರುತ್ತಲೆ ಹೋಗುತ್ತದೆ.† ಗಮನಾರ್ಹ ಚಿತ್ರಗಳಲ್ಲಿ ಒಂದಾದ ವಂಟಮುರಿರಾಜರ ಚಿತ್ರ ಆರು ಅಡಿ ಎತ್ತರದ್ದು, ಈಗ ಬೆಳಗಾಂವಿಯ ಕಾನೂನು ಮಹಾವಿದ್ಯಾಲಯದಲ್ಲಿದೆ. ಮಹತ್ಮಾಗಾಂಧಿ, ತಾಯಿಮಗು ಮುದುಕಿಯರ, ಯೌವನಸ್ಥರ, ಬಾಲ್ಯದ ಹೀಗೆ ಜೀವನದ ಎಲ್ಲ ಹಂತದ ವ್ಯಕ್ತಿಗಳ ಚಿತ್ರಣಗೈದಿದ್ದಾರೆ. ಬದುಕಿನ ಅನೇಕ ಸನ್ನಿವೇಶಗಳು ಇವರ ಚಿತ್ರಗಳಲ್ಲಿ ಮೂಡಿ ಬಂದಿರುತ್ತವೆ.

---

†. ಹಾಲಭಾವಿಯವರ ಎಲ್ಲ ಚಿತ್ರಗಳ ಅಧ್ಯಯನ ಪ್ರತ್ಯೇಕವಾಗಿ ಆಗಬೇಕಾದ ವಿಷಯ. ಈ ಲೇಖನದ ಇತಿಮಿತಿಗನುಗುಣವಾಗಿ ಕಲಾಕೃತಿಗಳ ಹೆಸರನ್ನು ಮಾತ್ರ ಹೇಳಲಾಗಿದೆ.

ಹಾಲಭಾವಿ ದಾನಪ್ಪನವರ ಚಿತ್ರಗಳು ತೈಲವರ್ಣ, ಜಲವರ್ಣ, ಅಲ್ಲದೆ ಪೆನ್ಸಿಲ್‌ನ ರೇಖಾಚಿತ್ರಗಳು, ಚಾರಕೋಲ್‌ನಿಂದ ಮಾಡಿದ ಕಪ್ಪುಬಿಳುಪು ಚಿತ್ರಗಳು, ಹೀಗೆ ವಿವಿಧ ಮಾಧ್ಯಮಗಳಲ್ಲಿ ಚಿತ್ರಗಳು ಆಕಾರ ಪಡೆದಿವೆ ಈ ಕಲಾಕೃತಿಗಳಲ್ಲಿ ಭಾವನೆಗಳ ಸಂಯಮವನ್ನು ತಮ್ಮ ರೇಖೆಗಳ ಬಲೆಯಲ್ಲಿ ಬಂಧಿಸಿ ಬಣ್ಣದ ಚಿತ್ತಾರ ಮಾಡಿದ್ದಾರೆ. ದಾನಪ್ಪನವರು. ವಸ್ತುನಿಷ್ಠಚಿತ್ರಣವೇ ಇವರ ಕಲಾಕೃತಿಗಳ ಯಶಸ್ಸಿನ ಗುಟ್ಟು. ರಮ್ಯತೆಯಲ್ಲಿಯೂ ನಿಗೂಢತೆಯನ್ನು ಮೈಗೂಡಿಸಿಕೊಂಡ ಪ್ರಕೃತಿಯ ಒಳಹೊರಗನ್ನು ಅರಿಯುವ ಕುತೂಹಲ ಪ್ರಿಯ ಕಲಾವಿದ ಹಾಲಭಾವಿ"[೧೧] ಇವರಿಗೆ ವ್ಯಕ್ತಿ ಚಿತ್ರಗಳನ್ನು ತೆಗೆಯುವದೆಂದರೆ ತುಂಬ ಆಸಕ್ತಿ, ಇವರ ದ್ವಿತೀಯ ಪ್ರಾಶಸ್ತ್ಯ ನಿಸರ್ಗದ ರಮಣೀಯ ದೃಶ್ಯಗಳನ್ನು ಕುಂಚದಲ್ಲಿ ಸೆರೆಹಿಡಿಯುವುದು. ತಮ್ಮ ತಂದೆ ಪ್ರಕಟಿಸಿದ ಶಿವಶರಣರ ಕೃತಿಗಳಿಗೆ ಮಗನ ಕಲ್ಪನಾಚಿತ್ರಗಳದೊಂದು ಸೊಗಸು, ಚೆನ್ನಬಸವಪುರಾಣ, ಪ್ರಭುಲಿಂಗಲೀಲೆ ಶಂಕರದಾಸಿಮಯ್ಯ, ಮುಂತಾದ ಕೃತಿಗಳನ್ನು ಇಲ್ಲಿ ಉದಾಹರಿಸಬಹುದಾಗಿದೆ. ಇವರ ಚಿತ್ರಗಳು ದೇಶ ವಿದೇಶಗಳಲ್ಲಿ ಕಲಾಸಕ್ತರ ಕಲಾಸಂಗ್ರಹದಲ್ಲಿವೆ. ಕೆನಡಾ, ಡೆನ್ಮಾರ್ಕ, ಇಂಗ್ಲಂಡ, ಶ್ರೀಲಂಕಾ, ಅಮೇರಿಕಾ ದಿಲ್ಲಿ, ಮುಂಬಯಿತಹ ಪ್ರತಿಷ್ಠಿತ ಪಟ್ಟಣಗಳಲ್ಲೂ ಕಂಗೊಳಿಸಿವೆ. ೧೯೭೮ ರಲ್ಲಿ ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿಯು ರಾಜ್ಯ ಪ್ರಶಸ್ತಿ ನೀಡಿ ಇವರನ್ನು ಗೌರವಿಸಿತು. ೧೯೮೦ ರಿಂದ ರಾಜ್ಯಸರಕಾರ ಇವರಗೆ ೫೦೦ರೂಪಾಯಿಗಳ ಮಾಸಿಕ ಗೌರವಧನ ನೀಡುತ್ತಲಿದೆ.

ಹಾಲಭಾವಿಯವರು ಹಲವು ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡಬಲ್ಲರು, ಬರೆಯಬಲ್ಲರು. ಇವುಗಳಲ್ಲಿ ಮರಾಠಿ, ಇಂಗ್ಲೀಷ, ಹಿಂದಿ. ಕನ್ನಡ ಇವರ ಅತ್ಯಂತ ಪ್ರೀತಿಯ ಭಾಷೆಗಳಾಗಿವೆ.

ಆರ್ಟಗಿಲ್ಡ ಕಲಾಪತ್ರಿಕೆಯ ಸಂಪಾದಕ :

ಕರ್ನಾಟದಲ್ಲಿ ಪ್ರಥಮಬಾರಿಗೆ ಕಲಾಪ್ರಸಾರದ ದೀಕ್ಷೆತೊಟ್ಟು ಕಲಾಶಾಲೆ ಪ್ರಾರಂಭ ಮಾಡಿದ ಕೀರ್ತಿಯೊಂದಿಗೆ ೧೯೭೫ರಲ್ಲಿ ಲಲಿತಕಲೆಯ ಪ್ರಸಾರಕ್ಕಾಗಿ 'ಆರ್ಟಗಿಲ್ಡ' ಎಂಬ ಕನ್ನಡ ಮತ್ತು ಇಂಗ್ಲೀಷ ಭಾಷೆಯ ಕಲಾಪತ್ರಿಕೆಯೊಂದನ್ನು ಪ್ರಾರಂಭಿಸಿದ ಶ್ರೇಯಸ್ಸು ಇವರದು. ಕಲಾವಿದರ ಪರಿಚಯ, ಕಲಾಕೃತಿಗಳ ವಿಮರ್ಶಾತ್ಮಕ ಬರಹಗಳು. ಪ್ರಾಚೀನ ಕಲೆಯ ಕುರಿತಾದ ಲೇಖನಗಳು. ಚಿತ್ರಕಲೆಯ ವಿವಿಧ ಆಯಾಮಗಳ ಕುರಿತಾದ ವಿಷಯಗಳು ಪ್ರವಾಸದ ಅನುಭವ

---

೧೧. ಬಿ. ವಲ್ಲಭ ದೇಸಾಯಿ 'ಕನಸುಗಾರ ಕಲಾಗುರು ಹಾಲಭಾವಿ' "ನವನಾಡು" ದಿನಪತ್ರಿಕೆ ಹುಬ್ಬಳ್ಳಿ. ೩೦-೬-೧೯೮೫



ಗಳು ಹೀಗೆ ದೇಶ ವಿದೇಶಗಳ ಕಲೆಯ ಪರಿಚಯ ಮುಂತಾದ ವಿಷಯಗಳು ಪ್ರಕಟಗೊಂಡಿವೆ. ಈ ಪತ್ರಿಕೆಯಲ್ಲಿ ಹಾಲಬಾವಿಯವರ ಲೇಖನಗಳು ಅತ್ಯಂತ ಮೌಲಿಕವಾದವುಗಳಾಗಿರುತ್ತವೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. 'ಆರ್ಟಗಿಲ್ಡ' ಕಲಾಪತ್ರಿಕೆ ಕಲಾಲೋಕಕ್ಕೊಂದು ಉತ್ತಮ ಕೊಡುಗೆಯಾಗಿ ಬಂದಿರುವದನ್ನು ಮರೆಯುವಂತಿಲ್ಲ.

ಕಲಾಗ್ರಂಥ ಕರ್ತೃ :

೧೯೬೮ರಲ್ಲಿ ಹಾಲಭಾವಿ ದಾನಪ್ಪನವರು 'ಮಾಯ್‌ಕಂಟೆಂಪರರಿ ಆರ್ಟಿಸ್ಟ' ಎಂಬ ಗ್ರಂಥವನ್ನು ಬರೆದು ಬೆಳಕಿಗೆ ತಂದಿದ್ದಾರೆ. ಇದರಲ್ಲಿ ಅವರ ಕಾಲದ ಏಳು ಜನ ಕಲಾವಿದರ ಪರಿಚಯವನ್ನು ಅವರ ಕಲಾಕೃತಿಗಳ ಮೂಲಕ ಪರಿಚಯಿಸಿದ್ದಾರೆ. 'ಮಾಯ್ ವ್ಹಿಜಿಟ್ ಎಂಡ್ ಇಂಪ್ರೆಶನ್ ಆಫ್ ಸಿಲೋನ' ಇಂಗ್ಲೀಷ ಹಾಗೂ ಕನ್ನಡದಲ್ಲಿ ಪುಸ್ತಕ ಅಚ್ಚಾಗಲಿದೆ. ಇದು ಅಲ್ಲದೆ, 'ಜಮ್ಮು ಕಾಶ್ಮೀರ'ರದ ಕಲೆಯನ್ನು ಕುರಿತು ಒಂದು ಅಚ್ಚಾಗದ ಕೃತಿ ಅವರ ಬಳಿ ಇದೆ.

ಸಾರ್ವಜನಿಕ ಕಾರ್ಯಕರ್ತ :

ಹಾಲಭಾವಿ ದಾನಪ್ಪನವರು ೧೯೪೦ರಲ್ಲಿ ಕರ್ನಾಟಕ ಆರ್ಟ ಸೊಸಾಯಿಟಿಯ

ಕಾರ್ಯದರ್ಶಿಯಾಗಿ, ೧೯೪೪ರಲ್ಲಿ ಮುಂಬೈ ಪ್ರಾಂತದ ಡ್ರಾಯಿಂಗ ಶಿಕ್ಷಕರ ಸಂಘದ ಕಾರ್ಯದರ್ಶಿಯಾಗಿ, ೧೯೪೯ ರಿಂದ ೧೯೫೨ರ ವರೆಗೆ ಸರ್. ಜೆ. ಜೆ. ಸ್ಕೂಲ ಆಫ್ ಆರ್ಟದಲ್ಲಿ ಮೂರು ವರ್ಷ ಅಡ್ವೈಸರಿ ಮೆಂಬರರಾಗಿ, ಮುಂಬಯಿ ಪ್ರಾಂತದ ಕಲಾಪರೀಕ್ಷೆಗಳ ಪರೀಕ್ಷಕರಾಗಿ ಎಂಟು ವರ್ಷಗಳು ೧೯೫೩ ರಿಂದ ೧೯೬೨ ರವರಗೆ ಸೇವೆ ಸಲ್ಲಿಸಿದ್ದಾರೆ.

ಮೈಸೂರು ರಾಜ್ಯದ ಕಲಾಭ್ಯಾಸದ ಮಂಡಳಿಯ ಸಲಹೆಗಾರರಾಗಿ ೧೯೫೮ ರಲ್ಲಿ ಕಾರ್ಯನಿರ್ವಹಿಸಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿ. ಎ. ಪರೀಕ್ಷೆಗೆ ಕಲೆಯನ್ನು ಅಭ್ಯಾಸ ಪತ್ರಿಕೆಯಲ್ಲಿ ಸೇರಿಸಬೇಕೆಂದು ಗುಲಬರ್ಗಾ.* ಹಾಗೂ ಬಾಗಲ ಕೋಟಿಯ ಕಾಲೇಜುಗಳಿಗೆ ಇನ್ಸ್‌ಪೆಕ್ಷನ್‌ಗಾಗಿ ಹೋಗಿ ಬಂದಿದ್ದಾರೆ. ೧೯೬೪ರಲ್ಲಿ ಹೈದರಾಬಾದಿನಲ್ಲಿ ನಡೆದ ಕಲಾ ವರ್ಕಶಾಪ್‌ನಲ್ಲಿ ಭಾಗವಹಿಸಿದರು. ೧೯೬೮ರಲ್ಲಿ ಕಾಮೆಕ್ಸ ಇಂಡಿಯಾ, ದೆಹಲಿ, ಅವರು ಏರ್ಪಡಿಸಿದ ಸಿಲೋನ ಪ್ರವಾಸದಲ್ಲಿ ಭಾರತದ ಐದು ವಿಶ್ವವಿದ್ಯಾಲಯಗಳು (ಪಂಜಾಬ, ದೆಹಲಿ, ಮಹಾರಾಷ್ಟ್ರ, ಕೇರಳ ಮತ್ತು ಮದ್ರಾಸ) ಭಾಗವಹಿಸಿದ್ದವು. ಗ್ರ್ಯಾಜ್ಯುವೇಟ ಮತ್ತು ಪೋಷ್ಟ ಗ್ರ್ಯಾಜ್ಯು-ವೇಟದ ಅರವತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರು ತಂಡದಲ್ಲಿ ಹಾಲಭಾವಿಯವರು 'ಟೀಚರ್ಸ ವ್ಹಿಜಿಟರ್ಸ' ಎಂದು ಸಿಲೋನಕ್ಕೆ ಹೋಗಿಬಂದರು. ಇವರು ವಿಶೇಷವಾಗಿ ಚಿತ್ರಕಲೆಯನ್ನು ಕುರಿತು ಬಾನುಲಿಯಲ್ಲಿ ಕಲಾವಿದರ ಜೀವನ, ಕಲೆಯಲ್ಲಿ ವ್ಯವ-ಹಾರಿಕವೃತ್ತಿ, ಕಲೆಯ ಪ್ರಗತಿ, ಸಮಸ್ಯ ಪರಿಹಾರ, ಮಕ್ಕಳ ಚಿತ್ರಕಲೆ, ಮುಂತಾದ ವಿಷಯಗಳ ಕುರಿತು ಭಾಷಣ ಮಾಡಿದ್ದಾರೆ. ''He is associated with the Several Art Organisations and Art Activities and his work is very well appreciated. I wish that the almighty will give him more energy and long life to carry on his mission to the nation.[೧೧] ಎಂದು ಶುಭವನ್ನು ಹಾರೈಸಿದ್ದಾರೆ ಕಲಾವಿದ ಮಿಣಜಗಿಯವರು. ಹಾಲಭಾವಿಯವರ ೬೦ ನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ಕಳಿಸಿದ ಶುಭ ಸಂದೇಶದಲ್ಲಿ ತಪಸ್ವಿಗಳಾದ ಶ್ರೀ ಕುಮಾರಸ್ವಾಮಿಗಳು ''Sri Danappa is an

---

†. ಗುಲಬುರ್ಗಾ ಆಗ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವಾಗಿತ್ತು. ಬಾಗಲಕೋಟೆಯ ಕಾಲೇಜಿನಲ್ಲಿ 'ಚಿತ್ರಕಲೆ' ವಿಷಯ ಪ್ರಾರಂಭವಾಗಲಿಲ್ಲ. ಗುಲಬರ್ಗಾದಲ್ಲಿ ಶ್ರೀ ಶರಣಬಸವೇಶ್ವರ ಕಾಲೇಜಿನಲ್ಲಿ ಬಿ. ಎ. ಪದವಿಯ ವಿಷಯಗಳಲ್ಲಿ 'ಚಿತ್ರಕಲಾ' ವಿಷಯ ಪ್ರಾರಂಭಗೊಂಡು ಈಗ ಸ್ವತಂತ್ರ ವಿಶ್ವವಿದ್ಯಾಲಯವಾದ ಮೇಲೆ 'ಚಿತ್ರಕಲೆ' ಸ್ನಾತಕೋತ್ತರ ವಿಷಯವಾಗಿ ಕರ್ನಾಟಕದಲ್ಲಿ ಪ್ರಥಮ ಬಾರಿಗೆ ವಿಶ್ವವಿದ್ಯಾಲಯದ ಮಟ್ಟಕ್ಕೆ ಬಂದಿದೆ.

೧೧. ಎಮ್. ವ್ಹಿ. ಮಿಣಜಗಿ 'ಶ್ರೀ 'ಡಿ. ವ್ಹಿ. ಹಾಲಭಾವಿ' "ಅರವತ್ತರ ಒಸಗೆ" ಪುಟ-೭

artist of understanding and persuation. His love of art has anabled him to serve the cause of art with no ulterior motive for personal gain. for a considerable period of 32 years he has laboured for the spread art in karnataka. The impulse of art That has been called the persuit of social resonance has found expression in him in this sphere, my this impulse continue and inspire him to serve the noble cause of Art with yet unabated vigour and virility."[೧೨] ಎಂದಿದ್ದಾರೆ.

ಇವರ ಸಮಕಾಲೀನ ಪ್ರಸಿದ್ಧ ಕಲಾವಿದರು ಕೆ. ಕೆ. ಹೆಬ್ಬಾರ, ಡಿ. ಜಿ. ಬಡಿಗೇರ, ಜಿ. ಎಸ್. ದಂಡಾವತಿಮಠ, ಎಮ್. ಎ. ಚೆಟ್ಟಿ, ಎ. ಎ. ಆಲ್ಮೇಲಕರ, ಎಮ್. ಆರ್. ಅಚರೇಕರ, ಶೆಣೈ, ಟಿ. ಪಿ. ಅಕ್ಕಿ, ಎಮ್. ವ್ಹಿ. ಮಿಣಜಗಿ, ಕಮಡೊಳ್ಳಿ. ಎನ್. ಜಿ. ಬಡಿಗೇರ ಮುಂತಾದ ಕಲಾವಿದರು 'ಸ್ಕೂಲ ಆಫ್ ಆರ್ಟ' ದೊಂದಿಗೆ ಸಂಪರ್ಕವಿಟ್ಟುಕೊಂಡಿದ್ದಾರೆ. ಹಾಗೆಯೇ ದ. ರಾ. ಬೇಂದ್ರೆ. ಕುವೆಂಪು, ಚೆನ್ನವೀರ ಕಣವಿ, ಡಿ. ಸಿ. ಪಾವಟೆ, ಡಾ. ಆರ್. ಸಿ. ಹಿರೇಮಠ, ಮಾಸ್ತಿ ವೆಂಕಟೇಶ ಅಯ್ಯಂಗಾರ, ಅ. ನ. ಕೃ. ಬಸವರಾಜ ಕಟ್ಟಿಮನಿ, ಕಮಲಾಬಾಯಿ ಚಟ್ಟೋಪಾಧ್ಯಾಯ, ಪಾಟೀಲ ಪುಟಪ್ಪ, ಗುಬ್ಬಿವೀರಣ್ಣ, ಎ. ಸಿ. ದೇವೆಗೌಡ, ಡಾ. ಎಸ್. ಎಮ್. ವೃಷಭೇಂದ್ರಸ್ವಾಮಿ, ಡಾ. ಎಮ್. ಎಮ್. ಕಲಬುರ್ಗಿ, ಡಾ. ಬಿ. ವ್ಹಿ. ಮಲ್ಲಾಪುರ, ಡಾ. ಬಿ.ಆರ್. ಹಿರೇಮಠ, ಡಾ. ವೀರಣ್ಣ ರಾಜೂರ, ಡಾ. ಎಸ್. ಶೆಟ್ಟರ ಮುಂತಾದ ಸಾಹಿತಿಗಳು. ಸಂಶೋಧಕರು ವಿವಿಧ ಕ್ಷೇತ್ರಗಳಲ್ಲಿ ಹೆಸರುಗಳಿಸಿದವರೆಲ್ಲ. ಹಾಲಭಾವಿಯವರ ಕಲಾಶಾಲೆಯ ಬಗ್ಗೆ ಅವರ ಸೌಮ್ಯ ವ್ಯಕ್ತಿತ್ವದ ಬಗ್ಗೆ ಒಳ್ಳೆಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಹಾಲಭಾವಿಯವರ ಸ್ನೇಹದ ಒಡನಾಟದಲ್ಲಿ ವಯಸ್ಸಿನ ಭೇದವಿಲ್ಲ. ಹಿರಿಕಿರಿಯ ಎಂಬ ತಾರತಮ್ಯವಿಲ್ಲ. ಎಲ್ಲರಿಗೂ ಬೇಕಾದ ವ್ಯಕ್ತಿತ್ವ ಹಾಲಭಾವಿಯವರದು.

ಹವ್ಯಾಸಗಳ ಹುಚ್ಚು :

ಹಾಲಭಾವಿಯವರಿಗೆ ಇರುವ ಹವ್ಯಾಸಗಳು ಹಲವಾರು: ತಬಲಾ ಬಾರಿಸುವದು. ಹಾಡುವದು. ನಾಟಕದಲ್ಲಿ ಅಭಿನಯಿಸುವುದು, ಚಲನಚಿತ್ರ ತೆಗೆಯುವದು, ಛಾಯಾಚಿತ್ರಗಾರ, ಸಾಹಿತ್ಯಾಸಿ, ಪ್ರವಾಸಿಗ, ಬರಹಗಾರ. ಚಿತ್ರಕಾರ, ಸಂಪಾದಕ. ತಾರುಣ್ಯದಲ್ಲಿ ಇಂತಹ ಅನೇಕಹವ್ಯಾಸಗಳ ನಂಟಸ್ತಿಕೆಯನ್ನು ಬೆಳೆಯಿಸಿಕೊಂಡಿದ್ದರು. ಈಗಲೂ ೧೯೪೪ರಲ್ಲಿ ಪೊನ್ನಾವರದಲ್ಲಿ, ಹಾಗೂ ೧೯೮೫ರಲ್ಲಿ ದಾಂಡೇಲಿಯಲ್ಲಿ

೧೨. ಶ್ರೀ ಕುಮಾರಸ್ವಾಮಿಗಳು "ಅರವತ್ತರ ಒಸಗೆ" ಪುಟ ೩ ನೋಡಿ.




ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಮಾಡಿದ್ದಾರೆ. ೭೮ರ ವಯಸ್ಸಿನಲ್ಲಿಯೂ ಚಿತ್ರ-ರಚನೆಯ ಹುಚ್ಚು ಇವರಿಗೆ ಬಿಟ್ಟಿಲ್ಲ. ಕಲೆಗಾಗಿಯೇ ತಮ್ಮನ್ನು ಮೀಸಲಿರಿಸಿಕೊಂಡ-ವರು ಹಾಲಭಾವಿಯವರು. ಪಾಶ್ಚಿಮಾತ್ಯ ಕಲಾವಿದರ ಜೀವನಚರಿತ್ರೆಗಳ ಅನೇಕ ಗ್ರಂಥಗಳನ್ನು, ಕಲಾಕೃತಿಗಳನ್ನು ಸಂಗ್ರಹಿಸಿದ್ದಾರೆ.

ಕೊನೆಯ ಮಾತು :

೧೯೬೪ರಲ್ಲಿ 'ಸ್ಕೂಲ ಆಫ್ ಆರ್ಟ್ಸ' ಬೆಳ್ಳಿ ಹಬ್ಬ ಆಚರಿಸಿತು. ೧೯ಮೇ. ೧೯೬೮ರಲ್ಲಿ ಡಿ. ವ್ಹಿ. ಹಾಲಭಾವಿಯವರಿಗೆ ೬೦ವರ್ಷ ತುಂಬಿದಾಗ ಅವರ ಹಿತೈಸಿ-ಗಳು ಸಾಹಿತಿ ಕಲಾವಿದರು, ವಿದ್ಯಾರ್ಥಿಗಳು ಅವರನ್ನು ಸನ್ಮಾನಿಸಿ ಗೌರವಿಸಿದರು. ಇವರ ಸವಿನೆನಪಿಗಾಗಿ 'ಅರವತ್ತರ ಒಸಗೆ' ಎಂಬ ಚಿಕ್ಕ ಗೌರವ ಗ್ರಂಥವನ್ನು ಹೊರತಂದರು. ಯಾವಯಾವದೋ ಕ್ಷೇತ್ರದ ಅಸಮರ್ಥ ವ್ಯಕ್ತಿಗಳಿಗೆ ನೂರಾರು ಪುಟಗಳ ಅಭಿನಂದನ ಗ್ರಂಥ, ಅರ್ಪಿಸುತ್ತಿರುವವನ್ನು ಕಂಡಾಗ ನಮ್ಮ ಹಾಲಭಾವಿ

ಅಜ್ಜ ನಿಜವಾಗಿ ಈ ದೃಷ್ಟಿಯಿಂದ ಅದೃಷ್ಟ ಹೀನವೇನೋ ಎನಿಸುತ್ತದೆ. ಅವರನ್ನು ಕುರಿತು ಸಮಗ್ರವಾಗಿ ಒಂದು ಚಿಕ್ಕ ಪುಸ್ತಕ ಕೂಡ ಇಲ್ಲದಿರುವದು. ಗಮನಾರ್ಹ ಸಂಗತಿಯೆಂದು ಹೇಳಬೇಕಾಗುತ್ತದೆ. ಅವರ ಪೇಂಟಿಂಗ್ಸಗಳ ಸಂಗ್ರಹ ರಕ್ಷಣೆ ಅವುಗಳ ಕುರಿತು ವಿಮರ್ಶೆ ಮುಂತಾದವುಗಳು ಮಾಡಬೇಕಾದ ಕೆಲವು ಕೆಲಸಗಳಾಗಿವೆ. ನಮ್ಮ ದೇಶವಲ್ಲದೆ. ಪಾಶ್ಚಿಮಾತ್ಯ ದೇಶದಲ್ಲಿ ಹಾಲಭಾವಿಯವರು ಹುಟ್ಟಿದ್ದರೆ, ಅವರು ಜಗತ್ ಪ್ರಸಿದ್ಧ, ಕಲಾವಿದರಾಗುತ್ತಿದ್ದುದರಲ್ಲಿ ಸಂಶಯವಿಲ್ಲ. 'ಹಿತ್ತಲಗಿಡ ಮದ್ದಲ್ಲ' ಎಂಬ ಮಾತು ಹಾಲಭಾವಿಯವರನ್ನು ಕುರಿತಾಗಿರುವಂತಿದೆ. ಬರ್ಟ್ರ್ಯಾಂಡ್ ರಸೆಲ್ಲ್‌ರು ಹೇಳುವಂತೆ "ಮಾನವ ಪೀಳಿಗೆಯಲ್ಲಿ ವ್ಯಕ್ತಿಯ ಕೆಲವು ಉತ್ತಮ ಕಲ್ಯಾಣ ಕೊಡುಗೆಗಳು ಸಂಕ್ಷಿಪ್ತವಾಗಿರುವವು. ಕೆಲವು ಸಲ ಈ ಕಲ್ಯಾಣ ಕಾರ್ಯದ ಬೇಡಿಕೆಯೂ ಆಗ್ರಹ ಹೊಂದದೆ ಇರಬಹುದು. ಇವು ಕಲ್ಯಾಣಕ್ಕಾಗಿ ಇರುತ್ತಿದ್ದರೂ ಕೂಡ ಸುತ್ತಲಿನ ವಾತಾವರಣದ ಗುಂಪಿನಲ್ಲಿ ಕೆಲವು ಸಲ ತಿರಸ್ಕೃತವಾಗಿರಲೂ ಬಹುದು. ಹಾಲಭಾವಿಯವರ ಜೀವನವನ್ನು ಅಭ್ಯಾಸಿಸಿದಾಗ ಮೇಲಿನ ಮಾತು ನಿಜವೆನಿಸುತ್ತದೆ.

ಜೀವಂತವಿರುವಾಗ ವ್ಯಕ್ತಿಯನ್ನು ಸಮಾಜ ಸರಿಯಾಗಿ ಗುರುತಿಸದೆ ಆಮೇಲೆ ಅವರ ಹೆಸರಿನಿಂದ ಅವರ ಬಗ್ಗೆ ಗೌರವ ಅಭಿಮಾನಗಳು ಒಮ್ಮೆಲೆ ಪ್ರಾರಂಭಗೊಳ್ಳುತ್ತವೆ. ಅದು ಆ ವ್ಯಕ್ತಿಯಿಂದ ಲಾಭವಿದ್ದರೆ ಇನ್ನೂ ಅದ್ದೂರಿಯಿಂದ ಪ್ರಚಾರ ಸುರುವಾಗುತ್ತದೆ. ಹಾಗಾಗಬಾರದು. ವ್ಯಕ್ತಿ ಸಮಾಜದ ಹಿತಕ್ಕಾಗಿ ಮಾಡಿದ ಸೇವೆಯನ್ನು ಅವನು ಜೀವಂತವಿರುವಾಗಲೇ ಸಮಾಜ ಗುರುತಿಸಬೇಕು. ಎಪ್ಪತ್ತೆಂಟು



ಕಲಾವಿದ ಶ್ರೀ ಡಿ. ವ್ಹಿ. ಹಾಲಭಾವಿಯವರೊಂದಿಗೆ ಲೇಖಕ ಶ್ರೀ ಎಸ್. ಸಿ. ಪಾಟೀಲ

ವರ್ಷದ ಹಿರಿಯಕಲಾಜೀವಿ ದಾನಪ್ಪನವರು ಇನ್ನೂ ನಮ್ಮ ಮಧ್ಯ ಅವರು ಜೀವಿಸಿದ್ದಾರೆ. ಅವರ ಸೇವೆ ರಾಷ್ಟ್ರಮಾನ್ಯಮಾಡುವಂತಹದು. ಅವರಿಗೆ ಸಮಾಜ ಋಣಿಯಾಗಿರಬೇಕಾಗಿದೆ. ಕಳೆದ ಅಕ್ಟೋಬರ ತಿಂಗಳಲ್ಲಿ ಅವರು ಕಟ್ಟಿ ಬೆಳೆಸಿದ 'ಸ್ಕೂಲ್ ಆಫ್ ಆರ್ಟ'ಗೆ ೫೦ ವರ್ಷಗಳು ಮುಗಿಸಿದ ಸ್ಮರಣಾರ್ಥ ಸ್ಮರಣ ಸಂಚಿಕೆಯೊಂದು ಹೊರತಂದಿದ್ದಾರೆ. ಹಾಲಭಾವಿಯುವರನ್ನು ಸಂದರ್ಶನ ಮಾಡಿದಾಗ ಅವರ ಮಾತಿನಿಂದ "ಧಾರವಾಡಕ್ಕೆ ಒಂದು ಆರ್ಟಗ್ಯಾಲರಿಯಾಗಬೇಕು ಎಂಬ ಕೊರಗು ಧ್ವನಿತವಾಗುತಿತ್ತು. ಸರಕಾರ ಚಿತ್ರಕಲೆಗೆ ಕೊಡಬೇಕಾದ ಸ್ಥಾನಮಾನವನ್ನು ಇನ್ನೂ ಸರಿಯಾಗಿ ಕೊಟ್ಟಿಲ್ಲ ಎಂಬ ಅಸಮಾಧಾನ ಕೂಡ ಅವರಲ್ಲಿತ್ತು" 'ಉತ್ತರ ಕರ್ನಾಟಕದಲ್ಲಿ ಆರ್ಟಗ್ಯಾಲರಿಗಳು ಇಲ್ಲದಿರುವುದು ಬೆಳೆಯುತ್ತಿರುವ ಕಲಾವಿದರಿಗೆ ಇದೊಂದು ಅವಶ್ಯಕ ಬೇಡಿಕೆಯಾಗಿದೆ. ಹಾಲಭಾವಿಯುವರ ಈ ಕನಸು ಅವರ ಕಣ್ಮುಂದೆಯೇ ನನಸಾಗಬೇಕು ಸಧ್ಯ ಇದೇ ಅವರಿಗೆ ನಾವು ಸಲ್ಲಿಸುವ ಕೃತಜ್ಞತೆಯಾಗಿದೆ.

ಭಾವನೆಗಳು

● ಮೂರ್ತಿಗೌಡ ಅಬ್ಬಗೇರಿ

ಹಸಿಮರವು ಒಣಗಿ
ಒಣ ಮರವು ಕೊನರಿ
ಕಣ್ಣು ಬಿಡುತ್ತದೆ
ಮುಗಿಲೇರುವ ಮೋಡಗಳು
ಹೊಗೆಯಾಡುವ ಯಂತ್ರಗಳು
ನಿಶ್ಚಿಂತವಾಗಿ
ಬಿಸಿಲುಂಡನೆಲದಲ್ಲಿ
ಉಗಿಉಗಿ ತೇಲುತ್ತದೆ
ತಂತುರ ಮಳೆ ಸುರಿಯೇ
ಬೇಸಗೆ–ಅರೆಗುದಿ
ಚಡಪಡಿಸುವಪರಿ
ನಂಬಿಗೆಯು ಕೆದಕುತ್ತವೆ
ಹೊಳೆಹೊಳೆವ ತಾರೆಗಳು
ತಲೆತಲಾಂತರದ ಪುರಾವೆಗಳ
ದೀಪಗೊಳಿಸುವಾ
ಇಣುಕು ನೋಟಗಳು
ದಿಗ್ಭ್ರಮೆಗೊಳಿಸುತ್ತವೆ
ಕಾಡುಕಣಿವೆಯು ಆಚೆ
ಕೂಡುದಾರಿಯು ನಡುವೆ
ಗಿಡಮರದಲ್ಲಿ
ಹಕ್ಕಿಗಳು
ಚಿಲಿಪಿಲಿಹಾಡುತ್ತವೆ

●

ಪುಸ್ತಕ ವಿಮರ್ಶೆ

'ಸಿರಿತನದ ಸಿಡಿಲು' (ಸಣ್ಣ ಕಥೆಗಳು)—ಡಿ. ವಿ. ಪುರಾಣಿಕ, ಪ್ರ : ಲೋಕ ವಿದ್ಯಾಪ್ರಕಾಶನ, ಸಂಕೇಶ್ವರ; (೧೯೮೫), ಪು–೪೦. ಬೆಲೆ–೧೨=೦೦

ದಲಿತ–ಬಂಡಾಯ–ಪ್ರತಿಭಟನೆಯ ಹೆಸರಿನಲ್ಲಿ ಬದುಕಿನ ಬಗೆಗಿನ ಗಾಢ ಕಾಳಜಿಯನ್ನು ಕಳೆದುಕೊಂಡ, ಕಲೆಯ ಹಂಗನ್ನೂ ಹರಿದುನಿಂತ, ಒಟ್ಟಿನಲ್ಲಿ ಸೃಜನಶೀಲತೆಯನ್ನೇ ಅತ್ಯಂತ ಹಗುರಾಗಿ ಭಾವಿಸಿದ ಬಾಲಿಶ ಲೇಖಕರ ಸಂಖ್ಯೆಯೇ ಬೆಳೆಯುತ್ತಿರುವ ಇಂದಿನ ಸಾಹಿತ್ಯಿಕ ಸಂದರ್ಭದಲ್ಲಿ ಡಿ. ವಿ. ಪುರಾಣಿಕರ 'ಸಿರಿತನದಸಿಡಿಲು' ಇಂದಿನ ಭಯೋತ್ಪಾದಕ ಕರಾಳವ್ಯವಸ್ಥೆಗೆ ಕಾರಣೀಭೂತರಾದ ಬಂಡವಾಳಶಾಹಿಗಳ, ಅಧಿಕಾರಶಾಹಿಗಳ ಬಗೆಗಿನ ನಿಷ್ಠುರ ನಿರ್ದಾಕ್ಷಿಣ್ಯವಾದ ಭಾವನಾತ್ಮಕ ಪ್ರತಿಕ್ರಿಯೆ ಮತ್ತು ಶೋಷಿತರ ಬಗೆಗಿನ ಆಳವಾದ ಅನುಕಂಪ ಆ ಮೂಲಕವಾಗಿ ತೋರುವ ಸಾಮಾಜಿಕ ಕಳಕಳಿ ಜವಾಬ್ದಾರಿಗಳಂಥ ಕೆಲವು ವೈಶಿಷ್ಟ್ಯಗಳಿಂದ, ತನ್ನ ಹಲವು ದೌರ್ಬಲ್ಯಗಳ ಮಧ್ಯದಲ್ಲಿಯೂ ಓದುಗರ ಔದಾರ್ಯಕ್ಕೆ ಒಲುಮೆಗೆ ಪಾತ್ರವಾಗುತ್ತದೆ.

ತಮ್ಮ ಎಲ್ಲ ತೆರದ ತೀಟೆಯನ್ನು ತೀರಿಸಿಕೊಳ್ಳುವದಕ್ಕಾಗಿ ಎಂಥಬಗೆಯ ಹಾದರಕ್ಕೂ ಸಜ್ಜಾಗಿ ನಿಲ್ಲುವ, ಮುಗ್ಧಜೀವಿಗಳನ್ನು ಕಬಳಿಸಿ ತೇಗುವ ಶೋಷಕ ವರ್ಗವನ್ನು ಕಂಡು ಉರುಪುರು ಉರಿದು ಕೆಂಡಕಾರುವ ಕಥೆಗಾರ ತಮ್ಮ ಅಜ್ಞಾನ, ಅಸಹಾಯಕತೆಯಿಂದ ಕ್ಷಣಕ್ಷಣಕ್ಕೂ ಕಮರುತ್ತ, ನಿರ್ನಾಮಗೊಳ್ಳುತ್ತ ಹೋಗುವ ಶೋಷಿತವರ್ಗವನ್ನು ಕಂಡು ಕರಗಿ, ಕಂಪಿಸಿ, ಮೃದುವಾಗಿ ಆದರ್ಶೋನ್ಮುಖಿಯಾಗುತ್ತಾನೆ. ಹೀಗೆ ನವೋದಯದ ಆದರ್ಶ. ಅಂತಃಕರಣ ಒಂದು ಕಡೆ, ಬಂಡಾಯದ ಧೋರಣೆಯ ಸಿಟ್ಟು, ರೋಷ, ಪ್ರತಿಭಟನೆ ಮತ್ತೊಂದು ಕಡೆ. ಹೀಗೆ ನವೋದಯ ಹಾಗೂ ಬಂಡಾಯಧೋರಣೆಗಳೆರಡರ ಆಶಯವನ್ನು ಕಥೆಗಳ ವಸ್ತು ರೀತಿ ಶೈಲಿಗಳೆಲ್ಲದರಲ್ಲಿಯೂ ಗುರುತಿಸಬಹುದಾಗಿದೆ. ಸಾಮಾನ್ಯವಾಗಿ 'ಎಲುಬಿನ ಅಲೆಗಳು', 'ಮಬ್ಬುಕವಿದ ಮಾರ್ಗದಲ್ಲಿ' 'ಕಾಣದಬೂದಿಯ ಬೆಟ್ಟದಲ್ಲಿ' ಮಿಶ್ರ ಧೋರಣೆ ಕಂಡುಬಂದರೆ, 'ಪ್ರೇತವನದ ಪುಷ್ಪ' 'ಕಣ್ಣೀರು ಕರೆದಾಗ'–ಈ ಎರಡು ಕಥೆಗಳು ನವೋದಯದ ಆಶಯವನ್ನು ಹೊಂದಿವೆ. ಅವರಲ್ಲಿಯೂ 'ಪ್ರೇತವನದ ಪುಷ್ಪವಂತೂ ಕಲಾತ್ಮಕತೆ ಹಾಗೂ ಪರಿಣಾಮದ ದೃಷ್ಟಿಯಿಂದಲ್ಲದಿದ್ದರೂ ವಸ್ತು ತಂತ್ರ ಆಶಯದ ದೃಷ್ಟಿಯಿಂದ ಆನಂದರ 'ನಾ ಕೊಂದ ಹುಡಿಗಿ' ಯನ್ನು ನೆನ

ವಾಗಿ ನೆನಪಿಗೆ ತಂದುಕೊಡುತ್ತದೆ. ಕೊನೆಯ ಕಥೆಯಾದ 'ರಣಹದ್ದು' ಮಾತ್ರ ಸಂಪೂರ್ಣವಾಗಿ ಬಂಡಾಯ ಧೋರಣೆಗೆ ಬದ್ಧವಾಗಿದೆ. ಆದರೆ ಈ ಎರಡೂ ಧೋರಣೆಗಳನ್ನು ಜಾಣ್ಮೆಯಿಂದ ಸಂಭಾಳಿಸಿಕೊಂಡು ಹೋಗುವದಾಗದೆ ಅವುಗಳ ಆಶಯವನ್ನು ಒಟ್ಟಾಗಿ ಈಡೇರಿಸಿಕೊಡುವಲ್ಲಿ ಕಂಡುಬರುವ ಒಂದುಬಗೆಯ ಗೊಂವಲದಿಂದ ಕಥಾಶಿಲ್ಪದಲ್ಲಿ, ಬಂದದಲ್ಲಿ ಗೋಚರಿಸುವ ಸಿಥಿಲತೆ, ಪರಿಣಾಮದಲ್ಲಿ ತಪ್ಪಿಹೋದ ಏಕಾಗ್ರತೆ ಒಟ್ಟು ಕಥಾನಕವನ್ನೇ ಹಾಳು ಹಿಡಿಸುತ್ತದೆ. ಮುಖ್ಯವಾಗಿ ಈ ಎರಡೂ ಧೋರಣೆಗಳನ್ನು ಅಳವಡಿಸಿಕೊಳ್ಳುವ ಆಶಯ ಉದ್ದೇಶ ಪೂರ್ವಕ ವಾದದ್ದಾಗಿರದೆ ತೀರ ಆಕಸ್ಮಿಕ ಎನ್ನುವದು ಗಮನಾರ್ಹ. ಇಂದು ಚಾಲ್ತಿಯಲ್ಲಿ ರುವ ಸಾಹಿತ್ಯಿಕ ಚಳುವಳಿಯಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೊರಟ ಪುರಾಣಿಕರು ಉದ್ದೇಶಪೂರ್ವಕವಾಗಿ, ಪ್ರಯತ್ನಪೂರ್ವಕವಾಗಿ ಅದರತ್ತ ವಾಲುತ್ತಿ ರುವದು ಸ್ಪಷ್ಟ. ಅದೇ ಕಾರಣಕ್ಕಾಗಿ ಆ ದೆಸೆಯ ಆರಂಭದ ಪ್ರಯತ್ನದಲ್ಲಿ ಕಂಡು ಬರುವ ಎಲ್ಲಬಗೆಯ ಊನ–ವೈಫಲ್ಯಗಳು ಕಂಡುಬರುತ್ತಿರುವದು ಇನ್ನೂ ಹೆಚ್ಚು ಸ್ಪಷ್ಟ.

ಭ್ರಷ್ಟ ವ್ಯವಸ್ಥೆಯ ಪಾಲಾದ ಮುಗ್ಧ ಶಿಕ್ಷಕರ, ಮಹಿಳೆಯರ ಶೋಷಣೆ, ಬಡತನ ಅಸಹಾಯಕತೆಯಿಂದ ತುಳಿತಕ್ಕೆ ಒಳಗಾದ ದಲಿತರ, ದೇವದಾಸಿಯಂಥ. ವರದಕ್ಷಿಣೆಯಂಥ ಭೀಕರ ಅನಾಹುತ, ಇಂಥ ವ್ಯವಸ್ಥೆಯ ಮಧ್ಯದಲ್ಲಿಯೂ ಆದರ್ಶ ಯುವಕರ ಚಿತ್ರ (ಕಣ್ಣೀರು ಸುರಿಸಿದಾಗ) ಇಲ್ಲಿಯ ಏಳೂ ಕಥೆಗಳ ವೈವಿಧ್ಯಮಯವಾದ ಮುಖ್ಯ ವಸ್ತು.

ಹೀಗೆ ಪುರಾಣಿಕರು ಒಬ್ಬ ಪ್ರಜ್ಞಾವಂತ ನಿರೀಕ್ಷರಾಗಿ ತನ್ನ ವರ್ತಮಾನದ ಜ್ವಲಂತ ವ್ಯಪಸ್ಥೆಯನ್ನು, ಅದರ ಕಲುಷಿತ ಪರಿಸರದ ಪದರುಗಳನ್ನು, ಸಮಸ್ಯೆಯ ಮುಖಗಳನ್ನು ಪ್ರಜ್ಞಾಪೂರ್ವಕವಾಗಿ ಗ್ರಹಿಸಬಲ್ಲವರಾದರೂ, ಅವೆಲ್ಲವುಗಳಿಗೆ ತೀವ್ರ ವಾಗಿ ಕಳಕಳಿಯಿಂದ ಸ್ಪಂದಿಸಬಲ್ಲವರಾದರೂ ಅವೆಲ್ಲವುಗಳನ್ನು ಸನ್ನಿವೇಶ. ಘಟನೆ ಮತ್ತು ಪಾತ್ರಗಳ ನಿರ್ಮಾಣ ಹಾಗೂ ಸಂಯೋಜನೆಯಲ್ಲಿ ಕಲಾತ್ಮಕವಾಗಿ ಅಳ–ವಡಿಸಿ ಕೊಡುವ ಅನಿವಾರ್ಯವಾದ ಕೌಶಲವನ್ನಾಗಲಿ, ಗಮನಾರ್ಹವಾದ ಜವಾ–ಬ್ದಾರಿಯನ್ನಾಗಲಿ ಪ್ರಕಟಿಸುವದಿಲ್ಲ. ಪಾತ್ರಗಳ ಅಂತಃಪ್ರಜ್ಞೆಯನ್ನು. ಅವುಗಳ ಬೌದ್ಧಿಕ–ಮಾನಸಿಕ–ವ್ಯಾವಹಾರಿಕ ಕ್ರಿಯೆಗಳನ್ನು–ಪ್ರತಿಕ್ರಿಯೆಗಳನ್ನು ಸನ್ನಿವೇಶಗಳ ಹಿನ್ನೆಲೆಯಲ್ಲಿ ಮೂರ್ತಗೊಳಿಸಿ ಕೊಡಬೇಕೆನ್ನುವ ಕಲ್ಪನೆಯೋ ಕಥೆಗಾರರಲ್ಲಿ ಕಂಡು ಬರುವದಿಲ್ಲ. ಎಲ್ಲಿಯಾದರೂ ಕಥೆಯಲ್ಲಿ ಶೋಷಣೆಯ, ಶೋಷಕರ ವಾಸನೆ ಬಡೆ–ಧರೂ ಸಾಕು. ನೆನಪಾದರೂ ಸಾಕು ಎಲ್ಲ ಕ್ರೌರ್ಯವನ್ನೂ ವೈಯಕ್ತಿಕವಾಗಿ ಅನುಭವಿ–ಸುತ್ತ ಸಲ್ಲದ ಉದ್ವಿಗ್ನತೆಗೆ, ಉದ್ರೇಕಕ್ಕೆ ಒಳಗಾಗಿ ಎಲ್ಲ ಪಾತ್ರಗಳನ್ನೂ ಬದಿಗೆ ತಳ್ಳಿ, ಆ ಪಾತ್ರಗಳ ಬೆನ್ನುಕಟ್ಟಿ ಅತ್ಯಂತ ರೊಷಾವೇಶದಿಂದ ಅಸಹನೀಯವಾಗಿ ಆರ್ಭಟಿ–

ಸುತ್ತಾರೆ. ತನ್ನ ಈ ಆವೇಶಕ್ಕೆ, ಆಕ್ಷೇಪಣೆಗೆ ಆಧಾರವನ್ನು ಕಲ್ಪಿಸುವಂತೆ ಒಂದು ಸಲಕ್ಕೆ ಘಟನೆಗಳ ಸನ್ನಿವೇಶಗಳ ಅಸ್ಪಷ್ಟವಾದ ಸಾಕ್ಷ್ಯಚಿತ್ರವನ್ನು ಒದಗಿಸಿ ಬಿಡು–ತ್ತಾರೆ. ಇದರಿಂದಾಗಿ ಬರುವ ಪಾತ್ರಗಳೆಲ್ಲ ನಿರ್ಜೀವ ಗೊಂಬೆಗಳಾಗಿ ಸಂವೇದನೆ-ಯನ್ನು ಕಳೆದುಕೊಳ್ಳುತ್ತವೆ. ಇಲ್ಲವೆ ಅತಿಭಾವುಕತೆಯಿಂದ ನರಳಾಡುತ್ತವೆ ಬರಹ-ಶೈಲಿ ಕೆಲಸಲ ಕ್ರಾಂತಿಕಾರಿ ಪತ್ರಿಕೆಯ ವರದಿಯಾಗಿ, ಪೂರ್ವಗ್ರಹಕ್ಕಂಟಿಕೊಂಡ ವಿಮರ್ಶೆಯಾಗಿ, ಭಾಷಣವಾಗಿ, ಕಾವ್ಯದ ಭಾಗವಾಗಿ__ಇವೆಲ್ಲವುಗಳ ಮಧ್ಯದಲ್ಲಿ ಕಥೆ ಕಳೆದುಕೊಂಡು ಬಿಡುತ್ತದೆ. ಅಂಥ ಹದ್ದುಮೀರಿದ ಭಾಷೆ ಹಾಗೂ ಅಸಹನೀಯ ಪದಗಳಿಂದ ಮುರುಗಟ್ಟಿ ಹೋಗುವ ಓದುಗನ ಮನಸ್ಸು ಮುಂದೆ ಮುಂದೆ ತನ್ನ ಸಂವೇದನೆಯನ್ನು ಕಳೆದುಕೊಳ್ಳುತ್ತದೆ.

ಪಾತ್ರಗಳ ಸಂಸ್ಕಾರಕ್ಕೆ, ಸನ್ನಿವೇಶಕ್ಕೆ ಒಗ್ಗದ ಸಂಭಾಷಣೆ. ಅಂತ್ಯದಲ್ಲಿ ಕಾಣಿಸಿಕೊಳ್ಳುವ ಕೃತಕ ದುರಂತ, ವರ್ಣನೆಯಲ್ಲಿಯ ಅನೌಚಿತ್ಯ, ಘಟನೆ ಸನ್ನಿ–ವೇಶಾದಿಗಳ ನಿರೂಪಣೆಯಲ್ಲಿ ವಿರೋಧಾಭಾಸ ಇವರ ಕಥೆಯಲ್ಲಿ ಎದ್ದು ಕಾಣುವ ದೋಷಗಳು.

ಆದರೆ ಪರಿಸರವನ್ನು ಅರ್ಥಪೂರ್ಣವಾಗಿ ಸಜೀವಗೊಳಿಸಿ ಕೊಡಬಲ್ಲ ಪೌರಾಣಿಕರು ವ್ಯಂಗ್ಯವನ್ನು ಹಾಗೂ ಸಾಂಕೇತಿಕತೆಯನ್ನು ಕೆಲಕೆಲವು ಸಲವಂತೂ ಹೆಚ್ಚು ಪ್ರಭಾವಕಾರಿಯಾಗಿ ದುಡಿಸಿಕೊಳ್ಳುತ್ತಾರೆ. "ಸಿರಿವಂತರ ಸಿಡಿಲು"ದಲ್ಲಿ ಬರುವ ಹಲ್ಲಿ ಝೊಂಡಿಗವನ್ನು ಹಿಡಿಯುವ, ಸಾವುಕಾರನ ಮಗ ನೊಣ ಇರುವೆ ಗಳನ್ನು ಕೊಲ್ಲುವ ಆಟದಲ್ಲಿ ನಿಮಗ್ನನಾಗಿರುವ, "ರಣಹದ್ದು"ವಲ್ಲಿ ರಣಹದ್ದು ಗುಬ್ಬಿ–ಗಿಳಿ–ಕೋಗಿಲೆಗಳನ್ನು ಕುಕ್ಕಿ ತಿನ್ನುವದು—ಇವೆಲ್ಲ ಪಾತ್ರ ಪರಿಸರವನ್ನು, ಅನುಭವವನ್ನು ವ್ಯಂಜಿಸಿಕೊಡಬಲ್ಲವಾಗಿವೆ.

ಕಥೆಗಾರ ತನ್ನ ವರ್ತಮಾನದ ಎಲ್ಲ ಆಗುಹೋಗುಗಳಿಗೆ ಜಾಗೃತ ನಿರೀಕ್ಷಕ ನಾಗಿ ನಿಂತು ಎಲ್ಲ ಸತ್ಯ ವಿಷಯವನ್ನು, ವ್ಯಕ್ತಿಗಳನ್ನು ಸಂದರ್ಭೋಚಿತವಾಗಿ ಪರ್ಯಾಯವಾಗಿ ಮೇಳೈಸಿಕೊಡುವ ರೀತಿ ಅವರನ್ನು ಒಬ್ಬ ದಿಟ್ಟ ಬರಹಗಾರರನ್ನಾಗಿ ಓದುಗರಿಗೆ ಪರಿಚಯಿಸಿ ಕೊಡುತ್ತದೆ. 'ಕಣ್ಣೀರು ಕರೆದಾಗ'ದಲ್ಲಿ ಬರುವ ಬೆಂಗಳೂರಿನ ರಂಗದೇವ ಕಟ್ಟಡದ ಕುಸಿತ ಅದೇ ಬೆಂಗಳೂರಿನ ಗಂಗಾರಾಮು ಕಟ್ಟಡದ ಪ್ರತೀಕವಾಗಿದೆ. "ರಣಹದ್ದದಲ್ಲಿ ಬರುವ—'ಬಳ್ಳಿನಗಾವೆ', ಕೇಂದ್ರ ಮಂತ್ರಿ ಶಂಕರವಾಥಾನಂದ", 'ದೇವಪ್ರಭುರಾಜೇಂದ್ರ ಸರಕಾರ' 'ಮಂತ್ರಿ ಬಂಗಾರಿದೇವ', 'ಮುಖ್ಯಮಂತ್ರಿ ಗುಂಡೇಗೌಡ' ಇವೇ ಮೊದಲಾದವುಗಳು ವರ್ತಮಾನದ ರಾಜಕೀಯ ಸನ್ನಿವೇಶ ಹಾಗೂ ವ್ಯಕ್ತಿಗಳನ್ನು ನೆನಪಿಗೆ ತಂದು

ಕೊಟ್ಟು ವಿಡಂಬಿಸುವ ರೀತಿ ಮೋಜಿನದೆನಿಸಿದರೂ ಪರಿಸರವನ್ನು ಶೋಧಿಸುವಲ್ಲಿ ಯಾವ ಮಹತ್ವದ ಪಾತ್ರವನ್ನು ವಹಿಸಲಾರವು.

ಒಟ್ಟಿನಲ್ಲಿ ಪುರಾಣಿಕರು ವೈಯಕ್ತಿಕ ಉದ್ರೇಕವನ್ನು ನಿಯಂತ್ರಿಸಿಕೊಂಡು ಸಾಕಷ್ಟು ಸಂಯಮತೆಯನ್ನು ಸಾಧಿಸುವದಾದರೆ, ಸಾಮಾಜಿಕ ಪ್ರಜ್ಞೆಯ ಜೊತೆಗೆ ಅನಿವಾರ್ಯವಾದ ಕಲಾಪ್ರಜ್ಞೆಯನ್ನು ಬೆಳಸಿಕೊಳ್ಳುವಲ್ಲಿ ನಿಷ್ಠೆಯನ್ನು ತೋರಿದರೆ ಭವಿಷ್ಯದಲ್ಲಿ ಮೌಲಿಕ ಕೊಡುಗೆಯನ್ನು ಕೊಡಬಲ್ಲರೆಂಬುದಕ್ಕೆ. ಅದಕ್ಕೆ ಬೇಕಾದ ಮೊಕ್ಕೆಲ್ಲ ಅರ್ಹತೆಗಳು ಅವರಲ್ಲಿರುವದನ್ನು ಗುರುತಿಸುವದಕ್ಕೆ ಅವರ ಈ ಎರಡನೆಯ ಕಥಾಸಂಕಲನವಾದ "ಸಿರಿತನದ ಸಿಡಿಲು" ಪ್ರಾಮಾಣಿಕ ಸಾಕ್ಷಿಯಾಗಿ ನುಡಿಯುತ್ತದೆ.

—ಎಸ್. ಎಸ್. ಕೋತಿನ

"ಜೀವನ ಚಿತ್ರಗಳು"

ಲೇ. ವಿದ್ಯಾಧೀಶ ಉಪಾಧ್ಯೆ ಮತ್ತು ಎಸ್. ಆರ್. ಹೆಗಡೆ
ಸುಶೀಲಾ ಪ್ರಕಾಶನ, ಭಂಡಿವಾಡ ಕಂಪೌಂಡ, ಮಾಳಮಡ್ಡಿ ಧಾರವಾಡ.

ನ್ಯಾಯಾಲಯದಲ್ಲಿ ಕೆಲಸ ಮಾಡುತ್ತಿರುವ ಇಲ್ಲಿಯ ಲೇಖಕರಿಬ್ಬರೂ ತಮಗೆ ಬಿಡುವು ದೊರೆತಾಗಲೆಲ್ಲ ಬರೆಯುವ ಹವ್ಯಾಸವಿಟ್ಟುಕೊಂಡವರು. ತಾವು ಸ್ವತಃ ಕಂಡ, ಕೇಳಿದಕೆಲವು ಅನುಭವಗಳನ್ನು ಇತರರಿಗೂ ತಿಳಿಯಪಡಿಸಬೇಕೆಂಬ ಅಭಿಲಾಷೆ ಯಿಂದ, ಅವುಗಳನ್ನು ಕಥೆಯ ರೂಪದಲ್ಲಿ ಒಟ್ಟುಗಿಸಿ 'ಜೀವನ ಚಿತ್ರಗಳು' ಎಂಬ ಕಥಾ ಗುಚ್ಛವನ್ನು ಹೊರತಂದಿದ್ದಾರೆ. ಸಾಹಿತ್ಯದ ಆಳ-ಎತ್ತರಗಳನ್ನು ತಾವು ಸಂಪೂರ್ಣ ಕಂಡವರಲ್ಲ ಎಂಬ ಅಳುಕು ಕಥೆಗಾರರ ಮನದಲ್ಲಿ ಕಾಡುತ್ತಿದ್ದರೂ. ಅವರ ಪ್ರಯತ್ನ ಮೆಚ್ಚಲೇಬೇಕಾದದ್ದು.

ಕಥೆ, ಕಾದಂಬರಿ, ನಾಟಕ, ಕವನ ಮೊದಲಾದ ಕ್ಷೇತ್ರಗಳಿಗೆ ಕೈಹಾಕಿರುವ ವಿದ್ಯಾಧೀಶ ಉಪಾಧ್ಯೆಯವರ ಐದು ಕಥೆಗಳು ಎಸ್. ಆರ್. ಹೆಗಡೆಯವರ ಮನ ದಾಳದಿಂದ ಹೊರಬಂದ ಐದು ಕಥೆಗಳು. ಒಟ್ಟು ಹತ್ತು ಕಥೆಗಳು ಈ ಸಂಕಲನ ದಲ್ಲಿವೆ. ಮಗುವಿನ ಮುಗ್ಧತೆ, ನಿರುದ್ಯೋಗ, ಹೆಣ್ಣಿನ ಶೋಷಣೆ, ಯುವ ಪೀಳಿಗೆಯಲ್ಲಿ ಕುಸಿಯುತ್ತಿರುವ ನೈತಿಕ ಮಟ್ಟ, ಜ್ಯೋತಿಷ್ಯದ ಸತ್ಯಾಸತ್ಯತೆ ಹೀಗೆ ಕಥಾವಸ್ತುವಿನ ಆಯ್ಕೆಯಲ್ಲಿ ವೈವಿಧ್ಯತೆ ಕಾಣಿಸಿಕೊಳ್ಳುತ್ತದೆ.

ಉಲ್ಲೇಖನಾರ್ಹವಾದ ಕೆಲವು ಕಥೆಗಳಲ್ಲಿ ತೃಪ್ತಿ, ಪ್ರೇಯಸಿ ನನ್ನ ತಾಯಿ, ಸತ್ತು ಮೂರು ದಿನ ಆದಾಗ ಮತ್ತು ಖೂನಿ ಇವು ಉದ್ದೇಶದ ದೃಷ್ಟಿಯಿಂದ ಭಿನ್ನವಾಗಿವೆ;

'ತೃಪ್ತಿ' ಶೀರ್ಷಿಕೆಯ ಕಥೆ ವೈಶಿಷ್ಟ್ಯಪೂರ್ಣವಾಗಿದೆ. ತಾಯಿಯನ್ನು ಕಳೆದು ಕೊಂಡ, ಪ್ರಪಂಚವನ್ನು ಅರಿಯದ ತಬ್ಬಲಿ ಮಗು ಪುಟ್ಟಿ, ತನ್ನ ಅಮ್ಮ ದೇವರ ಹತ್ತಿರ ಹೋಗಿದ್ದಾಳೆಂಬುದನ್ನೇ ನಂಬಿ ಗಾಳಿ ಪಟದ ದಾರದಿಂದ ಅವಳಿಗೆ 'ಬೇಗ ಬರಲು' ಚೀಟಿ ಬರೆದು ಕಳಿಸುವ ಪ್ರಸಂಗ ಹೃದಯ ವಿದ್ರಾವಕವಾದುದು. ಮುಗ್ಧ ಕಂದ ಮನೆಯಲ್ಲಿ ತನ್ನ ಅಮ್ಮನನ್ನು ಕಾಣದೆ 'ಅಮ್ಮಾ: ಅಮ್ಮಾ' ಎಂದು ಕೂಗುತ್ತ, ತನ್ನ ತಂದೆಯನ್ನು ಕಾಡುತ್ತ, ಅತ್ತು ಅತ್ತು ನೆಲದ ಮೇಲೆ ಹೊರ ಳಾಡುವ ದೃಶ್ಯ ಕರುಳನ್ನು ಹಿಂಡುವಂಥದು. ಮಕ್ಕಳನ್ನು ಸಮಾಧಾನಪಡಿಸುವ ರೀತಿಯನ್ನೇ ಅರಿಯದ ಪುಟ್ಟಿಯ ತಂದೆಯ ಬವಣೆ ಓದುಗರಲ್ಲಿ ಮರುಕ ಹುಟ್ಟಿಸು ತ್ತದೆ,

ಮತ್ತೊಂದು ಮನಮಿಡಿಯುವ ಕಥೆ 'ಪ್ರೇಯಸಿ ನನ್ನ ತಾಯಿ' ತನ್ನ ನೆಲ, ತನ್ನ ಜನ, ತನ್ನ ಪ್ರೇಯಸಿ ಲತಾಳಿಗಾಗಿ ವಿದೇಶದಿಂದ ಧಾವಿಸಿ ಬಂದ ರಾಜು ತೀವ್ರ ಆಘಾತಗೊಳಗಾಗುತ್ತಾನೆ. ಇಳಿವಯಸ್ಸಿನ ತನ್ನ ತಂದೆಯ ಕಾಮಕ್ಕೆ ತುತ್ತಾಗಿ; ಲತಾ ಈಗ ರಾಜುವಿನ ತಾಯಿಯ ಸ್ಥಾನದಲ್ಲಿರುತ್ತಾಳೆ. ಲತಾಳ ಬದುಕಿನ ಈ ಅನಿರೀಕ್ಷಿತ ತಿರುವು ಇಡೀ ಕಥೆಯ ಜೀವಾಳ. ರಾಜು ಮನಸ್ಸಿನ ದ್ವಂದ್ವ ತಾಳಲಾರದೆ ತಿರುಗಿ ಅಮೇರಿಕೆಗೆ ಹೊರಟು ಹೋಗುತ್ತಾನೆ. ಮನೋ ವೈಜ್ಞಾನಿಕ ವಿಶ್ಲೇಷಣೆ ಇನ್ನೂ ಸರಿಯಾಗಿ ನಡೆಯುವಂತೆ ಲೇಖಕರು ಪ್ರಯತ್ನಿಸ ಬಹುದಾಗಿತ್ತು.

ಒಳ್ಳೆಯ ಕಥೆಗಳ ಸಾಲಿನಲ್ಲಿ ಸೇರಬಹುದಾದ 'ಸತ್ತು ಮೂರು ದಿನ ಆದಾಗ' ಮನುಷ್ಯನ ಸ್ವಾರ್ಥ, ಕೃತಘ್ನತೆ ಯುವ ಜನಾಂಗದ ಸ್ವತಂತ್ರ ಮನೋಭಾವಗಳು ಮಾನವೀಯ ಸಂಬಂಧಗಳನ್ನೂ ಕೆಲವೊಮ್ಮೆ ಮರೆತುಬಿಡುತ್ತವೆ. ಎಂಬುದನ್ನು ಆಶಾವಾದಿ ಬಡ ಕಾರಕೂನನೊಬ್ಬನ ಸಾವಿನ ನಂತರ ಅವನ ಆತ್ಮ ನಡೆಸುವ ಸಿ. ಐ. ಡಿ. ಕೆಲಸದಿಂದ; ತಮ್ಮದೇ ದಾರಿ ಅನುಸರಿಸಿದ ಅವನ ಮಕ್ಕಳ ಹೀಯಾಳಿ ಕೆಯ ಮಾತುಗಳಿಂದ ಕಂಡು ಹಿಡಿಯಲಾಗಿದೆ ಹೆಂಡತಿ ಮಕ್ಕಳಿಗಾಗಿ ಬೆನ್ನು ಬಾಗುವ ವರೆಗೆ ದುಡಿದು, ದುಡಿದು ಸುಸ್ತಾದಾಗ ಕುಟುಂಬ ಯೋಜನೆಯ ಮಹತ್ವವನ್ನು ಮೊದಲೇ ಅರಿಯದಿದ್ದುದಕ್ಕಾಗಿ ಕಾರಕೂನ ಪಶ್ಚಾತ್ತಾಪ ಪಟ್ಟದ್ದೂ ಉಂಟು. ಲೇಖಕರ ನಿರೀಕ್ಷಣಾ ಶಕ್ತಿ ತೀಕ್ಷ್ಣವಾಗಿದೆ.

ಹಣಕ್ಕಾಗಿ ಹೆಂಡತಿಗೆ ಹಿಂಸೆಕೊಟ್ಟು ಹೊರಗಟ್ಟುವ ಹೆಣ್ಣಿನ ಶೋಷಣೆ, ಇಂದು ಕಾಯದೆ ಕಾನೂನುಗಳ ನೆರವಿನಿಂದ ಅಂತಹ ದ್ರೋಹಿ ಗಂಡಸರಿಗೆ ಬುದ್ಧಿ ಕಲಿಸಬಹುದೆಂಬುದನ್ನು 'ಖೂನಿ' ಕಥೆ ಮನೋಜ್ಞವಾಗಿ ಚಿತ್ರಿಸಿದೆ.

ಕಪ್ಪುಕೋಟಿನ ಒಳಗೆ, ನೊಂದಹೃದಯ, ನಿರಾಶೆ, ಹೃದಯ ನಕ್ಕಿತು ಇವೆಲ್ಲ ಒಂದೇ ವರ್ತುಲದಲ್ಲಿ ಸುತ್ತುತ್ತಿರುವ ಕಥೆಗಳು. ಯೌವನ, ಪ್ರೀತಿ–ಪ್ರೇಮ, ಆಶೆ–ನಿರಾಶೆ–ಪ್ರಾಯದಲ್ಲಿ ಸಂಯಮದ ಕೊರತೆಯಿಂದ ಕಾಮ ಸ್ವಚ್ಛಂದವಾದಾಗ ಸಮಸ್ಯೆಗಳು ತಲೆದೋರುತ್ತವೆ. ಪರಿಣಾಮದಲ್ಲಿ ಅನಾಹುತ ನಿಶ್ಚಿತ.

ಸತ್ಯ, ನ್ಯಾಯ, ಧರ್ಮಕ್ಕಾಗಿ ಹೋರಾಡಲು ಪಣತೊಟ್ಟ ವಕೀಲ ತೊಡುವ 'ಕಪ್ಪು ಕೋಟಿನ ಒಳಗೆ' ಅಷ್ಟೇ ಕಪ್ಪಾದ ಕಲೆಯೊಂದು ಅಡಗಿ ಕುಳಿತುದನ್ನು ಲೇಖಕರು ಎತ್ತಿ ತೋರಿಸುತ್ತಾರೆ ಕೋರ್ಟಿನ ಕಟಕಟೆಯಲ್ಲಿ ನಿಂತ ಜಯಾಳ ಕಂಕುಳಲ್ಲಿಯ ಮಗು ಕಥೆಯ ಮಧ್ಯ ಬಿಂದು. ಆ ಮಗು ತನ್ನದೆಂದೇ ತಿಳಿದಾಗ ಎದುರು ಪಕ್ಷದ ವಕೀಲನ ದುಃಖದ ಕಟ್ಟೆ ಒಡೆಯುತ್ತದೆ ತನ್ನ ಜಯಾಳ ಸ್ನೇಹದ

ದಿನಗಳು ಕಣ್ಣಮುಂದೆ ಬಿಚ್ಚಿಕೊಳ್ಳುತ್ತವೆ. ಕೊನೆಯಲ್ಲಿ 'ನಾನೇ ಆರೋಪಿ' ಅಂತಾ ಕೋರ್ಟಿಗೆ ಹೋಗಿ ಅವನಿಗೆ ಕೂಗಿಕೊಳ್ಳಬೇಕೆನಿಸಿತು. ಆದರೂ ತಡೆದ ಏಕೆ ? ಭಾವುಕ ಮನಸ್ಸು ಪ್ರಾಮಾಣಿಕವಾಗಿರಲು ತವಕಿಸುತ್ತಿತ್ತು. ಆದರೆ ತಕ್ಷಣ ಅವನ ವ್ಯಾವಹಾರಿಕ ಬುದ್ಧಿ ಎಚ್ಚರಗೊಂಡಿತ್ತು ತಮ್ಮ ವೃತ್ತಿಯಲ್ಲಿಯ ಅನುಭವವನ್ನು ಕಥೆಯ ರೂಪದಲ್ಲಿ ಎರಕ ಹೊಯ್ದಿದ್ದಾರೆ ಕಥೆಗಾರರು. ಇದೊಂದು ಗಮನಾರ್ಹ ವಾದ ಕಥೆ.

ಜಯಾಳಂತೆ 'ನೊಂದ ಹೃದಯ'ದ ಮಾಲತಿಗೂ ಮಗು ಹುಟ್ಟುತ್ತದೆ. ಅವಳ ಕ್ಲಾಸಮೇಟ ಮೊದಲೇ ಕೈಕೊಟ್ಟಾಗ ತಿನ್ನಲೂ ಗತಿಯಿಲ್ಲದ ಭಿಕಾರಿಯಂತಾದ ಮಾಲತಿ, ಮಾತೃ ಸಹಜವಾದ ಹೃದಯದಿಂದ ತನ್ನ ಮಗುವಾದರೂ ಸುಖವಾಗಿರ-ಲೆಂದು ತಾನೇ ಕೈಯಾರೆ ಅದನ್ನು ಯಾರದೋ ಕಾರಿನಲ್ಲಿ ಹಾಕಿ ಬಂದು ಬಿಡುತ್ತಾಳೆ. ಹರಯದ ಭರದಲ್ಲಿ ತಮ್ಮ ಭವಿಷ್ಯವನ್ನೇ ಹಾಳು ಮಾಡಿಕೊಳ್ಳುವ ಇಂಥ ಹೆಣ್ಣು ಮಕ್ಕಳು ನೊಂದ ಹೃದಯಿಗಳಾದರೂ ಅವರನ್ನು ಜನ ಬೊಟ್ಟು ಮಾಡಿ ತೋರಿಸು-ವುದು ಸೂಳೆ, ಸಮಾಜದ ಹುಣ್ಣು, ಕಾಮದ ಆಟದ ಬೊಂಬೆ ಎಂದು. ಕಡುಬಡವ ನಾದರೂ ಪ್ರಾಮಾಣಿಕವಾಗಿ ದುಡಿದು ಹಣಗಳಿಸಿ, ವರನೋಡಿ, ತಂಗಿಯ ಮದುವೆ ಮಾಡಬೇಕೆಂಬ ಆಶೆಹೊತ್ತು, ತನ್ನೂರಿಗೆ ಓಡುತ್ತ ಬಂದ ಕೃಷ್ಣಮೂರ್ತಿ ತಂಗಿ ಗೌರಿಯ ದೇಹದಲ್ಲಾದ ಬದಲಾವಣೆ ಕಂಡಾಗ 'ನಿರಾಶೆ'ಯಿಂದ ಕುಸಿದುಬಿಡು-ತ್ತಾನೆ. ಬದುಕನ್ನು ಎದುರಿಸುವ ಧೈರ್ಯವಿಲ್ಲದ, ಬದುಕಿನಲ್ಲಿ ಗಟ್ಟಿತನವೆಂಬುದನ್ನು ಕಾಣದ ಪ್ರಕಾಶನಂತಹ ಇನ್ನೊಬ್ಬ ವ್ಯಕ್ತಿ 'ಹೃದಯ ನಕ್ಕಿತು' ಕಥೆಯಲ್ಲಿ ಕಾಣಿಸಿ-ಕೊಳ್ಳುತ್ತಾನೆ. ನಿರುದ್ಯೋಗ ಸಮಸ್ಯೆಯಿಂದಾಗಿ ಪ್ರಕಾಶದ ದೇಹದ ಜೊತೆಗೆ ಮನಸ್ಸಿಗೂ ಕೆಲಸವಿಲ್ಲದಂತಾಗಿ ಯಾವುದನ್ನೂ ಸಾರಾಸಾರಾ ವಿಚಾರ ಮಾಡುವ ಶಕ್ತಿಯನ್ನೇ ಕಳೆದುಕೊಂಡು ಬೇರೆ ಜಾತಿಯ, ದೇವರಿಗೆ ಬಿಟ್ಟ, ಕಸ-ಮುಸುರೆ ಕೆಲಸಮಾಡುವ ಹೆಣ್ಣನ್ನೂ ಆತುರದಲ್ಲಿ ಪ್ರೀತಿಸಿ ಮದುವೆಯಾಗುತ್ತಾನೆ. ಕೊನೆ-ಯಲ್ಲಿ ಅವಳ ಕೃತ್ಯಕ್ಕೆ ಹೇಸಿ ಪ್ರಾಣ ಕಳೆದುಕೊಳ್ಳುತ್ತಾನೆ. ಈ ದೌರ್ಬಲ್ಯವನ್ನು ಹೋಗಲಾಡಿಸಿ ಇಂದಿನ ಸಂಕೀರ್ಣ ಬದುಕಿನೊಂದಿಗೆ ಹೋರಾಡುವ ಸಾಮರ್ಥ್ಯ-ವನ್ನು ಗಳಿಸಿಕೊಳ್ಳುವಂತೆ ಯುವಕರನ್ನು ಪ್ರಚೋದಿಸುವ ಕಥೆಗಳೂ ಲೇಖಕರಿಂದ ಮೂಡಿ ಬರುವಂತಾಗಬೇಕು.

ಕೊನೆಯದಾಗಿ ಜನ್ಮಕುಂಡಲಿ ಮತ್ತು ವಿಚಿತ್ರ ಎರಡೂ ಒಂದೇ ಗುಂಪಿಗೆ ಸೇರಿಸಬಹುದಾದ ಕಥೆಗಳಾಗಿದ್ದು ಜ್ಯೋತಿಷ್ಯ ಶಾಸ್ತ್ರವನ್ನೇ ದೃಷ್ಟಿಯಲ್ಲಿಟ್ಟುಕೊಂಡು ಬರೆದವುಗಳು. ಪರಸ್ಪರ ಮೆಚ್ಚಿಕೊಂಡ ಎರಡು ಜೀವಿಗಳ ಮಧ್ಯದಲ್ಲಿ 'ಜನ್ಮಕುಂಡಲಿ' ಅಡ್ಡಬರುತ್ತದೆ. ಕಥೆ ದುಃಖಾಂತವಾಗುತ್ತದೆ. 'ವಿಚಿತ್ರ' ಕಥೆ ನೋಡಿದಾಗ ಹೀಗೆ

ಎಲ್ಲಿಯಾದರೂ ನಡೆದೀತೆ! ಎಂದೆನಿಸದೆ ಇರಲಾರದು. ದೊಡ್ಡವರ ಮಕ್ಕಳ ಹುಳುಕನ್ನು ಹೊರಗೆಡುಹಬೇಕೆಂದೇ 'ತಿಮ್ಮೇರಾಯರ ಮಗಳು ಮಗುವನ್ನು ಹೆತ್ತ ಕೂಡಲೇ ಮಗುವಿನ ತಂದೆಯ ಸಾವು' ಎಂಬ ಪುರೋಹಿತರ ಭವಿಷ್ಯವಾಣಿಯನ್ನು ಸತ್ಯವಾಗಿಸಲು ಆಳು ಸೀನಪ್ಪನನ್ನು ಮರದಿಂದ ಬೀಳಿಸಿ ಕೊನೆಯಲ್ಲಿ ಸಾಯಿಸಲಾಗಿದೆ.

ಇಲ್ಲಿಯ ಕಥೆಗಳನ್ನೆಲ್ಲ ಓದಿಯಾದ ಮೇಲೆ, ನಮ್ಮ ಪರಿಚಿತ ಬದುಕಿನ, ಭಾವನೆಗಳ ಸ್ತರಗಳಲ್ಲಿಯೇ ಸುಳಿದಾಡುವ ಹಲವು ಬಗೆಯ ಜೀವನ ಚಿತ್ರಗಳು ಎದುರುನಿಲ್ಲುತ್ತವೆ. ಲೇಖಕರಿಗೆ ವಾಸ್ತವ ಪ್ರಜ್ಞೆ ಇದೆ. ವ್ಯಕ್ತಿಗಳ ಮನೆ, ಮನ ಹೊಕ್ಕು ನೋಡುವ ಯೋಗ್ಯತೆಯಿದೆ. ಈ ಇದ್ದುದನ್ನು ಓದುಗರು ಮೆಚ್ಚಬೇಕೆಂಬ ಇಚ್ಛೆಯೂ ಇದೆ. ಆದರೆ ಹೇಳಬೇಕೆಂದುದನ್ನು ಓರಣವಾಗಿ ಹೇಳುವಲ್ಲಿಯ ತೊಡಕಿನಿಂದಾಗಿ ಇಲ್ಲಿಯ ಕಥೆಗಳು ಕೆಲವೆಡೆ ಸೋಲನ್ನನುಭವಿಸುವುದು ಅನಿವಾರ್ಯವಾಗಿದೆ. ಒಮ್ಮೆ ಮಾತಿನ ಶೈಲಿ, ಮತ್ತೊಮ್ಮೆ ಗ್ರಾಂಥಿಕ ಭಾಷೆ, ಪುನರುಕ್ತಿ ದೋಷ ಅವಸರದ ಓಟ ಈ ಕೆಲವು ಕುಂದು ಕೊರತೆಗಳನ್ನು ವಿಶೇಷ ಎಚ್ಚರಿಕೆ ಪರಿಶ್ರಮಗಳಿಂದ ಸರಿಪಡಿಸಿಕೊಳ್ಳುವುದರೊಂದಿಗೆ ಕಥಾನಿರೂಪಣೆಯಲ್ಲಿ ಹಿಡಿತ ಹೆಚ್ಚಿಸಿಕೊಂಡು, ಸಾಹಿತ್ಯದ ನಾನಾ ಮುಖಗಳನ್ನು ಅಭ್ಯಸಿಸಿ, ಅನೇಕ ಉತ್ತಮ ಕಥಾತಂತ್ರಗಳನ್ನು ಅರಿತುಕೊಳ್ಳುವ ಅಗತ್ಯತೆಯನ್ನು ಲೇಖಕರು ಗಮನಿಸಿದಲ್ಲಿ ಅವರ ಕಥೆ ಬರೆಯಬೇಕೆಂಬ ಹಂಬಲ ಸಾರ್ಥಕವಾಗುವದರಲ್ಲಿ ಸಂಶಯವಿಲ್ಲ.

— ಮಧು ವೆಂಕಾರೆಡ್ಡಿ

ಈ ಸಂಚಿಕೆಯ ಲೇಖಕರು

○ ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ
ಚೇರಮನ್, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

○ ಜಯಪ್ರಕಾಶ ಮಾವಿನಕುಳಿ
ಉಪನ್ಯಾಸಕ
ವಿಜಯಾ ಕಾಲೇಜು, ಮೂಲ್ಕಿ–೫೭೪ ೧೫೪

○ ಡಾ. ಬಿ. ವ್ಹಿ. ಶಿರೂರ
ಪ್ರವಾಚಕ, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

○ ಡಾ. ಬಸವರಾಜ ಸಬರದ
ಅಧ್ಯಾಪಕ; ಕನ್ನಡ ವಿಭಾಗ
ಕರ್ನಾಟಕ ಕಾಲೇಜು, ಬೀದರ

○ ಡಾ. ವಿಲ್ಯಂ ಮಾಡ್ತ
ಪ್ರವಾಚಕ. ಭಾಷಾವಿಜ್ಞಾನ
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

○ ಡಾ. ಬಿ. ಆರ್. ಹಿರೇಮಠ
ಪ್ರವಾಚಕ, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

○ ಡಾ. ಪರಡ್ಡಿ ಮಲ್ಲಿಕಾರ್ಜುನ
ಪ್ರವಾಚಕ, ಸಂಸ್ಕೃತ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

○ ಶ್ರೀಮತಿ ವಿನೀತಾ ಬಿ. ಪೈ
ಅಧ್ಯಾಪಕಿ, ಸಮಾಜಕಾರ್ಯ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

○ ಶ್ರೀ ಸದಾನಂದ ಪಾಟೀಲ
ಉಪನ್ಯಾಸಕ; ಕನ್ನಡ ವಿಭಾಗ
ಸರಕಾರಿ ಪದವಿ ಪೂರ್ವ ಕಾಲೇಜು
ಆಡೂರು,
ತಾ. ಹಾನಗಲ್. ಜಿಲ್ಲೆ; ಧಾರವಾಡ

- ಡಾ. ಎ. ಮುರಿಗೆಪ್ಪ
  ಪ್ರವಾಚಕ, ಭಾಷಾವಿಜ್ಞಾನ
  ಕನ್ನಡ ಅಧ್ಯಯನ ಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
- ಶ್ರೀ ಕೆ. ಅಭಿಶಂಕರ
  ಪ್ರಧಾನ ಸಂಪಾದಕರು, (ನಿವೃತ್ತ)
  ಕರ್ನಾಟಕ ಗೆಝೆಟಿಯರ್
  "ಪ್ರಶಾಂತಿ" ವೆಂಕಟಪ್ಪ ರಸ್ತೆ,
  ಟಾಸ್ಕರ್ ಟಾನ್, ಬೆಂಗಳೂರು–೫೧
- ಶ್ರೀ ಎಸ್. ಸಿ. ಪಾಟೀಲ
  ಉಪನ್ಯಾಸಕ
  ಎಸ್. ಜಿ. ವ್ಹಿ. ಪದವಿಪೂರ್ವ ಕಾಲೇಜು, ಉಪ್ಪಿನ ಬೇಟಗೇರಿ
  ಅಂಚೆ ಉಪ್ಪಿನ ಬೆಟಗೇರಿ
  ತಾಲೂಕ, ಜಿಲ್ಲಾ: ಧಾರವಾಡ
- ಶ್ರೀ ಮೂರ್ತಿಗೌಡ ಅಬ್ಬೀಗೇರಿ
  ಸ. ಕಿ. ಮ. ಯಳಸಂಗಿ
  ಪೋಸ್ಟ; ಯಳಸಂಗಿ
  ಜಿಲ್ಲಾ; ಗುಲಬರ್ಗಾ
- ಡಾ. ಎಸ್. ಎಸ್. ಕೋತಿನ
  ಪ್ರವಾಚಕ, ಬ್ರಾಹ್ಮಣ ಸಾಹಿತ್ಯ
  ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
- ಶ್ರೀಮತಿ ಮಧು ವೆಂಕಾರೆಡ್ಡಿ
  ಅಧ್ಯಾಪಕಿ, ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಆಜೀವ ಸದಸ್ಯತ್ವ : ಯಾವುದೇ ವ್ಯಕ್ತಿ ಅಥವಾ ಸಂಘ–ಸಂಸ್ಥೆಗಳು ರೂ. ೧೦೦–೦೦ (ಒಂದುನೂರು ರೂಪಾಯಿಗಳು) ಕಳಿಸಿ, ವಿಶ್ವವಿದ್ಯಾಲಯ ಪ್ರಕಟಿಸು–ತ್ತಿರುವ "ಕರ್ನಾಟಕ ಭಾರತಿ" ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳುಹಿಸುವ ವ್ಯವಸ್ಥೆ ಮಾಡಲಾಗುವದು.

ವಿದ್ಯಾರ್ಥಿ ಭಾರತಿ

(ತ್ರೈಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೮–೦೦ (ಅಂಚೆವೆಚ್ಚ ಸಹಿತ)

ಬಿಡಿ ಪ್ರತಿ : ರೂ. ೨–೫೦ (ಅಂಚೆವೆಚ್ಚ ಪ್ರತ್ಯೇಕ)

ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ : ರೂ. ೪–೦೦

ಹಣವನ್ನು **ಫಾಯನಾನ್ಸ ಆಫೀಸರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩** ಇವರ ಹೆಸರಿನಲ್ಲಿ ಡಿಮಾಂಡ ಡ್ರಾಫ್ಟ್ ಅಥವಾ ಪೋಸ್ಟಲ್ ಆರ್ಡರ್ ತೆಗೆಯಿಸಿ, **ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ** ಇವರಿಗೆ ಕಳುಹಿಸಬೇಕು.

ವಿವರಗಳಿಗೆ ಬರೆಯಿರಿ :

ನಿರ್ದೇಶಕರು,
ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ